TEXT FLY WITHIN THE BOOK ONLY

THE BOOK WAS DRENCHED

UNIVERSAL LIBRARY
OU_198714
UNIVERSAL LIBRARY

OSMANIA UNIVERSITY LIBRARY

Call No. K 923 J42S

Accession No. K 4686

Author ಜಯಂತಿ

Title [illegible] · 1937

This book should be returned on or before the date last marked belo

# ಸರೋಜ ನಳಿನಿ



ಶ್ರೀಮತಿ ಸರೋಜ ನಳಿನಿ

ಭಾರತೀಯ ಸಾಧ್ವೀಮಣಿ

# ಸರೋಜ ನಳಿನಿ

**ಆಕೆಯ ಜೀವನಚರಿತ್ರೆ ಮತ್ತು ಸ್ತ್ರೀಹಿತಕಾರ್ಯ ವಿವರಣೆ**

(ಆಕೆಯ ಪತಿ ಶ್ರೀಮಾನ್ ಜಿ. ಎಸ್. ದತ್, ಐ. ಸಿ. ಎಸ್., ಅವರು ಬರೆದಿರುವ
ಇಂಗ್ಲಿಷ್ ಗ್ರಂಥದ ಅನುವಾದ)

ಮಹಾಕವಿ ಶ್ರೀ ರವೀಂದ್ರನಾಥ ಠಾಕೂರ್ ಅವರೂ
ಲೋಕೋಪಕಾರಿ ಶ್ರೀ ಸಿ. ಎಫ್. ಆ್ಯಂಡ್ರೂಸ್ ಅವರೂ
ಬರೆದಿರುವ ಅವತರಣಿಕೆಗಳೊಡನೆ

**ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್ ಅವರಿಂದ**

ಕರ್ಣಾಟಕ ಪ್ರಕಟನಾಲಯ
ಬೆಂಗಳೂರು

*Copyright — All rights reserved*

ಬೆಂಗಳೂರು ಸಿಟಿ :
ಶ್ರೀ ಕೃಷ್ಣರಾಜೇಂದ್ರ ರೋಡಿನಲ್ಲಿರುವ ಕರ್ಣಾಟಕ ಪ್ರಕಟನಾಲಯದಲ್ಲಿ,
ಕೆ. ಪಿ. ಎಚ್. ಪ್ರೆಸ್ಸಿನಲ್ಲಿ, ಡಿ. ವಿ. ರಾಮರಾಯರಿಂದ
ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿದೆ.

ಸೆಪ್ಟೆಂಬರ್ ೧೯೩೭

ನನ್ನ ಪೂಜ್ಯ ತಂದೆಯವರ

ಸನ್ನಿಧಾನದಲ್ಲಿ

ಈ ಪುಸ್ತಕವನ್ನು ಅತಿ ನಮ್ರತೆಯಿಂದ

ಸಮರ್ಪಿಸುತ್ತೇನೆ.

**ಜಯಲಕ್ಷ್ಮಿ ಶ್ರೀನಿವಾಸನ್**

# ಪ್ರಕಟನ ಕರ್ತರ ಬಿನ್ನಹ

ಸುಮಾರು ಎರಡು ವರ್ಷಗಳ ಹಿಂದೆ ಒಂದು ದಿನ ಮೈಸೂರಿನಲ್ಲಿ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ವೈ. ಕೆ. ರಾಮಚಂದ್ರರಾಯರವರೊಡನೆ ಮಾತನಾಡುತ್ತಿದ್ದಾಗ, ಅವರು ಈಚೆಗೆ ಕನ್ನಡದಲ್ಲಿ ಯಾವ ಗ್ರಂಥವನ್ನೂ ಬರೆದಿಲ್ಲವೆಂದು ನಾನು ಕೊಂಚ ಗೊಣಗಾಡಿದೆ. ಅದಕ್ಕೆ ಅವರು ಉತ್ತರ ಹೇಳುತ್ತ, ತಾವು ಆಗತಾನೆ "ಸರೋಜ ನಳಿನಿಯ ಜೀವನ ಚರಿತ್ರೆ" ಎಂಬ ಇಂಗ್ಲಿಷ್ ಗ್ರಂಥವನ್ನು ಓದಿ ಮುಗಿಸಿದ್ದಂತೆಯೂ ಅದು ಬಹು ಸ್ವಾರಸ್ಯವಾಗಿದ್ದ ಕಾರಣ ಅದರ ಸಾರಾಂಶವನ್ನು ತಮ್ಮ ಹೆಣ್ಣುಮಕ್ಕಳ ಪ್ರಯೋಜನಕ್ಕಾಗಿ ಕನ್ನಡದಲ್ಲಿ ಬರೆಯುತ್ತಿದ್ದಂತೆಯೂ ತಿಳಿಸಿದರು. ಅಷ್ಟು ಒಳ್ಳೆಯ ವಿಚಾರವನ್ನು ಅವರು ಸ್ವಂತಕ್ಕೆ ಮಾತ್ರವೇ ಇರಿಸಿಕೊಳ್ಳಕೂಡದೆಂದೂ ಬಹುಜನಕ್ಕಾಗಿ ಅದನ್ನು ಪ್ರಕಟಪಡಿಸಬೇಕೆಂದೂ ನಾನು ವಿಜ್ಞಾಪಿಸಿದೆ. ಅವರು ಸ್ವಲ್ಪ ತರ್ಕ ಮಾಡಿ ಆಮೇಲೆ ದಯೆಯಿಂದ ಒಪ್ಪಿಕೊಂಡರು.

ಸರೋಜ ನಳಿನೀ ದೇವಿಯ ಮಹಿಮೆ ಅದಕ್ಕೆ ಹಿಂದೆಯೇ ನನಗೆ ಸ್ವಲ್ಪ ತಿಳಿದಿತ್ತು. ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ತತ್ತ್ವಶಾಸ್ತ್ರದ ಮುಖ್ಯ ಬೋಧಕರಾಗಿರುವ ಶ್ರೀಮಾನ್ ಎ. ಆರ್. ವಾಡಿಯಾ ಅವರು ಬೆಂಗಳೂರಿನ ಹೆಣ್ಣುಮಕ್ಕಳ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಒಂದು ದಿನ ಸ್ತ್ರೀ ವಿದ್ಯಾಭ್ಯಾಸದ ಧ್ಯೇಯಗಳನ್ನು ಕುರಿತು ಉಪನ್ಯಾಸ ಮಾಡುತ್ತ, ಸರೋಜ ನಳಿನಿಯ ಜೀವನ ರೀತಿಯನ್ನು ಉದಾಹರಣೆ ಕೊಟ್ಟು, ಆಕೆಯ ಜೀವನ ಚರಿತ್ರೆಯನ್ನು ಆ ವಿದ್ಯಾರ್ಥಿನಿಯರು ಓದಲು ಶಿಫಾರಸು ಮಾಡಿದರಂತೆ. ಈ ಸಂಗತಿಯನ್ನು ಆಗ ಅಲ್ಲಿ ವಿದ್ಯಾರ್ಥಿಯಾಗಿದ್ದ ನನ್ನ ಮಗಳು ನನಗೆ ತಿಳಿಸಿದ್ದಳು. ಅದರಿಂದ ನನಗೆ ಆ ಗ್ರಂಥದ ವಿಷಯದಲ್ಲಿ ಕುತೂಹಲ ಹುಟ್ಟಿತ್ತು.

ಆ ಗ್ರಂಥವನ್ನು ಬರೆದವರು ಸರೋಜ ನಳಿನಿಯ ಪತಿ ಶ್ರೀಮಾನ್ ಜಿ. ಎಸ್. ದತ್ತರವರು. ಇವರು ಇಂಡಿಯನ್ ಸಿವಿಲ್ ಸರ್ವಿಸ್ ಎಂಬ

ಪ್ರಸಿದ್ಧ ಸರಕಾರೀ ಅಧಿಕಾರಿ ವರ್ಗದಲ್ಲಿ ಉನ್ನತ ಪದವಿಯಲ್ಲಿದ್ದವರು. ಅವರ ಪುಸ್ತಕ ಇಂಗ್ಲೆಂಡಿನಲ್ಲಿ, ಲಂಡನ್ ಪಟ್ಟಣದ ಪ್ರಸಿದ್ಧ ಪ್ರಕಟನಾಲಯ ಗಳಲ್ಲೊಂದಾದ ಹೋಗರ್ತ್ ಪ್ರೆಸ್ ಎಂಬುದರಿಂದ, ೧೯೩೯ ರಲ್ಲಿ ಮೊದಲು ಪ್ರಚುರವಾಯಿತು. ಆ ಗ್ರಂಥವು ಇಂಗ್ಲಿಷ್ ಜನರಿಗೆ ಇಂಡಿಯಾ ದೇಶದ ಒಳ ಜೀವನದ ವಿಷಯದಲ್ಲಿ ತಕ್ಕ ತಿಳಿವಳಿಕೆ ಕೊಡಬಲ್ಲುದೆಂದೂ, ಈಚೆಗೆ ಹಿಂದೂ ಸಮಾಜದ ಒಳಗೆ ಹುಟ್ಟಿ ಉಕ್ಕುತ್ತಿರುವ ನವಚೈತನ್ಯವನ್ನು ಅದು ಪ್ರತಿಬಿಂಬಿಸುತ್ತಿದೆಯೆಂದೂ, ಭಾರತೀಯರ ಭವಿಷ್ಯವೇನೆಂಬುದನ್ನು ಕಂಡುಕೊಳ್ಳಲಿಚ್ಛಿಸುವವರಿಗೆ ಅದು ಅತ್ಯುಪಯುಕ್ತವಾದ ಗ್ರಂಥವೆಂದೂ ಅನೇಕ ಪ್ರಸಿದ್ಧ ಬ್ರಿಟಿಷ್ ವಾರ್ತಾಪತ್ರಿಕೆಗಳವರೂ ಸಾರ್ವಜನಿಕ ಪ್ರಮುಖರೂ ಶ್ರೀ|| ದತ್ತರವರ ಲೇಖನವನ್ನು ಪ್ರಶಂಸಿಸಿದ್ದರು. ಈ ಗ್ರಂಥವನ್ನೇ ಶ್ರೀ|| ವೈ. ಕೆ. ರಾಮಚಂದ್ರರಾಯರವರು ಅನುವಾದ ಮಾಡಿದ್ದಷ್ಟು.

ಕೆಲವು ದಿನಗಳ ಮೇಲೆ ಶ್ರೀಮಾನ್ ರಾಮಚಂದ್ರರಾಯರು ತಮ್ಮ ಲೇಖನದ ಮೂಲಪ್ರತಿಯನ್ನು ಪ್ರಕಟನೆಗಾಗಿ ನನಗೆ ದಯಪಾಲಿಸಿದರು. ಅದನ್ನು ನಾನು ಓದಿ, ಅದರ ಮುದ್ರಣಕ್ಕಾಗಿ ಅಣಿಮಾಡಿಕೊಳ್ಳುತ್ತಿದ್ದೆನು. ಅಷ್ಟರಲ್ಲಿ, ಮೈಸೂರಿನಲ್ಲಿ ಈಗ ಮ್ಯಾಜಿಸ್ಟ್ರೇಟ್ ಆಗಿರುವ ಶ್ರೀಮಾನ್ ಕೆ. ಶ್ರೀನಿವಾಸನ್ ಅವರ ಪತ್ನಿ ಶ್ರೀಮತಿ ಜಯಲಕ್ಷ್ಮಮ್ಮನವರು, ಶ್ರೀಮಾನ್ ವೈ. ಕೆ. ರಾಮಚಂದ್ರರಾಯರು ಮಾಡಿದ್ದ ಕೆಲಸವನ್ನರಿಯದೆ, ತಾವೇ ಸ್ವತಂತ್ರವಾಗಿ ಅದೇ ಇಂಗ್ಲಿಷ್ ಗ್ರಂಥವನ್ನು ಕನ್ನಡಕ್ಕೆ ಪರಿವರ್ತನೆ ಮಾಡಿದ್ದರೆಂಬ ಸಂಗತಿ ಶ್ರೀಮಾನ್ ರಾಮಚಂದ್ರರಾಯರಿಗೆ ತಿಳಿಯ ಬಂತು. ಆ ಕೂಡಲೇ ಅವರು ತಮ್ಮ ಲೇಖನದ ಮುದ್ರಣ ಕಾರ್ಯವನ್ನು ನಾನು ಪ್ರಾರಂಭಿಸಕೂಡದೆಂದೂ, ವಿಶೇಷವಾಗಿ ಮಹಿಳೆಯರಿಗೋಸ್ಕರ ಮಹಿಳಾಭ್ಯುದಯದ ವಿಚಾರವಾಗಿ ಬರೆದಿದ್ದ ಅಂಥ ಗ್ರಂಥವನ್ನು ಮಹಿಳೆಯ ರೊಬ್ಬರು ಬರೆದಿರುವಾಗ, ಆ ಸೋದರೀಕೃತಿ ಪ್ರಕಾಶಗೊಳ್ಳುವುದೇ ಯುಕ್ತವೆಂದೂ ನನಗೆ ತಿಳಿಸಿ ಕಾಗದ ಬರೆದರು. ಇದಾದ ಕೆಲವು ದಿವಸ ಗಳೊಳಗಾಗಿ ಶ್ರೀಮತಿ ಜಯಲಕ್ಷ್ಮಮ್ಮನವರ ತಂದೆ, ನನ್ನ ಗೌರವಿತ ಮಿತ್ರರು, ಶ್ರೀಮಾನ್ ಎ. ವಿ. ರಾಮನಾಥನ್ ಅವರು, ತಮ್ಮ ಮಗಳ ಲೇಖನದ ವಿಷಯವನ್ನು ನನಗೆ ತಿಳುಹಿಸಿ, ಅದನ್ನು ಪರಿಷ್ಕಾರಪಡಿಸಿ

ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್



ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್

ಪ್ರಕಾಶಗೊಳಿಸುವ ಸಂತೋಷಕರವಾದ ಜವಾಬ್ದಾರಿಯನ್ನು ನನಗೆ ಒಪ್ಪಿಸಿದರು. ಹೀಗೆ ಪ್ರಕಟವಾಗಿರುವುದು ಈ ಪುಸ್ತಕ.

ಶ್ರೀಮತಿ ಜಯಲಕ್ಷ್ಮಮ್ಮನವರ ಹಸ್ತಲಿಖಿತ ಪ್ರತಿಯನ್ನು ನನ್ನ ಪ್ರಿಯಮಿತ್ರರಾದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು ಒಂದು ಸಾರಿ ಪರಿಶೀಲಿಸಿದ್ದರು. ನಾನು ಅದನ್ನು ಒಂದೆರಡು ಸಲ ಪೂರ್ತಿಯಾಗಿ ನೋಡಿ, ಅಲ್ಲಲ್ಲ ಸವರಣೆಮಾಡಿ, ಪ್ರಕೃತ ರೂಪದಲ್ಲಿ ಈ ಗ್ರಂಥವನ್ನು ಬಹು ಸಂತೋಷದಿಂದ ಕನ್ನಡ ಜನದ ಪರಾಂಬರಿಕೆಗಾಗಿ ಒಪ್ಪಿಸುತ್ತಿದ್ದೇನೆ. ಯಾವ ದೇಶೋತ್ಕರ್ಷ ಕಾರ್ಯವನ್ನು ಸರೋಜ ನಳಿನೀ ದೇವಿಯು ತನ್ನ ಜೀವಿತ ವ್ರತವನ್ನಾಗಿ ಮಾಡಿಕೊಂಡಿದ್ದಳೋ ಆ ಸ್ತ್ರೀ ಜನೋದ್ಧಾರ ವಿಚಾರದಲ್ಲಿ ನನಗೂ ಉತ್ಸಾಹವುಂಟು. ನಮ್ಮ ಸ್ತ್ರೀಯರು ವಿದ್ಯಾವತಿಯರಾಗಬೇಕು; ತಮ್ಮ ಭಾರತೀಯತ್ವವನ್ನೂ ಹಿಂದೂತ್ವವನ್ನೂ ಕಳೆಯದೆ ಉಳಿಸಿಕೊಂಡು, ಅವುಗಳ ಜೊತೆಗೆ ಅವರು ಯೂರೋಪಿನ ಸುಸಂಸ್ಕೃತ ಸ್ತ್ರೀಯರಂತೆ ಲೋಕ ಜೀವನ ಭಾಗಿತ್ವಕ್ಕೆ ಬೇಕಾದ ಶಕ್ತಿಯನ್ನೂ ಸಂಪಾದಿಸಿಕೊಳ್ಳಬೇಕು. ಬದುಕುವುದಕ್ಕೂ ಸಂಪಾದಿಸುವುದಕ್ಕೂ ಅನುಭವಿಸುವುದಕ್ಕೂ ಗಂಡಸರಿಗಿರುವಂತೆ ಹೆಂಗಸರಿಗೂ ಹಕ್ಕುಂಟು; ಈ ಪ್ರಪಂಚದ ರಥ ಸಾಗಬೇಕಾದರೆ ಅದರ ಒಂದು ಹೊರಜಿಯನ್ನು ಎಳೆವಷ್ಟು ಬಲದಿಂದ ಇನ್ನೊಂದು ಹೊರಜಿಯನ್ನೂ ಎಳೆಯಬೇಕು; ಗಂಡಸರು ತಮ್ಮ ಜೀವಿತ ಕೃತ್ಯಗಳಿಗಾಗಿ ಎಷ್ಟು ಸಮರ್ಥರಾಗುವರೋ ಹೆಂಗಸರೂ ತಮ್ಮ ಕೃತ್ಯಗಳಿಗಾಗಿ ಅಷ್ಟು ಸಮರ್ಥರಾಗಬೇಕು. ಅವಶ್ಯಬಿದ್ದ ಸಂದರ್ಭದಲ್ಲಿ ಹೆಂಗಸು ತನ್ನ ಜೀವಿಕೆಯನ್ನು ತಾನೇ ಮಾನದಿಂದ ಸಂಪಾದಿಸಿಕೊಳ್ಳಬಲ್ಲವಳಾಗಬೇಕು. ತಕ್ಕ ಗಂಡನಿರುವಾಗ ಸಹಧರ್ಮಿಣಿ, ಅವನೊಡನೆ ಜೀವನ ಸಮಭಾಗಿನಿ; ಆಪತ್ತಿಗೊಳಗಾದಾಗ ಸ್ವಾವಲಂಬಿನಿ, ಸ್ವತಂತ್ರನಿರ್ವಾಹಶಾಲಿನಿ — ಇದು ಸ್ತ್ರೀಗೆ ಸಮಾಜದಲ್ಲಿರಬೇಕಾದ ಸ್ಥಿತಿ. ನನ್ನ ನಂಬಿಕೆ ಹೀಗಿರುವ ಕಾರಣ, ಈ ಗ್ರಂಥವನ್ನು ಪ್ರಕಟಿಸುವ ಅವಕಾಶವು ನನಗೆ ವಿಶೇಷ ಸಂತೋಷಕ್ಕೂ ಹೆಮ್ಮೆಗೂ ಕೃತಜ್ಞತೆಗೂ ಕಾರಣವಾಗಿದೆ.

ಶ್ರೀಮತಿ ಜಯಲಕ್ಷ್ಮಮ್ಮನವರಿಗೆ ಈ ಸಂದರ್ಭದಲ್ಲಿ ನನ್ನ ಮನಃಪೂರ್ವಕವಾದ ಅಭಿನಂದನೆಗಳನ್ನೂ ವಂದನೆಗಳನ್ನೂ ಸಲ್ಲಿಸಲು ಅಪ್ಪಣೆ

ಬೇಡುತ್ತೇನೆ. ಜನರಲ್ಲಿ ತಿಳಿವಳಿಕೆಯನ್ನು ಹರಡಿ, ಅವರ ಮನಸ್ಸನ್ನೂ ಜೀವನವನ್ನೂ ಉನ್ನತಮಾರ್ಗಕ್ಕೆ ತರಬೇಕೆಂದು ಶ್ರೀಮತಿ ಜಯಲಕ್ಷ್ಮಮ್ಮನವರು ಬಹು ಉತ್ಸಾಹದಿಂದ ಕನ್ನಡ ಸಾಹಿತ್ಯದ ಸೇವೆ ಮಾಡುತ್ತಿದ್ದಾರೆ. ಅವರ ಶೈಲಿ ಆಡಂಬರವನ್ನು ಬಯಸದೆ, ಸಹಜವಾದ ಸರಳತೆಯೂ ಲಾಲಿತ್ಯವೂ ಕೊಡುವ ಸೊಗಸಿನಿಂದ ನಲಿಯುತ್ತಿದೆ. ಅವರ ಕನ್ನಡ ಪ್ರೇಮ ಬೆಳೆಯಲಿ. ಅವರ ಲೇಖಣಿಯ ಶಕ್ತಿ ಸಂಪತ್ತುಗಳು ಸಂತತವಾಗಿ ಅಭಿವೃದ್ಧಿ ಹೊಂದಲಿ. ಎಲ್ಲ ಶುಭ ಪರಂಪರೆಗಳೂ ಅವರಿಗೆ ಸರ್ವದಾ ಲಭ್ಯವಾಗಿ, ಅವರಿಂದ ಇಂಥ ದೇಶೋಪಕಾರ ಭಾಷೋಪಕಾರಗಳು ಚಿರಕಾಲ ನಡೆದು ಯಶಸ್ಕರವಾಗಲಿ ಎಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಅವರ ತೀರ್ಥರೂಪರವರು ಶ್ರೀಮಾನ್ ಎ. ವಿ. ರಾಮನಾಥನ್ ಅವರೂ, ಅವರ ಯಜಮಾನರು ಶ್ರೀಮಾನ್ ಕೆ. ಶ್ರೀನಿವಾಸನ್ ಅವರೂ ಈ ಪ್ರಕಟನೆಯ ವಿಷಯದಲ್ಲಿ ತೋರಿಸಿರುವ ಆದರಕ್ಕಾಗಿಯೂ, ನನ್ನ ಬಗ್ಗೆ ಅವರು ತೋರಿಸಿರುವ ಸ್ನೇಹ ಕರುಣೆಗಳಿಗಾಗಿಯೂ ನನ್ನ ಅಂತಃಕರಣದ ವಂದನೆಗಳು ಅವರಿಗೆ ಸಲ್ಲುತ್ತವೆ.

ಕನ್ನಡ ಮಹಾಜನರು ಈ ಗ್ರಂಥವನ್ನು ಅಕ್ಕರೆಯ ನೋಟದಿಂದ ನೋಡಬೇಕೆಂದು ಬೇಡುತ್ತೇನೆ.

ಕರ್ಣಾಟಕ ಪ್ರಕಟನಾಲಯ
ಬೆಂಗಳೂರು, ಸೆಪ್ಟೆಂಬರು ೧೯೩೭

**ಡಿ. ವಿ. ಗುಂಡಪ್ಪ**

# ಮುನ್ನುಡಿ

ವಾಚಕ ಮಹನೀಯರಲ್ಲಿ ನನ್ನದೊಂದು ವಿನಂತಿ. ಈ ಚಿಕ್ಕ ಪುಸ್ತಕವು ನನ್ನ ಹೊಸ ಕಲ್ಪನೆಯಲ್ಲ. ಇದು ಶೈಲಿಯನ್ನಾಗಲಿ, ಸಾಹಿತ್ಯವನ್ನಾಗಲಿ ಅಥವಾ ಭಾಷೆಯನ್ನಾಗಲಿ ಬೋಧಿಸುವುದಕ್ಕಾಗಿ ಬರೆದ ಗ್ರಂಥವೂ ಅಲ್ಲ. ಶ್ರೀಮಾನ್ ಜಿ. ಎಸ್. ದತ್‌ರವರು ತಮ್ಮ ಪತ್ನಿಯವರಾದ ಸರೋಜನಳಿನಿಯವರ ಜೀವನಚರಿತ್ರೆಯನ್ನು ಮೊಟ್ಟಮೊದಲು ಆಂಗ್ಲೇಯ ಭಾಷೆಯಲ್ಲಿ ಬರೆದರು. ಅದನ್ನು ನಾನು ಓದಿದಂದಿನಿಂದಲೂ, ಈ ಸ್ತ್ರೀರತ್ನದ ಜೀವನಚರಿತ್ರೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಓದಿ ತಿಳಿದುಕೊಳ್ಳಲಾರದ ನನ್ನ ಸಹೋದರಿಯರಿಗೆ ಆಕೆಯ ಮಹಿಮಾತಿಶಯವನ್ನು ಸುಲಭರೀತಿಯಲ್ಲಿ ತಿಳಿಸಿ, ನಮ್ಮ ದೇಶದಲ್ಲೂ ಮಹಿಳೆಯರು ಆಕೆಯ ಮೇಲ್ಪಙ್ತಿಯನ್ನು ಅನುಸರಿಸಲು ಒಂದು ಪ್ರೇರಣೆಯನ್ನು ಕಲ್ಪಿಸಬೇಕೆಂಬ ಅಭಿಲಾಷೆಯಿಂದ ಇದನ್ನು ಬರೆಯಲುದ್ಯುಕ್ತಳಾದೆನು. ಮ॥ರಾ॥ ದತ್‌ರವರ ಶೈಲಿಯು ನನಗಿಲ್ಲ. ಕೂಡಿದಮಟ್ಟಿಗೆ ಅವರ ಬರವಣಿಗೆಯನ್ನೇ ಅನುಸರಿಸಿ ಇದನ್ನು ಬರೆದಿದ್ದೇನೆ. ಸರೋಜನಳಿನಿಯಂಥ ಮಹಿಳೆಯರು ದೇವತಾಸ್ವರೂಪಿಗಳು. ಅಂಥವರು ನಮ್ಮ ಭೂಮಿಯಲ್ಲಿ ಬಹುಕಾಲಕ್ಕೊಮ್ಮೆ ಯಾವಾಗಲೋ ಜನಿಸುವರು. ಸಾಮಾನ್ಯರಾದ ನಾವುಗಳೆಲ್ಲರೂ ಆಕೆಯಲ್ಲಿ ಸ್ವಾಭಾವಿಕವಾಗಿದ್ದ ಗುಣಗಳನ್ನು ಸ್ವಲ್ಪ ಮಟ್ಟಿಗಾದರೂ ಹೊಂದಿದ್ದೇವೆಂಬುದು ನನ್ನ ಭಾವನೆ. ಆಕೆಯ ಜೀವನದ ವಿಷಯಗಳನ್ನು ಓದಿ ತಿಳಿದು, ನಮ್ಮ ಶಕ್ತಿಗೆ ಅನುಸಾರವಾಗಿ ಈ ಗುಣಗಳನ್ನು ವೃದ್ಧಿಗೊಳಿಸಿಕೊಂಡು ಜನಾಂಗಸೇವೆಯನ್ನು ಮಾಡಬಹುದೆಂಬುದೇ ನನ್ನ ಉದ್ದೇಶ. ಈ ಆಸಕ್ತಿಯು ವಾಚಕರಲ್ಲಿ ನೂರರಲ್ಲೊಬ್ಬರಲ್ಲಾದರೂ ಉತ್ಪನ್ನವಾದರೆ ನನ್ನ ಶ್ರಮವು ಸಾರ್ಥಕವಾಗುವುದು. ಆದುದರಿಂದ ಈ ಪುಸ್ತಕದಲ್ಲಿರುವ ಭಾವವನ್ನು ಗ್ರಹಿಸಿ, ನ್ಯೂನತೆಗಳನ್ನು ಮನ್ನಿಸಬೇಕೆಂದು ವಿನಯದಿಂದ ಬೇಡುತ್ತೇನೆ.

೨. ಇತ್ತೀಚೆಗೆ, ಎಂದರೆ ೧೦-೧೨ ವರ್ಷಗಳಿಂದ, ನಮ್ಮ ನಾಡಿನಲ್ಲಿ ಮಹಿಳಾಸಮಿತಿಗಳೂ ಸೇವಾಸಮಿತಿಗಳೂ ಅಲ್ಲಲ್ಲಿ ಸ್ಥಾಪಿತವಾಗಿ, ಅವುಗಳಿಂದ ಒಂದೆರಡುಕಡೆಗಳಲ್ಲಿ ಬಹಳ ಶ್ಲಾಘನೀಯವಾದ ಕೆಲಸಗಳೂ ನಡೆಯುತ್ತಿವೆ. ಆದರೆ ಮೈಸೂರುದೇಶದ ಪ್ರತಿಯೊಂದು ತಾಲ್ಲೂಕಿನಲ್ಲಿಯಾದರೂ ಒಂದು ಸಮಿತಿ ಏರ್ಪಡಬೇಕೆಂದೂ ನಮ್ಮ ಸ್ತ್ರೀಯರುಗಳಿ

ಗಿರುವ ಅಜ್ಞಾನವು ಹೋಗಿ, ಜನಾಂಗಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ಅವರುಗಳು ತಮ್ಮ ವಿರಾಮವನ್ನು ಕಳೆಯುಬೇಕೆಂದೂ ನನ್ನ ಆಶೆ. ಈ ಸಮಿತಿಗಳನ್ನು ಸ್ಥಾಪಿಸುವುದು ಹೇಗೆ, ಅವು ಮುಂದೆ ಹೇಗೆ ಕೆಲಸ ನಡೆಯಿಸಬೇಕು ಎಂಬ ವಿಷಯಗಳೆಲ್ಲ ಈ ಪುಸ್ತಕದಿಂದ ವಿಶದವಾಗದೆ ಇರಲಾರವು.

೩. ನಾನು ಈ ಗ್ರಂಥವನ್ನು ಬರೆದು ಪೂರೈಸಿ ಪ್ರಕಟಮಾಡಲು ಉದ್ಯುಕ್ತಳಾಗುತ್ತಿರುವಷ್ಟರಲ್ಲಿಯೇ ಶ್ರೀಮಾನ್ ವೈ. ಕೆ. ರಾಮಚಂದ್ರ ರಾಯರೂ ಸಹ ಇದೇ ಗ್ರಂಥವನ್ನು ಬರೆದು ಮುಗಿಸಿ, ಆಗತಾನೇ ಪ್ರಕಟನೆಗಾಗಿ ಶ್ರೀಮಾನ್ ಗುಂಡಪ್ಪನವರ ವಶಕ್ಕೆ ಒಪ್ಪಿಸಿರುವುದಾಗಿ ನನ್ನ ಮಿತ್ರರೊಬ್ಬರ ಮೂಲಕ ಹಠಾತ್ತಾಗಿ ನನಗೆ ವರ್ತಮಾನ ತಿಳಿಯ ಬಂದಿತು. ನಾನು ತತ್‌ಕ್ಷಣ ನನ್ನ ತಂದೆಯವರ ಪರಮ ಮಿತ್ರರಾದ ಶ್ರೀಮಾನ್ ರಾಮಚಂದ್ರರಾಯರ ಮನೆಗೆ ಹೋಗಿ ಬಹು ಸಂಕೋಚದಿಂದ ಈ ವಿಷಯವಾಗಿ ಅವರೊಡನೆ ಮಾತನಾಡಿದೆನು. ತತ್‌ಕ್ಷಣ ಆ ಮಹನೀಯರು, ನನ್ನಮೇಲೆ ಸಂಪೂರ್ಣ ದಯೆಯಿಟ್ಟು, ಅಷ್ಟು ದಿನಗಳ ಕಾಲ ತಾವು ಶ್ರಮಪಟ್ಟು ನಮ್ಮ ನಾಡಿನ ಸ್ತ್ರೀಯರಿಗಾಗಿ ಬರೆದ ಗ್ರಂಥವನ್ನು ಪ್ರಕಟನಾಲಯದಿಂದ ಹಿಂದಕ್ಕೆ ತರಿಸಿಕೊಂಡು, ತಮ್ಮ ಕಾರ್ಯವು ವ್ಯರ್ಥವಾದುದನ್ನು ಸ್ವಲ್ಪವೂ ಲಕ್ಷಿಸದೆ, ನನ್ನ ಈ ಪುಸ್ತಕವು ಪ್ರಕಟವಾಗಲು ಅವಕಾಶವಿತ್ತು ಮಹದುಪಕಾರ ಮಾಡಿದುದಕ್ಕಾಗಿ ಅವರಿಗೆ ನಾನು ಚಿರಋಣಿಯಾಗಿರುವೆನು. ಈ ಮೂಲಕ ಅವರಿಗೆ ನನ್ನ ಅನೇಕಾನೇಕ ವಂದನೆಗಳನ್ನು ಸಮರ್ಪಿಸುತ್ತೇನೆ. ನನ್ನ ಗ್ರಂಥವನ್ನು ತಿದ್ದಿ, ಚೆನ್ನಾಗಿ ಪ್ರಕಟವಾಗಲು ಸಹಾಯ ಮಾಡಿದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರಿಗೂ, ಶ್ರೀಮಾನ್ ಡಿ. ವಿ. ಗುಂಡಪ್ಪನವರಿಗೂ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ.

೪. ಕನ್ನಡ ಭಾಷೆಯಲ್ಲಿ ಈ ಪುಸ್ತಕವನ್ನು ಪ್ರಕಟಿಸಲು ಬಹಳ ದಯೆಯಿಂದ ನನಗೆ ಅನುಮತಿಯನ್ನು ಕೊಟ್ಟುದಕ್ಕಾಗಿ ಮ|| ರಾ|| ಜಿ. ಎಸ್. ದತ್‌ರವರಿಗೆ ನಾನು ಕೃತಜ್ಞಳಾಗಿರುತ್ತೇನೆ.

**ಜಯಲಕ್ಷ್ಮಿ ಶ್ರೀನಿವಾಸನ್.**

# ವಿಷಯಾನುಕ್ರಮಣಿಕೆ


| | | | ಪುಟ |
|---|---|---|---|
| ಪ್ರಕಟನ ಕರ್ತರ ಬಿನ್ನಹ | | | 7 |
| ಗ್ರಂಥ ಲೇಖಕಿಯವರ ಮುನ್ನುಡಿ | | | 11 |
| ಅವತರಣಿಕೆ | ೧ | ಶ್ರೀ ರವೀಂದ್ರನಾಥ ಠಾಕೂರರಿಂದ | 15 |
| ,, | ೨ | ಶ್ರೀ ಸಿ. ಎಫ್. ಆ್ಯಂಡ್ರೂಸರಿಂದ | 16 |
| ಅಧ್ಯಾಯ | ೧ | ಬಾಲ್ಯ | ೧ |
| ,, | ೨ | ದಾಂಪತ್ಯ | ೬ |
| ,, | ೩ | ಗೃಹಕೃತ್ಯ | ೧೪ |
| ,, | ೪ | ಭಾರತೀಯ ಮಹಿಳಾ ಪ್ರಪಂಚ | ೨೦ |
| ,, | ೫ | ಶೀಲಸ್ವಭಾವಗಳು | ೩೪ |
| ,, | ೬ | ವಿವಾಹ ಧರ್ಮದ ಧ್ಯೇಯ | ೪೯ |
| ,, | ೭ | ಸಂಗೀತದಲ್ಲಿ ಪ್ರೀತಿ | ೫೪ |
| ,, | ೮ | ದೇಶಾಭಿಮಾನ | ೬೧ |
| ,, | ೯ | ಒಂದು ಹಳ್ಳಿಯಲ್ಲಿ | ೮೧ |
| ,, | ೧೦ | ಮಹಿಳಾ ಸಮಿತಿಗಳು | ೮೭ |
| ,, | ೧೧ | ಕಲ್ಕತ್ತೆಯಲ್ಲಿ ವಾಸ | ೧೧೩ |
| ,, | ೧೨ | ಕೇಂದ್ರ ಸಂಸ್ಥೆಯ ಸ್ಥಾಪನೆ | ೧೧೫ |
| ,, | ೧೩ | ಅನಂತಧಾಮ | ೧೨೪ |
| ,, | ೧೪ | ವೃದ್ಧಿಯಾಗುವ ಚಳವಳಿ | ೧೨೫ |


## ಚಿತ್ರಗಳು


೧ ಶ್ರೀಮತಿ ಸರೋಜ ನಳಿನಿಯವರು . . . ಮುಖಪತ್ರಕ್ಕೆದುರು

೨ ಶ್ರೀಮತಿ ಜಯಲಕ್ಷ್ಮಮ್ಮನವರು . . . ೯ ನೆಯ ಪುಟಕ್ಕೆದುರು

## ತಿದ್ದುಪಡಿ

| ಪುಟ | ಪಂಕ್ತಿ | ತಪ್ಪು | ಸರಿ |
| --- | --- | --- | --- |
| ೩ | ೨೪ | "ತ್ರನ್ನ" | ಬಿಟ್ಟು ಬಿಡತಕ್ಕದ್ದು |
| ೧೦ | ೧೦ | ಖಾಯಿಲೆ | ಕಾಯಿಲೆ |
| ೪೯ | ೧೯ | ಎಚ್ಚರಿರುವಳವಳು | ಎಚ್ಚರುವಳವಳು |

## ಅವತರಣಿಕೆ ೧

## ಶ್ರೀ|| ರವೀಂದ್ರನಾಥ ಠಾಕೂರರವರಿಂದ

ಮನುಷ್ಯನು ತನ್ನ ಸ್ವತ್ತುಗಳ ಪೈಕಿ ಬಹು ಬೆಲೆ ಬಾಳುವಂಥ ವಸ್ತುಗಳಿಂದ ಹೆಮ್ಮೆಪಡುತ್ತಾನೆ. ಆದರೆ ಅದಕ್ಕಿಂತಲೂ ಬಹು ಮುಖ್ಯವಾದದ್ದು ಅವನ ನೆನಪಿನ ಉಗ್ರಾಣದಲ್ಲಿರುವ ಸಂಪತ್ತು. ಯಾವ ಮನುಷ್ಯನ ಸ್ಮೃತಿಯು ಜೀವನಕ್ಕೆ ಶಾಶ್ವತ ಬೆಲೆಯುಳ್ಳಂಥಾದ್ದನ್ನು ಸಂಗ್ರಹಮಾಡಿರಿಸಿಕೊಂಡಿಲ್ಲವೋ ಅವನೇ ನಿಜವಾಗಿ ಬಡವನು.

ಆದುದರಿಂದಲೇ ನಾನು ಸರೋಜ ನಳಿನಿಯ ಜೀವಿತವನ್ನೂ ಕಾರ್ಯವನ್ನೂ ಕುರಿತ ಈ ಸಣ್ಣ ಲೇಖನವನ್ನು ಓದಿದಾಗ, ಆಕೆಯ ಪತಿಯಾದ ಈ ಗ್ರಂಥಕರ್ತನು (ಶ್ರೀ|| ಜಿ. ಎಸ್. ದತ್) ನಿಜವಾಗಿಯೂ ಅದೃಷ್ಟಶಾಲಿಯೆಂದು ಭಾವಿಸಿದೆ. ಸರೋಜ ನಳಿನಿಯಂಥ ಸಾಧ್ವಿ ಸತ್ತಿದ್ದರೂ ನಷ್ಟವಾಗಿರುವವಳಲ್ಲ. ಆಕೆಯೊಡನೆ ಸಹಭಾಗಿಯಾಗಿರುವ ಪುಣ್ಯ ಯಾರಿಗೆ ದೊರೆತಿತ್ತೋ ಅವನ ಜೀವನದಲ್ಲಿ ಆಕೆ ಎಂದೆಂದಿಗೂ ಬದುಕಿರುತ್ತಾಳೆ.

ಸಾಮಾನ್ಯವಾಗಿ ನಾವು ಬಂಗಾಳದ ಒಬ್ಬ ಪ್ರತಿನಿಧಿ ಸ್ತ್ರೀಯನ್ನು ನೋಡಬೇಕೆಂದರೆ, ತನ್ನ ಮನೆಯ ನಾಲ್ಕು ಗೋಡೆಗಳ ಒಳಗಡೆ ವ್ಯಾಪಾರ ನಡಸತಕ್ಕ ಹೆಂಗಸಿನ ಕಡೆಗೇ ನಮ್ಮ ಮನಸ್ಸು ಹೋಗುತ್ತದೆ. ಒಂದು ಮನೆಯ ಆವರಣದ ಒಳಗಡೆಯೇ ಇದ್ದುಕೊಂಡು, ಒಂದು ಸಾವಿರ ರಕ್ಷಣೆಗಳಿಂದ ರಕ್ಷಿಸಲ್ಪಟ್ಟಿರುವ ಜೀವನವು ಒಂದು ಬಗೆಯ ಸಂಕುಚಿತವಾದ ಧ್ಯೇಯವನ್ನು ಸಾಧಿಸಬಲ್ಲದ್ದಾಗುವುದು ಅಪರೂಪವಲ್ಲ. ಆದರೆ ಅದರ ವ್ಯಾಪನೆ ಸ್ವಲ್ಪದ್ದು. ಅದರ ಆಕಾಂಕ್ಷೆಗಳು ಕೊಂಚವಾದವು. ಅದಕ್ಕಾಗುವ ಪರೀಕ್ಷೆಗಳು ಅಷ್ಟು ಕಠಿಣವಲ್ಲ.

ಸರೋಜ ನಳಿನಿ ತನ್ನ ಜೀವನದ ಅಧಿಕ ಭಾಗವನ್ನು ಮನೆಯ ಹೊರಗಡೆ ಜನದ ಸಂದಣಿಯಲ್ಲಿ ಕಳೆದವಳು. ಆಕೆಯ ಜೀವನಕ್ಕೆ ಆಕೆಯ ಬಂಧುವರ್ಗವು ಎಲ್ಲೆ ಕಟ್ಟಾಗಿರಲಿಲ್ಲ. ತನ್ನವರಲ್ಲದ ಜನರನ್ನು ಆದರಿಸಬೇಕಾದ ಕರ್ತವ್ಯ ಆಕೆಗೆ ಎಷ್ಟೋ ಸಲ ಒದಗಿತ್ತು. ಆಕೆಯ ಜೀವನ ಕಾರ್ಯವು ತನ್ನ ಕುಟುಂಬಕ್ಕೆ ಮಾತ್ರ ಪರಿಮಿತವಾದದ್ದಾಗಿರಲಿಲ್ಲ. ಆಕೆಯ ಸಂಸಾರ ಕ್ಷೇತ್ರದಲ್ಲಿ ಬಹು ವಿಧದ ಬಹುಮಂದಿ ಜನ ಸೇರಿದ್ದರು. ಬಂಧುಗಳು, ಸ್ನೇಹಿತರು, ಸ್ವದೇಶೀಯರು, ವಿದೇಶೀಯರು, ಪರಿಚಿತರು, ಅಪರಿಚಿತರು — ಎಲ್ಲರೂ ಅದರಲ್ಲಿದ್ದರು. ಈ ವಿಸ್ತೃತವಾದ ಆತ್ಮೀಯ

ಮಂಡಲಿಯಲ್ಲಿ ಆಕೆಯ ನಡವಳಿಕೆ, ಆಕೆಯ ಸ್ನೇಹಸ್ವಭಾವದಿಂದಲೂ ಉಪಕಾರ ಬುದ್ಧಿಯಿಂದಲೂ ಸ್ವಾರ್ಥರಹಿತತೆಯಿಂದಲೂ ಉದಾರ ವಾದದ್ದಾಗಿತ್ತು. ಹೆಂಗಸಿನ ಬಾಳಿಗೆ ನಿಜವಾದ ಪರೀಕ್ಷೆ ಒದಗಿ ಅದರ ನಿಜವಾದ ಬೆಲೆ ಗೊತ್ತಾಗುವುದು ಇಂಥ ಸನ್ನಿವೇಶಗಳಲ್ಲಿ. ಸರೋಜ ನಳಿನಿಯ ಜೀವನದಲ್ಲಿ ಮನೆಯು ಸಮಾಜಕ್ಕಾಗಿ ಆಹುತಿಯಾಗಲಿಲ್ಲ; ಸಮಾಜವು ಮನೆಗಾಗಿ ಆಹುತಿಯಾಗಲಿಲ್ಲ. ಅವೆರಡನ್ನೂ ಚೆನ್ನಾಗಿ ಸಮತೂಗಿಸಿ ನಡಸಿದ್ದು ಆಕೆಯ ಬಾಳಿನ ಅತಿ ಶ್ರೇಷ್ಠವಾದ ಮಹಿಮೆ.

ಈ ಕಾಲದಲ್ಲಿ ಕೇವಲ ಗೃಹಿಣಿಮಾತ್ರವಾಗಿ ಅದಕ್ಕಿಂತ ಹೆಚ್ಚದೆ ಇರುವ ಹೆಂಗಸು ನಮಗೆ ಆದರ್ಶವಲ್ಲ. ಗೃಹ ದೇಶಗಳೆರಡರ ಹಿತ ಕ್ಕಾಗಿಯೂ ದುಡಿಯುವಾಕೆ ನಮಗೆ ಆದರ್ಶವಾದವಳು. ಈಗ ನಮಗೆ ಬೇಕಾದದ್ದು ಪುರಾತನವಾದ ದೇಶಾಚಾರ ಸಂಪ್ರದಾಯಗಳಿಗೆ ಬಂದಿ ಯಾಗಿರುವ ಹೆಂಗಸಲ್ಲ; ವಿಶಾಲವಾದ ಜಗಜ್ಜೀವನಕ್ಕೆ ಸಂಬಂಧಪಟ್ಟಿರುವ ಬುದ್ಧಿಶಕ್ತಿಗಳೂ ಭಾವರಸಗಳೂ ಯಾವಾಕೆಯಲ್ಲಿ ತಡೆಯಿಲ್ಲದೆ ಹರಿದು ಒಟ್ಟುಗೂಡಿ, ಒಂದು ಆಳವೂ ಸುಂದರವೂ ಆದ ಪ್ರವಾಹದಲ್ಲಿ ಸಮರಸ ವಾಗುತ್ತವೆಯೋ ಅಂಥ ಹೆಂಗಸು ಈಗ ನಮಗೆ ಬೇಕಾಗಿದೆ. ಸರೋಜ ನಳಿನಿಯ ಜೀವನದಲ್ಲಿ ಮೂರ್ತೀಭವಿಸಿರುವಂತೆ ನಮಗೆ ಕಾಣಿಸುತ್ತಿರು ವುದು ಆಧ್ಯೇಯ.

---

## ಅವತರಣಿಕೆ ೨

## ಶ್ರೀ॥ ಸಿ. ಎಫ್. ಆ್ಯಂಡ್ರೂಸ್ ಅವರಿಂದ

ಶ್ರೀಮಾನ್ ಜಿ. ಎಸ್. ದತ್ತರವರ ಪತ್ನಿ ಸರೋಜ ನಳಿನಿಯವರ ಪರಿಚಯ ಮೊದಲು ನನಗೆ ಆದದ್ದು ಆಕೆ ಕವಿ ರವೀಂದ್ರನಾಥ ಠಾಕೂರರ ಆಶ್ರಮವಾದ ಶಾಂತಿನಿಕೇತನಕ್ಕೆ ಬರುತ್ತಿದ್ದ ಕಾಲದಲ್ಲಿ. ಆಗ ಆಕೆಯ ಯಜಮಾನರು ಬಂಗಾಳದ ಬೀರ್‌ಭೂಮ್ ಜಿಲ್ಲೆಯ ಕಲೆಕ್ಟರೂ ಮ್ಯಾಜಿಸ್ಟ್ರೇಟರೂ ಆಗಿದ್ದರು. ಆ ವೇಳೆಗೇ ಆಕೆಯ ಹೆಸರು ಮಹಿಳಾ ಸಮಾರಂಭದ ಸಂಬಂಧದಲ್ಲಿ ತುಂಬಾ ಪ್ರಸಕ್ತಿಯುಳ್ಳದ್ದಾಗಿತ್ತು. ಆಕೆ ಸ್ತ್ರೀಸ್ವಾತಂತ್ರ್ಯಕ್ಕಾಗಿ ಮುಂದೆ ನಿಂತವಳೆಂಬ ಸಂಗತಿಯ ಉಜ್ಜ್ವಲಸ್ಫೂರ್ತಿ ಬಂಗಾಳ ಆಧಿಪತ್ಯದಲ್ಲಿ ಎಲ್ಲ ಕಡೆಯೂ ವ್ಯಾಪಿಸಿತ್ತು. ಮಹಿಳಾ

ಸಮಾರಂಭದ ವಿಷಯದಲ್ಲಿ ಆಕೆಗಿದ್ದ ಮನೋನಿಷ್ಠೆಯು ಒಂದು ಸರ್ವ ಸ್ವಾಧೀನಕಾರಕವಾದ ಮಹದಾವೇಶವಾಗುವಷ್ಟು ಅಗಾಧವಾಗಿತ್ತು. ಶಾಂತಿನಿಕೇತನದಲ್ಲಿ ಕವಿವರ್ಯರ ಗೀತಗಳೂ ಭಾಷಣಗಳೂ ಆಕೆಗೆ ಮಹಾ ಸ್ಫೂರ್ತಿಪ್ರದಗಳಾದುವು. ಅವರ ಹಾಡುಗಳು ಆಕೆಯ ಕಿವಿಗಳಲ್ಲಿ ಮೊಳಗುತ್ತ, ಕರ್ತವ್ಯ ಪಥದಲ್ಲಿ ತಾನು ಒಂದುವೇಳೆ ಒಬ್ಬಂಟಿಗಳಾಗಿ ನಡೆಯಬೇಕಾಗಿ ಬಂದಾಗ್ಯೂ ಆಕೆ ಮುಂದೆಮುಂದೆ ನಡೆಯುವಂತೆ ಅವು ಪ್ರೇರಿಸುತ್ತಿದ್ದುವು.

ಆಕೆಯ ಮನಸ್ಸಿನಮೇಲೆ ಪರಿಣಾಮ ಮಾಡಿದ ಪ್ರಭಾವಗಳಲ್ಲಿ ಕವಿವರ್ಯರದಕ್ಕೆ ಎರಡನೆಯದು ಸತೀ ಬೋಸ್ ಅವರದು. ಸತೀ ಬೋಸ್ ಅವರು ಜಗದ್ವಿಖ್ಯಾತ ವೈಜ್ಞಾನಿಕರಾದ ಸರ್ ಜಗದೀಶಚಂದ್ರ ಬೋಸ್ ಅವರ ಪತ್ನಿ. ಆಕೆಗೆ ಸರೋಜನಳಿನಿಯಲ್ಲಿ ಬಹು ವಿಶ್ವಾಸ. ಸರೋಜನಳಿನಿ ಕೈಕೊಂಡಿದ್ದ ಕಷ್ಟಕಾರ್ಯದಲ್ಲಿ ಸತೀ ಬೋಸ್ ಅವರು ಬಹುವಾಗಿ ಹಿತಸೂಚನೆಗಳನ್ನೂ ಸಹಾಯವನ್ನೂ ಕೊಡುತ್ತಿದ್ದರು.

ಸರೋಜನಳಿನಿಯ ಸ್ವಂತ ಉದ್ಯಮಗಳು ವಿಶ್ರಾಂತಿಯನ್ನು ಬಯಸದುವಾಗಿದ್ದುವು. ಸತ್ಯಾಂಶವೇನೆಂದರೆ, ಆಕೆ ತನ್ನನ್ನು ತಾನೇ ಸವೆಯಿಸಿಕೊಂಡುಬಿಟ್ಟಳು. ಆಕೆ ತನ್ನ ಕಡೆಗಾಲದವರೆಗೂ ಯಾವ ಹೊರೆಯನ್ನು ಹೊತ್ತು ಮುಗಿಸಬೇಕೆಂದು ಅಷ್ಟು ಧೈರ್ಯದಿಂದ ವಹಿಸಿಕೊಂಡಿದ್ದಳೋ ಅದರ ಭಾರದಿಂದ ಆಕೆಯ ಆರೋಗ್ಯ ಕುಗ್ಗಿತು. ಅದು ಆಕೆಯ ಆಯುಸ್ಸನ್ನು ಕಿರಿದುಮಾಡಿತು. ಪೂರ್ವ ವಯಸ್ಸಿನಲ್ಲಿಯೇ, ೩೭ನೆಯ ವರುಷದಲ್ಲಿ,—ಮಹಿಳಾಸಮಾರಂಭಕ್ಕೆ ಆಕೆಯ ಸೇವಾಶಕ್ತಿ ಅತ್ಯಂತ ಪ್ರಯೋಜನಕರವಾಗುವ ಸೂಚನೆ ತೋರುತ್ತಿದ್ದ ವೇಳೆಯಲ್ಲಿ,—ಆಕೆಗೆ ಮರಣ ಬಂದೊದಗಿತು. ಒಂದು ದೃಷ್ಟಿಯಿಂದ ನೋಡಿದರೆ ಆಕೆಯ ಮರಣ ಒಂದು ಮಹಾ ವಿಪತ್ತೆಂದೆನಿಸುತ್ತದೆ; ಏಕೆಂದರೆ, ಕೈಗೆ ತೆಗೆದುಕೊಂಡಿದ್ದ ಕೆಲಸವನ್ನು ಮುಂದುವರಿಸುವುದರಲ್ಲಿ ಆಕೆ ಮಿಕ್ಕೆಲ್ಲರಿಗಿಂತ ಹೆಚ್ಚಾಗಿ ಕೃತಕಾರ್ಯಳಾಗಿದ್ದಳು. ಮತ್ತೊಂದು ದೃಷ್ಟಿಯಿಂದ ನೋಡಿದರೆ, ಆಕೆ ಆ ಅಕಾಲದಲ್ಲಿ, ಆ ವ್ಯಾಕುಲಕರವಾದ ರೀತಿಯಲ್ಲಿ, ತೀರಿಹೋದದ್ದೇ, ಬಂಗಾಳ ದೇಶದ ಸ್ತ್ರೀ ಜನದ ಮನಸ್ಸನ್ನು ಮುಟ್ಟಿ, ಆಕೆಯ ಹೆಸರು ಈ ಆಧಿಪತ್ಯದ ಒಳಗೆ ಮಾತ್ರವೇ ಅಲ್ಲದೆ ಹೊರಗೂ ಸಹ ಆ ಮಹಾ ಸಮಾರಂಭದ

ಹೆಗ್ಗುರುತಾಗುವಂತೆ ಮಾಡಿತು. ಹೀಗೆ ಆಕೆ ಪರಹಿತಕ್ಕಾಗಿ ಮಾಡಿದ ಜೀವಸಮರ್ಪಣೆಯು ಸಾರ್ಥಕಪಟ್ಟಿತು. ಅಲ್ಲಿಂದ ಮುಂದಕ್ಕೆ ಆ ಸಮಾರಂಭವು ಹಿಂದೆ ತನಗೆ ಇರದಿದ್ದ ಒಂದು ಶಕ್ತಿವಿಶೇಷವನ್ನು ಪಡೆದುಕೊಂಡಿತು. ಈ ಸಮಾರಂಭದಲ್ಲಿ ಅಲ್ಲಿಂದೀಚೆಗೆ ಅತಿಶಯವಾಗಿ ಕಾಣಬರುತ್ತಿರುವ ನವಚೈತನ್ಯವು ಆಕೆಯ ಮರಣಸ್ಮೃತಿಯಿಂದ ಬಂದದ್ದೆಂದು ನಿಜವಾಗಿ ಹೇಳಬಹುದು. ಹೀಗೆ ನೋಡಿದರೆ, ನಮಗೆ ಈ ಸಂಕಟಾನುಭವದಿಂದ—“ಒಂದು ಗೋಧಿಯಕಾಳು ನೆಲಕ್ಕೆ ಬಿದ್ದು ಸಾಯುವವರೆಗೂ ಒಬ್ಬಂಟಿಯಾಗಿರುವುದು; ಅದು ಸತ್ತಮೇಲೆ ಬಹು ಫಲವನ್ನು ಉತ್ಪತ್ತಿಮಾಡುವುದು”—ಎಂಬ ಪುರಾತನೋಕ್ತಿಯ ನಿಜಾಂಶಕ್ಕೆ ಮತ್ತೊಂದು ರುಜುವಾತು ಬಂದಂತಾಗಿದೆ. ಸರೋಜನಿಯ ಜೀವಿತವೆಂಬ ಧಾನ್ಯವು ಈಗ ಭೂಮಿಯೊಳಕ್ಕೆ ಬಿದ್ದಿದೆ. ಆ ಜೀವನದ ಯಜ್ಞವು ಫಲದಾಯಕವಾಗಿದೆ. ಆ ಫಲವನ್ನು ಈಗ ಹುಟ್ಟಿ ಪ್ರವರ್ಧಮಾನವಾಗುತ್ತ ಆಕೆಯ ಹೆಸರನ್ನು ಧರಿಸಿಕೊಂಡಿರುವ ಅನೇಕ ಮಹಿಳಾಸಮಿತಿಗಳಲ್ಲಿ ಕಾಣಬಹುದು.

ಆಕೆಯ ಜೀವನತ್ಯಾಗವು ಸರಿಯಾದ ಮನಃಪರಿಣಾಮ ಸಮಯದಲ್ಲಿ ಆಗಿದೆ. ಏಕೆಂದರೆ, ಈಗ ನಾವು ಇಂಡಿಯಾದೇಶದ ಮಹಿಳಾ ಪ್ರಪಂಚದಲ್ಲಿ ಒಂದು ಮಹಾಜಾಗೃತಿಯ ಪ್ರಾರಂಭ ದಶೆಯಲ್ಲಿದ್ದೇವೆ. ವಿಶೇಷವಾಗಿ ಈ ದೇಶದ ಉತ್ತರ ಪೂರ್ವ ಭಾಗಗಳಲ್ಲಿ, ಪರದಾ ಪದ್ಧತಿಯ ಕೆಡಕುಗಳು ಬಹಳ ಹೆಚ್ಚಿ ಅದರ ಅನ್ಯಾಯಗಳು ಬಹು ತೀವ್ರವಾಗಿ ಅನುಭವಕ್ಕೆ ಬಂದಿರುವ ಪ್ರದೇಶಗಳಲ್ಲಿ, ಆ ಜಾಗೃತಿ ಹರಡುತ್ತಿದೆ. ೧೯೨೮ನೆಯ ಇಸವಿಯ ಡಿಸೆಂಬರ್ ೨೮ ರಲ್ಲಿ ಕಲ್ಕತ್ತೆಯಲ್ಲಿ ನಡೆದ ಭಾರತೀಯ ಜನಪದ ಮಹಾಸಭೆಯು (ಇಂಡಿಯನ್ ನ್ಯಾಷನಲ್ ಕಾಂಗ್ರೆಸ್) ಸ್ತ್ರೀಯರ ಪರದಾ ಪದ್ಧತಿಯನ್ನು ತೆಗೆದುಹಾಕಿಸಲು ದೇಶ ವಿಶಾಲವಾದ ಚಳವಳಿಯನ್ನು ನಡಸಬೇಕೆಂದು ನಿಶ್ಚಯಿಸಿರುವುದಕ್ಕೆ ಬಹು ದೊಡ್ಡ ಅರ್ಥವುಂಟು. ಈ ದೇಶವಿಶಾಲವಾದ ಅನ್ಯಾಯವನ್ನು ಜನರ ಒಮ್ಮನಸ್ಸಿನ ಪ್ರಯತ್ನದಿಂದ ನಿವಾರಣೆ ಮಾಡಿಸುವುದು ಕರ್ತವ್ಯವೆಂಬುದನ್ನು ಇನ್ನು ಮುಂದೆ ಎಲ್ಲರೂ ಅಂಗೀಕರಿಸಿಯಾರೆಂದು ತೋರುತ್ತದೆ.

ಸರೋಜನಳಿನಿಯ ಪ್ರಭಾವದಲ್ಲಿ ನಿಜವಾದ ಮಹತ್ತ್ವ ಯಾವುದೆಂದರೆ—ಬಂಗಾಳ ದೇಶದ ಸ್ತ್ರೀ ಜೀವನದಲ್ಲಿ ಬದಲಾವಣೆ ನಡೆಯಬೇಕಾ

ದದ್ದು ಅವಶ್ಯವೆಂದು ಆಕೆ ಕಂಡುಕೊಂಡಿದ್ದಂತೆ, ಈ ದೇಶದ ಪುರಾತನವಾದ ಸಮಾಜ ಸಂಪ್ರದಾಯಗಳಲ್ಲಿ ಒಂದು ಅತಿಶಯವಾದ ಅಂದವೂ ಶಾಶ್ವತವಾದ ಬೆಲೆಯೂ ಇರುವುವೆಂಬುದನ್ನೂ ಆಕೆ ತಿಳಿದುಕೊಂಡಿದ್ದದ್ದು. ತನ್ನ ದೇಶೀಯ ಸೋದರಿಯರಿಗೆ ತಲೆತಲಾಂತರಗಳಿಂದ ಪ್ರಿಯವಾಗಿ ಬಂದಿದ್ದ ಸರಳವಾದ ಆಚಾರಗಳನ್ನು ಆಕೆ ತೊರೆದವಳಲ್ಲ. ತನ್ನ ಆಧುನಿಕತೆಯಿಂದ ಆಕೆ ಜನರಿಗೆ ಗಾಬರಿಯುಂಟುಮಾಡಿದವಳಲ್ಲ.

ಪೂರ್ವದಿಗ್ದೇಶಗಳ ಮತ್ತು ಪಾಶ್ಚಾತ್ಯದೇಶಗಳ ತಿಳಿವಳಿಕೆಗಳೆರಡೂ ಆಕೆಗೆ ಸಹಜವಾಗಿ ಬಂದಿದ್ದವು. ಈ ಕಡೆಗೇ ಆಗಲಿ ಆ ಕಡೆಗೇ ಆಗಲಿ ಆಕೆ ಪ್ರಯತ್ನಪಟ್ಟು ತಿರುಗಬೇಕಾಗಿರಲಿಲ್ಲ. ಆಕೆಯ ಸ್ವಭಾವದಲ್ಲಿ ಪೂರ್ವಪ್ರಪಂಚದ ಧ್ಯಾನಾರೂಢ ಬುದ್ಧಿಯೂ ಪಶ್ಚಿಮ ಪ್ರಪಂಚದ ಉದ್ಯೋಗತತ್ಪರತೆಯೂ ನೈಜವಾಗಿ ಸೇರಿದ್ದುವು. ಆಕೆಯ ಜೀವನದಲ್ಲಿ ಒಂದು ಸಾಮರಸ್ಯವಿತ್ತು. ಆ ಸಾಮರಸ್ಯದ ಇಂಪನ್ನೇ ಆಕೆ ಇತರರಿಗೂ ಕೊಡಲು ಬಯಸಿದ್ದಳು. ಈ ಆಧುನಿಕ ಕಾಲದಲ್ಲಿ, ಮಾನವ ಚರಿತ್ರೆಯ ನಾನಾಶಕ್ತಿಗಳ ಹೊಡೆದಾಟದ ನಡುವೆ, ಪೂರ್ವಕಾಲದ ವಿವಿಕ್ತ ಜೀವನವು,—ಕೆಲವು ದೃಷ್ಟಿಗಳಿಂದ ಅದು ಎಷ್ಟು ಸುಂದರವಾಗಿದ್ದರೂ,—ವ್ಯತ್ಯಾಸ ಹೊಂದದೆ ನಡೆದುಕೊಂಡು ಬರುವುದು ಸಾಧ್ಯವಾಗದೆಂಬುದನ್ನು ಆಕೆ ಸ್ಪಷ್ಟವಾಗಿ ಅರಿತಿದ್ದಳು. ಆಗಬೇಕಾಗಿರುವ ಬದಲಾವಣೆಗಳನ್ನು ಆಕೆ ಇತರರಿಗಿಂತ ಹೆಚ್ಚಾಗಿ ಉಪಕ್ರಮುಗೊಳಿಸಿದಳು.

ಈ ಅವತರಣಿಕೆಯಲ್ಲಿ ನಾನು ಮುಖ್ಯವಾಗಿ ಗಮನಕ್ಕೆ ತರಲಿಚ್ಛಿಸುವ ಅಂಶವಾವುದೆಂದರೆ—ಈಗ ಇಂಡಿಯಾದೇಶದಲ್ಲಿ ಅನೇಕ ಮಹಿಳಾ ಸಮಿತಿಗಳು ಕೈಕೊಂಡು ನಡಸುತ್ತಿರುವ ಸುಧಾರಣೆಗಳನ್ನು ಯಾವ ಹೊರಗಣ ಶಕ್ತಿಯೂ ಸಾಧಿಸಲಾಗುತ್ತಿರಲಿಲ್ಲವೆಂಬುದು. ಹಳದರಿಂದ ಹೊಸದಕ್ಕೆ ಬದಲಾಯಿಸುವ ಮಾರ್ಗ ಬಹು ಸೂಕ್ಷ್ಮವಾದದ್ದು. ಜನದ ಒಳಜೀವನಕ್ಕೆ ಯಾರು ಹೊರಗಿನವರಾಗಿರುತ್ತಾರೋ ಅಂಥವರ ನಿರ್ಬಂಧದಿಂದ, ಅಥವಾ ಬಲಾತ್ಕಾರದಿಂದ, ಆಗುವ ಬದಲಾವಣೆಗಳು ಹಾನಿಕರವೇ ಆಗುತ್ತವೆ.

ಹೊರಗಿನವರು ವಿನಯದಿಂದ ಸ್ನೇಹದ ಸೇವೆಯನ್ನು ಸಲ್ಲಿಸಲಾಗುವುದೆಂಬುದು ನಿಜ. ಆದರೂ ಪರಿಷ್ಕಾರ ಕಾರ್ಯದಲ್ಲಿ ಮುಖ್ಯನಾಯಕತ್ವವು ಸಮಾಜದ ಒಳಗಿನಿಂದ ಬರಬೇಕು. ಅದರ ಸ್ಫೂರ್ತಿ ಒಳಗಿನಿಂದಲೇ

ಹುಟ್ಟಬೇಕು. ಯಾವ ಸುಧಾರಣೆಯನ್ನು ಸಮಾಜವು ತಾನಾಗಿ ನಿಶ್ಚಯಿಸಿಕೊಂಡು ತಾನಾಗಿ ಸ್ವೀಕರಿಸುವುದೋ ಅದೇ ಶಾಶ್ವತವಾಗಿರತಕ್ಕದ್ದು. ಯಾವುದನ್ನು ಇತರರು ನಿಶ್ಚಯಿಸಿ ಮೇಲಿನಿಂದ ಒತ್ತಾಯಪಡಿಸುವರೋ ಅದು ಆ ಹೊರಗಣವರ ಪ್ರಭಾವವು ಹಿಂದಕ್ಕೆ ಸರಿದ ಕೂಡಲೇ ಮಾಯವಾಗಿ ಹೋಗುವುದು. ಸಮಾಜದ ಒಳಗಿನಿಂದ ಕೆಲಸ ಮಾಡುವ ಯೋಗ ಸರೋಜ ನಳಿನಿಯದಾಗಿತ್ತು. ಆದದ್ದರಿಂದ ಆಕೆ ಮಾಡಿದ ಕೆಲಸ ಚಿರಕಾಲ ನಿಲ್ಲತಕ್ಕದ್ದು.

ಇಂಡಿಯಾದೇಶವನ್ನು ಚೆನ್ನಾಗಿ ಬಲ್ಲವರೆಲ್ಲರೂ ಇಲ್ಲಿಯ ಸ್ತ್ರೀ ಜನದಲ್ಲಿ, ಪ್ರಪಂಚದಲ್ಲಿ ಇನ್ನೆಲ್ಲಿಯೂ ಕಾಣಬಾರದ ಒಂದು ನಯವೂ ಒಂದು ಸೊಬಗೂ ಇರುವುವೆಂದು ಅರಿತುಕೊಂಡಿದ್ದಾರೆ. ಭಾರತೀಯ ಸ್ತ್ರೀಯು ಉಡುವ ಸೀರೆಯ ಚೆಂದವು ಆಕೆಯ ಒಳಸ್ವಭಾವಕ್ಕೂ ಆತ್ಮಕ್ಕೂ ತಕ್ಕ ಗುರುತಾಗಿದೆ. ಸ್ತ್ರೀ ಸಂಸ್ಕೃತಿಯ ಈ ಸಂಪತ್ತನ್ನು ಮಾನವಲೋಕವು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ಅನೇಕ ದೇಶಗಳಲ್ಲಿ ಇಂಥ ಅಮೂಲ್ಯವಾದ ರತ್ನಗಳನ್ನು ಈಗಿನ ಕಾಲದ ವಿಚಾರಹೀನವಾದ ವ್ಯತ್ಯಾಸ ಕುತೂಹಲವು ಹಾಳುಮಾಡಿರುತ್ತದೆ. ಇಂಡಿಯಾದೇಶವು ಪ್ರಪಂಚಕ್ಕೆ ಕೊಡಲು ಅರ್ಹವಾಗಿರುವ ಈ ಉತ್ತಮೋತ್ತಮವಾದ ವರವನ್ನು ನಾವು ಎಂದಿಗೂ ಕಳೆದುಕೊಳ್ಳತಕ್ಕದ್ದಲ್ಲ.

ಆದರೂ ಆಧುನಿಕ ಜೀವನವು ಮುಂದು ಮುಂದಕ್ಕೆ ನಡೆಯುತ್ತಿರುವಾಗ, ಹಿಂದಿನಿಂದ ಬಂದದ್ದನ್ನು ಬದಲಾಯಿಸದೆ ಹಾಗೆಯೇ ಬಿಟ್ಟುಕೊಂಡಿರುವುದೆಂದರೆ ಅದು ಹಾನಿಕರವೇ ಆಗುವುದು. ಈಗ ಅತಿ ಮುಖ್ಯವಾಗಿ ಆಗಬೇಕಾದದ್ದು ಸಮಾಜದ ಒಳಗಿನಿಂದ ಹುಟ್ಟಿಕೊಂಡುಬರುವ ಸುಧಾರಣೆ. ಅದು ಭಾರತೀಯ ಸ್ತ್ರೀಯರ ಸ್ವಂತ ವಿಚಾರ ನಿರ್ಣಯಗಳಿಂದಲೇ ಆಗಬೇಕಾದದ್ದು. ಅದೇ ಆರೋಗ್ಯಕರವಾದದ್ದು.

ಬಂಗಾಳ ದೇಶವು ತನ್ನ ಪರಮ ನಿಷ್ಠರಾದ ಮಕ್ಕಳ ಪೈಕಿ ಸರೋಜ ನಳಿನಿಯಂತೆ ಮಧುರವಾಗಿಯೂ, ಮಾತೃ ಪ್ರಕಾರವಾಗಿಯೂ, ಪರಿಶುದ್ಧವಾಗಿಯೂ ಬಾಳಿದ ಸಾಧ್ವಿಯನ್ನು ಪಡೆದಿತ್ತೆಂಬುದು ನಮಗೆಲ್ಲ ನಿಜವಾಗಿ ಸಂತೋಷಕ್ಕೆ ಕಾರಣವಾಗಿದೆ. ಆಕೆ ನಮ್ಮನ್ನು ಬಿಟ್ಟು ಹೋದಮೇಲೆಯೂ ಆಕೆಯ ಜೀವನದ ಪರಿಮಳವು ಉಳಿದಿರುವುದು.

---

ಭಾರತೀಯ ಮಹಿಳಾಮಣಿ

# ಸರೋಜ ನಳಿನಿ

## ಒಂದನೆಯ ಅಧ್ಯಾಯ

## ಬಾಲ್ಯ

ಸರೋಜ ನಳಿನಿಯು ಬಂಗಾಳ ದೇಶದಲ್ಲಿ ಹುಗ್ಲೀ ನದಿಯದಡದಲ್ಲಿರುವ ಬಂಡೇಲ್ ಎಂಬ ಸ್ಥಳದಲ್ಲಿ ೧೮೮೭ನೆಯ ಇಸವಿ ಅಕ್ಟೋಬರ್ ತಿಂಗಳು ೯ನೆಯ ತಾರೀಖಿನ ದಿನ ಜನಿಸಿದಳು. ಇಹಲೋಕವನ್ನು ತ್ಯಜಿಸಿದಾಗ ಆಕೆಗೆ ಮೂವತ್ತೇಳು ವರ್ಷ ಮಾತ್ರ ಆಗಿದ್ದುವು. ಆಕೆಯ ತಂದೆ, ಶ್ರೀಮಾನ್ ವ್ರಜೇಂದ್ರನಾಥ ಡೇ* ಅವರು, ೧೮೭೫ನೆಯ ಇಸವಿಯಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಉದ್ಯೋಗಕ್ಕೆ ಸೇರಿ, ಬಂಗಾಳ ದೇಶದಲ್ಲಿ ಪ್ರಖ್ಯಾತಿ ಪಡೆದಿದ್ದರು. ಇವರು ಉದ್ಯೋಗದಿಂದ ನಿವೃತ್ತರಾದಾಗಿನಿಂದ ಕಲ್ಕತ್ತೆಯಲ್ಲಿ ವಾಸಮಾಡುತ್ತಿರುವರು. ಸರೋಜ ನಳಿನಿ ಇವರ ನಾಲ್ಕನೆಯ ಮಗಳು.

ಸರೋಜ ನಳಿನಿಯು ಜನಿಸಿದ್ದು ಒಂದು ದೊಡ್ಡ ಅವಿಭಕ್ತ ಕುಟುಂಬದಲ್ಲಿ. ಆಕೆಯ ತಾಯಿ, ಅಜ್ಜಿ, ಸೋದರಮಾವಂದಿರು, ಸೋದರತ್ತೆಯರು, ಅಕ್ಕ ತಂಗಿಯರು ಮೊದಲಾದವರೆಲ್ಲರೂ ಅದೇ ಮನೆಯಲ್ಲಿ ಒಟ್ಟಿಗೆ ಇದ್ದರು. ಅದು ಹಿಂದಿನ ಕಾಲದ ಪದ್ಧತಿಯಂತೆ ಕಟ್ಟಿದ ಒಂದು ವಿಸ್ತಾರವಾದ ಮನೆ. ಅದರ ಸುತ್ತಲೂ ಒಂದು ದೊಡ್ಡ ತೋಟವಿತ್ತು. ಅದರಲ್ಲಿ ತೆಂಗು, ಮಾವು, ಅಡಕೆ ಮುಂತಾದ ಮರಗಳ ತೋಪುಗಳಿದ್ದುವು; ಮತ್ತು ಅದು ನಿಂಬೆಯ ಹೂವಿನ ವಾಸನೆಯಿಂದಲೂ ರಜನೀಗಂಧ ಪುಷ್ಪಗಳ ಪರಿಮಳದಿಂದಲೂ ಭರಿತವಾಗಿತ್ತು. ಒಂದು ಕೊಳದ ದಡದ ಸುತ್ತ ಅಲ್ಲಲ್ಲಿ

---

* "ಡೇ" ಎಂಬುದು "ದೇವ" ಎಂಬುದರ ರೂಪಾಂತರವಿರಬಹುದು.

ಬಾಳೆಯ ಗುಮ್ಮೆಗಳಿದ್ದುವು. ಒಂದು ಮೂಲೆಯಲ್ಲಿ ಸರ್ವೇ ಮರಗಳು ಗಗನವನ್ನು ಮುಟ್ಟುವಂತೆ ತೋರುತ್ತ, ನೋಡುವವರಿಗೆ ಕೆಲವು ಮೈಲಿಗಳ ದೂರದಿಂದಲೂ ಗುರ್ತಿಸಲು ಸಾಧ್ಯವಾಗುವಂತೆ ಬೆಳೆದಿದ್ದುವು.

ಬಂಗಾಳ ದೇಶದಲ್ಲಿ ಗಂಗಾನದಿಯ ಶಾಖೆಗಳಲ್ಲೆಲ್ಲಾ ಅತ್ಯಂತ ಪವಿತ್ರವೆಂದು ಗಣಿಸಲ್ಪಟ್ಟಿರುವ ಹುಗ್ಲೀ ನದಿಯು ಅವರ ಮನೆಯ ಸಮೀಪದಲ್ಲಿಯೇ ಹರಿಯುತ್ತಿರುವುದು. ಈ ನದಿಗೆ ಸರೋಜನಳಿನಿಯ ತಾಯಿಯೂ, ಅವಳ ಅಜ್ಜಿ ಮೊದಲಾಗಿ ಅವರ ನೆಂಟರಿಷ್ಟರಾದ ಸ್ತ್ರೀ ವರ್ಗದವರೂ ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ನಡೆದುಕೊಂಡು ಹೋಗಿ ಸ್ನಾನಾದಿ ಕರ್ಮಗಳನ್ನು ಮಾಡಿಕೊಂಡು ಬರುತ್ತಿದ್ದರು. ಎಲ್ಲರೂ ನದಿಯಲ್ಲಿ ಸ್ನಾನ ಮಾಡುತ್ತ ನಿಂತುಕೊಂಡು ಸೂರ್ಯನ ಕಡೆಗೆ ತಿರುಗಿ ಕಣ್ಣುಗಳನ್ನು ಮುಚ್ಚಿಕೊಂಡು ಕರಗಳನ್ನು ಜೋಡಿಸಿ ನಮ್ಮ ಪೂರ್ವ ಪದ್ಧತಿಯಂತೆ ಪ್ರಾರ್ಥಿಸುತ್ತಿದ್ದರು. ಸರೋಜನಳಿನಿಯು ಚಿಕ್ಕ ಮಗುವಾಗಿದ್ದಾಗ ಅವರೊಂದಿಗೆ ತಾನೂ ಸೇರಿ ನದಿಗೆ ಹೋಗಿ ಅಲ್ಲಿನ ಆಚಾರ ಅಭ್ಯಾಸಗಳಲ್ಲಿ ಭಾಗಿಯಾಗುತ್ತಿದ್ದಳು.

ಸರೋಜನಳಿನಿಯ ಅನಂತರ ಒಂದು ಗಂಡು ಮಗು ಹುಟ್ಟಿದುದರಿಂದ,—ಎಂದರೆ ಆ ಗಂಡುಮಗು ನಾಲ್ಕು ಹೆಣ್ಣು ಮಕ್ಕಳಾದ ಮೇಲೆ ಹುಟ್ಟಿದ್ದಾದುದರಿಂದ,—ಸರೋಜನಳಿನಿಯ ತಾಯಿ ಅಜ್ಜಿಯರು, ಹಿಂದೂ ಜನದಲ್ಲಿರುವ ಭಾವನೆಯನ್ನನುಸರಿಸಿ, ಆಕೆ ತಮ್ಮ ಕುಟುಂಬಕ್ಕೆ ಅದೃಷ್ಟ ತರುವ ಹುಡುಗಿಯೆಂದು ಭಾವಿಸಿದ್ದರು.

ಸರೋಜನಳಿನಿಯು ಬಾಲ್ಯದಿಂದಲೂ ತನ್ನ ತಾಯಿ ತಂದೆಗಳಿಗೆ ಇತರ ಮಕ್ಕಳಿಗಿಂತಲೂ ಪ್ರೀತಿಪಾತ್ರಳಾದ ಮಗುವು. ಆಕೆಯ ತಂದೆಯೂ, ಗತಿಸಿದ ನಗೇಂದ್ರ ನಂದಿನೀ ಎಂಬ ಹೆಸರಿನ ಆಕೆಯ ತಾಯಿಯೂ ಜನರ ಗೌರವಕ್ಕೆ ಪಾತ್ರರಾಗಿ ಬಂಗಾಳ ದೇಶದಲ್ಲೆಲ್ಲ ಪ್ರಖ್ಯಾತರಾಗಿದ್ದಾರೆ. ಸರೋಜನಳಿನಿಯು ಆಕೆಯ ತಾಯಿ ತಂದೆಗಳ ಸುಗುಣಗಳಲ್ಲಿ ಬಹು ಹೆಚ್ಚು ಅಂಶವನ್ನು ಪಡೆದಿದ್ದಳು. ಆಕೆಯು ಚಿಕ್ಕ ಹುಡುಗಿಯಾಗಿದ್ದಾಗ "ಈ ಹುಡುಗಿ ಮುಟ್ಟಿದ್ದೆಲ್ಲ ಚಿನ್ನವಾಗುವುದು"

ಎಂದು ಒಬ್ಬರು ಹೇಳಿದ್ದರಂತೆ. ಆ ಬಾಲ್ಯದಲ್ಲಿಯೂ ಕೂಡ ಆಕೆಯ ಸರಳ ಸ್ವಭಾವದಿಂದ ಎಲ್ಲರ ಮನಸ್ಸೂ ಆಕೆಯ ಕಡೆಗೆ ತಿರುಗುತ್ತಿದ್ದಿತು. ಆಕೆಯ ಪ್ರಿಯ ಸೋದರ ಮಾವನಾದ ಸಿದ್ಧೇಶ್ವರ ಮಿತ್ರರವರು ಆಗಾಗ್ಗೆ ಆಕೆಯ ಮೇಲೆ ಪದ್ಯಗಳನ್ನು ರಚಿಸುತ್ತಿದ್ದರಲ್ಲದೆ ಆಕೆಯನ್ನು "ಸಾಸು" ಎಂಬ ಮುದ್ದು ಹೆಸರಿನಿಂದ ಕರೆಯುತ್ತಿದ್ದರು. ಆಕೆಯ ಮತ್ತೊಬ್ಬ ಸೋದರ ಮಾವಂದಿರು, ಪ್ರಸಿದ್ಧ ವೃತ್ತ ಪತ್ರಿಕಾಲೇಖಕರೂ ಗ್ರಂಥ ಕರ್ತರೂ ಆದ, ದಿವಂಗತರಾದ ಎಸ್. ಎಮ್. ಮಿತ್ರ ಎಂಬವರು. ಅವರು ಆಕೆಯನ್ನು "ತುಂಟು ಸಜ್ಜಾ" ಎಂದು ಕರೆಯುತ್ತಿದ್ದರು. ಅವರನ್ನು ಆಕೆ "ಗುಳ್ಳು ಮಾವ" ಎಂದು ಕರೆಯುತ್ತಿದ್ದಳು. ಎಸ್. ಎಮ್. ಮಿತ್ರರವರು ತಮ್ಮ "ಹಿಂದೂಪೂರ್" ಎಂಬ ಆಂಗ್ಲ ಭಾಷೆಯ ಕಾದಂಬರಿಯಲ್ಲಿ ಸರೋಜ ನಳಿನಿಯನ್ನು ಬಂಗಾಳದ ಆದರ್ಶ ಮಹಿಳೆಯೆಂದೂ, ಹಿಂದೂ ಸಂಗೀತದ ಪ್ರತ್ಯಕ್ಷ ರೂಪವೆಂದೂ ವರ್ಣಿಸಿರುತ್ತಾರೆ.

ಸರೋಜ ನಳಿನಿಯು ಪಾಠಶಾಲೆಗೆ ಹೋಗಿ ವಿದ್ಯೆ ಕಲಿತವಳಲ್ಲ; ವಿಶ್ವವಿದ್ಯಾನಿಲಯದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವಳೂ ಅಲ್ಲ. ಆಕೆಯು ತನ್ನ ಒಡಹುಟ್ಟಿದವರೊಡನೆ ಬೆಳೆದು, ಅವರ ಜೊತೆಯಲ್ಲಿ ಒಬ್ಬ ಉಪಾಧ್ಯಾಯರಿಂದಲೂ ಮತ್ತು ಒಬ್ಬ ಉಪಾಧ್ಯಾಯಿನಿಯಿಂದಲೂ ಮನೆಯಲ್ಲಿಯೇ ಸಾಧಾರಣವಾದ ಶಿಕ್ಷಣವನ್ನು ಪಡೆದಿದ್ದವಳು. ಓದು, ಬರೆಹ, ಲೆಕ್ಕ, ಇಂಗ್ಲಿಷ್ ಮತ್ತು ಬಂಗಾಳೀ ಭಾಷೆಗಳಲ್ಲಿ ಚೆನ್ನಾಗಿ ಮಾತನಾಡುವುದು ಮತ್ತು ಬರೆಯುವುದು, ಸ್ವಲ್ಪ ಮಟ್ಟಿಗೆ ಚರಿತ್ರೆ ಮತ್ತು ಭೂಗೋಳ — ಇಷ್ಟನ್ನು ಮಾತ್ರವೇ ಅವಳು ಕಲಿತಿದ್ದಳು. ದೊಡ್ಡವಳಾದ ಬಳಿಕ ಆಕೆಗೆ ಕೀರ್ತಿಯನ್ನು ತಂದ ಗುಣಾತಿಶಯಗಳನ್ನು ಆಕೆ ಸಂಗ್ರಹಿಸಿದ್ದು ತನ್ನ ತಂದೆತಾಯಿಗಳಿಂದ, ಮತ್ತು ವಿತಂತುವಾಗಿದ್ದ ತನ್ನ ಅಜ್ಜಿಯಿಂದ.

ಆಕೆಯ ತಂದೆ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂಡು ವುದಕ್ಕಾಗಿ ಇಂಗ್ಲೆಂಡಿಗೆ ಹೋಗುವುದಕ್ಕೆ ಮುಂಚೆಯೇ ಆತನಿಗೆ ಮದುವೆ ಯಾಗಿತ್ತು. ಆತನು ಇಂಗ್ಲೆಂಡಿನಿಂದ ಹಿಂತಿರುಗಿ ಬಂದಮೇಲೂ ಆತನ ಪತ್ನಿ

ನಗೇಂದ್ರ ನಂದಿನಿಯು ಬಂಗಾಳ ದೇಶದ ಹಿಂದೂ ಪದ್ಧತಿಯಂತೆ ಪರದೆಯೊಳಗಿದ್ದುಕೊಂಡು, ತನ್ನ ಅತ್ತೆಯವರ ಪೋಷಣೆಗೂ ವಿಚಾರಣೆಗೂ ಒಳಪಟ್ಟವಳಾಗಿದ್ದಳು. ಸರೋಜ ನಳಿನಿಯು ಹುಟ್ಟಿದ ಮೇಲೂ ಆಕೆ ಬಹಳ ವರ್ಷಗಳವರೆಗೆ ಹಾಗೆಯೇ ಇರುತ್ತಿದ್ದಳು. ಆಕೆಯು ಆ ಬಳಿಕ ಪರದೆಯನ್ನು ತೆಗೆದುಹಾಕಿ, ಜನರೊಂದಿಗೆ ನಿಸ್ಸಂಕೋಚವಾಗಿ ಇರಲಾರಂಭಿಸಿದಮೇಲೂ ಕೂಡ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದನ್ನು ಕಲಿಯಲೇ ಇಲ್ಲ; ತನ್ನ ಪತಿಯ ಯೂರೋಪಿಯನ್ ಸ್ನೇಹಿತರೊಂದಿಗೆ ಹಿಂದೂಸ್ಥಾನೀ ಭಾಷೆಯಲ್ಲಿಯೇ ಮಾತನಾಡುತ್ತಿದ್ದಳು. ಆಕೆಯು ಪತಿ ಪರಾಯಣೆಯಾದ ಸಹಧರ್ಮಿಣಿಯಾಗಿಯೂ, ವಾತ್ಸಲ್ಯಪೂರಿತಳಾದ ತಾಯಿಯಾಗಿಯೂ, ಚತುರೆಯಾದ ಗೃಹಿಣಿಯಾಗಿಯೂ ಇದ್ದುದರಿಂದ ತನ್ನ ಮಕ್ಕಳಿಗೆ ಯೋಗ್ಯವಾದ ಶಿಕ್ಷಣವನ್ನು ಕೊಟ್ಟಳು.

ತಾಯಿಯ ಮೇಲ್ಪಂಕ್ತಿಯ ಜೊತೆಗೆ ಅಜ್ಜಿ ತ್ರೈಲೋಕ್ಯ ಮೋಹಿನಿಯ ಸೈಜವಾದ ಸಮ್ಮತಿ, ಉತ್ತಮ ಧೈರ್ಯ, ಆತ್ಮ ಸಂಯಮ ಮತ್ತು ಶಾಂತಜೀವನ—ಇವು ಸರೋಜನಳಿನಿಗೆ ಆದರ್ಶಪ್ರಾಯವಾಗಿದ್ದು, ಆಕೆಯ ಸ್ವಭಾವವನ್ನೂ ಜೀವನ ದೃಷ್ಟಿಯನ್ನೂ ರೂಪಗೊಳಿಸಲು ಮುಖ್ಯ ಕಾರಣವಾದುವು. ಬಾಲ್ಯದಲ್ಲಿ ಹೆಚ್ಚು ಕಾಲವನ್ನು ತನ್ನ ಉತ್ತಮ ಜೀವಿಯಾದ ಅಜ್ಜಿಯೊಡನೆ ಸರೋಜ ನಳಿನಿಯು ಕಳೆದಳು. ಹಿಂದೂ ವಿತಂತುಗಳ ಪ್ರತಿದಿನದ ಶಿಷ್ಟಾಚಾರಕ್ಕೆ ಸೇರಿದ ನದೀಸ್ನಾನ, ಪೂಜೆ ಮತ್ತು ಇತರ ದೇವತಾ ಕಾರ್ಯಗಳನ್ನು ಸರೋಜ ನಳಿನಿಯ ಅಜ್ಜಿ ತಪ್ಪದೆ ನಡಸುತ್ತಿದ್ದಳು. ಅವುಗಳಲ್ಲಿ ಸರೋಜ ನಳಿನಿಯೂ ಬಹಳ ಆನಂದದಿಂದ ಸೇರುತ್ತಿದ್ದಳು. ತಾನು ತನ್ನ ಅಜ್ಜಿಯೊಡನೆ ಕಲಿತು ಮಾಡುತ್ತಿದ್ದ ಈ ಚಿಕ್ಕಂದಿನ ಕೆಲಸಗಳನ್ನು ಅವಳು ತಾನು ದೊಡ್ಡವಳಾದ ಮೇಲೆ ಕೂಡ ಸ್ಮರಿಸಿಕೊಂಡು ಬಹಳ ಸಂತೋಷಪಡುತ್ತಿದ್ದಳು.

ಸರೋಜ ನಳಿನಿಯು ಚಿಕ್ಕಂದಿನಿಂದಲೂ ತನ್ನ ತಂದೆಯ ಹಿಂದೂ ಮತ್ತು ಯೂರೋಪಿಯನ್ ಸ್ನೇಹಿತರೊಡನೆ ಬೆರೆತು ಮಾತನಾಡುತ್ತಲಿದ್ದುದರಿಂದಲೂ, ತನ್ನ ಆರನೆಯ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಹೋಗಿ ಆರು ತಿಂಗಳ ಕಾಲ ಅಲ್ಲಿದ್ದು ಬಂದಿದ್ದುದರಿಂದಲೂ ಬಾಲ್ಯದಲ್ಲಿ ಅವಳ ವಿದ್ಯಾಭ್ಯಾಸಕ್ಕೆ ಹೆಚ್ಚು ಸಹಾಯವಾಯಿತು.

ಆಕೆಯು ಪಾಠಗಳೊಡನೆ ಕುದುರೆಸವಾರಿ, ಚೆಂಡಾಟ ಮುಂತಾದ ಬಯಲಿನ ಆಟಗಳನ್ನೂ ಕಲಿತಳಲ್ಲದೆ, ಹಾಡುವುದರಲ್ಲೂ ವಾದ್ಯಗಳನ್ನು ನುಡಿಸುವುದರಲ್ಲೂ ನಿಪುಣತೆಯನ್ನು ಪಡೆದಿದ್ದಳು. ಆಕೆಗೆ ಒಳ್ಳೆಯ ಶಾರೀರವು ಇದ್ದಿತಲ್ಲದೆ ಹೊಸಹೊಸ ಹಾಡುಗಳನ್ನು ಕಲಿಯಲು ಬಹಳ ಆಸೆಯೂ ಇದ್ದಿತು. ಆಕೆಗೆ ಅವಳ ತಂದೆಗಿದ್ದಂತೆಯೇ ಕೈತೋಟದಲ್ಲಿ ಆಸಕ್ತಿ ಹೆಚ್ಚು. ತನ್ನ ತಾಯಿಗೆ ಕೆಲಸ ಕಾರ್ಯಗಳಲ್ಲಿ ಸಹಾಯಮಾಡುವುದಾಗಲಿ, ಪಾಠಗಳನ್ನು ಓದುವುದು ಮುಂತಾದ ಕೆಲಸಗಳಾಗಲಿ ಇಲ್ಲದ ವೇಳೆಗಳಲ್ಲೆಲ್ಲ, ಆಕೆ ತನಗಾಗಿ ಗೊತ್ತಾಗಿದ್ದ ಚಿಕ್ಕ ಪ್ರದೇಶದಲ್ಲಿ ಸ್ವಂತವಾಗಿ ತಾನು ಏರ್ಪಡಿಸಿಕೊಂಡಿದ್ದ ಹೂ ಮತ್ತು ತರಕಾರಿ ತೋಟದಲ್ಲಿ ಬಹಳ ಉತ್ಸಾಹದಿಂದ ಕೆಲಸಮಾಡಲು ಓಡಿ ಹೋಗುತ್ತಿದ್ದಳು.

ಮದುವೆಗೆ ಮೊದಲೇ ಆಕೆಗೆ ಎಸ್ರಾಜ್, ಪಿಯಾನೊ ಮತ್ತು ಪಿಟೀಲು—ಈ ವಾದ್ಯಗಳನ್ನು ನುಡಿಸಲು ಬರುತ್ತಿತ್ತು. ಮದುವೆಯಾದ ಮೇಲೆ ಸಿತಾರು ನುಡಿಸುವುದನ್ನೂ ಅಭ್ಯಾಸಮಾಡಿದಳು. ಆದರೆ ಅವಳಿಗೆ ಪಿಟೀಲೇ ಇತರ ವಾದ್ಯಗಳಿಗಿಂತಲೂ ಇಷ್ಟವಾದದ್ದು. ವಾರಕ್ಕೊಂದು ಹೊಸ ಹಾಡಿನಂತೆ ಅವಳ ಮೊದಲಿನ ಸಂಗೀತದ ಉಪಾಧ್ಯಾಯರಿಂದ ಕಲಿಯುತ್ತಿದ್ದಳು. ತಾನು ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಲಿಲ್ಲವಲ್ಲಾ ಎಂದು ಆಕೆಗೆ ಆಗಾಗ್ಗೆ ವ್ಯಸನವುಂಟಾಗುತ್ತಿತ್ತು. ಆದರೆ ಆಕೆಯು ಶಾಲೆಗೆ ಹೋಗದೇ ಇದ್ದುದರಿಂದಲೇ ಆಕೆಯ ಮನಸ್ಸೂ ಸ್ವಭಾವವೂ ಸರಳತೆಯಿಂದಲೂ ನವ್ಯತೆಯಿಂದಲೂ ಮಾಧುರ್ಯದಿಂದಲೂ ತುಂಬಿದ್ದು, ಆಗತಾನೆ ವಿಕಸಿತವಾದ ಪುಷ್ಪದಂತೆ ರಂಜಿಸುತ್ತಿದ್ದುವು. ಮತ್ತು ಈ ಗುಣಗಳನ್ನು ಆಕೆ ತನ್ನ ಜೀವಮಾನದ ಎಲ್ಲ ಬದಲಾವಣೆಗಳಲ್ಲಿಯೂ ಎಲ್ಲ ಕಷ್ಟಗಳಲ್ಲಿಯೂ ಎಲ್ಲ ಉದ್ಯೋಗಗಳಲ್ಲಿಯೂ ಬಿಡದೆ ಕಾಪಾಡಿಕೊಂಡಿದ್ದಳು.

ತನ್ನ ಬಾಲ್ಯದಲ್ಲಿ ಆಕೆಗೆ ಬಹು ಪ್ರಿಯವಾದ ಕೆಲಸವೇನೆಂದರೆ ತನ್ನ ತಾಯಿತಂದೆಗಳ ಸೇವೆ. ಪ್ರತಿರಾತ್ರಿಯೂ ತನ್ನ ತಂದೆಯು ಮಲಗುವುದಕ್ಕೆ ಮುಂಚೆ ಆತನು ಕುಡಿಯಲು ಹಾಲನ್ನು ತಾನೇ ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು; ಆತನು ಮಲಗಿದ ಮೇಲೆ ಆತನ ಮೋಜಗಳಲ್ಲಿ ಸಣ್ಣ ಹಾವು, ಚೇಳು ಅಥವಾ ಇತರ ವಿಷಜಂತುಗಳು ಇದ್ದೀತೇನೋ ಎಂದು

ನೋಡುತ್ತಿದ್ದಳು. ಇವೆಲ್ಲಾ ಆಕೆಗೆ ಪ್ರತಿದಿನದ ಕರ್ತವ್ಯಗಳಾಗಿದ್ದುವು. ಅವುಗಳಲ್ಲಿ ಯಾವುದನ್ನೂ ಯಾವಾಗಲೂ ಆಕೆಯು ಮಾಡದೆ ಇರುತ್ತಿರಲಿಲ್ಲ.

---

## ಎರಡನೆಯ ಅಧ್ಯಾಯ

## ದಾಂಪತ್ಯ

ನಾನು ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸ್ವಲ್ಪ ಕಾಲದ ಅನಂತರ ಉದ್ಯೋಗಕ್ಕೆ ಸೇರಿದ ಮೇಲೆ, ೧೯೦೬ನೆಯ ಇಸವಿ ಜನವರಿ ತಿಂಗಳಲ್ಲಿ, ಸರೋಜ ನಳಿನಿಯನ್ನು ಮೊಟ್ಟ ಮೊದಲು ಕಂಡದ್ದು. ಆಗ ಆಕೆಯು ಒಳ್ಳೆಯ ದೃಢಾಂಗಿಯಾಗಿ, ಚಟುವಟಿಕೆಯುಳ್ಳವಳಾಗಿ, ತೆಳ್ಳಗೂ, ಎತ್ತರವಾಗಿಯೂ, ಸೌಂದರ್ಯವತಿಯಾಗಿಯೂ ಇದ್ದಳು. "ಹಿಂದೂಪೂರ್" ಎಂಬ ಕಾದಂಬರಿಯ ಲೇಖಕರು ಆಕೆಯನ್ನು "ಅತಿ ಸೌಂದರ್ಯವತಿ; ಅವಳ ತಾಯಿ ಮತ್ತು ಅಕ್ಕ ತಂಗಿಯರಿಗಿಂತಲೂ ಸೌಂದರ್ಯವತಿ" ಎಂದು ವರ್ಣಿಸಿರುವರು. ಅದೇ ವರ್ಷ ಜುಲೈ ತಿಂಗಳಲ್ಲಿ ನಾನು ಆಕೆಯನ್ನು ಮದುವೆಯಾಗಲು ಆಕೆಯ ತಂದೆಯನ್ನು ಅಪ್ಪಣೆ ಕೇಳಿದೆನು. ಆ ಮೇಲೆ ನಮ್ಮಿಬ್ಬರಿಗೂ ನಿಶ್ಚಿತಾರ್ಥವಾಯಿತು. ನಮಗೆ ೧೯೦೬ನೆಯ ಇಸವಿ ಸೆಪ್ಟೆಂಬರ್ ೨೩ನೆಯ ತಾರೀಖಿನ ದಿವಸ ಮದುವೆಯಾಯಿತು. ಆಗ್ಗೆ ಆಕೆಗೆ ೧೯ ವರ್ಷಗಳು ತುಂಬಿದ್ದುವು. ಆ ದಿವಸದಿಂದ ಆಕೆ ನನ್ನನ್ನು ಎಡೆಬಿಡದೆ ನನ್ನ ಜೀವನಭಾಗಿಯಾಗಿದ್ದಳು. ನಮಗೆ ಮದುವೆಯಾದ ಎರಡು ವರ್ಷಗಳ ಅನಂತರ ನಮ್ಮ ಮಗನು ಹುಟ್ಟಿದಾಗ ಮೂರು ತಿಂಗಳ ಕಾಲ ತನ್ನ ತೌರುಮನೆಗೆ ಹೋಗಿದ್ದದ್ದು; ವೈದ್ಯರ ಮಾತಿನ ಪ್ರಕಾರ ನಮ್ಮ ಮಗನನ್ನು ಅವನ ಆರೋಗ್ಯಕ್ಕಾಗಿ ಬೆಟ್ಟದ ಸ್ಥಳಕ್ಕೆ ಆಕೆಯು ಕರೆದುಕೊಂಡುಹೋಗಿದ್ದದ್ದು; ಮತ್ತು ಇಂಥಾ ಇತರ ಒಂದೆರಡು ಸಂದರ್ಭಗಳಲ್ಲಿ ಹೊರತು ಬೇರೆ ಯಾವಾಗಲೂ ಒಂದು ದಿವಸವಾದರೂ ಕೂಡ ನಮ್ಮ ದಾಂಪತ್ಯ ಜೀವನದ ಹದಿನೆಂಟು ವರ್ಷಗಳ ಕಾಲದಲ್ಲಿ ನನ್ನನ್ನು ಆಕೆಯು ಬಿಟ್ಟಿದ್ದವಳಲ್ಲವೆಂದು ದೃಢವಾಗಿ ಹೇಳಬಹುದು.

ನಾನು ಪೂರ್ಣಿಯಾ ಜಿಲ್ಲೆಯ ಕಿಷನ್‌ಗಂಜ್ ಎಂಬ ಊರಿನಲ್ಲಿ ಸಬ್ ಡಿವಿಜನ್ ಆಫೀಸರಾಗಿದ್ದಾಗ, ಪದೇ ಪದೇ ನಾನು "ಸರ್ಕ್ಯೂಟ್" ತಿರುಗುವಾಗ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅನೇಕ ಸಲ ಮೂವತ್ತು ನಲವತ್ತು ಮೈಲಿಗಳಷ್ಟು ದೂರ ಕುದುರೆಯಮೇಲೆ ಹೋಗಬೇಕಾದ ಸಮಯ ಬರುತ್ತಿತ್ತು. ಈ ಕೆಟ್ಟ ರಸ್ತೆಗಳಲ್ಲಿ ಹೋಗ ಬಹುದಾಗಿದ್ದದ್ದು ಎತ್ತಿನ ಗಾಡಿಯೊಂದೇ. ಆಗ ನನ್ನ ಮಗನು ಚಿಕ್ಕ ಕೂಸು. ಆ ನನ್ನ "ಸರ್ಕ್ಯೂಟ್" ಕಾಲಗಳಲ್ಲಿ ಸರೋಜ ನಳಿನಿಯು ಮನೆ ಯಲ್ಲಿರುವುದಕ್ಕೊಪ್ಪದೆ ನಮ್ಮ ಮಗುವಿನೊಡನೆ ಮೂವತ್ತು ನಲವತ್ತು ಮೈಲಿಗಳೂ ಎತ್ತಿನ ಗಾಡಿಯಲ್ಲಿಯೇ ಒಂದೆಡೆಯಿಂದ ಮತ್ತೊಂದೆಡೆಗೆ ನನ್ನೊಡನೆ ಬರುತ್ತಿದ್ದಳು.

ನನ್ನ ಕಷ್ಟದ ಕೆಲಸಗಳಲ್ಲೆಲ್ಲಾ ಆಕೆಯು ಉತ್ಸಾಹದಿಂದ ನನಗೆ ಸಹಾಯ ಮಾಡುತ್ತಿದ್ದಳು. ನಾನೆಲ್ಲಿ ಹೋದರಲ್ಲಿಗೆ ನನ್ನೊಡನೆ ಬರಲು ಅನುಕೂಲಿಸುವುದಕ್ಕೋಸ್ಕರ, ಮದುವೆಯಾದ ಬಳಿಕ ಕುದುರೆಯ ಸವಾರಿ ಯನ್ನು ಮತ್ತಷ್ಟು ರೂಢಿಪಡಿಸಿಕೊಂಡಳು. ಆಕೆಗೆ ಕುದುರೆಯ ಸವಾರಿ ಯೆಂದರೆ ಇಷ್ಟ. ಕುದುರೆಯ ಸವಾರಿಯಲ್ಲಿ ಆಕೆ ಪ್ರವೀಣಳಾಗಿದ್ದಳು. ಆಕೆಯು ಹತ್ತುತ್ತಿದ್ದ ಕುದುರೆಯು ಒಂದೆರಡು ಸಲ ನನ್ನನ್ನು ಎತ್ತಿ ಹಾಕಿದ್ದರೂ ಆಕೆಯನ್ನು ಬೀಳಿಸುತ್ತಿರಲಿಲ್ಲ. ಕುದುರೆಯ ಮೇಲೆ ಎರಡು ಕಾಲುಗಳನ್ನೂ ಒಂದೇ ಪಕ್ಕಕ್ಕೆ ಹಾಕಿಕೊಂಡು ಸವಾರಿ ಮಾಡು ತ್ತಿದ್ದಳು. ಸ್ತ್ರೀಯರಿಗೆ ಇದೇ ಸರಿಯೆಂತಲೂ, ಗಂಡಸರ ರೀತಿಯಲ್ಲಿ ಎರಡು ಪಕ್ಕಗಳಿಗೂ ಕಾಲು ಇಳಿಯಬಿಟ್ಟು ಸವಾರಿ ಮಾಡುವುದು ಹೆಂಗಸರಿಗೆ ಸರಿ ಯಲ್ಲವೆಂತಲೂ ಆಕೆ ಹೇಳುತ್ತಿದ್ದಳು. ನಮಗೆ ಮೋಟಾರುಗಾಡಿಇಲ್ಲದಿದ್ದಾಗ ಆಕೆ ನಮ್ಮ ಕುದುರೆಯ ಗಾಡಿಯನ್ನು ಕಲ್ಕತ್ತೆಯಲ್ಲಿ ಜನದ ಸಂದಣಿ ಹೆಚ್ಚಾ ಗಿರುವ ರಸ್ತೆಗಳಲ್ಲಿಯೂ ಬಹಳ ಸುಲಭವಾಗಿ ಓಡಿಸುತ್ತಿದ್ದಳು. ನಾವು ಮೋಟಾರು ಕೊಂಡುಕೊಂಡ ಮೇಲೆ ನಾನು ಮೋಟಾರು ನಡೆಯಿಸುವಾಗ ಲೆಲ್ಲಾ ನನ್ನ ಪಕ್ಕದಲ್ಲಿ ಕುಳಿತುಕೊಂಡು ಮೋಟಾರು ಬಿಡುವುದನ್ನೂ ಚೆನ್ನಾಗಿ ಕಲಿತುಕೊಂಡಳು. ನಾನು ಸಬ್ ಡಿವಿಜನ್ ಕೆಲಸದಲ್ಲಿದ್ದ ನಾಲ್ಕು ವರ್ಷಗಳ ಕಾಲದಲ್ಲಿಯೂ ಆಗಾಗ್ಗೆ ಮೂವತ್ತು ನಲವತ್ತು ಮೈಲಿ

ಗಳವರೆಗೆ ಗ್ರಾಮಾಂತರಗಳಲ್ಲಿ ಹಳ್ಳ ತಿಟ್ಟುಗಳಲ್ಲಿ ಇಬ್ಬರೂ ಒಟ್ಟಿಗೆ ಕುದುರೆ ಸವಾರಿ ಹೋಗುತ್ತಿದ್ದೆವು.

ನಾನು ಆಡಿದ "ಟೆನ್ನಿಸ್" ಮುಂತಾದ ಆಟಗಳಲ್ಲಿ ಪ್ರತಿಯೊಂದರಲ್ಲೂ ಆಕೆಯು ನನ್ನ ಜೊತೆಗಾತಿ. ಆಕೆಗೆ "ಟೆನ್ನಿಸ್" ಚೆಂಡಾಟದಲ್ಲಿ ಬಹಳ ಇಷ್ಟವಿದ್ದಿತಲ್ಲದೆ, ಆ ಆಟವನ್ನು ಆಕೆಯು ಬಹಳ ಚಾತುರ್ಯದಿಂದ ಆಡುತ್ತಿದ್ದಳು. ನಮಗೆ ಪರಿಚಿತರಾಗಿದ್ದ ಆಂಗ್ಲೇಯ ಮತ್ತು ಹಿಂದೂ ಹೆಂಗಸರಲ್ಲಿ ಆಕೆಯಷ್ಟು ಆ ಆಟದಲ್ಲಿ ಪರಿಶ್ರಮವಿದ್ದವರು ಬಹಳ ವಿರಳ. ನಾನು ನೇಪಾಳ್ ತರೈ ಪ್ರದೇಶಗಳಲ್ಲಿ ಆನೆಯಮೇಲಾಗಲಿ, "ಸುಂದರ್ ಬನ್" * ಕಾಡುಗಳಲ್ಲಿ ಕಾಲ್ನಡೆಯಿಂದಲೇ ಆಗಲಿ, ಹುಲಿಗಳ ಬೇಟೆಗೆ ಹೋದರೆ, ಆಗಲೂ ಆಕೆ ನನ್ನ ಜೊತೆಯಲ್ಲೇ ಬರುತ್ತಿದ್ದಳು. ಒಂದು ಸಾರಿ ನಾನು ಪೂರ್ಣಿಯಾ ಕಾಡಿನಲ್ಲಿ ಒಂದು ದೊಡ್ಡ ಹುಲಿಯನ್ನು ಬಂದೂಕದಿಂದ ಹೊಡೆದಾಗ ಆಕೆಯು ಸ್ವಲ್ಪವಾದರೂ ಭಯವಿಲ್ಲದೆ ನನ್ನ ಪಕ್ಕದಲ್ಲಿ ಆನೆಯಮೇಲೆ ಕುಳಿತು, ಗುಂಡುಗಳಿದ್ದ ಚೀಲವನ್ನೂ ಮತ್ತೊಂದು ಬಂದೂಕನ್ನೂ ಇಟ್ಟುಕೊಂಡು, ನನ್ನ ಕೈಗೆ ಗುಂಡುಗಳನ್ನು ಕೊಡುತ್ತಿದ್ದಳು. ಹತ್ತು ಅಡಿಗಳ ಉದ್ದವಿದ್ದ ಆ ಭಯಂಕರವಾದ ಹುಲಿಯನ್ನು ಕಂಡು ನಮ್ಮ ಸಂಗಡ ಇದ್ದ ಪೋಲೀಸಿನವನು ಭಯಪಟ್ಟರೂ, ಸರೋಜ ನಳಿನಿಯು ಸ್ವಲ್ಪವಾದರೂ ಭಯವನ್ನು ತೋರಿಸಲಿಲ್ಲ. ಮೊಟ್ಟಮೊದಲು ಆಕೆಯೇ ಆ ಹುಲಿಯನ್ನು ಕಂಡಳಲ್ಲದೆ, ನಿರ್ಭಯವಾಗಿ ಅದರ ಕಡೆಗೆ ತನ್ನ ಬೆರಳನ್ನು ತೋರಿಸಿ ನನ್ನ ಗಮನವನ್ನು ತಿರುಗಿಸಿದಳು.

ನಾನು ಆ ಹುಲಿಯನ್ನು ಘಾಯಪಡಿಸಿದ ಮೇಲೆ ಎರಡು ದಿವಸಗಳವರೆಗೆ ಅದನ್ನು ಅಟ್ಟಿಕೊಂಡು ಆನೆಯಮೇಲೆ ಹೋಗಬೇಕಾಯಿತು. ಆಗಲೂ ಸಹ ಆಕೆ ನನ್ನ ಸಂಗಡಲೇ ಇದ್ದಳು. ನಾವಿದ್ದ ಸ್ಥಳದಿಂದ ಎರಡು ಮೈಲಿಗಳ ದೂರದಲ್ಲಿರುವ ಬಿಡಾರಕ್ಕೆ ಆಕೆ ದಿನಕ್ಕೆ ಎರಡಾವರ್ತಿ ಮತ್ತೊಂದು ಆನೆಯಮೇಲೆ ಕುಳಿತು ಹೋಗಿ ಮಗುವಿಗೆ ಹಾಲು ಕುಡಿಸಿ ನಮಗೆ ಆಹಾರವನ್ನು ತರುತ್ತಿದ್ದಳು. ಅನಂತರ ನಾವಿಬ್ಬರೂ ಆನೆಯ

* "ಸುಂದರ ವನ" ಗಂಗಾನದಿಯ ಮುಖದಲ್ಲಿ ಯಾವಾಗಲೂ ಮನುಷ್ಯನಿಂದ ಕಡಿಯಲ್ಪಡದೇ ಇರತಕ್ಕಂಥ ನಿಬಿಡವಾದ ಅರಣ್ಯ.

ಮೇಲೆ ಕುಳಿತು ಹಾಗೆಯೇ ಆಹಾರವನ್ನು ಸೇವಿಸುತ್ತ ಹುಲಿಯನ್ನು ಹುಡುಕುತ್ತಿದ್ದೆವು.

ಇತರ ಮೃಗಗಳ ಬೇಟೆಗೆ ಒಬ್ಬಂಟಿಗನಾಗಿ ನಾನು ಹೋದರೆ ಸರೋಜ ನಳಿನಿಯು ಸುಮ್ಮನಿರುತ್ತಿದ್ದಳು. ಆದರೆ ಹುಲಿಯ ಬೇಟೆಗೆ ಮಾತ್ರ ನಾನು ತನ್ನನ್ನು ಬಿಟ್ಟು ಒಬ್ಬಂಟಿಗನಾಗಿ ಹೋದರೆ ಆಕೆ ಸಹಿಸುತ್ತಿರಲಿಲ್ಲ; ನಾನು ವೃಥಾ ಅಪಾಯಕ್ಕೆ ಒಳಗಾಗುವೆನೆಂದು ಭಯ ಪಡುತ್ತಿದ್ದಳು. ನಾನು ಯಾವಾಗಲಾದರೂ ಆಕೆಯು ಜೊತೆಗಿಲ್ಲದೆ ಒಬ್ಬಂಟಿಗನಾಗಿ ಹುಲಿಬೇಟೆಗೆ ಹೋಗಬೇಕೆಂದು ನಿರ್ಧರಿಸಿದರೆ, ಕೂಡಲೇ ನನ್ನ ಬಂದೂಕನ್ನೂ ಗುಂಡುಗಳನ್ನೂ ಬಚ್ಚಿಟ್ಟುಬಿಟ್ಟು ನಾನು ಬೇಟೆಗೆ ಹೋಗುವುದಕ್ಕಿಲ್ಲದಂತೆ ಮಾಡಿಬಿಡುತ್ತಿದ್ದಳು. ಆಕೆ ಅವುಗಳನ್ನು ಬಚ್ಚಿಟ್ಟಿದ್ದ ಸ್ಥಳವನ್ನು ನಾನು ಒಂದು ಸಾರಿ ಕಂಡುಹಿಡಿದೆನು. ಸರಕಾರದ ಅರಣ್ಯ ಶಾಖೆಯ ಉಪಪಾಲಕರಾದ ಕರ್ಕ್‌ಪ್ಯಾಟ್ರಿಕ್ (Kirkpatrick) ಎಂಬವರಜೊತೆಯಲ್ಲಿ ಹೊಗೆಯ ಯಂತ್ರದ ದೋಣಿಯಲ್ಲಿ ಹೋಗಿ ಅಲ್ಲಿಂದಾಚೆಗೆ ಕಾಲ್ನಡೆಯಲ್ಲಿ ಕಾಡಿಗೆ ಹೊರಟೆನು. ಆಗ ನಾನು ಖುಲ್ನಾವಿನಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆಲಸದಲ್ಲಿದ್ದೆನು. ನನಗೆ ಸರ್ಕ್ಯೂಟಿಗಾಗಿ ಕೊಟ್ಟಿದ್ದ ಸರಕಾರದ ಹೊಗೆಯ ಯಂತ್ರದ ದೋಣಿಯು ಬಂಗಾಳಾ ಕೊಲ್ಲಿಯ ಅಂಚಿನಲ್ಲಿ, ಎಂದರೆ "ಸುಂದರ್ ಬನ್" ಕಾಡುಗಳ ದಕ್ಷಿಣಕಡೆಯಲ್ಲಿ ನಿಲ್ಲಿಸಲ್ಪಟ್ಟಿತ್ತು. ಹೇಗೋ ಸರೋಜ ನಳಿನಿಯು ನಾವು ಹೋಗಿದ್ದ ಸ್ಥಳವನ್ನು ತಿಳಿದುಕೊಂಡು ದಾರಿಯುದ್ದಕ್ಕೂ ಹುಲಿಗಳಿದ್ದ ಕಾಡುಗಳಿದ್ದರೂ ಕೂಡ ಕೆಲವು ಸೇವಕರನ್ನು ಮಾತ್ರ ಜೊತೆಗೆ ಕರೆದುಕೊಂಡು ಕಾಲ್ನಡೆಯಿಂದಲೇ ಬಂದು ಕಾಡಿನಲ್ಲಿ ನಮ್ಮನ್ನು ಸೇರಿದಳು. ಒಂದು ದಿವಸ, ನಾವು ಖುಲ್ನಾವಿನ "ಸುಂದರ್ ಬನ್" ಕಾಡುಗಳಲ್ಲಿ ಒಂದು ಹುಲಿಯನ್ನು ಅಟ್ಟಿಬರುತ್ತಿದ್ದಾಗ ಆ ಹುಲಿಯ ಗರ್ಜನೆಯು ನಮಗೆ ಬಹಳ ಸಮೀಪದಲ್ಲಿಯೇ ಕೇಳಬಂದಿತು. ಆ ಹುಲಿಯ ಆರ್ಭಟವು ಕೇಳಿಬಂದ ಕಡೆಗೆ ಅದನ್ನು ಹುಡುಕಿಕೊಂಡು ಕೈಯಲ್ಲಿ ಬಂದೂಕನ್ನು ಹಿಡಿದುಕೊಂಡು ಆ ದಟ್ಟವಾದ ಕಾಡುಮರಗಳ ಮರೆಯಲ್ಲಿ ಮೆಲ್ಲಗೆ ಸರಿಯುತ್ತಿದ್ದೆವು. ಆಗಲೂ ಸಹ ಸರೋಜ ನಳಿನಿಯು ನಮ್ಮೊಡನೆಯೇ ಬಂದಳು.

ಮತ್ತೊಂದು ದಿವಸ ನಾವು "ಸುಂದರ್‌ಬನ್" ಕಾಡುಗಳಲ್ಲಿ ಸುತ್ತುತ್ತಿರಲು ಕತ್ತಲೆ ಕವಿದುಕೊಂಡಿತು. ಒಂದು ಹುಲಿಯು ನಮ್ಮ ವಾಸನೆಯನ್ನು ಹಿಡಿದು ನಮ್ಮನ್ನು ಬೆನ್ನಟ್ಟಿತು. ನಮಗೆ ಅದರ ಹೆಜ್ಜೆಯ ಶಬ್ದವೂ ಸಹ ಕೇಳಬರುತ್ತಿತ್ತು. ಆ ಕತ್ತಲೆಯಲ್ಲಿ ಅದನ್ನು ಗುರಿಯಿಟ್ಟು ಸುಡುವುದು ಅಸಾಧ್ಯವಾಗಿದ್ದಿತು. ಬಂದೂಕನ್ನು ಆಗಾಗ್ಗೆ ಸುಮ್ಮನೆ ಹಾರಿಸಿ ಅದನ್ನು ಬೆದರಿಸಿ ಓಡಿಸುವುದೊಂದೇ ಉಪಾಯವಿತ್ತು. ಅಂಥಾ ಆಪತ್ಕಾಲದಲ್ಲಿಯೂ ಸರೋಜ ನಳಿನಿಯು ನನ್ನ ಪಕ್ಕದಲ್ಲಿ ಧೈರ್ಯವಾಗಿ ನಡೆದು ಬರುತ್ತಿದ್ದಳು.

೧೯೨೧ನೆಯ ಇಸವಿಯಲ್ಲಿ ನಾವು ಇಂಗ್ಲೆಂಡಿಗೆ ಹೋಗಿದ್ದಾಗ ನಾನು ಅಪೆಂಡಿಸೈಟಿಸ್ (Appendicitis) ಎಂಬ ಖಾಯಿಲೆಯಿಂದ ಬಹಳವಾಗಿ ನರಳಿದೆನು. ಆಗ ಸರೋಜ ನಳಿನಿಯು ಬಹಳ ಧೈರ್ಯವನ್ನು ತಂದು ಕೊಂಡು, ಒಬ್ಬೊಬ್ಬ ವೈದ್ಯರ ಬಳಿಗೂ ನನ್ನನ್ನು ಕರೆದುಕೊಂಡು ಹೋಗಿ ತೋರಿಸಿ, ನನಗೊಂದು ದಾದಿತನದ ಆಸ್ಪತ್ರೆಯನ್ನು (Nursing home) ಗೊತ್ತುಮಾಡಿ, ನನಗೆ ಶಸ್ತ್ರಚಿಕಿತ್ಸೆಯು ನಡೆದ ಮೂರು ವಾರಗಳ ಕಾಲವೂ ಅದಾದಮೇಲೂ ತನ್ನ ಸ್ವಂತ ಯೋಚನೆಯನ್ನು ಬಿಟ್ಟು ಹಗಲಿರುಳೂ ನನಗೆ ಶುಶ್ರೂಷೆಯನ್ನು ಮಾಡಿದಳು.

ಒಂದುಸಾರಿ ವೀರಭೂಮಿ (ಬೀರ್‌ಭೂಮ್) ಎಂಬಲ್ಲಿ ನಾನು ಡಿಸ್ಟ್ರಿಕ್ಟ್ ಆಫೀಸರಾಗಿದ್ದಾಗ, ನಾವಿದ್ದ ಬಂಗಲೆಗೆ ಎರಡು ಮೈಲುಗಳ ದೂರದಲ್ಲಿದ್ದ ಒಂದು ಹಳ್ಳಿಗೆ ಬೆಂಕಿ ತಗುಲಿತು. ನಾನು ನನ್ನ ಮೋಟಾರಿನಲ್ಲಿ ಅಲ್ಲಿಗೆ ಹೊರಟೆನು. ಸರೋಜ ನಳಿನಿಯೂ ನನ್ನೊಡನೆ ಬರಲು ಹಟ ಹಿಡಿದಳು. ನಾವು ಆ ಹಳ್ಳಿಗೆ ಹೋಗಬೇಕಾದರೆ ಆ ರಾತ್ರಿಯಲ್ಲಿ ಮೋಟಾರಿನಿಂದಿಳಿದು ಕಾಲ್ನಡೆಯಿಂದ ಗದ್ದೆಗಳ ಮಾರ್ಗವಾಗಿ ಅರ್ಧ ಮೈಲಿ ದೂರ ನಡೆಯಬೇಕಾಗಿತ್ತು. ಇದನ್ನೆಲ್ಲಾ ಲಕ್ಷಿಸದೆ ತಾನೂ ಬಂದು ಬೆಂಕಿಯನ್ನು ಆರಿಸಲು ಸಹಾಯ ಮಾಡಿದಳು. ಒಂದು ಮನೆಯ ಹುಲ್ಲು ಛಾವಣಿಯು ಒಂದು ಕಡೆ ಉರಿದು ನನ್ನ ಮೇಲೆ ಬೀಳುವ ಸಮಯದಲ್ಲಿ ಸರೋಜ ನಳಿನಿಯು ಬಹಳ ಚಿತ್ತಸ್ಥೈರ್ಯದಿಂದ ನನ್ನನ್ನು ಬೇರೊಂದು ಕಡೆಗೆ ಎಳೆದು ಆ ಅಪಾಯದಿಂದ ತಪ್ಪಿಸಿ ಕಾಪಾಡಿದಳು.

ಆಕೆ ನನ್ನ ಕಛೇರಿಯ ಕೆಲಸವನ್ನೂ ಇತರ ಕೆಲಸಗಳನ್ನೂ ಕುರಿತು ಎಲ್ಲ ವಿವರಗಳನ್ನೂ ನನ್ನಿಂದ ತಿಳಿದುಕೊಳ್ಳುತ್ತಿದ್ದಳು. ನಾನೇನಾದರೊಂದು ವಿಷಯವನ್ನು ಆಕೆಗೆ ಹೇಳದೆ ಬಚ್ಚಿಟ್ಟದ್ದೇ ಆದರೆ ಅಸಮಾಧಾನಪಡುತ್ತಿದ್ದಳು. ನನಗೆ ಕಾರ್ಯದರ್ಶಿಯಾಗಿದ್ದುಕೊಂಡು ಸಹಾಯಮಾಡಬೇಕೆಂಬ ಅಭಿಲಾಷೆಯಿಂದ ಟೈಪ್ ರೈಟಿಂಗ್ ವಿದ್ಯೆಯನ್ನು ಸಹ ಕಷ್ಟಪಟ್ಟು ಕಲಿತುಕೊಂಡಳು. ನನ್ನ ಕೆಲಸದಲ್ಲಿ ಆಕೆಯಿಂದ ನನಗೆ ಎಷ್ಟು ಸಹಾಯವಾಯಿತೆಂಬುದನ್ನು ಇಲ್ಲಿ ವಿಸ್ತರಿಸಿ ಬರೆಯುವುದು ಸಾಧ್ಯವೇ ಅಲ್ಲ. ಆಕೆಯಿಂದ ಸದಾ ಹೊಸ ಸ್ಫೂರ್ತಿಯನ್ನೂ ಹೊಸ ಸಲಹೆಗಳನ್ನೂ ಬಯಸುತ್ತಿದ್ದೆ, ಮತ್ತು ಪಡೆಯುತ್ತಿದ್ದೆ. ಆಕೆಯ ಪ್ರೀತಿ ಉತ್ಸಾಹಗಳಿಂದ ಕೂಡಿದ ಸಹಾಯವಿರಲಾಗಿ, ನಾನು ಯಾವ ಕೆಲಸವನ್ನು ಕೈಕೊಂಡರೂ ಅದು ನನಗೆ ಸಂತೋಷದಾಯಕವಾಗಿರುತ್ತಿತ್ತು. ನಾನೇನಾದರೂ ಯೋಚನೆಮಾಡುತಲಿದ್ದರೆ, ಅಥವಾ ಖಿನ್ನಮನಸ್ಕನಾಗಿದ್ದರೆ, ಅದನ್ನು ಆಕೆಯು ನನ್ನ ಮುಖಭಾವದಿಂದಲೇ ಊಹಿಸಿ, ಯೋಚನೆಗೆ ಕಾರಣವನ್ನು ನನ್ನಿಂದ ಕೇಳಿ ಎಲ್ಲವನ್ನೂ ತಿಳಿದುಕೊಂಡು, ಅದಕ್ಕೆ ಬೇಕಾದ ಪರಿಹಾರವನ್ನು ಯೋಚಿಸಿ ನನಗೆ ಸಮಾಧಾನ ಹೇಳುತ್ತಿದ್ದಳು. ಆಕೆಯು ಹೇಳಿದ ಆಲೋಚನೆಯು ಎಂದಿಗೂ ತಪ್ಪಾಗುತ್ತಿರಲಿಲ್ಲ.

ನನ್ನ ಜೀವನದಲ್ಲಿ ಒದಗಿದ್ದ ಕೆಲವು ಮುಖ್ಯ ಘಟನೆಗಳಲ್ಲಿ ಆಕೆಯ ಆಲೋಚನೆಯು ವಿಶೇಷ ಸಹಾಯಕವಾಗಿತ್ತು. ಬಂಗಾಳಾ ಪ್ರಾಂತ ವಿಭಾಗದ ಕಾನೂನು ರದ್ದುಮಾಡಲ್ಪಟ್ಟಾಗ ನನ್ನನ್ನು ಬಿಹಾರಕ್ಕೆ ವರ್ಗಮಾಡಿದ್ದರು. ಬಂಗಾಳದಿಂದ ಬಿಹಾರವು ಬೇರೆಯಾದ ಮೇಲೆ ಬಿಹಾರದಲ್ಲೇ ಇದ್ದುಬಿಡಬೇಕೆಂದು ನನ್ನ ಅಭಿಲಾಷೆಯಾಗಿತ್ತು. ಏಕೆಂದರೆ ನನಗೆ ಬೇಟೆಯೆಂದರೆ ಬಹಳ ಇಷ್ಟ. ಬಿಹಾರದಲ್ಲಿ ಬೇಟೆಯಾಡಲು ಬೇಕಾದಷ್ಟು ಮೃಗಗಳಿದ್ದುವು. ಸರೋಜ ನಳಿನಿಯು "ನೀವು ನಿಮ್ಮ ಜೀವನವಷ್ಟನ್ನೂ ಬೇಟೆಯಾಡುವುದರಲ್ಲಿಯೇ ಕಳೆಯಲಾರಿರಿ. ಬಂಗಾಳವು ನಿಮ್ಮ ಮಾತೃಭೂಮಿಯಾದುದರಿಂದ ನಿಮ್ಮ ದೇಶದ ಜನರನ್ನು ನೀವು ಚೆನ್ನಾಗಿ ಬಲ್ಲಿರಿ. ಮತ್ತು ಬಂಗಾಳಿಯು ನಿಮ್ಮ ಮಾತೃಭಾಷೆ. ಆದುದರಿಂದ

ಬಂಗಾಳಕ್ಕೆ ಹೋಗುವುದನ್ನೇ ನಿಶ್ಚಯಿಸಿರಿ. ಬಿಹಾರದಲ್ಲಿ ಸಾಧ್ಯವಾಗುವುದಕ್ಕಿಂತಲೂ ಹೆಚ್ಚಾಗಿ ಬಂಗಾಳದಲ್ಲಿ ನೀವು ಪ್ರಜಾ ಸೌಖ್ಯವನ್ನು ಸಾಧಿಸಲು ಅವಕಾಶವಿರುವುದು" ಎಂದಳು. ಆಕೆಯ ಅಭಿಪ್ರಾಯದಂತೆಯೇ ನಡೆದೆನು.

ಮೂರು ನಾಲ್ಕು ವರ್ಷಗಳ ಕಾಲ ನಾನು ಡಿಸ್ಟ್ರಿಕ್ಟ್ ಜಡ್ಜಿಯ ಕೆಲಸದಲ್ಲಿದ್ದೆನು. ಸರೋಜ ನಳಿನಿಯು "ಜಡ್ಜಿಯ ಕೆಲಸಕ್ಕೆ ಸಂಬಳವು ಹೆಚ್ಚಾಗಿದ್ದರೂ ಅದು ಆರೋಗ್ಯವನ್ನು ಕೆಡಿಸುತ್ತದೆ. ನಾವು ಹಣವೊಂದಕ್ಕೇ ಹೆಚ್ಚು ಲಕ್ಷ್ಯ ಕೊಡುವುದು ಸರಿಯಲ್ಲ. ನೀವು ಕಲೆಕ್ಟರ್ ಕೆಲಸಕ್ಕೇ ಹಿಂತಿರುಗುವುದು ಒಳ್ಳೆಯದು. ಆಗ ದೇಶಕ್ಕೆ ಹೆಚ್ಚು ಸೇವೆಯನ್ನು ಮಾಡಲು ಅವಕಾಶವೂ ದೊರೆಯುವುದು" ಎಂದಳು. ಆ ಕಾಲದಲ್ಲಿ ಜಡ್ಜಿಗಿಂತ ಕಲೆಕ್ಟರಿಗೆ ಬಹಳ ಕಡಮೆ ಸಂಬಳವು ಬರುತ್ತಿತ್ತು. ಆಕೆಯ ಆಲೋಚನೆಯಿಂದ ನನಗೆ ಪ್ರತಿತಿಂಗಳೂ ೫೦೦, ೬೦೦ ರೂಪಾಯಿಗಳ ವರೆಗೆ ನಷ್ಟವುಂಟಾದರೂ ಆಕೆಯ ಸಲಹೆಯಂತೆಯೇ ನಡೆದೆನು.

ಮೇಲೆ ಹೇಳಿದ ಎರಡು ವಿಷಯಗಳಲ್ಲಿ ನಾನು ಆಕೆಯ ಯೋಚನೆಯಂತೆ ನಡೆದುದಕ್ಕಾಗಿ ಪಶ್ಚಾತ್ತಾಪಪಡಬೇಕಾದ ಕಾರಣವಾವುದೂ ಒದಗಲಿಲ್ಲ. ನನಗೆ ವಯಸ್ಸಾದಂತೆಲ್ಲ ಆಕೆಯ ಸಲಹೆಗಳ ಬೆಲೆಯನ್ನು ತಿಳಿದು ಶ್ಲಾಘಿಸುತ್ತಿರುವೆನು. ಆ ಎರಡು ವಿಷಯಗಳಲ್ಲದೆ ಇನ್ನೂ ಲೆಕ್ಕವಿಲ್ಲದಷ್ಟು ವಿಷಯಗಳಲ್ಲಿ ಆಕೆಯಿಂದ ಪಡೆದ ಆಲೋಚನೆಗಳಿಂದ ನನ್ನ ಜೀವನ ಮಾರ್ಗವೇ ಬದಲಾವಣೆ ಹೊಂದಿದೆ. ಇದನ್ನೆಲ್ಲಾ ವಿಸ್ತಾರವಾಗಿ ಹೇಳಲು ಸಾಧ್ಯವಿಲ್ಲ.

ನಾನು ಏನಾದರೊಂದು ಪದ್ಯವನ್ನಾಗಲಿ ಗದ್ಯವನ್ನಾಗಲಿ ಹೊಸದಾಗಿ ಬರೆದರೆ ಅದನ್ನು ಆಕೆಯು ಚಿತ್ತಿಲ್ಲದಂತೆ ಚೆನ್ನಾಗಿ ಒಂದು ಪುಸ್ತಕದಲ್ಲಿ ಬರೆದು, ನನ್ನನ್ನು ಇನ್ನೂ ಬರೆಯುವಂತೆ ಪ್ರೋತ್ಸಾಹಿಸುತ್ತಿದ್ದಳು. ನಾನು ಇಂಗ್ಲಿಷ್ ಭಾಷೆಯಿಂದ ತರ್ಜುಮೆ ಮಾಡಿದ "ಭಜಾರ್‌ಬಾನ್ಸ್" ಎಂಬ ಮಕ್ಕಳ ಗೀತೆಗಳ ಪುಸ್ತಕವೊಂದಿದ್ದಿತು. ಆಕೆಯ ಉತ್ಸಾಹವೇ ಈ ಪುಸ್ತಕಕ್ಕೆ ಕಾರಣ. ಆಕೆಯು ತಾನಾಗಿಯೇ ಅದರಿಂದ ಕೆಲವನ್ನು

ಆರಿಸಿ, ಹಾಡಲನುಕೂಲಿಸುವಂತೆ ಅವಕ್ಕೆ ಸ್ವರಹಾಕಿದಳು. ಆಮೇಲೆ ಕೆಲವು ಸ್ನೇಹಿತರೂ ನಾನೂ ಕೇಳಿಕೊಂಡಮೇರೆಗೆ, ಆಕೆ ಸ್ತ್ರೀ ವಿದ್ಯಾಭ್ಯಾಸ ಮತ್ತು ಸ್ತ್ರೀಯರ ಉನ್ನತಿ ಮೊದಲಾದ ಮಹಿಳೆಯರ ಅಭಿವೃದ್ಧಿಯ ವಿಷಯಗಳನ್ನು ಕುರಿತು ಅನೇಕ ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಕಳುಹಿಸಿದಳು.

ನಾನಿದ್ದ ಡಿಸ್ಟ್ರಿಕ್ಟಿನಲ್ಲಿ ವ್ಯವಸಾಯದ ಇಲಾಖೆಯ ಸಭೆಗಳಿಗಾಗಲಿ ಪರಸ್ಪರ ಸಹಾಯ ಸಂಘಗಳ ಸಭೆಗಳಿಗಾಗಲಿ ನಾನು ಹೋದರೆ ಆಕೆಯೂ ಉತ್ಸಾಹದಿಂದ ನನ್ನೊಡನೆ ಬರುತ್ತಿದ್ದಳು. "ಹೆಂಗಸರ ಏಳಿಗೆಗಾಗಿ ನಾನು ಯೋಚಿಸುತ್ತಿರುವ ಪ್ರಯತ್ನಗಳ ಬಗ್ಗೆ ನಿಮ್ಮ ಚರ್ಚೆಗಳಿಂದ ನನಗೆ ಅನೇಕ ವಿಧಗಳಲ್ಲಿ ಒಳ್ಳೆಯ ಸಲಹೆಗಳು ದೊರೆಯುತ್ತವೆ" ಎಂದು ಆಕೆ ನನಗೆ ಹೇಳುತ್ತಿದ್ದಳು. ೧೯೨೩ನೆಯ ಇಸವಿಯಲ್ಲಿ ಬಂಕೂರವನ್ನು ಬಿಟ್ಟು ಬರುವುದಕ್ಕೆ ಕೆಲವು ದಿವಸಗಳ ಮುಂಚೆ ನಾನು, ಡಿವಿಜನಲ್ ಕಮಿಷನರ ಜೊತೆಯಲ್ಲಿ, ಆಮ್‌ಜೋರ್ ಎಂಬ ಊರಿನ ಪರಸ್ಪರ ಸಹಾಯ ಸಂಘದವರು ವ್ಯವಸಾಯಕ್ಕಾಗಿ ಕಟ್ಟಿದ್ದ ಪ್ರಖ್ಯಾತವಾದ ಅಣೆಕಟ್ಟನ್ನು ನೋಡಲು ಹೋಗಿದ್ದೆನು. ಸರೋಜ ನಳಿನಿಯೂ ಅಲ್ಲಿಗೆ ಬರುವುದಾಗಿ ಹಟಹಿಡಿದಳು. "ಪರಸ್ಪರ ಸಹಾಯ ಸಂಘಗಳಿಂದ ಜನರು ಏನನ್ನು ಸಾಧಿಸುತ್ತಾರೆಂಬುದನ್ನು ನಾನು ನೋಡದಿದ್ದರೆ ನಮ್ಮ ಗ್ರಾಮಾಂತರಗಳಲ್ಲಿರುವ ಕಷ್ಟಗಳನ್ನೂ ಅವುಗಳ ಪರಿಹಾರ ವಿಧಾನವನ್ನೂ ನಾನು ಹೇಗೆ ತಿಳಿದುಕೊಳ್ಳುವುದು?" ಎಂದಳು. ನಾವು ಅಲ್ಲಿಗೆ ಹೋಗವುದಕ್ಕೆ ಕೆಲವು ದಿವಸದ ಹಿಂದಿನಿಂದಲೂ ಮಳೆಯು ಎಡೆಬಿಡದೆ ಸುರಿಯುತ್ತಿದ್ದುದರಿಂದ ರಸ್ತೆಯು ಬಹಳ ಕೆಟ್ಟು, ಪ್ರಯಾಣ ಅಸಾಧ್ಯವಾಗಿತ್ತು. ದಾರಕೇಶ್ವರಿ ನದಿಯಲ್ಲಿ ಪ್ರವಾಹವು ಹೆಚ್ಚಿ ಬಹಳ ಹಾನಿಕರವಾಗಿ ಹರಿಯುತ್ತಿತ್ತು. ಆದರೆ ಆಕೆಯು ಅದನ್ನೆಲ್ಲಾ ಲಕ್ಷಿಸಲೇ ಇಲ್ಲ. ನಾವು ಒಂದು ತೆಪ್ಪದ ಮೇಲೆ ಮೋಟಾರು ಸಹಿತವಾಗಿ ನದಿಯನ್ನು ದಾಟಿದೆವು. ಆ ರಸ್ತೆಯ ಅನೇಕ ಸ್ಥಳಗಳಲ್ಲಿ ನಮ್ಮ ಮೋಟಾರು ಮಣ್ಣಿನಲ್ಲಿ ಹೂತುಕೊಂಡಿತು. ಸರೋಜ ನಳಿನಿಯು ನಗುತ್ತಾ ಕೆಸರಿನಲ್ಲಿಯೇ ನಡೆದಳು. ನಾವು ಕಡೆಯ ಒಂದೂವರೆ ಮೈಲಿಗಳನ್ನು ಗದ್ದೆಗಳಲ್ಲಿ ನೀರಿನೊಳಗೆ ನಡೆದುಕೊಂಡು ಹೋಗಬೇಕಾಗಿತ್ತು. ಕಡೆಯವರೆಗೂ ಆಕೆಯು ಸ್ವಲ್ಪವಾದರೂ

ವಿಶ್ರಾಂತಿ ತೆಗೆದುಕೊಳ್ಳಲಿಲ್ಲ. ಕೆಸರು ತುಂಬಿದ ಉಡುಪಿನೊಡನೆ ಕಟ್ಟೆಯನ್ನು ಮುಟ್ಟಿ, ನೀರಾವರಿಗಾಗಿ ಏರ್ಪಟ್ಟಿದ್ದ ಆ ಜಲಾಶಯವನ್ನು ನೋಡಿಯೇ ನೋಡಿದಳು.

---

## ಮೂರನೆಯ ಅಧ್ಯಾಯ

## ಗೃಹಕೃತ್ಯ

ಮನೆಯನ್ನು ಒಪ್ಪವಾಗಿ ಇಟ್ಟುಕೊಳ್ಳುವುದರಲ್ಲಿ ಸರೋಜ ನಳಿನಿಯು ಬಹಳ ಚತುರೆಯಾಗಿದ್ದಳು. ಅವಳ ತಾಯಿಯು ವಿಧವಿಧವಾದ ಭೋಜ್ಯಗಳನ್ನು ಮಾಡಲು ಆಕೆಗೆ ಕಲಿಸಿದ್ದರು. ಕೊನೆಯಪಕ್ಷ ಒಂದು ಭಕ್ಷ್ಯವನ್ನೂ, ಕೆಲವು ಸಿಹಿ ತಿಂಡಿಗಳನ್ನೂ ಮಾಡದೆ ಆಕೆ ಒಂದು ದಿವಸವಾದರೂ ಇರುತ್ತಿರಲಿಲ್ಲ. ಈ ಪದ್ಧತಿಯನ್ನು ಆಕೆಯು ಎಂದೂ ತಪ್ಪಿಸುತ್ತಿರಲಿಲ್ಲ. ಮನೆಯನ್ನು,--ಅದರಲ್ಲೂ ಮುಖ್ಯವಾಗಿ ಅಡಿಗೆಯ ಮನೆ, ಉಗ್ರಾಣ, ಊಟದ ಮನೆಗಳನ್ನು,—ಆಳುಗಳು ನಿರ್ಮಲವಾಗಿಡುವಂತೆ ಮಾಡುವುದು ಆಕೆಯ ನಿತ್ಯದ ಕೆಲಸ. ಸೇವಕರು ಸರಿಯಾಗಿ ಕೆಲಸವನ್ನು ಮಾಡದಿದ್ದರೆ ತಾನೇ ಪೊರಕೆಯನ್ನು ಅಥವಾ ಬಟ್ಟೆಯನ್ನು ತೆಗೆದುಕೊಂಡು ಆ ಕೆಲಸವನ್ನು ಮಾಡುವುದಕ್ಕೆ ಹೊರಡುತ್ತಿದ್ದಳು. ಆಕೆಗೆ ಸ್ವಲ್ಪ ವ್ಯಯದಿಂದ ಮನೆಯನ್ನು ಚೆನ್ನಾಗಿ ಅಲಂಕರಿಸಿಡಲು ಗೊತ್ತಿತ್ತು. ಆಕೆಯು ಮನೆಯನ್ನು ಸಿಂಗರಿಸಿದ್ದ ರೀತಿಯನ್ನು ಕಂಡು ಆಕೆಯ ಭಾರತೀಯ ಮತ್ತು ಯೂರೋಪಿಯನ್ ಸ್ನೇಹಿತರು ಬೆರಗಾಗುತ್ತಿದ್ದರು. ಆಕೆಗೆ ಯಾರೂ ಕಲಿಸಿಕೊಡದಿದ್ದರೂ ಮದುವೆಯಾದ ಬಳಿಕ ತಾನೇ ಹೊಲಿಗೆಯನ್ನೂ ಕಸೂತಿ ಕೆಲಸವನ್ನೂ ಕಲಿತುಕೊಂಡು ಅವುಗಳಲ್ಲಿ ನಿಪುಣಳಾದಳು.

ಆಕೆಯು ಎಂದಿಗೂ ಸುಮ್ಮನೆ ಕಾಲಕಳೆಯುತ್ತಿರಲಿಲ್ಲ. ವಿಶ್ರಮಿಸಿಕೊಳ್ಳುತ್ತಿರುವ ಸಮಯದಲ್ಲಾಗಲಿ, ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗಲಾಗಲಿ ಆಕೆಯು ಹೆಣಿಗೆಯ ಕೆಲಸವನ್ನೂ ಕಸೂತಿಯ ಕೆಲಸವನ್ನೂ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿರುವ ಪ್ರತಿಯೊಂದು

ಪರದೆಯೂ ಪ್ರತಿಯೊಂದು ಮೇಜಿನ ಬಟ್ಟೆಯೂ ಆಕೆಯು ಸ್ವತಃ ಬರೆದ ಚಿತ್ರಗಳಿಂದ ಅಥವಾ ಆಕೆಯು ಹಾಕಿದ ಕಸೂತಿಯಿಂದ ಅಲಂಕೃತವಾಗಿದ್ದುವು. ಈ ಬಗೆಯ ಸಾಮಾನುಗಳನ್ನು ನಾನು ಯಾವಾಗಲೂ ಕೊಂಡದ್ದೇ ಇಲ್ಲ. ನಮ್ಮ ಯೂರೋಪಿಯನ್ ಮತ್ತು ಹಿಂದೂ ಸ್ನೇಹಿತರೆಲ್ಲರೂ ಆಕೆಯ ಸುಂದರವಾದ ಮತ್ತು ಬಗೆಬಗೆಯ ಕುಶಲ ವಿದ್ಯೆಗಳನ್ನು ಕಂಡು ಮೆಚ್ಚುತ್ತಿದ್ದರು. ಆಕೆಯು ಯಾವುದಕ್ಕೆ ಕೈಹಾಕಿದರೂ ಅದನ್ನು ರಮಣೀಯವಾಗಿ ಮಾಡುತ್ತಿದ್ದಳು. ಆಕೆ ಯಾವ ಕೆಲಸವನ್ನು ಹಿಡಿದು ಮಾಡಿದರೂ ಆಕೆಯ ಹೃದಯದಲ್ಲಿದ್ದ ಅಸಾಧಾರಣವಾದ ಸಂತೋಷದಿಂದಲೂ ಸೊಗಸಿನಿಂದಲೂ ಅದು ಬೆಳಗಿ, ಉತ್ತಮರೀತಿಯಲ್ಲಿ ಪೂರ್ಣವಾಗುತ್ತಿದ್ದಿತು. ನಾವು ಡಿಸ್ಟ್ರಿಕ್ಟುಗಳಲ್ಲಿದ್ದ ೧೭ ವರ್ಷಗಳಲ್ಲಿಯೂ ವಾರಕ್ಕೆ ಎರಡು ಮೂರಾವರ್ತಿ ಆಂಗ್ಲೇಯ ಸ್ನೇಹಿತರುಗಳಿಗೆ ಔತಣಗಳನ್ನು ಮಾಡಬೇಕಾಗಿತ್ತು. ಆ ಸಂದರ್ಭಗಳಲ್ಲಿ ಅಂಗಡಿಗೆ ಹೋಗಿ ಸಾಮಾನು ತರುವುದು ಮೊದಲುಗೊಂಡು ಅಡಿಗೆಯ ಕೆಲಸದ ಮೇಲ್ವಿಚಾರಣೆ, ಮೇಜುಗಳನ್ನು ಸಿದ್ಧಪಡಿಸಿ ಹೂಗಳೇ ಮುಂತಾದವುಗಳಿಂದ ಅಲಂಕರಿಸುವುದು—ಮುಂತಾದ ಎಲ್ಲ ಕೆಲಸಗಳನ್ನೂ ಸರೋಜ ನಳಿನಿಯು ತಾನೇ ಮಾಡುತ್ತಿದ್ದಳು. ಇಷ್ಟೇ ಅಲ್ಲ. ಅತಿಥಿಗಳನ್ನು ಆದರಿಸುವುದರಲ್ಲಿಯೂ, ಅವರೊಡನೆ ಹಿತಕರವಾಗಿಯೂ ಸ್ನೇಹಪೂರ್ವಕವಾಗಿಯೂ ಮಾತನಾಡಿ ಎಲ್ಲರನ್ನೂ ಸಂತೋಷಗೊಳಿಸುವುದರಲ್ಲಿಯೂ ಆಕೆಗೆ ಅಸಮಾನವಾದ ಚತುರತೆಯಿತ್ತು. ಗೃಹಕೃತ್ಯ ಮೊದಲುಗೊಂಡು ರಾಜಕೀಯದವರೆಗೆ ಎಲ್ಲ ವಿಷಯಗಳಲ್ಲಿಯೂ ಸರಳತೆಯಿಂದಲೂ ಹೃದಯಂಗಮವಾಗಿಯೂ ಸಂಭಾಷಣೆ ನಡಸಲು ಆಕೆ ಶಕ್ತಳಾಗಿದ್ದಳು.

ನಾವಿಬ್ಬರೂ ಮಾದಕ ದ್ರವ್ಯಗಳನ್ನು ಸೇವಿಸುವವರಲ್ಲವಾದರೂ ನಮ್ಮ ಆಂಗ್ಲೇಯ ಸ್ನೇಹಿತರಿಗಾಗಿ ಮನೆಯಲ್ಲಿ ಕೆಲವು ಬಗೆಗಳ ಮದ್ಯ ಪಾನೀಯಗಳನ್ನು ಇಟ್ಟಿರುತ್ತಿದ್ದೆವು. ಸರೋಜ ನಳಿನಿಯು ನಮ್ಮ ಆಂಗ್ಲೇಯ ಸ್ನೇಹಿತರಲ್ಲಿ ಯಾರಿಗೆ ಯಾವುದು ಇಷ್ಟವೆಂಬುದನ್ನು ಚೆನ್ನಾಗಿ ಅರಿತು, ಆ ಬಗೆಯ ಪಾನೀಯಗಳನ್ನು ಕೊಡಿಸುತ್ತಿದ್ದಳು. ಹಿಂದೂ ಸ್ನೇಹಿತರಲ್ಲಿ ಕೇವಲ ಸ್ವಲ್ಪ ಜನರು ಮದ್ಯಪಾನ ಮಾಡುವವರಿದ್ದರು. ಆದರೂ ಅಂಥವರು ನಮ್ಮ ಮನೆಗೆ ಬಂದಾಗ, ನಮ್ಮ ಹಿಂದೂ ಜನರು ಮದ್ಯಪಾನ

ಮಾಡುವುದು ಆಕೆಗೆ ಅಸಮ್ಮತವಾಮದರಿಂದ, ಅವರಿಗೆ ಎಂದೂ ಮದ್ಯವನ್ನು ಕೊಡುತ್ತಿರಲಿಲ್ಲ. ಅವರಿಗೆ ತಾನು ಏತಕ್ಕೆ ಕೊಡುವುದಿಲ್ಲವೆಂಬುದನ್ನು ಮರೆಮಾಚದೆ ಅವರಿಗೇ ಹೇಳಿಬಿಡುತ್ತಿದ್ದಳು.

ಆಕೆಗೆ ಮಾತೃಭಾಷೆಯಲ್ಲಿ ಬಹಳ ಪ್ರೀತಿ. ಆಕೆಗೆ ಬಂಗಾಳಿಯಲ್ಲಿ ಒಳ್ಳೆಯ ಜ್ಞಾನವಿದ್ದಿತಾದರೂ ಇಂಗ್ಲಿಷ್ ಭಾಷೆಯಲ್ಲಿಯೂ ಚೆನ್ನಾಗಿ ಪರಿಶ್ರಮವಿದ್ದಿತು. ಆದರೂ ತನ್ನ ಮತಸ್ಥರೊಡನೆ ಮಾತನಾಡುವುದಕ್ಕೂ ಅವರೊಡನೆ ಪತ್ರವ್ಯವಹಾರಕ್ಕೂ ವಂಗ ಭಾಷೆಯನ್ನೇ ಉಪಯೋಗಿಸುತ್ತಿದ್ದಳು. ಆಕೆಯು ಪಾಠಶಾಲೆಗೆ ಹೋಗಿ ಓದಲಿಲ್ಲವಾದುದರಿಂದ ಅಲ್ಲಿ ಕಲಿಯಬೇಕಾಗಿದ್ದ ವಿದ್ಯೆಯನ್ನು ಬಹಳ ಕಷ್ಟಪಟ್ಟು ನನ್ನ ಸಹಾಯದಿಂದ ಕಲಿತಳು. ಚರಿತ್ರೆ, ಅರ್ಥಶಾಸ್ತ್ರ, ಇಂಗ್ಲಿಷ್ ಮತ್ತು ಬಂಗಾಳಿ ಸಾಹಿತ್ಯ ಮುಂತಾದವುಗಳಲ್ಲಿ ನನ್ನಿಂದ ತಪ್ಪದೆ ಪಾಠಗಳನ್ನು ಕಲಿಯುತ್ತಿದ್ದಳು. ಆ ಪಾಠಗಳನ್ನು ಬಹಳ ಎಚ್ಚರಿಕೆಯಿಂದ ತನ್ನ ಪುಸ್ತಕದಲ್ಲಿ ಬರೆದಿಡುತ್ತಿದ್ದಳು. ಆಕೆಯ ಅನೇಕ ಗೃಹಕೃತ್ಯಗಳ ಮತ್ತು ಹೊರಗಿನ ಕೆಲಸಗಳ ಮಧ್ಯದಲ್ಲಿ ಇವನ್ನೂ ಕಲಿಯಲು ಹೇಗೆ ವಿರಾಮ ಮಾಡಿಕೊಳ್ಳುತ್ತಿದ್ದಳೋ ಎಂಬುದು ನನಗೆ ಯಾವಾಗಲೂ ಆಶ್ಚರ್ಯಕರವಾಗಿತ್ತು.

ನಮ್ಮ ಗೃಹಕೃತ್ಯದ ವೆಚ್ಚದ ವಿಷಯವಾಗಿ ಸರೋಜನಳಿನಿಯು ಒಂದು ಲೆಕ್ಕವನ್ನಿಟ್ಟಿದ್ದಳು. ತಾನು ಮಾಡಿದ ಪ್ರತಿದಿನದ ವೆಚ್ಚವನ್ನೂ ಅದರಲ್ಲಿ ಬರೆದಿಡುತ್ತಿದ್ದಳಲ್ಲದೆ, ಆ ಪುಸ್ತಕವು ಹತ್ತಿರವಿಲ್ಲದಿದ್ದಾಗ ವೆಚ್ಚದ ವಿವರಗಳು ಮರೆತುಹೋದೀತೆಂದು ಒಂದು ಚೀಟಿಯಲ್ಲಿ ಬರೆದಿಟ್ಟುಕೊಳ್ಳುತ್ತಿದ್ದಳು. ಪ್ರತಿನಿತ್ಯವೂ ಲೆಕ್ಕಗಳನ್ನು ರಾತ್ರಿ ಕೂಡಿನೋಡುತ್ತಿದ್ದಳು. ಅದರಲ್ಲಿ ಒಂದು ಕಾಸು ಹೆಚ್ಚು ಕಡಮೆ ಬಂದರೂ ಕೂಡ ಆಕೆಗೆ ಸಮಾಧಾನವಿರುತ್ತಿರಲಿಲ್ಲ. ತನ್ನ ಲೆಕ್ಕದ ಪುಸ್ತಕವನ್ನು ತೆಗೆದುಕೊಳ್ಳದೆ ಆಕೆಯು ಎಲ್ಲಿಗೂ ಹೋಗುತ್ತಿರಲಿಲ್ಲ. ನಾನು ಇದಕ್ಕಾಗಿ ಆಕೆಯನ್ನು ಹಾಸ್ಯ ಮಾಡುತ್ತಿದ್ದೆನು. ನಾನೊಬ್ಬನೇ "ಸರ್ಕ್ಯೂಟಿಗೆ" ಹೋದ ಸಮಯಗಳಲ್ಲಿ ನಾನು ಲೆಕ್ಕವಿಡುವಂತೆ ಆಕೆಯು ಬಲಾತ್ಕರಿಸುತ್ತಿದ್ದಳು. ನಾನು ಹಾಗೆ ಇಡದಿದ್ದರೆ ವ್ಯಸನಪಡುತ್ತಿದ್ದಳು. ನಮ್ಮ ದಾಂಪತ್ಯದ ಹದಿನೆಂಟು ವರ್ಷಗಳಲ್ಲಿ ಆಕೆಯು ಒಂದುಕಾಸನ್ನಾದರೂ ಅನಾವಶ್ಯಕವಾಗಿ ವೆಚ್ಚ

ಮಾಡಿಲ್ಲ. ಹೀಗೆ ಲೆಕ್ಕವಿಡುವ ಪದ್ಧತಿಯನ್ನು ಆಕೆ ಕೊನೆಗಾಲದ ಕಾಯಿಲೆಯಲ್ಲಿ ಹಾಸಿಗೆ ಹಿಡಿದವರೆಗೂ ಇಟ್ಟುಕೊಂಡಿದ್ದಳು. ಹದಿನೆಂಟು ವರ್ಷದ ಮೇಲೆ ಎರಡು ತಿಂಗಳ ಕಾಲದಲ್ಲಿ ಒಂದು ದಿನವೂ ತಪ್ಪದೆ ಆಕೆ ಬರೆದಿಟ್ಟಿರುವ ಲೆಕ್ಕದ ಪುಸ್ತಕವು ಈಗಲೂ ಇವೆ. ಇವರಲ್ಲಿ ಪ್ರತಿ ದಿವಸದ ವೆಚ್ಚವೂ ಆಕೆಯ ಸುಂದರವಾದ ಅಕ್ಷರದಲ್ಲಿ ಬರೆದಿದೆ.

ಪ್ರತಿಯೊಂದು ವರ್ಷವೂ ಬಗೆಬಗೆಯ ಉಪ್ಪಿನಕಾಯಿ, ಚಟ್ನೀಪುಡಿ ಮುಂತಾದ ಪದಾರ್ಥಗಳನ್ನು ಅವಳೇ ಸ್ವಂತವಾಗಿ ತಯಾರಿಸುತ್ತಿದ್ದಳು. ಬಂಗಾಳ ದೇಶದಲ್ಲಿ ಮೊಸರಿನಿಂದ ತಯಾರಿಸಲ್ಪಡುವ ಸಂದೇಶ್ (Sandesh) ಎಂಬ ಹೆಸರುವಾಸಿಯಾದ ಸಿಹಿ ತಿಂಡಿಯನ್ನು ಮಾಡುವುದರಲ್ಲಿಯೂ, ಹಿಟ್ಟು, ತುಪ್ಪ, ಉಪ್ಪು ಇವುಗಳಿಂದ ತಯಾರಾಗುವ ಸಿಂಗಾರ ಮತ್ತು ನಿಮ್ಕಿ (Singara and Nimki) ಎಂಬ ತಿಂಡಿಗಳನ್ನು ಮಾಡುವುದರಲ್ಲಯೂ ಸರೋಜ ನಳಿನಿಯು ಬಹಳ ಪ್ರವೀಣೆಯಾಗಿದ್ದಳು. ಈ ಭಕ್ಷ್ಯಗಳನ್ನು ಆಕೆಯ ಅತಿಥಿಗಳು ಬಹಳ ಆಸೆಯಿಂದ ಎದುರು ನೋಡುತ್ತಿದ್ದರು. ಅವರಲ್ಲೂ ಆಕೆಯ ಯೂರೋಪಿಯನ್ ಅತಿಥಿಗಳಿಗೆ ಅವು ಬಹು ಇಷ್ಟ.

ಆಕೆಯು ಮನೆಯ ಕೆಲಸಗಳನ್ನು ಮಾಡುವುದರಲ್ಲಿ ಮಾತ್ರವೇ ತೃಪ್ತಿ ಹೊಂದಿರಲಿಲ್ಲ. ನನ್ನ ಪುಸ್ತಕಗಳನ್ನು ಸರಿಯಾಗಿ ಜೋಡಿಸುವುದೂ ನನ್ನ ಬ್ಯಾಂಕ್ ಲೆಕ್ಕಗಳನ್ನು ಇಡುವುದೂ ಅಲ್ಲದೆ, ನನ್ನ ಸಂಬಳವನ್ನು ತೆಗೆದುಕೊಂಡುಹೋಗಿ ಪ್ರತಿ ತಿಂಗಳೂ ಬ್ಯಾಂಕಿಗೆ ತಲಪಿಸಿ ಬರುತ್ತಿದ್ದಳು. ಒಟ್ಟಿನಲ್ಲಿ ನಾನು ನನ್ನ ಕಛೇರಿಯ ಕೆಲಸವನ್ನು ಮಾಡುತ್ತಿದ್ದೆನಲ್ಲದೆ ಮನೆಯ ವಿಷಯದಲ್ಲಿ ನಾನೇನೂ ಮಾಡಬೇಕಾಗಿರಲಿಲ್ಲ. ಆಕೆಯೇ ಉಳಿದ ಕೆಲಸಗಳನ್ನೆಲ್ಲಾ ಮಾಡುತ್ತಿದ್ದಳು, ಅವುಗಳನ್ನು ಚೆನ್ನಾಗಿಯೂ ಮಾಡುತ್ತಿದ್ದಳು.

ನಮ್ಮ ದಾಂಪತ್ಯದ ೧೮ ವರ್ಷಗಳಲ್ಲಿ ಸರ್ಕಾರಿ ನೌಕರಿಯಲ್ಲಿ ನನಗೆ ಊರಿಂದೂರಿಗೆ ವರ್ಗವಾದದ್ದು ಕಡೆಯ ಪಕ್ಷ ಇಪ್ಪತ್ತೊಂದು ಸಲ. ಈ ಇಪ್ಪತ್ತೊಂದು ಸಲಗಳಲ್ಲಿ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಸಂಸಾರವನ್ನು ಹೂಡಬೇಕಾಗಿತ್ತು. ಅನೇಕ ಸ್ಥಳಗಳಲ್ಲಿ ಸರ್ಕಾರದವರೇ ನಿಯಮಿಸಿದ

ಮನೆಗಳಿದ್ದವು. ಆದರೂ ನಾನೇ ಮೇಜು, ಕುರ್ಚಿ ಮುಂತಾದ ಮರದ ಸಾಮಾನುಗಳನ್ನು ಒದಗಿಸಿಕೊಳ್ಳಬೇಕಾಗಿತ್ತು. ನನಗೆ ವರ್ಗವಾದಾಗ ಪ್ರತಿಯೊಂದು ಸಲವೂ ಮರದ ಸಾಮಾನುಗಳು, ಪಠಗಳು, ಪಾತ್ರೆಗಳು, ಗಾಜಿನ ಪಾತ್ರೆಗಳು ಮುಂತಾದ ಸಾಮಾನುಗಳನ್ನು ಊರಿಂದೂರಿಗೆ ಸಾಗಿಸಲು ಜೋಪಾನವಾಗಿ ಕಟ್ಟುವುದು ಬಿಚ್ಚುವುದು ಇವುಗಳನ್ನು ಸರೋಜನಳಿನಿಯು ತಾನೇ ಮಾಡುತ್ತಿದ್ದಳು. ಅವುಗಳಲ್ಲಿ ಒಂದು ಸಾಮಾನಾದರೂ ಕೂಡ ಯಾವಾಗಲೂ ಒಡೆದು ನಾಶವಾಗಲಿಲ್ಲ. ನನ್ನ ಸ್ವಂತ ಪುಸ್ತಕಗಳನ್ನು ಕೂಡ ಆಕೆಯೇ ಬಸ್ತು ಕಟ್ಟಿಕೊಂಡು ಹೋಗಿ ಬಿಚ್ಚಿಡುತ್ತಿದ್ದಳು. ಮಿತಿಯಿಲ್ಲದೆ ಶ್ರಮ ವಹಿಸುವ ಶಕ್ತಿ ಆಕೆಗಿದ್ದದ್ದಲ್ಲದೆ, ಆಕೆ ಅದರಿಂದ ಸಂತೋಷಪಡುವಂತೆ ಕಾಣುತ್ತಿತ್ತು. ಸರ್ಕಾರಿ ಉದ್ಯೋಗದ ಸಂಬಂಧವಾಗಿ ಊರಿಂದೂರಿಗೆ ತಿರುಗುವುದರಲ್ಲಿ ಸಾವಿರ ಅನನುಕೂಲಗಳಿದ್ದರೂ ಕೂಡ,ತನ್ನ ದಿನಚರಿಯ ಕೆಲಸಗಳಲ್ಲಿ ಆಕೆ ಒಂದು ದಿವಸವಾದರೂ ಅಸಡ್ಡೆಯನ್ನು ತೋರಿಸಿದ್ದಿಲ್ಲ. ನಮ್ಮ ಮಗುವನ್ನು ನಮ್ಮ ಸ್ನೇಹಿತರೆಲ್ಲರೂ "ಪ್ರೈಸ್ ಬೇಬಿ" (ಬಹುಮಾನದ ಮಗು) ಎಂದು ಕರೆಯುತ್ತಿದ್ದರು; ಅಷ್ಟು ಚೆನ್ನಾಗಿ ಆ ಮಗು ಇದ್ದುದನ್ನು ಕಂಡು ಆಕೆಯ ಮಾತೃಕಲಾ ನಿಪುಣತೆಗಾಗಿ ಎಲ್ಲರೂ ಆಕೆಯನ್ನು ಹೊಗಳುತ್ತಿದ್ದರು.

ಹಾಲಿಗಾಗಿ ಆಕೆ ಮನೆಯಲ್ಲೇ ಒಂದು ಹಸುವನ್ನು ಸಾಕಿದ್ದಳು. ಅದರ ಆಹಾರದ ವಿಷಯದಲ್ಲೂ ಕೊಟ್ಟಿಗೆಯನ್ನು ಚೊಕ್ಕಟ ಪಡಿಸುವುದರಲ್ಲಿಯೂ ಹಾಲು ಕರೆಯುವುದರಲ್ಲಿಯೂ ತಾನೇ ಶ್ರದ್ಧೆ ವಹಿಸಿ ನೋಡಿಕೊಳ್ಳುತ್ತಿದ್ದಳು.

ತನ್ನ ಮಗನ ವಿದ್ಯಾಭ್ಯಾಸದ ವಿಚಾರವನ್ನೂ ಆಕೆಯೇ ವಹಿಸಿಕೊಂಡಳು. ತಾನೇ ತನ್ನ ಮಗನಿಗೆ ಇಂಗ್ಲಿಷ್ ಭಾಷೆಯ ಪಾಠಗಳನ್ನು ಹೇಳಿಕೊಡುತ್ತಿದ್ದಳು. ಆಕೆಯು ಸಂಗೀತ ಹಾಡುವುದನ್ನೂ ವಾದ್ಯ ಬಾಜಿಸುವುದನ್ನೂ ಮಗನಿಗೆ ಕಲಿಸಿದಳಲ್ಲದೆ ಟೆನ್ನಿಸ್, ಬ್ಯಾಡ್ಮಿಂಟನ್ ಮೊದಲಾದ ಆಟಗಳನ್ನೂ ಸಹ ಕಲಿಸಿದಳು. ನಾನಾಗಲಿ ನನ್ನ ಮಗನಾಗಲಿ ಕಾಯಿಲೆಯಿಂದ ಮಲಗಿದರೆ, ತಾನೇ ನಮ್ಮನ್ನು ಉಪಚರಿಸುತ್ತಿದ್ದಳು. ರೋಗಿಗಳನ್ನುಪಚರಿಸುವುದರಲ್ಲಿ ಆಕೆ ಚತುರೆಯಾಗಿ

ದ್ದಳು. ಇದಕ್ಕೆ ಉದಾಹರಣೆಯಾಗಿ ಒಂದು ಸಂಗತಿಯನ್ನು ಹೇಳಬಹುದು. ಒಂದು ದಿವಸ ನಾನು ಮೋಟಾರಿನಲ್ಲಿ ಕಛೇರಿಗೆ ಹೋಗುತ್ತಿದ್ದಾಗ ಎದುರಿಗೆ ಬರುತ್ತಿದ್ದ ರಸ್ತೆ ಘಟ್ಟಿಸುವ ಯಂತ್ರದ ಹೊಗೆಯಿಂದ ಒಂದು ಚಿಕ್ಕ ಕಲ್ಲಿದ್ದಲು ಧೂಳು ನನ್ನ ಕಣ್ಣಿನೊಳಕ್ಕೆ ಬಿತ್ತು. ನೋವಾದದ್ದರಿಂದ ದಾರಿಯಲ್ಲಿ ನಿಂತು, ನನಗೆ ತಿಳಿದ ನೇತ್ರ ವೈದ್ಯರ ಹತ್ತಿರಹೋಗಿ ಅವರಿಗೆ ನನ್ನ ಕಣ್ಣನ್ನು ತೋರಿಸಿದೆನು. ಅವರು ಅನೇಕ ಶಸ್ತ್ರಗಳಿಂದಲೂ, ಎಲೆಕ್ಟ್ರಿಕ್ ದೀಪದಿಂದಲೂ ಅರ್ಧ ಘಂಟೆಯಕಾಲ ಪರೀಕ್ಷಿಸಿದ ಬಳಿಕ "ಏನೂ ಇಲ್ಲ; ಇದ್ದಲು ಚೂರು ಈಚೆಗೆ ಬಂದುಬಿಟ್ಟಿರಬೇಕು," ಎಂದುಬಿಟ್ಟರು. ಅದು ಕಣ್ಣಿಂದ ಬಂದಿಲ್ಲವೆಂದು ನನಗೇನೋ ತೋರಿತು. ಆದರೂ ಅನಂತರ ಕಛೇರಿಗೆ ಹೋದೆ. ನೋವು ಹೆಚ್ಚಾಗುತ್ತಲೇ ಇತ್ತು. ಸ್ವಲ್ಪ ಹೊತ್ತು ಕೆಲಸ ಮಾಡಿದಮೇಲೆ ಮನೆಗೆ ಹೋಗಿ ನನ್ನ ಹೆಂಡತಿಗೆ ತಿಳಿಸಿದೆನು. ಆಗ ಆಕೆ ತನ್ನ ಕೊನೆಗಾಲದ ಕಾಯಿಲೆ ಯಲ್ಲಿ ಮಲಗಿದ್ದಳು. ಮಲಗಿದ್ದ ಹಾಗೆಯೇ "ಎಲ್ಲ, ಕಣ್ಣು ತೋರಿಸಿ" ಎನ್ನುತ್ತಾ, ನನ್ನ ಕಣ್ಣನ್ನು ದೃಷ್ಟಿಸಿದಳು. ಒಂದು ಸಲ ನೋಡಿದ ಮಾತ್ರಕ್ಕೇ "ಅಗೋ, ಅಲ್ಲಿದೆ! ನನಗೆ ಕಾಣಿಸಿತು" ಎಂದು ಹೇಳಿ ಮಲಗಿದ್ದಂತೆಯೇ ಒಂದು ಕೈವಸ್ತ್ರದ ತುದಿಯಿಂದ ಆ ಧೂಳನ್ನು ಕಣ್ಣಿನಿಂದ ತೆಗೆದುಬಿಟ್ಟಳು. ಇದರಿಂದಲೇ ಈ ಕಾಲದ ಪುಸ್ತಕ ಪಂಡಿತರ ವೈದ್ಯ ಚತುರತೆಗೂ, ಹೆಂಗಸಿನ ಸಹಜವಾದ ಚತುರತೆಗೂ ಇರುವ ತಾರತಮ್ಯ ವನ್ನು ತಿಳಿಯಬಹುದಲ್ಲವೆ?

೧೯೦೮ನೆಯ ಇಸವಿಯಲ್ಲಿ ನಾನು ಬಕ್ಸಾರಿನ ಸಬ್ ಡಿವಿಜನಲ್ ಆಫೀಸರಾಗಿದ್ದಾಗ ಭಾನುವಾರಗಳಲ್ಲಿಯೂ, ರಾತ್ರಿ ಊಟವಾದಮೇಲೂ ಸರ್ಕಾರಿ ಕೆಲಸವನ್ನು ಮಾಡುವುದು ನನ್ನ ಪದ್ಧತಿಯಾಗಿತ್ತು. ಹೀಗೆ ಸ್ವಲ್ಪವೂ ವಿರಾಮವಿಲ್ಲದೆ ಕೆಲಸ ಮಾಡುತ್ತಿದ್ದೆನಾದುದರಿಂದ ನನ್ನ ದೇಹಾರೋಗ್ಯವು ಕೆಡುತ್ತ ಬಂದಿತು. ಆಗಿನಿಂದ ಸರೋಜ ನಳಿನಿಯು ಭಾನುವಾರಗಳಲ್ಲಿಯೂ ರಾತ್ರಿ ಊಟವಾದನಂತರವೂ ಕೆಲಸಮಾಡುವು ದನ್ನು ತಪ್ಪಿಸುತ್ತಿದ್ದಳು. ಊಟಮಾಡುವಾಗ ಓದುವುದು ಅಜೀರ್ಣಕಾರಿ ಯಾದುದರಿಂದ "ಊಟಮಾಡುವಾಗ ಓದಬಾರದು" ಎಂದು ಕಟ್ಟಾಜ್ಞೆ

ಮಾಡಿಬಿಟ್ಟಳು. ಅದರಂತೆ ನಡೆಯದೆ, ಊಟಮಾಡುವಾಗ ಪುಸ್ತಕವನ್ನೋ ಅಥವಾ ವೃತ್ತಾಂತ ಪತ್ರಿಕೆಯನ್ನೋ ನಾನು ಕೈಯಲ್ಲಿ ಹಿಡಿದುಕೊಂಡಿದ್ದರೆ, ಅವಳು ಅದನ್ನು ಕಸಿದುಕೊಂಡು ಹೋಗುತ್ತಿದ್ದಳು.

---

## ನಾಲ್ಕನೆಯ ಅಧ್ಯಾಯ

### ಭಾರತೀಯ ಮಹಿಳಾ ಪ್ರಪಂಚ

ಆಕೆಯ ಔದಾರ್ಯವೂ ಸ್ನೇಹವೂ ಕೆಲವು ಮತಗಳವರಿಗಾಗಲಿ ಕೆಲವು ಅಂತಸ್ತುಗಳವರಿಗಾಗಲಿ ಕೆಲವು ದೇಶಗಳವರಿಗಾಗಲಿ ಮಾತ್ರವೇ ಪರಿಮಿತವಾಗಿರಲಿಲ್ಲ. ಬಡವರು, ಶ್ರೀಮಂತರು, ಉತ್ತಮರು, ಕೀಳುಪಂಗಡದವರು, ಹಿಂದುಗಳು, ಮಹಮ್ಮದೀಯರು, ಭಾರತೀಯರು, ಆಂಗ್ಲೇಯರು, ಅಮೆರಿಕಾ ದೇಶದವರು,—ಯಾರೇ ಆಗಲಿ, ಎಲ್ಲರೊಡನೆಯೂ ಆಕೆ ಒಂದೇ ಸಮನಾಗಿ ತಾರತಮ್ಯವಿಲ್ಲದೆ ಕಲೆತು ಸ್ನೇಹವನ್ನು ಬೆಳಸಿದ್ದಳು. ನಮ್ಮ ಆಪ್ತ ಸ್ನೇಹಿತರಲ್ಲಿ ಮಹಮ್ಮದೀಯ ಪಂಗಡದವರಾದ ಸರ್ ಆಲಿ ಇಮಾಂ ಎಂಬವರೂ, ಅವರ ಸಹೋದರರಾದ ಸೈಯದ್ ಹಸ್ಸನ್ ಇಮಾಂ ಎಂಬುವರೂ ಸರೋಜ ನಳಿನಿಯಲ್ಲಿ ಬಹಳ ಗೌರವವಿಟ್ಟಿದ್ದರಲ್ಲದೆ, ಆಕೆಯನ್ನು ಆಕೆಯ ಮನೆಯ ಮುದ್ದು ಹೆಸರಾದ "ರಾಣಿ" ಎಂಬ ಮಾತಿನಿಂದ ಕರೆಯುತ್ತಿದ್ದರು. ಪ್ರತಿಯೊಬ್ಬರನ್ನೂ ತನ್ನ ದಯಾಗುಣದಿಂದಲೂ, ಕೌಶಲದಿಂದಲೂ, ನಿಷ್ಕಪಟ ಸ್ವಭಾವದಿಂದಲೂ ಆಕೆಯು ಆಕರ್ಷಿಸಿ ತನ್ನ ವಶಪಡಿಸಿಕೊಳ್ಳುತ್ತಿದ್ದಳು. ಮಿಸೆಸ್ ಸಿ. ಎ. ಬೆಂಟ್ಲೆ, ಮಿಸೆಸ್ ಎ. ಇ. ಬ್ರೌನ್ ಮತ್ತು ಮಿಸೆಸ್ ಎಫ್. ಸ್ಟ್ಯಾನ್ಲಿ—ಎಂಬ ಮೂವರು ಆಂಗ್ಲೇಯ ಸ್ತ್ರೀಯರು ಆಕೆಯ ಪ್ರಿಯ ಸ್ನೇಹಿತೆಯರಾಗಿದ್ದರು. ಆಕೆಯು ಪರದಾ ಪದ್ಧತಿಯನ್ನನುಸರಿಸುವ ಹಿಂದೂ, ಮುಸಲ್ಮಾನ್ ಮತ್ತು ಮಾರ್ವಾಡೀ ಹೆಂಗಸರನ್ನು ಕಂಡು ಅವರೊಂದಿಗೆ ಸ್ನೇಹ ಬೆಳೆಸುವುದರಲ್ಲಿ ಹೆಚ್ಚು ಆಸಕ್ತಿಯುಳ್ಳವಳಾಗಿದ್ದಳು. ಅನೇಕ ಮಹಮ್ಮದೀಯ ಸ್ತ್ರೀಯರು ಆಕೆಯು ಸ್ಥಾಪಿಸಿದ ಮಹಿಳೆಯರ ಸಂಘಕ್ಕೆ ಸದಸ್ಯರಾಗಿ ಸೇರಲಾರಂಭಿಸಿದರು. ಆಕೆಯೂ ಕೂಡ ಅವರ ಸೌಂದರ್ಯವನ್ನೂ, ಜಾಣ್ಮೆತನವನ್ನೂ, ವಿನಯ

ವನ್ನೂ ಕಂಡು ಸಂತೋಷಿಸುತ್ತಿದ್ದಳು. ತನಗೆ ಪರಿಚಿತರಾದ ಎಲ್ಲ ಜನಾಂಗದವರಲ್ಲಿಯೂ ಸರೋಜ ನಳಿನಿಯು ನಿಜವಾದ ಸ್ನೇಹಿತರನ್ನು ಸಂಪಾದಿಸಿದ್ದಾಳೆ. ಸಮಸ್ತ ಮಾನವ ವರ್ಗಕ್ಕೂ ನನ್ನನ್ನು ತನ್ನ ಪ್ರೀತಿ ಸೂತ್ರದಿಂದ ಬಿಗಿದು ಕಟ್ಟಿರುವವಳು ಆಕೆ.

ನಾವು ಒಮ್ಮೆ ಜಪಾನಿನಿಂದ ಇಂಗ್ಲೆಂಡಿಗೆ ಪ್ರಯಾಣ ಮಾಡುತ್ತಿದ್ದಾಗ ಜಪಾನ್ ದೇಶದ ಪ್ರಸಿದ್ಧ ರಾಜ ನೀತಿಜ್ಞನಾದ ಮಾರ್ಕ್ವಿಸ್ ಹಯಾಷಿ ಎಂಬಾತನು ನಮ್ಮ ಸಂಗಡ ಪ್ರಯಾಣ ಬೆಳಸಿದನು. ಆತನು ಜಪಾನ್ ದೇಶದ ರಾಯಭಾರಿಯಾಗಿ ಇಂಗ್ಲೆಂಡಿಗೆ ಹೊರಟಿದ್ದನು. ಸರೋಜ ನಳಿನಿಯ ಪರಿಚಯವನ್ನು ಆತನು ಜಹಜಿನಲ್ಲಿ ಮಾಡಿಕೊಂಡನು. ಅನಂತರ ಕೊನೆಯವರೆಗೂ ಆತನು ಆಕೆಯಲ್ಲಿ ಬಹಳ ಮರ್ಯಾದೆಯನ್ನು ಇಟ್ಟಿದ್ದನು.

ಪರಸ್ಪರ ವಿರೋಧಿಗಳಾಗಿರತಕ್ಕವರ ಭಿನ್ನ ಭಾವವನ್ನು ಹೋಗಲಾಡಿಸಿ ಅವರನ್ನು ಒಟ್ಟುಗೂಡಿಸುವುದರಲ್ಲಿ ಆಕೆಗೆ ಅಸಮಾನವಾದ ಚಾತುರ್ಯವಿತ್ತು. ಆಕೆ ಯಾವಾಗಲೂ ಯಾವ ದೇಶದಲ್ಲೇ ಆಗಲಿ, ಯಾವ ಜನರಲ್ಲೇ ಆಗಲಿ, ಇರುವ ಒಳ್ಳೆಯ ಗುಣಗಳನ್ನು ಮಾತ್ರ ಆರಿಸಿ ಅನುಸರಿಸಲು ಸಿದ್ಧಳಾಗಿರುತ್ತಿದ್ದಳು. ಅದರಂತೆಯೇ ಅವರಲ್ಲಿರಬಹುದಾದ ಕೆಟ್ಟ ಗುಣಗಳನ್ನು ದೂರೀಕರಿಸುತ್ತಿದ್ದಳು. ಮನೆಯ ಹೊರಗೆ ಎಲ್ಲ ಜನರೊಡನೆಯೂ ಕಲಿತು "ಟೆನ್ನಿಸ್" ಮುಂತಾದ ವಿವಿಧ ಆಟಗಳನ್ನು ಆಡುತ್ತಲೂ, ಎಲ್ಲ ವಿಷಯಗಳನ್ನೂ ಕುರಿತು ಸರಳವಾಗಿ ಮಾತನಾಡುತ್ತಲೂ ಇದ್ದರೂ ಕೂಡ, ಆಕೆ ಹಿಂದಿನ ಕಾಲದ ಹಿಂದೂ ಸ್ತ್ರೀಯರ ಪದ್ಧತಿಗಳನ್ನು ಬಿಟ್ಟವಳಲ್ಲ. ನಮ್ಮ ಹಿಂದೂ ದೇಶದ ಶ್ರೇಷ್ಠವಾದ ಮತ್ತು ಸತ್ಯಾಶ್ರಯಿಗಳಾದ ಸಂಪ್ರದಾಯಗಳನ್ನು ಅಲಕ್ಷ್ಯಮಾಡುತ್ತಿರಲಿಲ್ಲ. ಅವುಗಳನ್ನು ಆಕೆ ಬಹು ಆದರದಿಂದ ಅನುಸರಿಸುತ್ತಿದ್ದಳು .

ನನ್ನ ಮದುವೆಗೆ ಸ್ವಲ್ಪ ದಿವಸಗಳಿಗೆ ಮುಂಚಿತವಾಗಿ ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ಭಾರೀ ಉದ್ಯೋಗದಲ್ಲಿದ್ದ ಸ್ವದೇಶೀಯರೊಬ್ಬರ ಮನೆಯಲ್ಲಿ ನಾನು ಇಳಿದಿದ್ದೆನು. ಆಗ ನಮ್ಮ ಮದುವೆಯ ಅರಿಶಿನ

ಶಾಸ್ತ್ರದ* ದಿವಸ ಸರೋಜನಳಿನಿಯೂ, ಆಕೆಯ ಮನೆಯವರೂ ನಾನು ಬರುವುದನ್ನು ನಿರೀಕ್ಷಿಸುತ್ತಲಿದ್ದರು. ಆದರೆ ನಾನಿಳಿದಿದ್ದ ಮನೆಯ ಹೆಂಗಸರು ತಾವು "ನಾಗರಿಕ"ರೆಂದು ತಿಳಿದಿದ್ದುದರಿಂದ, ಈ ಪದ್ಧತಿಗಳಲ್ಲಿ ನಂಬಿಕೆಯನ್ನಿಡದೆ, ನನ್ನನ್ನು ಹೋಗಬೇಡವೆಂದು ಹೇಳಿ ತಡೆದರು. "ನೀನು ಈ ಹಳೆಯ ಪದ್ಧತಿಗಳನ್ನು ಅನುಸರಿಸುವೆ ಎಂಬುದನ್ನು ಆ ಹೆಂಗಸರು ಕಂಡುಕೊಂಡರೆ ನಿನ್ನನ್ನು ಸುಮ್ಮನೆ ಹೀಗೆ ಮಾಡು, ಹಾಗೆ ಮಾಡು, ಎಂದು ಕಾಡಿಸಿ ತಮಾಷೆ ಮಾಡುವರು" ಎಂದು ಅವರು ನನಗೆ ಹೇಳಿದುದರಿಂದ, ನಾನು ಅವರ ಮಾತನ್ನನುಸರಿಸಿ ಹೋಗದೆ ನಿಂತುಬಿಟ್ಟೆ. ಸರೋಜನಳಿನಿಯು ಈ ಶಾಸ್ತ್ರಕ್ಕಾಗಿ ಆತುರದಿಂದ ಕಾದಿದ್ದರೂ ಅದು ನಡೆಯದೆ ಹೋಯಿತು. ಆ ಕೊರಗನ್ನು ಆಕೆ ಮರೆಯಲೇ ಇಲ್ಲ. "ಪ್ರತಿಯೊಬ್ಬ ಹಿಂದೂ ಮದವಣಗಿತ್ತಿಗೂ ನಡೆಯಬೇಕಾದ ಆ ಸುಂದರವಾದ ಉತ್ಸವದ ಸಂತೋಷ ನನಗೆ ತಪ್ಪಿಹೋದದ್ದು ನಿಮ್ಮ ತಪ್ಪಿನಿಂದ; ನಿಮ್ಮ ಪೊಳ್ಳು ನಾಗರಿಕತೆಯೇ ಅದಕ್ಕೆ ಕಾರಣ" ಎಂದು ಆಕೆ ಆಗಾಗ್ಗೆ ನನ್ನೊಡನೆ ಹೇಳುತ್ತಿದ್ದಳು.

ದಕ್ಷಿಣ ಇಂಡಿಯಾ ದೇಶದಲ್ಲಿ ಮುತ್ತೈದೆಯಾಗಿರುವವರು ಮಾಂಗಲ್ಯವನ್ನು ಕೊರಳಿನಿಂದ ಯಾವಾಗಲೂ ತೆಗೆಯದೆ ಇರುವಂತೆ ನಮ್ಮಲ್ಲಿ (ಬಂಗಾಳದಲ್ಲಿ) ಮುತ್ತೈದೆಯರು ಯಾವಾಗಲೂ ಎರಡು ಕೈಗಳಿಗೂ ಶಂಖದ ಬಳೆಗಳು ಒಂದೊಂದನ್ನು ತೊಟ್ಟು, "ನೋಆ" (ಲೋಹ) ಎಂಬ (ಚಿನ್ನದ ಮುಲಾಂ ಬಳಿದಿರುವ) ಕಬ್ಬಿಣದ ಬಳೆಯೊಂದನ್ನು ಎಡಕೈಗೆ ಧರಿಸುತ್ತಾರೆ. ಈಚಿಗೆ ವಿದ್ಯಾವಂತರೂ, ನಾಗರಿಕತೆಯನ್ನು ಕಲಿತವರೂ, ಈ ಪದ್ಧತಿಗಳು ಚೆನ್ನಾಗಿಲ್ಲವೆಂದು ಬಿಟ್ಟುಬಿಟ್ಟಿರುವರು. ಆದರೆ ಸರೋಜ

* ಈ ಅರಿಶಿನ ಕುಂಕುಮದ ಶಾಸ್ತ್ರವು ನಮ್ಮಲ್ಲಿ ಮದುವೆಗೆ ಎರಡು ಮೂರು ದಿವಸಗಳಿಗೆ ಮುಂಚಿತವಾಗಿ ನಡೆಯುವ ಪದ್ಧತಿ. ಒಂದು ಚಿಕ್ಕ ಬಟ್ಟಲಿನಲ್ಲಿ ಅರಿಶಿನವನ್ನು ಕಲಸಿ ವರನ ಮನೆಯಿಂದ ವಧುವಿನ ಮನೆಗೆ ಕಳುಹಿಸುತ್ತಾರೆ. ಅನಂತರ ವರನು ಹೆಣ್ಣಿನ ಮನೆಗೆ ಬಂದಾಗ, ಹೆಣ್ಣಿನ ಕಡೆಯ ಮುತ್ತೈದೆಯರು ಆ ಬಟ್ಟಲಿನಲ್ಲಿರುವ ಅರಿಶಿನವನ್ನು ಬಲಗೈ ಬೆಟ್ಟಿನಿಂದ ತೆಗೆದು ಅವನ ಹಣೆಯಲ್ಲಿಡುತ್ತಾರೆ. ಅನಂತರ ವಧುವಿನ ಮುಖವನ್ನೂ ಅರಿಶಿನದ ಬೊಟ್ಟುಗಳಿಂದ ಅಲಂಕರಿಸುತ್ತಾರೆ.

ನಳಿನಿಯು "ಇವುಗಳನ್ನು ಹಾಕಿಕೊಳ್ಳುವುದು ಪತಿಯು ಚೆನ್ನಾಗಿರುವುದಕ್ಕೋಸ್ಕರ. ಇದು ನಮ್ಮ ದೇಶದಲ್ಲಿ ಒಂದು ಸುಂದರವಾದ ಪುರಾತನ ಪದ್ಧತಿ. ಅದು ನನಗೆ ಪ್ರಿಯವಾಗಿದೆ" ಎಂದು ಹೇಳಿ, ಆ ಬಳೆಗಳನ್ನು ತನ್ನ ಕೈಗಳಿಂದ ಯಾವಾಗಲೂ ತೆಗೆಯದೆ ಹಾಕಿಕೊಂಡಿರುತ್ತಿದ್ದಳು. ನಿತ್ಯವೂ ಬೆಳಿಗ್ಗೆ ಎದ್ದು ಮುಖ ತೊಳೆದುಕೊಂಡ ಕೂಡಲೆ ಹಣೆಗೆ ಕುಂಕುಮವನ್ನಿಟ್ಟುಕೊಳ್ಳದೆ ಇರುತ್ತಿರಲಿಲ್ಲ. ಈಕೆಯು ಈ ಪದ್ಧತಿಗಳನ್ನು ಬಿಡದೆ ಅನುಸರಿಸುವುದನ್ನು ಕಂಡು "ನಾಗರಿಕ"ರಾದ ಬ್ರಹ್ಮ ಸಮಾಜದ ಮತ್ತು ಕ್ರೈಸ್ತಮತದ ಆಕೆಯ ಸ್ನೇಹಿತರು ಆಶ್ಚರ್ಯ ಪಡುತ್ತಿದ್ದರು. ಅದಕ್ಕೆ ಆಕೆಯು ನಗುತ್ತಾ "ಪತಿಯ ಕ್ಷೇಮಾರ್ಥವಾಗಿ 'ನೋಆ' ವನ್ನೂ, ಶಂಖದ ಬಳೆಗಳನ್ನೂ ಧರಿಸುವುದು ನಮ್ಮ ದೇಶದ ಒಂದು ಒಳ್ಳೆಯ ಪದ್ಧತಿ. ಅದು ನನಗೆ ಬಹು ಪ್ರಿಯ" ಎಂದು ಉತ್ತರ ಕೊಡುತ್ತಿದ್ದಳು. ಆಕೆಯ 'ನೋಆ' ಬಳೆಯ ಚಿನ್ನದ ಮುಲಾಮು ಇತರ ಬಳೆಗಳು ಉಜ್ಜಿದುದರಿಂದ ಹೊರಟುಹೋಗಿ, ಅಲ್ಲಲ್ಲಿ ಒಳಗಿನ ಕಬ್ಬಿಣವು ಕಾಣುತ್ತಿರಲು, ಅದನ್ನು ತೆಗೆದು ಅಕ್ಕಸಾಲಿಯ ಹತ್ತಿರಕೊಟ್ಟು ಪುನಃ ಮುಲಾಮು ಮಾಡಿಸಿ ಹಾಕಿಕೋ ಎಂದು ನಾನು ಹೇಳಿದುದಕ್ಕೆ, ಆಕೆಯು ತನ್ನ ಜೀವವಿರುವವರೆಗೂ ಅದನ್ನು ತನ್ನ ಕೈಯಿಂದ ಒಂದು ಕ್ಷಣಮಾತ್ರವೂ ತೆಗೆಯುವುದಿಲ್ಲವೆಂದುಬಿಟ್ಟಳು. ಸಂತೋಷ್ ಸಂಸ್ಥಾನದ ರಾಣಿಯು ಸರೋಜ ನಳಿನಿಯ ಕೈಗಳಲ್ಲಿ ಶಂಖದ ಬಳೆಗಳಿರುವುದನ್ನು ಕಂಡು ಆಶ್ಚರ್ಯ ಪಟ್ಟು, ಸಂತೋಷ ಭರಿತಳಾಗಿ, ತನ್ನ ಕೈಯಲ್ಲಿದ್ದ ಶಂಖದ ಬಳೆಗಳನ್ನೇ ಕಳಚಿ ಸರೋಜ ನಳಿನಿಯ ಕೈಗಳಿಗೆ ಬಹುಮಾನಾರ್ಥವಾಗಿ ತೊಡಿಸಿದಳು. ಸರೋಜ ನಳಿನಿಯ ಕೈಗಳಲ್ಲಿ ಅವು ಆಕೆಯು ಮೃತಳಾಗುವ ತನಕ ಇದ್ದುವು. ಆಕೆಯು ಚೆಂಡಾಟ ಮುಂತಾದ ಎಷ್ಟೋ ಜೋರಾದ ಆಟಗಳನ್ನು ಆಡಿದಾಗಲೂ ಅವು ಸ್ವಲ್ಪವಾದರೂ ಒಡೆಯದೆ ಹಾಗೆಯೇ ಇದ್ದುದು ಆಶ್ಚರ್ಯ.

ಆಕೆ ಚಿಕ್ಕವಳಾಗಿದ್ದಾಗ ಆಕೆಯ ಅಜ್ಜಿ "ಸರೋಜನ ಕೈ ಬಹಳ ನಯ. ಅವು ಯಾವುದನ್ನೂ ಒಡೆಯುವುದಿಲ್ಲ" ಎಂದು ಹೇಳುತ್ತಿದ್ದಳೆಂದು ಆಕೆ ನನಗೆ ಹೇಳಿರುವಳು. ಗಂಡಸರನ್ನೇ ಆಗಲಿ, ಹೆಂಗಸರನ್ನೇ ಆಗಲಿ, ವಂದಿಸುವಾಗ, ಆಕೆಯು ಆಂಗ್ಲೇಯ ಪದ್ಧತಿಯನ್ನು, ಎಂದರೆ ಕೈ ಹಿಡಿದು ಕುಲುಕುವುದನ್ನು, ಅನುಸರಿಸದೆ, ಹಿಂದೂ ಪದ್ಧತಿಯಂತೆ ಕೈ ಮುಗಿಯು

ತ್ತಿದ್ದಳು. ಯಾರಾದರೂ ಕೈಯನ್ನು ಕುಲುಕಲು ಕೈಚಾಚಿದರೂ ಕೂಡ ಅದನ್ನು ಗಮನಿಸದೆ ಆಕೆಯು ಕೈಗಳನ್ನೆತ್ತಿ ಮುಗಿಯುತ್ತಿದ್ದಳು.

ನಾನು ಆಕೆಯ ಕಾಲನ್ನು ಯಾವಕಾರಣದಿಂದಲೂ ಮುಟ್ಟಲು ಸ್ವಲ್ಪವೂ ಅವಕಾಶ ಕೊಡುತ್ತಿರಲಿಲ್ಲ. ಯಾವಾಗಲಾದರೂ ಆಕೆಯ ಜೋಡುಗಳ ದಾರವು ಬಿಚ್ಚಿಹೋಗಿದ್ದರೆ ಅದನ್ನು ಕಟ್ಟಲು ನಾನು ಸಹಾಯಕ್ಕೆ ಹೋದರೆ ನಸುನಗುತ್ತಾ ನನ್ನಿಂದ ತಪ್ಪಿಸಿಕೊಂಡು ಓಡಿಹೋಗುತ್ತಿದ್ದಳು.

ಆಕೆಯು ಯಾವಾಗ್ಲೂ ನನಗಿಂತ ಮುಂಚಿತವಾಗಿ ಊಟಮಾಡುತ್ತಿರಲಿಲ್ಲ. ಯಾವ ದಿನವಾದರೂ ನಾನು ಊಟಕ್ಕೆ ಬರಲು ಎಷ್ಟೇ ಹೊತ್ತು ಮಾಡಿದರೂ ನನಗಾಗಿ ಕಾದಿರುತ್ತಿದ್ದಳೇ ಹೊರತು ತಾನು ಊಟ ಮಾಡಳು. ಇಂಥ ಹಳೆಯ ಅರ್ಥವಿಲ್ಲದ ಪದ್ಧತಿಗಳನ್ನಿಟ್ಟುಕೊಂಡಿರುವುದಕ್ಕಾಗಿ ಆಕೆಯ ಹಿಂದೂ ಮತ್ತು ಆಂಗ್ಲೇಯ ಸ್ನೇಹಿತರು ಆಕೆಯನ್ನು ಹಾಸ್ಯಮಾಡುತ್ತಿದ್ದರು. ಆದರೆ ಆಕೆ ಲಕ್ಷ್ಯಮಾಡುತ್ತಿರಲಿಲ್ಲ.

ನನಗೆ ಒಂದು ಸಂದರ್ಭವು ಚೆನ್ನಾಗಿ ಜ್ಞಾಪಕವಿದೆ. ನಾನು ಖುಲ್ನಾದ ಡಿಸ್ಟ್ರಿಕ್ಟ್ ಆಫೀಸರಾಗಿದ್ದಾಗ ಒಂದು ಸಾರಿ ನಾವು ಸರ್ಕಾರಿ ಹೊಗೆ ದೋಣಿಯಲ್ಲಿ "ಸರ್ಕ್ಯೂಟ್" ಹೋಗಬೇಕಾಯಿತು. ಬೆಳಗಿನ ಕಾಫಿ ತಿಂಡಿಗಳನ್ನು ತೀರಿಸಿಕೊಂಡು, ಸರೋಜ ನಳಿನಿಯನ್ನು ನಮ್ಮೊಡನೆ ಕಲ್ಕತ್ತೆಯಿಂದ ಬಂದಿದ್ದ ಒಬ್ಬ ಹಿಂದೂ ಸ್ನೇಹಿತಳೊಂದಿಗೆ ಬಿಟ್ಟು ಬಿಟ್ಟು, ನಾನು ಮಾತ್ರ ಯಾವುದೋ ಕಾರ್ಯಾರ್ಥವಾಗಿ ತೀರದಮೇಲೆ ಹೋಗಿದ್ದೆನು. ನಾನು ಮಧ್ಯಾಹ್ನದ ಊಟಕ್ಕೆ ಹಿಂತಿರುಗಿ ಬರುವ ಉದ್ದೇಶದಿಂದ ಹೊರಟಿದ್ದರೂ, ಸಾಯಂಕಾಲ ೫ ಘಂಟೆಗೆ ಮುಂಚಿತವಾಗಿ ಹಿಂತಿರುಗಲು ಆಗಲಿಲ್ಲ. ಊಟಕ್ಕೆ ಬಹಳ ಹೊತ್ತಾದುದರಿಂದ ಸರೋಜ ನಳಿನಿಯನ್ನು ಊಟ ಮಾಡೆಂದು ಆಕೆಯ ಸ್ನೇಹಿತಳು ಎಷ್ಟು ವಿಧವಾಗಿ ಹೇಳಿದರೂ, ತಮಾಷೆ ಮಾಡಿದರೂ, ನಾನು ಬರುವವರೆಗೂ ಸರೋಜ ನಳಿನಿಯು ಊಟ ಮಾಡದೆ ನನಗಾಗಿ ಕಾದಿದ್ದಳು.

ಆಕೆಯು ಪಾಶ್ಚಾತ್ಯ ದೇಶದವರಂತೆ ನನ್ನನ್ನು ಹೆಸರು ಹಿಡಿದು ಎಂದಿಗೂ ಕರೆದಿಲ್ಲ. ನಮ್ಮ ಪದ್ಧತಿಯನ್ನೇ ಅನುಸರಿಸುತ್ತಿದ್ದಳು.

ಆಕೆಗೆ ತಾಂಬೂಲವೆಂದರೆ ಬಹಳ ಇಷ್ಟ. ಆಂಗ್ಲೇಯರಿಗೆ ಔತಣ ಮಾಡಿದರೂ ಸಹ, ಆಗಲೂ ಎಲ್ಲರಿಗೂ ತಾಂಬೂಲ ಹಾಕಿಕೊಳ್ಳಲು ಎಲೆ ಅಡಿಕೆ ಕೊಡುತ್ತಿದ್ದಳು. ನಮ್ಮ ಆಂಗ್ಲೇಯ ಸ್ನೇಹಿತರನೇಕರು ನಮ್ಮ ಮನೆಯಲ್ಲಿ ಊಟಕ್ಕೆ ಬಂದರೆ ಊಟವಾದ ನಂತರ ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದರು. ನಾವು ಆಂಗ್ಲೇಯರ ಮನೆಗಳಿಗೆ ಊಟಕ್ಕೆ ಹೋದಾಗಲೂ ಕೂಡ ಸರೋಜ ನಳಿನಿಯು ಎಲೆ ಅಡಿಕೆಯನ್ನು ಒಂದು ಕೈವಸ್ತ್ರದಲ್ಲಿ ಸುತ್ತಿಕೊಂಡು ಹೋಗಿ, ಅಲ್ಲಿ ಊಟವಾದನಂತರ ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದಳು. ಪ್ರತಿನಿತ್ಯವೂ ತಾಂಬೂಲವನ್ನು ತಯಾರಿಸಿ ತಾನೇ ತಟ್ಟೆಯಲ್ಲಿ ಎತ್ತಿಡುತ್ತಿದ್ದಳು. ನಮ್ಮಲ್ಲಿ ಪತಿಯ ಮೇಲೆ ಹೆಚ್ಚು ಪ್ರೀತಿಯಿಟ್ಟಿರುವ ಸತಿಯರಿಗೆ ತಾಂಬೂಲ ಸೇವನೆಯಿಂದ ತುಟಿಯು ತುಂಬ ಕೆಂಪಾಗುವುದೆಂದು ಹೇಳುವುದು ವಾಡಿಕೆ. ಆಕೆಯ ತುಟಿಗಳು ತಾಂಬೂಲ ಸೇವನೆಯಿಂದ ತುಂಬ ಕೆಂಪಾಗುತ್ತಿದ್ದುವು. ಇದು ಆಕೆಗೆ ಬಹಳ ಸಂತೋಷವನ್ನುಂಟುಮಾಡುತ್ತಿತ್ತು. ನಮ್ಮಲ್ಲಿರುವ ಪದ್ಧತಿಯಂತೆ ವಿಜಯ ದಶಮಿಯ ದಿವಸದಲ್ಲಿ ಹಿರಿಯರ ಕಾಲುಮುಟ್ಟಿ ಸಾಷ್ಟಾಂಗ ನಮಸ್ಕಾರವನ್ನು ಮಾಡುವ ಪದ್ಧತಿಯನ್ನು ಆಕೆಯು ಬಿಡದೆ ಇಟ್ಟುಕೊಂಡಿದ್ದಳು.

ದೀವಳಿಗೆ ಹಬ್ಬದ ಸಾಯಂಕಾಲ ಸರೋಜ ನಳಿನಿಯು ತನ್ನ ಕೈಗಳಿಂದಲೇ ಅನೇಕ ಮಣ್ಣಿನ ಹಣತೆಗಳನ್ನು ಹೊತ್ತಿಸಿ, ಮನೆಯ ಮುಂಭಾಗದ ಕಿಟಕಿಗಳಲ್ಲೂ, ಗೋಡೆಗಳ ಮೇಲೂ, ಬಾಗಿಲುಗಳ ಮುಂದೂ ಸಾಲುಸಾಲಾಗಿಟ್ಟು ನೂರಾರು ದೀಪಗಳಿಂದ ಮನೆಯನ್ನಲಂಕರಿಸುತ್ತಿದ್ದಳು. ನಮ್ಮ ಬಂಗಾಳ ದೇಶದಲ್ಲಿ ಸಹೋದರರಿಗಾಗಿ ಮಾಡುವ "ಭಾಯ್‌ಫೋಟಾ" ಎಂಬ ಹಬ್ಬವೊಂದುಂಟು. ಆ ದಿವಸ ಆಕೆ ನಮ್ಮ ಪದ್ಧತಿಯಂತೆ ತನ್ನ ತಮ್ಮಂದಿರಿಗೊಬ್ಬೊಬ್ಬರಿಗೂ ಹಣೆಗೆ ಗಂಧದ ಬೊಟ್ಟನ್ನಿಟ್ಟು, ತಲೆಯಮೇಲೆ ಗರಿಕೆ ಹುಲ್ಲನ್ನೂ ಬತ್ತವನ್ನೂ ಹಾಕಿ, ಆಶೀರ್ವದಿಸಿ, ಪ್ರತಿಯೊಬ್ಬರಿಗೂ ಒಂದೊಂದು ಸಣ್ಣ ಉಡುಗರೆಯನ್ನು ಕೊಡುತ್ತಿದ್ದಳು.

ಆಕೆಯ ತೌರುಮನೆಯಲ್ಲಿ, ಪಾಶ್ಚಾತ್ಯರ ಪದ್ಧತಿಯನ್ನನುಸರಿಸಿ, ಹಿರಿಯರನ್ನು ಕಿರಿಯರು ಹೆಸರು ಹಿಡಿದು ಕರೆಯುವ ವಾಡಿಕೆಯಿತ್ತು. ಆದರೆ

ಸರೋಜ ನಳಿನಿಯು ಆ ವಾಡಿಕೆಯನ್ನು ತಪ್ಪಿಸಿ, ಹಿರಿಯರನ್ನು ನಮ್ಮ ಮಾತಿನಲ್ಲಿ ಅಕ್ಕ, ಅಣ್ಣ, ಅಪ್ಪ, ಅತ್ತೆ ಮುಂತಾದ ಹೆಸರುಗಳಿಂದ ಕರೆಯುವಂತೆ ಮಾಡಿದಳು.

ಹಿಂದೂ ಪತಿವ್ರತೆಗೆ ಇರಬೇಕಾದ ಎಲ್ಲ ಶ್ರೇಷ್ಠ ಗುಣಗಳೂ ಆಕೆಯಲ್ಲಿ ನೆಲೆಯಾಗಿದ್ದುವು. ಆಕೆಯು ಪದೇ ಪದೇ "ನಾನು ಹಣೆಯಲ್ಲಿ ಕುಂಕುಮ ವಿಟ್ಟು, ಕೈಗಳಲ್ಲಿ ಶಂಖದ ಬಳೆಗಳನ್ನು ತೊಟ್ಟಿರುವಾಗಲೇ ಸುಮಂಗಲಿಯಾಗಿ ಸಾಯಬೇಕೆಂದು ನನ್ನನ್ನು ಆಶೀರ್ವದಿಸಿರಿ" ಎಂದು ನನ್ನಲ್ಲಿ ಕೇಳಿಕೊಳ್ಳುತ್ತಿದ್ದಳು. ಹಳೆಯ ಕಾಲದ ಹೆಂಗಸಿನಂತೆ ಮಾತನಾಡಬೇಡವೆಂದು ನಾನು ಧಿಕ್ಕಾರಮಾಡಿದರೆ ಅದಕ್ಕೆ ಆಕೆ ನಗುತ್ತ "ಈ ಕಾಲದವಿದ್ಯೆಯಿಂದ ನಮ್ಮ ಹಿಂದೂ ಸಾಧ್ವಿಯ ಧ್ಯೇಯಗಳನ್ನು ನೀವು ಹೇಗೆ ತಿಳಿಯಲಾದೀತು? ನಾನು ಮೊದಲು ಹೋಗಿ ನಿಮಗಾಗಿ ಕಾದಿರುವೆನು" ಎಂದು ಉತ್ತರ ಕೊಡುತ್ತಿದ್ದಳು. ಆತ್ಮವು ಶಾಶ್ವತವಾದದ್ದೆಂದೂ, ಮರಣಾನಂತರ ಜೀವಗಳು ಪುನಃ ಸೇರುವುವೆಂದೂ ಆಕೆಯು ದೃಢವಾಗಿ ನಂಬಿದ್ದಳು.

ನಿನ್ನ ಅನಂತಧಾಮದೊಳು ನಾನೆಷ್ಟೆಷ್ಟು
ದೂರ ಪಾರಿದರೂ ಬಾಳನು ತಳೆದು |
ದುಃಖವನರಿಯೆ ನಾ ಮರಣವನರಿಯೆ ವಿ
ಯೋಗವನರಿಯೆ ಅದಾವೆಡೆಯುಂ ||

—ಈ ತಾತ್ಪರ್ಯವುಳ್ಳ ಕವಿ ರವೀಂದ್ರನಾಥ ಠಾಕೂರರ ಹಾಡನ್ನು ಕಂಡರೆ ಆಕೆಗೆ ಬಹಳ ಇಷ್ಟ; ಅದನ್ನು ಪದೇದೇ ಹಾಡುತ್ತಿದ್ದಳು.

ಹಿಂದೂ ಪತಿವ್ರತಾ ಶಿರೋಮಣಿಯಾದ ಸಾವಿತ್ರಿಯ ಹೆಸರಿನಲ್ಲಿಯೂ ಗುಣಗಳಲ್ಲಿಯೂ ಆಕೆಗೆ ಗಾಢವೂ ಮನಃಪೂರ್ವಕವೂ ಆದ ಪೂಜ್ಯಭಾವವಿತ್ತು. "ನನಗೊಂದು ಹೆಣ್ಣು ಹುಟ್ಟಿದ್ದಿದ್ದರೆ ಅವಳಿಗೆ ಸಾವಿತ್ರಿಯೆಂದು ಹೆಸರಿಡುತ್ತಿದ್ದೆ" ಎನ್ನುತ್ತಿದ್ದಳು. ಸ್ತ್ರೀಯ ಗೌರವವೂ, ಮಾನವೂ ಬಹು ಮುಖ್ಯವಾದ ವಿಷಯಗಳೆಂದು ಆಕೆ ತಿಳಿದಿದ್ದಳು. "ಪುರುಷರು ಹಾಗಿರಲಿ. ಸ್ತ್ರೀಯರಿಗೆ ನಡತೆಯೇ ಅಮೂಲ್ಯವಾದ ಆಭರಣ. ಒಳ್ಳೆಯ ನಡತೆಯಿಲ್ಲದಿದ್ದರೆ ಆಕೆಯ ವಿದ್ಯಾಭ್ಯಾಸ, ಅಂತಸ್ತು, ಐಶ್ವರ್ಯ—

ಎಲ್ಲಾ ವ್ಯರ್ಥವೇ ಸರಿ. ಸೀತೆಯೂ, ಸಾವಿತ್ರಿಯೂ ಹುಟ್ಟಿದ ದೇಶದಲ್ಲಿ ನಾವು ಹುಟ್ಟಿದ್ದೇವೆ. ಆದುದರಿಂದ ಇತರ ದೇಶಗಳ ನಮ್ಮ ಸಹೋದರಿಯರಿಗೆ ನಾವು ಆದರ್ಶಪ್ರಾಯರಾಗಿರಬೇಕು" ಎನ್ನುತ್ತಿದ್ದಳು. ಆಕೆಯು ತನ್ನ ಕೆಲಸಗಳಲ್ಲಿ ಆಗಾಗ್ಗೆ ಪುರುಷರ ಸಂಗಡ ಇರಬೇಕಾಗಿದ್ದರೂ, ನಾನು ಅಲ್ಲಿಲ್ಲದಿದ್ದರೆ ಸ್ವಲ್ಪ ಲಜ್ಜೆ ಪಡುವಳು. ತೀರ ಅನಿವಾರ್ಯವಾದಾಗ ಹೊರತು, ನಾನು ತನ್ನ ಸಂಗಡ ಇಲ್ಲದಿದ್ದರೆ ಆಕೆ ಪುರುಷರೊಡನೆ ಕಲೆತು ಮಾತಾಡುತ್ತಿರಲಿಲ್ಲ. ಈ ಸಂಗತಿ ಆಕೆಯ ಸ್ನೇಹಿತರಿಗೆ ಹಾಸ್ಯಾಸ್ಪದವಾಗಿ ಕಂಡರೂ, ಲಜ್ಜೆಯು ಆಕೆಯಲ್ಲಿ ಯಾವಾಗ್ಗೂ ಅಳಿಸಿ ಹೋಗಿರಲಿಲ್ಲ. ಆ ಲಜ್ಜೆಯು ಆಕೆಯ ಗುಣಕ್ಕೆ ಒಂದು ಅಲಂಕಾರವಾಗಿದ್ದಿತೆಂದು ಹೇಳಬಹುದು.

ಇತರ ದೇಶದ ಆಟಗಳಲ್ಲಿ ಮಾತ್ರವೇ ಆಕೆಗೆ ಆಸಕ್ತಿಯೆಂದು ಹೇಳಲಾಗದು. ಆಕೆಯು ಬಹು ಸಂತೋಷದಿಂದ ಸ್ವದೇಶದ ಆಟಗಳನ್ನೂ ಆಡುತ್ತಿದ್ದಳು; ಮತ್ತು ಮಕ್ಕಳು ಆಟಪಾಟಗಳಲ್ಲಿ ಹೇಳುವ—"ಇಕ್ರಿ, ಮಿಕ್ರಿ, ಚಾಂ ಚಿಕ್ರಿ"—ಇಂಥ ಅರ್ಥವಿಲ್ಲದ ಪ್ರಾಸ ಪದ್ಯಗಳನ್ನೂ ಆಕೆ ಬಾಲ್ಯದ ಸರಳ ವಿನೋದದಿಂದ ಆಗಾಗ್ಗೆ ಹಾಡುತ್ತಿದ್ದದ್ದುಂಟು.

ಸರೋಜ ನಳಿನಿಯ ತಂದೆಯ ಹುಟ್ಟಿದ ಹಬ್ಬದ ದಿವಸ, ಆ ಕುಟುಂಬದ ಗಂಡಸರಿಗಾಗಿ ಆಟಗಳನ್ನು ಕಲ್ಪಿಸಿ, ಅದರಲ್ಲಿ ಗೆದ್ದವರಿಗೆ ಬಹುಮಾನ ಕೊಡುವುದೇ ಮೊದಲಾದ ವಿನೋದಗಳನ್ನು ಮಾಡತ್ತಿದ್ದೆವು. ಸರೋಜ ನಳಿನಿಯು ಹೆಂಗಸರಿಗೆ ಮಾತ್ರ ಇಂಥ ವಿನೋದಗಳೇನೂ ಇಲ್ಲದಿರುವುದನ್ನು ಕಂಡು ತನ್ನ ಸಹೋದರಿಯರನ್ನೂ ಬಂಧುವರ್ಗಕ್ಕೆ ಸೇರಿದ ಇತರ ಹೆಂಗಸರನ್ನೂ ಕೂಡಿಸಿಕೊಂಡು ನಮ್ಮಂತೆಯೇ ಆಟಪಾಟಗಳನ್ನಾಡಿಸುತ್ತಿದ್ದಳು. ಯಾವಾಗಲೂ ಮಕ್ಕಳಂತೆ ಸರಳವಾಗಿಯೂ, ಸಂತೋಷವಾಗಿಯೂ ಇರುತ್ತಿದ್ದ ಸರೋಜ ನಳಿನಿಗೆ ಚಿಕ್ಕಮಕ್ಕಳನ್ನು ಕಂಡರೆ ಬಹಳ ಪ್ರೀತಿ. ಎರಡುವರ್ಷದ ತನ್ನ ಪುಟ್ಟ ಸೋದರ ಸೊಸೆಯಲ್ಲಿ ಆಕೆಗೆ ಬಹಳ ಪ್ರೇಮ. ಆ ಮಗುವನ್ನು "ಪ್ಯಾರೀ" ಎಂದು ಕರೆಯುತ್ತಿದ್ದಳು. ಸರೋಜಳು ಕೊನೆಗಾಲದ ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿದ್ದಾಗ ಕೂಡ ಆ ಮಗುವನ್ನು ದಿನಕ್ಕೆ ಒಂದು ಸಲವಾದರೂ ಆಕೆಯ ಹತ್ತಿರಕ್ಕೆ

ಆಕೆಯ ಇಷ್ಟದಂತೆ ಕರೆದುಕೊಂಡು ಬರುತ್ತಿದ್ದೆವು. ಆದರೆ ಆ ಮಗುವನ್ನು ಇನ್ನೂ ಹೆಚ್ಚು ಹೆಚ್ಚು ಸಲ ನೋಡುವುದಕ್ಕಾಗಲಿಲ್ಲವಲ್ಲಾ ಎಂದು ಆಕೆ ಕೊರತೆ ಪಡುತ್ತಿದ್ದಳು.

ಆಕೆ ಔತಣಗಳನ್ನೂ ಹಬ್ಬಗಳನ್ನೂ ಬಹಳ ವಿಜೃಂಭಣೆಯಿಂದಲೂ ಸಂತೋಷದಿಂದಲೂ ನೆರವೇರಿಸುತ್ತಿದ್ದಳು. ಆ ಕಾಲಗಳಲ್ಲಿ ಆಕೆ ಹಾಸ್ಯ ವಿನೋದಗಳಿಗೆ ಮೂಲಾಧಾರವಾಗಿದ್ದಳು. ಮದುವೆಯ ಕಾಲಗಳಲ್ಲಿ ಹೆಂಗಸರು ಮಾಡುವ ಶಾಸ್ತ್ರಗಳಲ್ಲಿಯೂ ಮತ್ತು ಲೌಕಿಕ ಸಂಪ್ರದಾಯಗಳಲ್ಲಿಯೂ ತೋರಿಬರುವ ಹಾಸ್ಯದಿಂದ ಆಕೆ ಹರ್ಷಿಸುತ್ತಿದ್ದಳು. ಆಕೆಗೆ ಮದುವೆಯಾದ ಅನಂತರ ಆಕೆಯ ಮೂರು ಮಂದಿ ಸೋದರಿಯರಿಗೂ ಮದುವೆಯಾಯಿತು. ಈ ಮದುವೆಗಳಲ್ಲಿ ಪ್ರತಿಯೊಂದರಲ್ಲೂ ಆಕೆ ಮುಖ್ಯಸ್ಥಳಾಗಿದ್ದುಕೊಂಡು ಎಲ್ಲಾ ಕೆಲಸಗಳೂ ಸಾಂಗೋಪಾಂಗವಾಗಿ ನಡೆಯುವಂತೆ ನೋಡಿಕೊಳ್ಳುತ್ತ ಸಡಗರಪಟ್ಟಳು. ನವನಾಗರಿಕತೆಯನ್ನನುಸರಿಸಿದ ಅನೇಕ ಜನರು, ಮದುವೆಗಳಲ್ಲಿ ನಡೆಯುತ್ತಿದ್ದ ಸಂಪ್ರದಾಯಗಳೂ ಕರ್ಮಗಳೂ ಪೂರ್ವಕಾಲದ್ದೆಂದೂ, ಪ್ರಯೋಜನಕರವಲ್ಲವೆಂದೂ, ಅವುಗಳಿಂದ ಸುಮ್ಮನೆ ಕಾಲಹರಣವಾಗುತ್ತದೆಂದೂ, ಅವನ್ನು ಬಿಟ್ಟೇ ಬಿಡಬೇಕೆಂದೂ ಹೇಳುತ್ತಿದ್ದರು. ಸರೋಜ ನಳಿನಿಯು ಅದನ್ನೊಪ್ಪದೆ, "ಇಂಥಾ ಸುಂದರವಾದ ಪದ್ಧತಿಗಳನ್ನು ಅನುಸರಿಸದೆ ಬಿಟ್ಟುಬಿಟ್ಟರೆ, ನಮ್ಮ ದೇಶದ ಜೀವನದಲ್ಲಿ ಮತ್ತು ನಮ್ಮ ಸಮಾಜದಲ್ಲಿ ಏನು ವಿನೋದವುಳಿದಿರುವುದು ?" ಎಂದು ಕೇಳುವಳು.

ಬಿಹಾರ್ ಪ್ರಾಂತದಲ್ಲಿರುವ ಬಕ್ಸಾರ್ ಎಂಬಲ್ಲಿ ನಾನು ಸಬ್ ಡಿವಿಜನಲ್ ಆಫೀಸರಾಗಿದ್ದಾಗ ಸರೋಜ ನಳಿನಿಯು ಬಿಹಾರಿನ ಘೋಷಾಸ್ತ್ರೀಯರ ಮನೆಗಳಿಗೆ ಹೋಗಿ ಅವರನ್ನು ಭೇಟಿ ಮಾಡಿ ಬರಬೇಕೆಂದು ಪ್ರಯತ್ನಪಟ್ಟಳು. ಆದರೆ ಅವರು ಹೆಂಗಸನ್ನು ಕೂಡ ಆಕೆ ತಮಗೆ ಪರಿಚಯವಿಲ್ಲದವಳಾದರೆ ಕಾಣಲು ನಾಚಿಕೆಪಡುತ್ತಿದ್ದರೆಂದು ತಿಳಿಯಬಂತು. ಆಗ ಡುಮ್ರಾವ್ ಸಂಸ್ಥಾನದ ಮಹಾರಾಣಿಯು ಇನ್ನೂ ಬದುಕಿದ್ದರು. ಸರೋಜ ನಳಿನಿಯು ಆಕೆಯ ಬಳಿಗೆ ಹೋಗಿ, ತಾನು ಆಕೆಯನ್ನು ಕಾಣಬೇಕೆಂದಿರುವುದಾಗಿ ಹೇಳಿಕಳುಹಿಸಿದಳು. ಆಗ ಮಹಾರಾಣಿ

ಇಕ್ಕಟ್ಟಿಗೆ ಸಿಕ್ಕಿದರು. ಆಕೆಯೂ ಅಪರಿಚಿತಳಾದ ಹೆಂಗಸನ್ನು ನೋಡು ತ್ತಿರಲಿಲ್ಲ; ಅವಳೊಡನೆ ಮಾತನಾಡುತ್ತಿರಲಿಲ್ಲ. ಆದರೆ ಸಬ್ ಡಿವಿಜನ್ನಿನ ಅಧಿಕಾರದಲ್ಲಿದ್ದ ಮ್ಯಾಜಿಸ್ಟ್ರೇಟರ ಪತ್ನಿಯು ಹೇಳಿಕಳುಹಿಸಿದ್ದರಿಂದ ಅವನ್ನು ಗೌರವಿಸದೆ ಇರಲು ಸಾಧ್ಯವಿಲ್ಲ. ಕಟ್ಟಕಡೆಗೆ ಮಹಾರಾಣಿಯು ಒಂದು ಪರದೆಯ ಹಿಂದೆ ಕುಳಿತುಕೊಂಡು ಮಾತನಾಡುವಂತೆಯೂ ಪರದೆಯ ಈಚೆಗೆ ಸರೋಜನಳಿನಿಯು ಕುಳಿತು ಮಾತನಾಡಬಹುದೆಂತಲೂ ತೀರ್ಮಾನವಾಯಿತು. ಅವರಿಬ್ಬರಿಗೂ ಈ ರೀತಿ ಪರಿಚಯವಾಯಿತು. ಇದಾದ ಸ್ವಲ್ಪ ಕಾಲದ ಬಳಿಕ ಮಹಾರಾಣಿಗೆ ಬಹಳ ಕಾಯಿಲೆಯಾಯಿತು. ಆಕೆಯು ಒಬ್ಬ ದತ್ತ ಪುತ್ರನನ್ನು ಸ್ವೀಕಾರ ಮಾಡಿಕೊಳ್ಳುತ್ತಾಳೆಂಬ ಸುದ್ದಿ ಹರಡಿತು. ಆ ಸ್ವೀಕಾರದ ದಿವಸ ನನ್ನನ್ನೂ, ನನ್ನ ಪತ್ನಿಯನ್ನೂ ಕರೆದಿದ್ದರು. ನಾವೂ, ಇನ್ನು ಕೆಲವರು ಅತಿಥಿಗಳೂ, ಪುರೋಹಿತರು ಗಳೂ ಪರದೆಯಿಂದೀಚೆಗೆ ಕುಳಿತಿದ್ದೆವು. ಆಗ ಪರದೆಯ ಹಿಂದಿನಿಂದ ಮಂತ್ರೋಚ್ಚಾರಣೆಯೂ, ಕೇಳಿದ ಪ್ರಶ್ನೆಗಳಿಗೆ ಉತ್ತರ ಮುಂತಾದವುಗಳೂ ಕೇಳಬರುತ್ತಿದ್ದವು. ಅದು ಸ್ತ್ರೀ ಧ್ವನಿಯಂತೆ ಭಾಸವಾಗುತ್ತಿತ್ತು. ಮಹಾರಾಣಿಯೇ ಆ ಮಾತುಗಳನ್ನು ಆಡುತ್ತಿದ್ದಳೆಂದು ನಮಗೆ ಹೇಳಿದರು. ನನ್ನ ಪತ್ನಿಯು ಆ ಮಹಾರಾಣಿಯೊಡನೆ ಒಂದೇ ಒಂದು ಸಲ—ಅದೂ ಪರದೆಯಿಂದೀಚೆಗೆ—ಮಾತನಾಡಿದ್ದಳು. ಆ ಧ್ವನಿಯು ಮಹಾರಾಣಿಯದೇ ಎಂದು ಆಕೆಗೆ ತೋರಿತು.

ಆ ಮಹಾರಾಣಿಯು ಕಾಲವಾದ ಅನಂತರ ಈ ಸ್ವೀಕಾರದ ವಿಷಯ ವಾಗಿ ಕೋರ್ಟ್ ಆಫ್ ವಾರ್ಡ್ಸ್ ಅಧಿಕಾರಿಗಳಿಗೂ ಈಗ ಡುಮ್ರಾವ್ ಸಂಸ್ಥಾನವನ್ನು ಆಳುತ್ತಿರುವ ಬಾಬು ಕೇಶವ ಪ್ರಸಾದ್ ಸಿಂಗರವರಿಗೂ ಕೋರ್ಟಿನಲ್ಲಿ ಬಲವಾದ ವಿವಾದವು ಪ್ರಾರಂಭವಾಯಿತು. ಎರಡು ಕಡೆಯ ಲ್ಲಿಯೂ ಬಹು ಪ್ರಸಿದ್ಧ ಲಾಯರುಗಳು ವಾದಿಸಿದರು. ಕೋರ್ಟ್ ಆಫ್ ವಾರ್ಡ್ಸ್ ಕಡೆಗೆ ಸರ್ ಆಲಿ ಇಮಾಮ್ ಎಂಬವರೂ ಮತ್ತು ಸರ್ ರಿಚರ್ಡ್ ಗಾರ್ತ್ ಎಂಬವರೂ, ಬಾಬು ಕೇಶವ ಪ್ರಸಾದ್ ಸಿಂಗರವರ ಕಡೆಗೆ ಬಂಗಾಳದ ಸುಪ್ರಸಿದ್ಧ ದೇಶಭಕ್ತರು ಶ್ರೀಮಾನ್ ಸಿ. ಆರ್. ದಾಸ್‌ರವರೂ ನಿಂತರು. ಆರ್‍ರಾ (Arrah) ಎಂಬ ಊರಿನ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ ಈ ವ್ಯವಹಾರದ ವಿಚಾರಣೆಗೆ ಏರ್ಪಾಡಾಯಿತು. ಆಗ

ನಾನು ಪೂರ್ಣಿಯಾ ಜಿಲ್ಲೆಯಲ್ಲಿ ಕಿಷನ್‌ಗಂಜ್ ಎಂಬ ಸ್ಥಳದಲ್ಲಿ ಕೆಲಸದಲ್ಲಿದ್ದೆ. ನಾನೂ ನನ್ನ ಹೆಂಡತಿಯೂ ಕೋರ್ಟ್ ಆಫ್ ವಾರ್ಡ್ಸ್ ಕಡೆಯ ಸಾಕ್ಷಿಗಳಾಗಿ ಹೋಗಿದ್ದೆವು.

ನಾವು ಆರ್‍ರಾಕ್ಕೆ ಹೋಗಿ ಅಲ್ಲಿ ಸರ್ಕ್ಯೂಟ್ ಹೌಸಿನಲ್ಲಿ ಇಳಿದುಕೊಂಡೆವು. ನನ್ನ ಸಾಕ್ಷ್ಯವು ಕೋರ್ಟಿನಲ್ಲಿ ನಡೆಯಿತು. ದತ್ತ ಸ್ವೀಕಾರದ ಶಾಸ್ತ್ರವು ನಡೆದಾಗ ನಿಜವಾಗಿಯೂ ಮಹಾರಾಣಿಯು ಕಾಲವಾಗಿದ್ದಳೆಂದೂ, ಆ ಕಾಲದಲ್ಲಿ ಯಾರೋ ಆಕೆಯಂತೆ ನಟಿಸಿ ಪರದೆಯ ಹಿಂದಿನಿಂದ ಮಾತನಾಡಿದಳೆಂದೂ ಮ|| ದಾಸ್‌ರವರು ವಾದಿಸಿದರು. ಎಲ್ಲಾ ಸಾಕ್ಷಿಗಳಂತೆ ನನ್ನನ್ನೂ "ಪಾಟೀ ಸವಾಲಿನಲ್ಲಿ" (ಎಂದರೆ 'ಕ್ರಾಸ್ ಎಗ್ಸಾಮಿನೇಷನಿ'ನಲ್ಲಿ) ಬಹು ಶ್ರಮಪಡಿಸಿದರು.

ಈ ಸಂದರ್ಭದಲ್ಲಿ ಎರಡುಕಡೆಯ ಲಾಯರುಗಳೂ ಬಲವಾಗಿ ವಾದಿಸಿದರು. ಸರೋಜ ನಳಿನಿಯೂ ಕೂಡ ಕೋರ್ಟಿಗೆ ಬಂದು ಶ್ರೀಮಾನ್ ದಾಸ್‌ರವರ ಕಠಿನ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದೀತಲ್ಲ—ಎಂಬ ಶಂಕೆಯುಂಟಾಯಿತು. ಆದರೆ ಉಭಯ ಪಕ್ಷದವರ ಒಡಂಬಡಿಕೆಯಂತೆ ಆಕೆಯ ವಿಚಾರಣೆಯು ಸರ್ಕ್ಯೂಟ್ ಹೌಸಿನಲ್ಲೇ ನಡೆಯಬಹುದೆಂದು ತೀರ್ಮಾನವಾಯಿತು. ನ್ಯಾಯಾಧೀಶರೂ ಲಾಯರುಗಳೂ ಅಲ್ಲಿಗೆ ಬಂದರು. ಸರ್ ಆಲಿ ಇಮಾಂ ಮತ್ತು ಸರ್ ರಿಚರ್ಡ್ ಗಾರ್ತ್‌ರವರು ಸರೋಜ ನಳಿನಿಯನ್ನು ಮೊದಲು ವಿಚಾರಣೆ ಮಾಡಿದರು. ಅನಂತರ ಸಿ. ಆರ್. ದಾಸ್‌ರವರ "ಪಾಟೀ ಸವಾಲು" ಆರಂಭವಾಯಿತು. ನಮ್ಮ ಮೊದಲಿನಭೀತಿಗೆ ಕಾರಣವಿಲ್ಲದೆ ಹೋಯಿತು! ಆಕೆಯ ಸ್ಪಷ್ಟವಾದ ಮತ್ತು ಸರಳವಾದ ಉತ್ತರಗಳನ್ನು ಕೇಳಿ ಶ್ರೀಮಾನ್ ಸಿ. ಆರ್. ದಾಸ್‌ರವರು ಸ್ವಲ್ಪಕಾಲದಲ್ಲೇ ಆಕೆಯ ವಿಚಾರಣೆಯನ್ನು ಮುಗಿಸಿಬಿಟ್ಟರು; ಆಕೆಗೆ ಹಾಕಿದ ಪ್ರಶ್ನೆಗಳೂ ಕಠಿಣವಾಗಿರಲಿಲ್ಲ.

ನಮಗೆ ಮದುವೆಯಾದ ಮೂರು ವರ್ಷಗಳನಂತರ ನನ್ನನ್ನು ಪೂರ್ಣಿಯಾ ಜಿಲ್ಲೆಯಲ್ಲಿರುವ ಕಿಷನ್‌ಗಂಜಿಗೆ ವರ್ಗಮಾಡಿದರು. ಆ ಸಬ್ ಡಿವಿಜನ್‌ನಲ್ಲಿ ಸೈಯದ್ ಅಬ್ದುಲ್ ಅಜೀಜ್ ಮತ್ತು ಹಾಜೀ ಅಹ್ಮದ್ ಹುಸೇನ್ ಎಂಬ ಇಬ್ಬರು ಭಾರೀ ಜಮೀನ್‌ದಾರರುಗಳಿದ್ದರು. ಇವರಿಬ್ಬ

ರಿಗೂ ಬಹಳಕಾಲದಿಂದ ಒಂದು ಜಗಳವಿತ್ತು. ಇದರ ನಿಮಿತ್ತವಾಗಿ ಆಗಾಗ್ಗೆ ಊರಿನಲ್ಲಿ ದೊಂಬಿ ನಡೆಯುತ್ತಿತ್ತು. ಅವರಲ್ಲಿ ಶಾಂತಿ ನೆಲೆಗೊಳಿಸ ಬೇಕೆಂದು ನಾನು ಪ್ರಯತ್ನಿಸಿದೆನು. ಸರೋಜ ನಳಿನಿಯು ಆ ಎರಡು ಕುಟುಂಬದವರ ಹೆಂಗಸರನ್ನೂ ಅವರವರ ಮನೆಗಳಿಗೆ ಹೋಗಿ ಕಂಡು ಮಾತನಾಡಿಸಿ, ಆ ಎರಡು ಕುಟುಂಬದವರೂ ಒಬ್ಬರಿಗೊಬ್ಬರು ಸ್ನೇಹಭಾವ ದಿಂದ ಇರುವಂತೆ ಅವರ ಮನಸ್ಸನ್ನು ತಿರುಗಿಸಿ ನನಗೆ ಸಹಾಯ ಮಾಡಿ ದಳು. ಆಕೆಯ ಸಹಾಯವಿಲ್ಲದಿದ್ದರೆ ವರ್ಷಾಂತರಗಳಿಂದ ನಡೆದುಬಂದ ಈ ಕಲಹವು ಹಾಗೆಯೇ ನಡೆಯುತ್ತಲೇ ಇರುತ್ತಿತ್ತೆನ್ನಲು ಸಂದೇಹವಿಲ್ಲ.

ಸಾಮಾಜಿಕ ಕೂಟಗಳಲ್ಲಿ, ಅಥವಾ ಮನೆಯಲ್ಲಿ ಸೇರತಕ್ಕ ಸಂತೋಷ ಕೂಟಗಳಲ್ಲಿ, ಆಕೆಯು ಮುಖ್ಯ ಭಾಗವನ್ನು ವಹಿಸುತ್ತಿದ್ದಳು; ಅಲ್ಲದೆ ಔತಣಗಳಲ್ಲಿ ತಾನೇ ಬಡಿಸಲು ಹೊರಡುತ್ತಿದ್ದಳು. ಆಕೆಯು ಬಹು ಜಾಗ ರೂಕತೆಯಿಂದಲೂ ಬಹು ವಿಚಕ್ಷಣೆಯಿಂದಲೂ ಬಡಿಸುತ್ತಿದ್ದಳು. ಆಕೆಯ ಅಂತ್ಯಕಾಲದ ಕಾಯಿಲೆಯಲ್ಲಿ ಸಹ ತನ್ನ ತಂದೆಯ ಹುಟ್ಟಿದ ಹಬ್ಬದ ದಿವಸದ ಔತಣದಲ್ಲಿ ತಾನೂ ಬಡಿಸಿದಳು.

ಆಕೆಯು ಮನೆಯ ಕೆಲಸಗಳನ್ನೂ, ಸಾಮಾಜಿಕ ಕಾರ್ಯಗಳನ್ನೂ ಒಂದರಿಂದ ಮತ್ತೊಂದಕ್ಕೆ ಕುಂದಕವಿಲ್ಲದಂತೆ ಮಾಡುತ್ತಿದ್ದಳು. ಅದು ಆಶ್ಚರ್ಯಕರವಾಗಿತ್ತು. ಈ ಎರಡು ಕೆಲಸಗಳಲ್ಲಿ ಒಂದರಿಂದೊಂದಕ್ಕೆ ಯಾವ ಅಡ್ಡಿ ಬರುವುದಕ್ಕೂ ಆಕೆಯು ಅವಕಾಶ ಕೊಟ್ಟವಳೇ ಅಲ್ಲ. ಆಗಾಗ್ಗೆ ನಾನು ಆಕೆಯನ್ನು ಕುರಿತು "ನೀನು ಮಾಡಬೇಕಾದ ಸಾಮಾಜಿಕ ಕಾರ್ಯ ಗಳು ಬಹಳವಾಗಿವೆ. ತರಕಾರಿಯನ್ನು ಹೆಚ್ಚುವ ಕೆಲಸವನ್ನು ಆಳುಗಳಿಗೆ ಬಿಟ್ಟುಬಿಡಕೂಡದೆ? ಅದರಿಂದ ನಿನಗೆ ಸ್ವಲ್ಪ ಕಾಲ ದೊರೆಯುವುದಿಲ್ಲವೆ?" ಎಂದು ಕೇಳುತ್ತಿದ್ದೆನು. ಅದಕ್ಕೆ ಆಕೆ "ನಾನು ನನ್ನ ಮನೆಯ ಕರ್ತವ್ಯ ವನ್ನು ನೆರವೇರಿಸಲು ಉದಾಸೀನ ಮಾಡಿದ್ದಾದರೆ ಸಾಮಾಜಿಕ ಕಾರ್ಯ ಗಳಿಗೆ ಕೈ ಹಾಕುವ ಹಕ್ಕೇ ನನಗಿರುವುದಿಲ್ಲ" ಎನ್ನುತ್ತಿದ್ದಳು.

ಆಕೆಯು ನಿತ್ಯವೂ ಅನುಸರಿಸುತ್ತಿದ್ದ ಕಾರ್ಯಕ್ರಮವನ್ನು ಇಲ್ಲಿ ಬರೆದರೆ ಆಕೆಯು ಪ್ರತಿನಿತ್ಯವೂ ಮಾಡುತ್ತಿದ್ದ ಕೆಲಸಗಳೆಷ್ಟೆಂಬುದೂ ಆಕೆಯ ಕಾರ್ಯನಿರ್ವಾಹಕ ರೀತಿ ಎಂತಹುದೆಂಬುದೂ ಸ್ವಲ್ಪಮಟ್ಟಿಗೆ

ಮುಂದಟ್ಟಾಗುವುದೆಂದು ತೋರುವುದು. ಆಕೆಯು ಪ್ರಾತಃಕಾಲದಲ್ಲಿ ಎದ್ದೊಡನೆ ದೇವರನ್ನು ಸ್ವಲ್ಪ ಕಾಲ ಪ್ರಾರ್ಥಿಸುತ್ತಿದ್ದಳು. ಅನಂತರ ತೋಟಕ್ಕೆ ಹೋಗುತ್ತಿದ್ದಳು. ಹೂ ಗಿಡಗಳನ್ನೂ, ತರಕಾರಿ ಗಿಡಗಳನ್ನೂ ಬೆಳಸುವುದೆಂದರೆ ಆಕೆಗೆ ಬಹಳ ಪ್ರೀತಿ. ತನ್ನ ಕೈಗಳಿಂದಲೇ ಆಕೆಯು ಪಾತಿಗಳನ್ನು ಅಗೆಯುವುದು, ಬೀಜಗಳನ್ನು ಬಿತ್ತುವುದು ಮುಂತಾದು ವನ್ನು ಮಾಡುತ್ತಿದ್ದಳು. ಅನೇಕ ತೋಟಗಾರರಿಗಿಂತಲೂ ಹೆಚ್ಚಾಗಿ ಆಕೆಗೆ ಗಿಡಗಳ ಆರೈಕೆಯೂ, ಅವುಗಳ ಬೆಳವಣಿಗೆಯ ಕ್ರಮಗಳೂ, ಅವಕ್ಕೆ ತಕ್ಕ ಕೃಷಿ ಮತ್ತು ಗೊಬ್ಬರ ಮುಂತಾದುವುಗಳ ವಿಚಾರವೂ ಗೊತ್ತಿದ್ದುವು. ಆಕೆಯು ಬೆಳೆಸಿದ ಗಿಡಗಳಿಗೂ ಹಣ್ಣು ಹಂಪಲುಗಳಿಗೂ ಪ್ರದರ್ಶನಗಳಲ್ಲಿ ಅನೇಕ ಸಲ ಬಹುಮಾನಗಳು ದೊರೆತಿರುವುವು. ತಾನೇ ನಿತ್ಯವೂ ತರಕಾರಿ ಯನ್ನು ಗಿಡಗಳಿಂದ ಕೊಯ್ಯುತ್ತಿದ್ದಳು. ಆಕೆಯ ತೋಟದ ಕೆಲಸಗಳಲ್ಲಿ ಸಹಾಯಾರ್ಥವಾಗಿ ಬರುವಂತೆ ನನ್ನನ್ನು ಕರೆಯುತ್ತಿದ್ದಳು. ನಾವು ಯಾವ ಊರಿಗೆ ಹೋದರೂ ಕೂಡ ಅಲ್ಲಿ ನಾವಿದ್ದ ಮನೆಯ ತೋಟವನ್ನು ಕಂಡು ಇತರ ಮನೆಯವರು ಶ್ಲಾಘಿಸುತ್ತಿದ್ದರು. ಆಕೆಯ ತೋಟದ ಕೆಲಸಗಳು ಮುಗಿದ ನಂತರ ನನ್ನೊಡನೆ ಸ್ವಲ್ಪ ಹೊತ್ತು ತಿರುಗಾಡಲು ಬರುತ್ತಿದ್ದಳು. ಅಲ್ಲಿಂದ ಹಿಂತಿರುಗಿದ ಮೇಲೆ ನೆಟ್ಟಗೆ ಉಗ್ರಾಣಕ್ಕೆ ಹೋಗಿ ಅಡಿಗೆಯವನಿಗೆ ಬೇಕಾದ ಪದಾರ್ಥಗಳನ್ನು ಒದಗಿಸುತ್ತಿದ್ದಳು. ಆ ಬಳಿಕ ತರಕಾರಿಯನ್ನು ಹೆಚ್ಚಿ ಕೊಡುವುದು, ತಾನಾಗಿಯೇ ಒಂದು ಒಳ್ಳೆಯ ಪಲ್ಯವನ್ನಾಗಲಿ, ಕೂಟನ್ನಾಗಲಿ ಮಾಡುವುದು, ಏನಾದರೊಂದು ಭಕ್ಷ್ಯ ವನ್ನು ಮಾಡುವುದು ಮುಂತಾದ ಕೆಲಸ, ಅಡಿಗೆಯ ಮನೆಯಲ್ಲಿ ಪ್ರತಿ ಯೊಂದು ವಸ್ತುವೂ ಚೊಕ್ಕಟವಾಗಿದೆಯೇ ಎಂದು ಒಂದು ಸುತ್ತು ನೋಡಿಕೊಂಡು ಮನೆಯಲ್ಲಿರುವ ಒಂದೊಂದು ಕೊಠಡಿಗಳನ್ನೂ ಚೊಕ್ಕಟ ಪಡಿಸುವುದು, ಒಗೆಯುವುದಕ್ಕೆ ಕೊಡಬೇಕಾದ ಬಟ್ಟೆಬರೆಗಳನ್ನು ಒಗೆ ಯುವುದಕ್ಕೆ ಕೊಡುವುದು, ಅಥವಾ ಒಗೆದುಕೊಂಡು ಬಂದದ್ದನ್ನು ತೆಗೆದಿಡು ವುದು ಮುಂತಾದ ಕೆಲಸಗಳನ್ನು ಮಾಡಲು ಒಂದು ಘಂಟೆಯಷ್ಟು ಕಾಲವು ಕಳೆದು ಹೋಗುತ್ತಿತ್ತು. ಈ ರೀತಿ ಅವಳ ಪ್ರಾತಃಕಾಲವು ಕಳೆಯುತ್ತಿತ್ತು.

ಮಧ್ಯಾಹ್ನದ ಊಟವಾದ ಮೇಲೆ ತನ್ನ ನಂಟರಿಷ್ಟರಿಗೆ ಮತ್ತು ಸ್ನೇಹಿತರಿಗೆ ಕಾಗದಗಳನ್ನು ಬರೆಯುವುದು, ಅಥವಾ ಸ್ತ್ರೀಯರ ಪುರೋಭಿ

ವೃದ್ಧಿಗಾಗಿ ತಾನು ಕೈಕೊಂಡಿದ್ದ ಕೆಲಸಗಳಿಗೆ ಸಂಬಂಧವಾದ ಕಾಗದಗಳನ್ನು ಬರೆಯುವುದು, ಕಸೂತಿ ಕೆಲಸ ಮಾಡುವುದು, ಹೊಲಿಯುವುದು, ಪತ್ರಿಕೆಗಳು ಅಥವಾ ಇತರ ಪುಸ್ತಕಗಳನ್ನು ಓದುವುದು, ಹೊಸ ಹಾಡುಗಳನ್ನು ಸಾಧನೆಮಾಡುವುದು, ಮುಂತಾದ ಕೆಲಸಗಳನ್ನು ಮಾಡುತ್ತಿದ್ದಳು. ಕೆಲವು ವೇಳೆ ನನ್ನನ್ನು ಗಾಡಿಯಲ್ಲಿ ಕಛೇರಿಗೆ ಕರೆದುಕೊಂಡು ಹೋಗಿ ಇಳಿಸಿಬಿಟ್ಟು, ತಾನು ಅಂಗಡಿಗೆ ಹೋಗಿ ಬೇಕಾದ ಸಾಮಾನುಗಳನ್ನು ಕೊಂಡುಕೊಂಡು ಮನೆಗೆ ಹೋಗುತ್ತಿದ್ದಳು. ಕೆಲವು ವೇಳೆ ಕಛೇರಿಗೆ ಬಂದು ನನ್ನನ್ನು ಕರೆದುಕೊಂಡು ಬರುತ್ತಿದ್ದಳು. ಇವು ಆಕೆ ಮಧ್ಯಾಹ್ನ ಕಾಲದಲ್ಲಿ ಮಾಡುತ್ತಿದ್ದ ಕೆಲಸಗಳು.

ಸಾಯಂಕಾಲದಲ್ಲಿ ಮನೆಗೆ ಬಂದ ಸ್ನೇಹಿತರಿಗೆ ಚಹಾ ಕೊಡುವುದು, ಚೆಂಡಾಟ ಮೊದಲಾದ ಆಟಗಳನ್ನಾಡುವುದು, ಮಹಿಳೆಯರ ಸಮಾಜಗಳಿಗೆ ಹೋಗುವುದು, ಘೋಷಾ ಹೆಂಗಸರನ್ನು ಅವರ ಮನೆಗಳಿಗೆ ಹೋಗಿ ಭೇಟಿ ಮಾಡಿ ಬರುವುದು ಮುಂತಾದ ಸ್ನೇಹಕಾರ್ಯಗಳನ್ನು ಮಾಡುತ್ತಿದ್ದಳು. ಸಾಯಂಕಾಲವನ್ನು ಆಕೆಯು ಎಂದಿಗೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಆಕೆಯನ್ನು ಕಾಣಲು ಮನೆಗೆ ಯಾರಾದರೂ ಸ್ನೇಹಿತರು ಬರುತ್ತಿದ್ದರು. ಅಥವಾ ಆಕೆಯೇ ತನ್ನ ಸ್ನೇಹಿತರನ್ನಾಗಲಿ ನೆಂಟರಿಷ್ಟರನ್ನಾಗಲಿ ಕಂಡು ಬರಲು ಹೋಗುತ್ತಿದ್ದಳು. ರಾತ್ರಿಯ ಕಾಲದಲ್ಲಿ ಊಟವಾದಮೇಲೆ ಮನೆಯ ಲೆಕ್ಕಪಕ್ಕಗಳನ್ನು ನೋಡಿದ ಬಳಿಕ ನನಗಾಗಿ ಒಂದೆರಡು ಹಾಡುಗಳನ್ನೂ ದೇವರ ಕೀರ್ತನೆಗಳನ್ನೂ ಹಾಡುತ್ತಿದ್ದಳು. ಕಡೆಗೆ ಮಲಗುವುದಕ್ಕೆ ಮುಂಚೆ ತಪ್ಪದೆ ದೇವರನ್ನು ಒಮ್ಮೆ ಪ್ರಾರ್ಥಿಸುತ್ತಿದ್ದಳು.

ಇಷ್ಟು ಕೆಲಸಗಳ ಮಧ್ಯೆ ಹೊಸ ವಿಷಯಗಳನ್ನು ಕಲಿಯಲು ಹೇಗಾದರೂ ಅವಕಾಶ ಮಾಡಿಕೊಳ್ಳುತ್ತಿದ್ದಳು. ಆಕೆಯು ಏನನ್ನು ಮಾಡಿದರೂ ಶ್ರದ್ಧೆಯಿಂದ ಚೆನ್ನಾಗಿ ಮಾಡುತ್ತಿದ್ದಳಲ್ಲದೆ ಯಾವುದನ್ನು ಮಾಡಲಾರಂಭಿಸಿದರೂ ಅದನ್ನು ಮುಗಿಸುವವರೆಗೂ ಬಿಡುತ್ತಿರಲಿಲ್ಲ.

ಪ್ರಸಿದ್ಧ ವೈಜ್ಞಾನಿಕರಾದ ಸರ್ ಜಗದೀಶ ಚಂದ್ರ ಬೋಸ್ ರವರ ಹೆಂಡತಿ ಆಕೆಯ ವಿಷಯದಲ್ಲಿ ಹೀಗೆ ಬರೆದಿರುವರು:—"ಸರೋಜನಳಿನಿಯವರು ಅಷ್ಟು ಕಾರ್ಯಗಳನ್ನೂ ಅಷ್ಟು ಪರಿಷ್ಕಾರವಾಗಿ ಹೇಗೆ ನೆರ

ವೇರಿಸುತ್ತಾ ಇದ್ದರೆಂದು ನಾನು ಆಗಾಗ್ಗೆ ಬಹಳ ಆಶ್ಚರ್ಯಗೊಳ್ಳುತ್ತಿದ್ದೆನು. ಎಲ್ಲವೂ ಆಕೆಯು ಇಟ್ಟುಕೊಂಡಿದ್ದ ಕ್ರಮದಿಂದಲೇ ಎಂದು ನನಗೆ ತೋರುತ್ತದೆ. ಕಾರ್ಯಶೀಲರ ಸಂಖ್ಯೆಯು ಬಹಳ ಕಡಮೆಯಾಗಿರುವುದರಿಂದ ನಮ್ಮ ದೇಶದಲ್ಲಿ ಅತಿ ತ್ವರೆಯಾಗಿ ನಡೆಯಬೇಕಾದ ಅನೇಕ ಕರ್ತವ್ಯಗಳು ನೆರವೇರದೆ ಹಾಗೆಯೇ ಉಳಿದುಹೋಗಿವೆ. ನಮ್ಮ ಸಮಾಜದ ಹಿತಕ್ಕಾಗಿ ಕೆಲಸ ಮಾಡುವವರು ಯಾರೂ ಸಿಕ್ಕದೆ ನಿರಾಶೆಯಿಂದಿದ್ದಾಗ್ಗೆ ಸರೋಜ ನಳಿನಿಯವರು ತಾವಾಗಿಯೇ "ನಾರೀ ಶಿಕ್ಷಾ ಸಮಿತಿ"ಗೆ ಬಂದು ಸೇರಿದರಲ್ಲದೆ, "ವಾಣೀ ಭವನ" ಎಂಬ ವಿಧವಾಶ್ರಮದ ಕಾರ್ಯದರ್ಶಿನಿಯೂ ಆದರು. ಆ ಕೆಲಸವು ಬಹಳ ಶ್ರಮಸಾಧ್ಯವಾದುದು. ನಾವು ಯಾವ ಹೊತ್ತಿನಲ್ಲಿ ಆಕೆಯನ್ನು ಸಹಾಯಕ್ಕೆ ಕರೆದರೂ ಆಕೆ ಅಲಕ್ಷ್ಯ ಮಾಡುತ್ತಿರಲಿಲ್ಲ. ನಾವು ಯಾವಾಗ ಆಕೆಯ ಸಹಾಯವನ್ನು ಕೋರಿದರೂ ಕೂಡ, ಆಕೆಯು ಸಂಪೂರ್ಣ ಮನಸ್ಸಿನಿಂದಲೂ, ಉತ್ಸಾಹದಿಂದಲೂ ಸಹಾಯ ಮಾಡುತ್ತಿದ್ದಳು. ಸ್ತ್ರೀಯರ ಉನ್ನತಿಗಾಗಿ ನಡೆಯುತ್ತಿದ್ದ ಚಳುವಳಿಗೂ, ಮುಖ್ಯವಾಗಿ "ವಾಣೀ ಭವನ"ಕ್ಕೂ ಆಕೆಯ ಮರಣದಿಂದ ಅಪಾರವಾದ ನಷ್ಟವುಂಟಾಗಿದೆ."

---

## ಐದನೆಯ ಅಧ್ಯಾಯ

## ಶೀಲ ಸ್ವಭಾವಗಳು

ಸರೋಜ ನಳಿನಿಯು ದೇವರಲ್ಲಿ ನಿಶ್ಚಲವಾದ ಭಕ್ತಿಯನ್ನಿಟ್ಟಿದ್ದಳು. ಆಕೆಯು "ದೇವರು ಒಳ್ಳೆಯವನು; ಆತನು ಮಾಡುವುದೆಲ್ಲ ನಮ್ಮ ಶ್ರೇಯಸ್ಸಿಗಾಗಿಯೇ" ಎಂದು ಪದೇ ಪದೇ ಹೇಳುತ್ತಿದ್ದಳು. ಚೆನ್ನಾಗಿ ಯೋಚನೆಮಾಡದೆಯೇ ಆಗಲಿ ಅಥವಾ ಅವಿವೇಕದಿಂದಾಗಲಿ, ಯಾರಾದರೂ ದೇವರಿಲ್ಲವೆಂದೋ, ಅಥವಾ ಸೃಷ್ಟಿಯು ಸಮುದ್ದೇಶರಹಿತವೆಂದೋ ಹೇಳಿದರೆ ಆಕೆಗೆ ಬಹಳ ವ್ಯಥೆಯಾಗುತ್ತಿತ್ತು. ಈ ಬಗೆಯ ದೈವಭಕ್ತಿಯ ಪ್ರಭಾವದಿಂದ ಆಕೆಯಲ್ಲಿ ನೆಲಸಿದ್ದ ದೃಢ ಸಂಕಲ್ಪವೂ ಉತ್ಸಾಹವೂ ಮತ್ತು ಶಕ್ತಿಮೀರಿ ಕೆಲಸಮಾಡುವ ಸಾಮರ್ಥ್ಯವೂ ಆಶ್ಚರ್ಯಕರವಾಗಿದ್ದುವು. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದಾಗಿದೆ. ಬಂಕೂರಾ ಮತ್ತು

ವೀರಭೂಮಿ (ಬೀರ್ ಭೂಮ್) ಎಂಬ ಪ್ರದೇಶಗಳ ಜನರು ಬಹಳ ಹಿಂದುಳಿದಿದ್ದರು. ಆ ಸ್ಥಳಗಳಲ್ಲಿ ಹೆಂಗಸರ ಅಭಿವೃದ್ಧಿಗಾಗಿ ಕೆಲಸಗಳನ್ನು ನಡಸುವುದು—ಮುಖ್ಯವಾಗಿ ಒಂದು ಮಹಿಳಾ ಸಮಾಜವನ್ನು ಏರ್ಪಡಿಸುವುದು—ಅಸಾಧ್ಯವೆಂದು ನನಗೆ ತೋರಿತು. ಆದುದರಿಂದ ನಾನು ಈ ಜಿಲ್ಲೆಗಳಲ್ಲಿ ಆ ಕೆಲಸಗಳನ್ನು ಪ್ರಾರಂಭಿಸುವುದು ಉಚಿತವಲ್ಲವೆಂದು ಸರೋಜ ನಳಿನಿಯನ್ನು ನಿರೋಧಿಸಿದೆನು. ಆದರೂ ಕೂಡ ಆಕೆ ದೃಢಮನಸ್ಕಳಾಗಿ ಕೆಲಸ ಮಾಡಿ, ಇಂಥಾ ಸ್ಥಳಗಳಲ್ಲಿ ಕೂಡ ಸ್ತ್ರೀ ಸಮಾಜವನ್ನು ಸ್ಥಾಪಿಸಿ, ಸ್ತ್ರೀಯರ ಪುರೋಭಿವೃದ್ಧಿಗೆ ಸಾಧಕವಾದ ಕಾರ್ಯಗಳನ್ನು ಸಫಲರೀತಿಯಲ್ಲಿ ನೆರವೇರಿಸಿದಳು. ಏನಾದರೂ ತೊಂದರೆಗಳು ಒದಗಿದರೆ ತತ್‌ಕ್ಷಣ ಬೇರೆ ಮಾತಿಲ್ಲದೆ ಕೈಗಳನ್ನು ಜೋಡಿಸಿ, ಕಣ್ಣುಗಳನ್ನು ಮುಚ್ಚಿಕೊಂಡು ದೇವರಿಗೆ ಒಂದು ಸಣ್ಣ ಪ್ರಾರ್ಥನೆಯನ್ನು ಮಾಡುತ್ತಿದ್ದಳು. ಆ ಸಣ್ಣ ಪ್ರಾರ್ಥನೆಯು ಮುಗಿದನಂತರ ಆಕೆಯ ಮುಖದಲ್ಲಿ ಒಂದು ವಿಚಿತ್ರವಾದ ತೇಜಸ್ಸೂ ಧೈರ್ಯವೂ ನಂಬಿಕೆಯೂ ಪ್ರಕಾಶಿಸುತ್ತಿರುವುದನ್ನು ಕಂಡು ನನ್ನ ಹೃದಯಕ್ಕೂ ಕೂಡ ಧೈರ್ಯ ಬರುತ್ತಿತ್ತು. ಆಕೆ ಎಂದಿಗೂ ಕಷ್ಟಕಾಲಗಳಲ್ಲಿ ಅಧೈರ್ಯ ಹೊಂದಿದವಳಲ್ಲ.

ಆಕೆಯ ಜೀವನವು ಬಹಳ ಸರಳವಾಗಿತ್ತು. ಅಟ್ಟಹಾಸ, ದುಂದುವೆಚ್ಚ, ಭೋಗಾಪೇಕ್ಷೆ ಇವೊಂದೂ ಆಕೆಗೆ ಬೇಕಾಗಿರಲಿಲ್ಲ. ಆಕೆ ಹೆಚ್ಚು ಬೆಲೆಯ ಉಡುಪುಗಳನ್ನೂ ಬೆಲೆ ಬಾಳುವ ಒಡವೆಗಳನ್ನೂ ಪ್ರೀತಿಸುತ್ತಿರಲಿಲ್ಲ. "ಜನರು ತಮ್ಮ ಸಂಪತ್ತನ್ನೂ ಪದವಿಯನ್ನೂ ಕುರಿತು ಜಂಭ ಹೇಳಿಕೊಳ್ಳುವುದೇಕೋ ಕಾಣೆ! ಅದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಅವುಗಳಿಂದ ಒಳ್ಳೆಯ ಕೆಲಸಗಳನ್ನು ಮಾಡಲು ಅವಕಾಶ ದೊರೆಯುವ ಪ್ರಯೋಜನ ಹೊರತು ಮತ್ತಾವ ಪ್ರಯೋಜನವೂ ಇಲ್ಲ. ಅವುಗಳನ್ನು ಅಟ್ಟಹಾಸಕ್ಕೂ ಭೋಗತೃಪ್ತಿಗೂ ಮಾತ್ರವೇ ಉಪಯೋಗಿಸುವುದಾದರೆ, ಅವುಗಳು ವ್ಯರ್ಥವಾದಂತೆಯೇ ಸರಿ. ಅಗ್ಗ ಅವುಗಳಿಂದ ಕೆಡುಕೇ ಹೊರತು ಸ್ವಲ್ಪವೂ ಪ್ರಯೋಜನವಿಲ್ಲ" ಎಂದು ಆಕೆಯು ಹೇಳುತ್ತಿದ್ದಳು. ಬೆಲೆಬಾಳುವ ಒಡವೆ ವಸ್ತುಗಳಿಗೆ ಆಕೆಯು ಸ್ವಲ್ಪವೂ ಆಶೆಪಡುತ್ತಿರಲಿಲ್ಲ. ಆದರೆ ಸುಂದರವಾದ ಬಣ್ಣಗಳುಳ್ಳ ಸೀರೆಗಳನ್ನು ಉಡಲು ಅವಳಿಗೆ ಬಹಳ ಇಷ್ಟ. ಇವು ಹೆಚ್ಚು ಬೆಲೆಯ ಸೀರೆಗಳೇನೂ ಅಲ್ಲ. ಅವು

ಹದಿನೆಂಟು ಹತ್ತೊಂಬತ್ತು ವರ್ಷಗಳು ಉಪಯೋಗಿಸಲ್ಪಟ್ಟಿದ್ದರೂ ಹೊಸ ಸೀರೆಗಳಂತೆ ಕಾಣುತ್ತಿದ್ದುವು. ಆಕೆಯು ಅವನ್ನು ಅಷ್ಟು ಒಪ್ಪವಾಗಿ ಉಪಯೋಗಿಸುತ್ತಿದ್ದಳು. ನಮ್ಮ ಮಗನು ಚಿಕ್ಕ ಮಗುವಾಗಿದ್ದಾಗ ತೊಡುತ್ತಿದ್ದ ಕೆಲವು ಉಡುಪುಗಳನ್ನು ಆಕೆಯು ತನ್ನ ಮೊಮ್ಮಕ್ಕಳಿಗಾಗಿ ಆಸೆಯಿಂದ ಭದ್ರಪಡಿಸಿಟ್ಟಿದ್ದಾಳೆ. ನಾವು ಸಂಸಾರಮಾಡಿದ ಹದಿನೆಂಟು ವರ್ಷಗಳಲ್ಲಿ ಆಕೆಯು ಧರಿಸಿದ್ದ ಆಭರಣಗಳಲ್ಲಿ ಒಂದನ್ನಾದರೂ ಕೂಡ ಕಳೆಯದೆ ಬಹಳ ಜಾಗರೂಕತೆಯಿಂದ ಕಾಪಾಡಿಕೊಂಡಿದ್ದಳು. ಆಭರಣ ಗಳನ್ನೂ ಉಡುಪುಗಳನ್ನೂ ಆರಿಸಿ ಧರಿಸುವುದರಲ್ಲಿ ಆಕೆಗಿದ್ದ ನಾಜೂ ಕನ್ನೂ ಅಭಿರುಚಿಯನ್ನೂ ಕಂಡು ಆಕೆಯ ಸ್ನೇಹಿತೆಯರು ಹಲವರು ಆಶ್ಚರ್ಯಗೊಂಡು ತಾವೂ ಅಂಥವುಗಳನ್ನೇ ಅದೇ ರೀತಿ ಉಪಯೋಗಿಸಲು ಪ್ರಾರಂಭಿಸುತ್ತಿದ್ದರು.

ನಮಗೆ ಮದುವೆಯಾದ ಒಂದೆರಡು ವರ್ಷಗಳಕಾಲ ಹಣ ಸಾಲದೆ ನಾವು ಕಷ್ಟದಶೆಯಲ್ಲಿದ್ದುದರಿಂದ ಬಹಳ ಲೆಕ್ಕಾಚಾರವಾಗಿ ಜೀವನವನ್ನು ನಡಸಬೇಕಾಗಿತ್ತು. ನಾನು ಇಂಗ್ಲೆಂಡಿನಲ್ಲಿ ವಿದ್ಯಾ ವ್ಯಾಸಂಗಮಾಡಲು ಆಗಿದ್ದ ಸಾಲವನ್ನೂ ಪಿತ್ರಾರ್ಜಿತವಾದ ಸಾಲಗಳನ್ನೂ ತೀರಿಸುವುದಕ್ಕಾ ಗಿಯೂ, ಆಗಾಗ್ಗೆ ಔತಣಗಳಿಗಾಗಿ ವೆಚ್ಚ, ಮನೆಯ ವೆಚ್ಚ ಮುಂತಾದವು ಗಳಿಗಾಗಿಯೂ ನನ್ನ ಸಂಬಳವು ಸಾಲದೇ ಹೋಗುತ್ತಿತ್ತು. ಆಗ ಸರೋಜ ನಳಿನಿಯು ತಾನಾಗಿಯೇ ಹರ್ಷಚಿತ್ತದಿಂದ ತನ್ನ ಬೆಲೆ ಬಾಳುವ ಆಭರಣ ಗಳನ್ನೂ ತನಗೆ ಮದುವೆಯಲ್ಲಿ ಬಂದಿದ್ದ ಉಡುಗರೆಗಳನ್ನೂ ಮಾರಿ ಹಣ ವನ್ನೊದಗಿಸಬಹುದೆಂದು ಹೇಳಿ ಅವುಗಳನ್ನು ನನಗೆ ಕೊಟ್ಟಳು. ಆ ಒಡವೆಗಳಿಗೆ ಸಾಧ್ಯವಾದಷ್ಟು ಒಳ್ಳೆಯ ಬೆಲೆ ಸಂಪಾದಿಸಲು ನನ್ನೊಡನೆ ಚಿನಿ ವಾರರ ಅಂಗಡಿಗೆ ಬರುವುದಕ್ಕೆ ತಾನೂ ಹೊರಟಳು. ಆ ಸಮಯದಲ್ಲಿ ಒಡವೆಗಳ ಧಾರಣೆಯು ತಗಿಹೋಗಿದ್ದುದರಿಂದ ಒಂದು ಒಡವೆಗಾದರೂ ಸರಿಯಾದ ಬೆಲೆ ಬರಲಿಲ್ಲವಾಗಿ, ಆಕೆಯ ಸೋದರಮಾವಂದಿರಲ್ಲಿ ಒಬ್ಬರಿಗೆ ಅವುಗಳನ್ನು ಒಪ್ಪಿಸಿ, ಅವುಗಳಿಗೆ ಒಳ್ಳೆಯ ಬೆಲೆ ಬಂದರೆ ಮಾರಿಬಿಡುವಂತೆ ಹೇಳಿದೆವು. ಸ್ವಲ್ಪ ಕಾಲದಲ್ಲಿ ಅದೃಷ್ಟವಶದಿಂದ ನನಗೆ ಸಂಬಳವು ಹೆಚ್ಚಿ, ಆ ಒಡವೆಗಳನ್ನು ಮಾರುವ ಆವಶ್ಯಕತೆಯೇ ಬೀಳಲಿಲ್ಲ. ಅದು ಹಾಗಿರಲಿ. ಸರೋಜ ನಳಿನಿಯು ಮನಸ್ಸಿಗೆ ಸ್ವಲ್ಪವಾದರೂ ವ್ಯಥೆಯನ್ನು ತಂದು

ಕೊಳ್ಳದೆ ಸಂತೋಷವಾಗಿಯೇ ಒಡವೆಗಳನ್ನು ಮಾರಿಬಿಡೆಂದು ಹೇಳಿದ ಸಂಗತಿ ಸ್ತೋತ್ರಾರ್ಹವಾದದ್ದು. ಆಕೆಯು "ನನಗೆ ಒಡವೆಯ ಮೇಲೆ ಆಶೆಯೇ ಇಲ್ಲ" ಎಂದು ಹೇಳುತ್ತಿದ್ದಳು.

ಆಕೆಗೆ ಐಶ್ವರ್ಯದಲ್ಲಿಯೂ ಆಶೆಯಿರಲಿಲ್ಲ. ಬಹಳ ಐಶ್ವರ್ಯವಂತರ ವಿಷಯವಾಗಿ ಯಾರಾದರೂ ಮಾತನಾಡುತ್ತಿದ್ದರೆ ಆಕೆಗೆ ಸ್ವಲ್ಪವಾದರೂ ದ್ರವ್ಯಾಭಿಲಾಷೆಯು ಹುಟ್ಟುತ್ತಿರಲಿಲ್ಲ. ಆದರೆ ನಾನು ಹಣದ ವಿಷಯದಲ್ಲಿ ಆಕೆಯಂತೆ ನಿಸ್ಪೃಹನಾಗಿರಲಿಲ್ಲ. ನಾನು ಡಾರ್ಬಿ (Derby) ಕುದುರೆಯ ಜೂಜಿನ ಲಾಟರಿ ಟಿಕೆಟ್ಟುಗಳನ್ನು ಕೊಂಡುಕೊಳ್ಳುತ್ತಿದ್ದೆನು. ಆಗ "ಈ ಟಿಕೆಟ್ಟಿಗೆ ಜಯವಾಗಿ ನನಗೆ ಹಣಬಂದರೆ ಒಂದೇ ದಿವಸದಲ್ಲಿ ಕೋಟೀಶ್ವರನಾಗುವೆನು"—ಎಂದು ನಾನು ಹೇಳಿದರೆ ಆಕೆ ಸ್ವಲ್ಪವಾದರೂ ಉತ್ಸಾಹವನ್ನು ತೋರ್ಪಡಿಸುತ್ತಿರಲಿಲ್ಲ. ಆಕೆ "ನಾನು ಬಹಳ ಹಣಬೇಕೆಂದು ಇಚ್ಛಿಸುವುದಿಲ್ಲ. ಅವರವರ ಕರ್ತವ್ಯಗಳನ್ನು ನೆರವೇರಿಸುವುದಕ್ಕೂ ಅವರವರ ಸೌಕರ್ಯಕ್ಕೂ ಆವಶ್ಯಕವಾದಷ್ಟು ಹಣಕ್ಕಿಂತ ಹೆಚ್ಚು ಹಣವನ್ನಿಟ್ಟುಕೊಂಡು ಏನು ಮಾಡುವುದು? ವಿಶೇಷ ಹಣದಿಂದ ಮನುಷ್ಯನಿಗೆ ತೊಂದರೆಯೇ. ಸರಳರೀತಿಯಲ್ಲಿ ಸಂತೋಷವಾಗಿಯೂ ಸಹಜವಾಗಿಯೂ ಶಾಂತಿಯಿಂದಲೂ ಬಾಳುವುದಕ್ಕೆ ಅದರಿಂದ ಅಡ್ಡಿಯುಂಟಾಗುವುದು" ಎನ್ನುತ್ತಿದ್ದಳು.

ಆಕೆಯ ಒಡವೆ ವಸ್ತ್ರ ಮುಂತಾದುವಕ್ಕೂ ಮನೆಯ ವೆಚ್ಚಕ್ಕೂ ಸೇರಿ ಆಕೆಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಬೇರೆ ಒಂದು ಲೆಕ್ಕವನ್ನಿಟ್ಟಿದ್ದೆನು. ಆಕೆಯೇ ಪ್ರತ್ಯೇಕವಾಗಿ ಬ್ಯಾಂಕಿನ ಒಂದು ಚೆಕ್‌ಪುಸ್ತಕವನ್ನೂ ಇಟ್ಟುಕೊಂಡಿದ್ದಳು. ಆದರೆ ಆಕೆ ಆ ಬ್ಯಾಂಕಿನ ಲೆಕ್ಕದಿಂದ ಮನೆಯ ವೆಚ್ಚಕ್ಕೆ ಎಷ್ಟು ಹಣಬೇಕೋ ಅಷ್ಟು ಮಾತ್ರವೂ, ಮತ್ತು ನನಗೂ ನನ್ನ ಮಗನಿಗೂ ಏನಾದರೂ ಬಹುಮಾನಗಳನ್ನು ಕೊಂಡುಕೊಡುವುದಕ್ಕೆ ಮಾತ್ರವೂ ಹಣ ತೆಗೆದು ಕೊಳ್ಳುತ್ತಿದ್ದಳು. ಆಕೆಗಾಗಿ ಉಡುಪುಗಳನ್ನೂ ಒಡವೆ ವಸ್ತುಗಳನ್ನೂ ನಾನು ಕೊಂಡು ತಂದುಕೊಟ್ಟರೆ ಉಂಟು. ಅಷ್ಟೇ ಹೊರತು ಆಕೆಯು ತಾನಾಗಿ ಬೇರೆ ಯಾವುದೊಂದನ್ನೂ ತನಗಾಗಿ ಕೊಂಡುಕೊಳ್ಳುವ ಯೋಚನೆ ಮಾಡುತ್ತಿರಲಿಲ್ಲ. ನಾನೇ ಆಗಲಿ ಬಹಳ

ಬೆಲೆ ಬಾಳುವ ವಸ್ತುವನ್ನು ಆಕೆಗಾಗಿ ಕೊಂಡು ತಂದರೆ ಅದನ್ನವಳು ಅಂಗೀಕರಿಸಲು ಖಂಡಿತವಾಗಿ ಒಪ್ಪುತ್ತಿರಲಿಲ್ಲ. ಹೊಸ ಒಡವೆಯನ್ನಾಗಲಿ ವಸ್ತುವನ್ನಾಗಲಿ ಆಕೆಯು ತೆಗೆದುಕೊಳ್ಳಬೇಕಾದರೆ ನಾನು ಆಕೆಯನ್ನು ಬಹಳ ಒತ್ತಾಯಪಡಿಸಬೇಕಾಗಿತ್ತು. ಆಕೆಯು ನನ್ನ ಯೋಚನೆಯನ್ನು ಕೇಳದೆ ತನಗಾಗಿ ಯಾವುದನ್ನೂ ಎಂದಿಗೂ ಕೊಳ್ಳುತ್ತಿರಲಿಲ್ಲ.

ಕೃತಕತೆ ಡಾಂಭಿಕತೆಗಳು ಯಾವರೂಪವಲ್ಲದ್ದರೂ ಅವಳಿಗೆ ಸರಿ ಬೀಳುತ್ತಿರಲಿಲ್ಲ. ಮುಖಕ್ಕೆ ಹಚ್ಚಿಕೊಳ್ಳುವ ಪರಿಮಳ ಚೂರ್ಣ ಮುಂತಾದುವನ್ನು ಆಕೆಯು ಎಂದಿಗೂ ಉಪಯೋಗಿಸಿಲ್ಲ. ನಾವು ಜಪಾನ್ ದೇಶಕ್ಕೆ ಹೋಗಿದ್ದಾಗ ಆ ದೇಶದ ಹೆಂಗಸರು ಮುಖಕ್ಕೆ ಬಣ್ಣ ಹಾಕಿಕೊಳ್ಳುವುದನ್ನು ಕಂಡು ಆಕೆಗೆ ಬಹಳ ವ್ಯಥೆಯೂ ಆಶ್ಚರ್ಯವೂ ಉಂಟಾದುವು. ಯಾವ ವಿಧವಾದ ಅಧರ್ಮ ಅನೀತಿಗಳನ್ನೂ ಆಕೆಯು ಮನಃಪೂರ್ವಕವಾಗಿ ದ್ವೇಷಿಸುತ್ತಿದ್ದಳು. ಕಾಡಿನಲ್ಲಿ ನನ್ನ ಸಂಗಡ ದೊಡ್ಡ ಹುಲಿಯನ್ನು ನೋಡಿದಾಗಲಾಗಲಿ, ಅಥವಾ ಘಾಯ ತಗಲಿ ಆವೇಶದಿಂದಿರುವ ಹುಲಿಯನ್ನು ನಾವು ಹಿಂಬಾಲಿಸಿಕೊಂಡು ಹೋದಾಗಲಾಗಲಿ ಆಕೆಗೆ ಸ್ವಲ್ಪವಾದರೂ ಭಯವಿರಲಿಲ್ಲ. ಆದರೆ ಒಬ್ಬ ಕುಡುಕನನ್ನು ಕಂಡರೆ ಆಕೆ ಹೆದರುತ್ತಿದ್ದಳು. ಆಕೆ "ಕುಡುಕರನ್ನು ಕಂಡರೆ ನನಗಾಗುವುದಿಲ್ಲ. ಅವರನ್ನು ನೋಡಿದರೆ ನನಗೇಕೋ ಹೆದರಿಕೆಯಾಗುತ್ತದೆ" ಎನ್ನುತ್ತಿದ್ದಳು. ಆಕೆಯು ತನ್ನ ಮಗನಿಗೆ ಪದೇ ಪದೇ "ನೀನು ನಿನ್ನ ವಿದ್ಯೆಯಲ್ಲಿ ಬುದ್ಧಿವಂತನಾಗದಿದ್ದರೆ ಚಿಂತೆಯಿಲ್ಲ. ನೀನು ಶೀಲವಂತನಾಗಿ ಬಾಳಬೇಕೆಂದು ನನಗೆ ಆಶೆ" ಎಂದು ಹೇಳುತ್ತಿದ್ದಳು.

ಸಾಮಾಜಿಕ ಕೂಟಗಳಲ್ಲಿಯೂ, ಸಾರ್ವಜನಿಕ ಸಭೆಗಳಲ್ಲಿಯೂ ಮನೆಯಲ್ಲಿರುವಂತೆಯೇ ಸಾಮಾನ್ಯವಾದ ಉಡುಪನ್ನೇ ಧರಿಸುತ್ತಿದ್ದಳು. ಇಂಡಿಯಾ ದೇಶದ ಬಯಲು ಪ್ರಾಂತಗಳಲ್ಲಿರುವಾಗ ಬರಿಯ ಕಾಲಿನಲ್ಲೇ ಇರುತ್ತಿದ್ದಳು, ಅಥವಾ ಚಡಾವುಗಳನ್ನು ಮಾತ್ರ ಹಾಕಿಕೊಂಡಿರುತ್ತಿದ್ದಳು. ಕಾಲುಚೀಲಗಳನ್ನು ಚಳಿಯಾಗಿರುವ ಬೆಟ್ಟದ ಪ್ರದೇಶಗಳಲ್ಲೂ ಬರಿಯ ಕಾಲನ್ನು ಕಂಡ ಮಾತ್ರಕ್ಕೆ ಅಸಹ್ಯಪಡುವ ಪಾಶ್ಚಾತ್ಯರ ಜೊತೆಯಲ್ಲಿರುವಾಗಲೂ ಧರಿಸತಕ್ಕದ್ದೇ ಹೊರತು, ಸಾಧಾರಣವಾಗಿ ಅದು ಅನವಶ್ಯವೆಂದು

ತಿಳಿದಿದ್ದಳು. ಒಂದು ಸಲ ಕಲ್ಕತ್ತೆಯಲ್ಲಿ ಹೆಣ್ಣು ಹುಡುಗಿಯರ ಪಾಠ ಶಾಲೆಗಳಲ್ಲೊಂದರಲ್ಲಿ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಕೊಡುವು ದಕ್ಕಾಗಿ ಸರೋಜ ನಳಿನಿಯನ್ನು ಕರೆದಿದ್ದರು. ಆ ಸಭೆಯು ಕಲ್ಕತ್ತೆಯ ವಿಶ್ವವಿದ್ಯಾನಿಲಯದ ಸಂಸ್ಥೆಯಲ್ಲಿ ಜರುಗಿತು. ಅದಕ್ಕೆ ನವನಾಗರಿಕತೆ ಯಲ್ಲಿ ಮುಂದುವರಿದ ಅನೇಕ ದೊಡ್ಡ ಮನುಷ್ಯರು ಬಂದಿದ್ದರು. ಅನೇಕ ಸ್ತ್ರೀಯರು ಬಹು ಬೆಲೆಬಾಳುವ ರೇಷ್ಮೆ ಸೀರೆಗಳನ್ನುಟ್ಟು ಬಂದಿರಲು, ಸರೋಜ ನಳಿನಿಯು ಒಂದು ಸಾಧಾರಣವಾದ ನೂಲಿನ ಸೀರೆಯನ್ನುಟ್ಟು ಹೋಗಿದ್ದಳು. ಆ ಸಭೆಗೆ ಬಂದಿದ್ದ ಆಕೆಯ ಸ್ನೇಹಿತೆಯರಾದ ಅನೇಕ ದೊಡ್ಡ ಮನೆತನದವರು ಇದಕ್ಕಾಗಿ ಆಕೆಯನ್ನು ಆಕ್ಷೇಪಿಸಿದರು. ಆದರೂ ಸರೋಜ ನಳಿನಿಯು ಮಾತ್ರ ತಾನು ಹಾಗೆ ಬಂದುದು ಅನುಚಿತವೆಂದು ಕೊಂಡು ಪಶ್ಚಾತ್ತಾಪಪಡಲಿಲ್ಲ.

ಸರೋಜ ನಳಿನಿಯಲ್ಲಿ ಮೃದುಭಾವದೊಂದಿಗೆ ದೃಢಚಿತ್ತವೂ, ಸೌಂದರ್ಯ ಪ್ರೀತಿಯೊಂದಿಗೆ ಕಾರ್ಯೋತ್ಸಾಹವೂ, ಸೌಜನ್ಯದೊಂದಿಗೆ ಕಾರ್ಯತತ್ಪರತೆಯೂ, ಧೈರ್ಯದೊಂದಿಗೆ ಲಜ್ಜೆಯೂ, ಸತ್ವಾಪೇಕ್ಷಕಗಳಾದ ಆಟಗಳ ಮೇಲಿನ ಆಸಕ್ತಿಯೊಂದಿಗೆ ಸ್ತ್ರೀಸಹಜವಾದ ಸೌಕುಮಾರ್ಯವೂ, ವಿನೋದಾಭಿಲಾಷೆಯೊಂದಿಗೆ ಶುದ್ಧಾಂತಃಕರಣವೂ, ಗೃಹಿಣಿಗಿರಬೇಕಾದ ಜಾಣ್ಮೆಯೊಂದಿಗೆ ನಾಜೂಕೂ, ರಸಿಕತೆಯೊಂದಿಗೆ ಮಿತವ್ಯಯವೂ, ಸರಳತೆ ಯೊಂದಿಗೆ ಒಳ್ಳೆಯ ಅಭಿರುಚಿಯೂ, ಸ್ವದೇಶವಾತ್ಸಲ್ಯದೊಂದಿಗೆ ಅನ್ಯ ದೇಶವನ್ನು ದ್ವೇಷಿಸುವಷ್ಟರ ಸ್ವದೇಶ ಪ್ರೇಮಾಂಧತೆ ಇಲ್ಲದಿರುವುದೂ, ಪ್ರಾಚೀನ ಸಂಪ್ರದಾಯದ ಅಭಿಮಾನದೊಂದಿಗೆ ಸಮಾಜ ಸಂಸ್ಕರಣದಲ್ಲಿ ಆಸಕ್ತಿಯೂ, ಜನರಲ್ಲಿ ಸೌಹಾರ್ದದಿಂದ ಸೇರಬೇಕೆಂಬ ಕುತೂಹಲ ದೊಂದಿಗೆ ಉಜ್ವಲವಾದ ನಿರ್ದೋಷ ಭಾವವೂ, ಯೋಗ್ಯರೀತಿಯಲ್ಲಿ ಬೆರೆತು ಶೋಭಿಸುತ್ತಿದ್ದುವು. ಹೆಚ್ಚೇಕೆ? ಒಟ್ಟಿನಲ್ಲಿ ಪಾಶ್ಚಾತ್ಯ ಸ್ತ್ರೀಯ ರಲ್ಲಿಯೂ ಭಾರತೀಯ ಸ್ತ್ರೀಯರಲ್ಲಿಯೂ ಕಾಣಬಹುದಾದ ಅತ್ಯುತ್ತಮ ಗುಣಾತಿಶಯಗಳೆಲ್ಲ ಆಕೆಯಲ್ಲಿ ಸಮ್ಮಿಳಿತವಾಗಿದ್ದುವು.

ಸರೋಜ ನಳಿನಿಗೆ ಮದ್ಯಪಾನವು ಸಂಪೂರ್ಣವಾಗಿ ಸರಿಬೀಳುತ್ತಿರ ಲಿಲ್ಲ. ಆ ದುರಭ್ಯಾಸವು ನನ್ನಲ್ಲಿಲ್ಲವಲ್ಲಾ ಎಂದು ಆಕೆಯು ಬಹಳ

ಸಂತೋಷಪಡುತ್ತಿದ್ದಳಲ್ಲದೆ, ನನ್ನನ್ನು ಅದಕ್ಕಾಗಿ ಬಹಳ ಕೊಂಡಾಡು ತ್ತಿದ್ದಳು. ಆಕೆಗೆ ಚುಟ್ಟಾ ವಾಸನೆಯೆಂದರೆ ಅಸಹ್ಯ. ನಾನು ಇಂಗ್ಲೆಂಡಿನಲ್ಲಿ ಕೇಂಬ್ರಿಡ್ಜ್ ಎಂಬ ಸ್ಥಳದಲ್ಲಿ ಇದ್ದಾಗ ಚುಟ್ಟಾ ಸೇದುವುದನ್ನು ಅಭ್ಯಾಸ ಮಾಡಿದ್ದೆನಾದ್ದರಿಂದ ಇಂಡಿಯಾದಲ್ಲೂ ಮಿತವಾಗಿ ಚುಟ್ಟಾ ಸೇದು ತ್ತಿದ್ದೆನು. ಆದರೆ ನನ್ನ ಮದುವೆಯಾದ ಬಳಿಕ, ಆಕೆಗೆ ಅದು ಇಷ್ಟವಿಲ್ಲ ವೆಂಬುದನ್ನರಿತು ಆ ದುರಭ್ಯಾಸವನ್ನು ಬಿಟ್ಟುಬಿಟ್ಟೆನು. ಆಕೆಯು "ನಿಮಗೆ ಪುರುಷರೊಂದಿಗೆ ಕಲೆಯಲು ಅದು ಆವಶ್ಯಕವಾಗಿದ್ದರೆ, ಅಥವಾ ನಿಮಗೆ ಅದು ಸಂತೋಷವನ್ನುಂಟುಮಾಡುವುದಾಗಿದ್ದರೆ ನೀವು ಚುಟ್ಟಾ ಸೇದುವುದನ್ನು ನಾನು ಆಕ್ಷೇಪಿಸುವುದಿಲ್ಲ" ಎಂದು ನನ್ನೊಡನೆ ಹೇಳು ತ್ತಿದ್ದಳು. ಆದುದರಿಂದ ನನ್ನ ಸ್ನೇಹಿತರು ಬಹಳವಾಗಿ ಬಲಾತ್ಕಾರ ಮಾಡಿದರೆ ಯಾವಾಗಲಾದರೂ ಒಂದೊಂದು ಸಮಯದಲ್ಲಿ ಅದನ್ನು ಸೇದುತ್ತಿದ್ದೆನು. ಅದಕ್ಕೆ ಆಕೆಯು ಆಕ್ಷೇಪಿಸುತ್ತಿರಲಿಲ್ಲ. ಆದರೆ ನಾನು ಅದನ್ನು ಒಂದು ಅಭ್ಯಾಸವಾಗಿ ಇಟ್ಟುಕೊಳ್ಳದೇ ಇದ್ದುದನ್ನು ಕಂಡು ಆಕೆಯು ಸಂತೋಷಿಸುತ್ತಿದ್ದಳು.

ನಮ್ಮ ಮದುವೆಯು ನಡೆದ ಕೆಲವು ದಿವಸಗಳ ಮೇಲೆ ನಮಗೆ ಒಂದು ಆಹ್ವಾನವು ಬಂದಿತ್ತು. ಆದರೆ ಅದನ್ನು ಅಂಗೀಕರಿಸಿ ಅಲ್ಲಿಗೆ ಹೋಗಲು ನಮಗೆ ಅಷ್ಟು ಇಷ್ಟವಿರಲಿಲ್ಲ. ಆಹ್ವಾನವು ಬರುವುದಕ್ಕೆ ಮುಂಚಿತ ವಾಗಿಯೇ ಮತ್ತೊಂದು ಆಹ್ವಾನವನ್ನು ಒಪ್ಪಿಕೊಂಡು ಬಿಟ್ಟಿದ್ದೆವೆಂದು ಹೇಳಿಕಳುಹಿಸಿ ತಪ್ಪಿಸಿಕೊಳ್ಳೋಣವೆಂದು ಆಕೆಗೆ ತಿಳಿಸಿದೆನು. ಸರೋಜ ನಳಿನಿಯು ಈ ಮಾತನ್ನು ಕೇಳಿ ಆಶ್ಚರ್ಯಗೊಂಡು ನಾವು ಮತ್ತೆಲ್ಲಿಗೂ ಹೋಗಬೇಕಾದದ್ದಿಲ್ಲವೆಂಬುದನ್ನು ನನ್ನ ಗಮನಕ್ಕೆ ತಂದಳು. ಅದಕ್ಕೆ ನಾನು "ನನಗದು ತಿಳಿದಿದೆ. ಆದರೂ ನಾಗರಿಕರು ಒಂದು ಸ್ಥಳಕ್ಕೆ ಹೋಗಲು ಇಷ್ಟವಿಲ್ಲದಿದ್ದರೆ, ಮುಂಚಿತವಾಗಿಯೇ ಇನ್ನೊಂದೆಡೆಗೆ ಹೋಗ ಬೇಕೆಂದು ನೆಪ ಹೂಡುವುದು ಸಹಜ. ಇದಕ್ಕೆ ಆಂಗ್ಲೇಯರಲ್ಲಿ "ಬಿಳಿಯ ಸುಳ್ಳು"—ಎಂದರೆ ದುರುದ್ದೇಶವಿಲ್ಲದ ಸುಳ್ಳು—ಎನ್ನುವರು. ಇದ ರಿಂದೇನೂ ತಪ್ಪಿಲ್ಲ" ಎಂದೆನು. ಇಂಥಾ ಉತ್ತರವು ನನ್ನಿಂದ ಬಂದುದನ್ನು ಕೇಳಿ ಸರೋಜ ನಳಿನಿಗೆ ವ್ಯಥೆಯಾಯಿತೆಂಬುದು ಸ್ಪಷ್ಟವಾಗಿತ್ತು. ಆ ಕ್ಷಣ ದಲ್ಲಿ ಆಕೆಯ ಕಣ್ಣುಗಳಿಂದ ಹೊರಟ ನಿಂದೆಯ ನೋಟವನ್ನು ನಾನೆಂದಿಗೂ

ಮರೆಯೆನು. ಆಗ ಆಕೆಯು “ ಹಾಗಲ್ಲ; ಈ ಸುಳ್ಳಿಗೂ ಇತರ ಸುಳ್ಳಿಗೂ ವ್ಯತ್ಯಾಸವೇ ಇಲ್ಲ. ಯಾವ ಬಗೆಯ ಸುಳ್ಳನ್ನು ಹೇಳುವುದೂ ತಪ್ಪೇ. ಬಿಳಿಯ ಸುಳ್ಳಾದರೇನು, ಕರಿಯ ಸುಳ್ಳಾದರೇನು, ಸುಳ್ಳು ಹೇಗಿದ್ದರೂ ಸುಳ್ಳೇ” ಎಂದಳು.

ನಮಗೆ ಮದುವೆಯಾದ ಮೇಲೆ ಕೆಲವು ವರ್ಷಗಳಕಾಲ ನಮ್ಮಿಬ್ಬರಿಗೂ,—ನಮ್ಮ ಭಾವನೆಗಳಲ್ಲಿ ಮತ್ತು ನಮ್ಮ ದಿನಚರಿಯ ವ್ಯವಹಾರಗಳಲ್ಲಿ ಭೇದವಿದ್ದುದರಿಂದ,—ಪರಸ್ಪರ ಗೊತ್ತಿಲ್ಲದ ಹಾಗೆ ಒಂದು ವಿಧವಾದ ಮಾರ್ಪಾಟು ಉಂಟಾಯಿತು. ನಾನು ಆಗತಾನೆ ಇಂಡಿಯನ್ ಸಿವಿಲ್ ಸರ್ವಿಸ್ ಹುದ್ದೆಗೆ ಸೇರಿ ಯೂರೋಪಿನಲ್ಲಿ ಸಂಚಾರಮಾಡಿ ಇಲ್ಲಿಗೆ ಬಂದಿದ್ದೆನು. ನನಗೆ ಜಂಬವೂ ಸ್ವಲ್ಪ ದೊಡ್ಡಸ್ತಿಕೆಯೂ ಇತ್ತು. ಚಿಕ್ಕ ವಯಸ್ಸಿನಲ್ಲಿಯೇ ಪಾಶ್ಚಾತ್ಯ ದೇಶಗಳಲ್ಲಿ ಸಂಚಾರಮಾಡಿ ಬಂದಿದ್ದುದರಿಂದ ನನಗೆ ಹಿಂದೂ ದೇಶದ ಸಹಜವಾದ ನಡೆನುಡಿ ಮುಂತಾದುವುಗಳಲ್ಲಿ ವಿಶ್ವಾಸ ತಪ್ಪಿಹೋಗಿತ್ತು. ಎಲ್ಲಿ ತಿರುಗಿ ನೋಡಿದರೂ ಲೆಕ್ಕವಿಲ್ಲದ ನಮಸ್ಕಾರಗಳೂ, ಮರ್ಯಾದೆಗಳೂ ದೊರೆತು, ನನ್ನಲ್ಲಿ ಸ್ವಾಭಿಮಾನವೂ ಸ್ವಪ್ರತಿಷ್ಠೆಯೂ ಹೆಚ್ಚುವಂತೆ ಮಾಡಿದ್ದುವು.

ಸರೋಜ ನಳಿನಿಯು ಮಾತ್ರ ಹಿಂದೂ ದೇಶದ ಸ್ತ್ರೀಯರಿಗೆ ಇರಬೇಕಾದ ಗುಣಾತಿಶಯಗಳನ್ನೂ ಪದ್ಧತಿಗಳನ್ನೂ ಬಿಡದೆ ಆಚರಣೆಯಲ್ಲಿಟ್ಟುಕೊಂಡು, ನಿಗರ್ವಿಯಾಗಿದ್ದಳು. ಆಕೆಯು ಎಂದಿಗೂ ನನ್ನ ಉದ್ದೇಶಕ್ಕೆ ಪ್ರತಿ ಹೇಳುತ್ತಿರಲಿಲ್ಲ; ನನಗೆ ಎದುರು ಮಾತನಾಡಿದವಳೂ ಅಲ್ಲ. ಅದಕ್ಕೆ ಪ್ರತಿಯಾಗಿ ಆಕೆಯು ನನ್ನ ಇಷ್ಟದಂತೆ ನಾನು ನಡೆಯಲು ಅಡ್ಡಿಪಡಿಸದೆ ಇದ್ದಳು. ಮತ್ತು ನನ್ನನ್ನು ಸಂತೋಷಪಡಿಸಲು ನನ್ನ ಇಷ್ಟಾನುಸಾರವಾಗಿ ಆಕೆಯೂ ನಡೆಯಲು ಯತ್ನಿಸುತ್ತಿದ್ದಳು. ಆದರೆ ಆ ಸಮಯದಲ್ಲೆಲ್ಲಾ ಆಕೆಯು ಸ್ಥಿರಬುದ್ಧಿಯಿಂದಲೂ, ನಯವಾದ ರೀತಿಯಿಂದಲೂ, ಒಳ್ಳೆಯ ನಡತೆಯಿಂದಲೂ, ನಿಧಾನವಾಗಿಯೂ, ಮೌನವಾಗಿಯೂ, ನನಗೇ ಗೊತ್ತಿಲ್ಲದಂತೆ ನನ್ನ ಆಗಿನ ಸ್ವಭಾವವನ್ನು ಮಾರ್ಪಡಿಸಿ ನೈಜವಾದ ನಡೆವಳಿಕೆಗೆ ತಂದುಬಿಟ್ಟಳು. ನನ್ನನ್ನು ಸಂತೋಷಗೊಳಿಸುವುದಕ್ಕಾಗಿ ಕೆಲವು ಕಾಲ ಇಂಗ್ಲಿಷ್ ಭಾಷೆಯಲ್ಲಿಯೇ ಮಾತನಾಡುತ್ತಿದ್ದಳು. ಮತ್ತು ತನ್ನ ತಲೆಯ ಕೂದಲನ್ನು ಪಾಶ್ಚಾತ್ಯ

ದೇಶದವರಂತೆ ಬಾಚಿಕೊಳ್ಳುತ್ತಿದ್ದಳು. ನಾನು ಹೇಳಿದುದಕ್ಕಾಗಿ ಒಬ್ಬ ಆಂಗ್ಲೇಯ ಸ್ತ್ರೀಯಲ್ಲಿ ನರ್ತನವನ್ನು (ಡಾನ್ಸ್) ಕಲಿಯುತ್ತಿದ್ದಳು. ಆದರೆ ಕ್ರಮೇಣ ಇಂಥ ಪದ್ಧತಿಗಳು ನಮ್ಮ ದೇಶದ ಜನರಿಗೆ ಅರ್ಹವಲ್ಲವೆಂಬುದನ್ನೂ ಅವು ನಮ್ಮವರಿಗೆ ಒಪ್ಪುವುದಿಲ್ಲವೆಂಬುದನ್ನೂ ಸ್ವಲ್ಪ ಸ್ವಲ್ಪವಾಗಿ ನನಗೆ ಮುಂದಟ್ಟಾಗುವಂತೆ ಮಾಡಿದಳು. ಅಂತು ಆಕೆಯ ಹಿತೋಪದೇಶವೇ ಗದ್ದಿತು. ಆಕೆಯು ನನ್ನನ್ನು ಪುನಃ ಭಾರತೀಯನನ್ನಾಗಿ ಮಾಡಿದಳು.

ಈ ಅನುಭವವು ನಮ್ಮ ಹಿಂದೂ ಸ್ತ್ರೀಯರ ಮನೋದಾರ್ಢ್ಯವನ್ನೂ, ಅವರ ಆಸ್ತಿಕತೆಯನ್ನೂ, ಅವರಲ್ಲಿ ರೂಢಮೂಲವಾಗಿರುವ ಸದ್ಗುಣಗಳನ್ನೂ ಚೆನ್ನಾಗಿ ತೋರ್ಪಡಿಸುತ್ತದೆ. ಅಲ್ಲದೆ ಆ ವಿಷಯಗಳಲ್ಲಿ ಯಾರಿಗಾದರೂ ಇರಬಹುದಾದ ಸಂದೇಹಗಳನ್ನೂ ಸಂಪೂರ್ಣವಾಗಿ ನಿವಾರಣೆಮಾಡುತ್ತದೆ.

ಬುದ್ಧಿಶಕ್ತಿಗೆ ಸಂಬಂಧಪಟ್ಟ ಪ್ರೌಢ ವಿಷಯಗಳನ್ನು ಸರೋಜ ನಳಿನಿಯು ಬಹು ಶ್ರದ್ಧೆಯಿಂದಲೂ, ಕುತೂಹಲದಿಂದಲೂ ಒಬ್ಬ ವಿದ್ಯಾರ್ಥಿನಿಯಂತೆ ನನ್ನಿಂದ ಹೇಳಿಸಿಕೊಂಡು ಕಲಿಯುತ್ತಿದ್ದಳು; ಆದರೆ ಸೌಶೀಲ್ಯ ಸಚ್ಚಾರಿತ್ರಗಳ ವಿಷಯದಲ್ಲಿ ಮಾತ್ರ ನಿಜವಾಗಿಯೂ ಆಕೆಯೇ ನನಗೆ ಗುರುವೆಂಬಂತೆ ಅನೇಕ ವಿಚಾರಗಳನ್ನು ನನಗೆ ಕಲಿಸುತ್ತಿದ್ದಳು. ನಾನು ಯಾವ ಸ್ಥಳಕ್ಕೆ ವರ್ಗವಾಗಿ ಹೋದರೂ ಕೂಡ ಜನರಲ್ಲಿ ಉದ್ಯೋಗ ದರ್ಪದ ಪ್ರಭಾವಕ್ಕಿಂತ ಹೆಚ್ಚಾಗಿ ಆಕೆಯು ಜನರಲ್ಲಿಟ್ಟಿದ್ದ ಗಾಢವಾದ ಪ್ರೀತಿ, ಅತಿಶಯವಾದ ಸಹಾನುಭೂತಿ, ಮನಸ್ತಾಪವಿದ್ದೆಡೆ ಸಮಾಧಾನವನ್ನೂ ಸ್ನೇಹವನ್ನೂ ಉಂಟುಮಾಡುತ್ತಿದ್ದ ಆಕೆಯ ಬುದ್ಧಿ ಕೌಶಲ — ಇವು ಜನರಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡುತ್ತಿದ್ದುವು.

ಅಸಮಾನವಾದ ಪರಿಶುದ್ಧಭಾವ, ಸ್ಥಿರಬುದ್ಧಿ ಮುಂತಾದ ಗುಣಾತಿಶಯಗಳು ಆಕೆಯಲ್ಲಿ ಹೇಗೆ ಆವಿರ್ಭವಿಸಿದ್ದುವೆಂಬುದನ್ನು ಕಂಡುಹಿಡಿಯಲು ನಾನು ಕೆಲವುವೇಳೆ ಪ್ರಯತ್ನಿಸಿದೆನು. ನನಗೆ ತಿಳಿದ ಮಟ್ಟಿಗೆ ಆಕೆಯಲ್ಲಿದ್ದ ಅಕೃತ್ರಿಮವಾದ ಮತ್ತು ಅವಿಚಲವಾದ ದೈವಭಕ್ತಿ, ಸ್ವಭಾವ

ಸಿದ್ಧವಾಗಿ ಆಕೆಯಲ್ಲಿ ನೆಲಸಿದ್ದ ಆಧ್ಯಾತ್ಮಿಕ ವಿಚಾರಗಳ ಮೇಲಿನ ಶ್ರದ್ಧೆ, ಮತ್ತು ಮನುಷ್ಯನ ಜೀವನದಲ್ಲಿ ಒಂದು ಗಹನವಾದ ಉದ್ದೇಶವಿರುವು ದೆಂಬುದರಲ್ಲಿಯೂ, ಮನುಷ್ಯನಿಗೆ ಜನ್ಮಾಂತರಗಳುಂಟೆಂಬುದರಲ್ಲಿಯೂ ಆಕೆಗಿದ್ದ ದೃಢವಾದ ನಂಬಿಕೆ—ಇವೇ ಕಾರಣಗಳೆಂದು ಹೇಳಬಹುದು. ಈ ಗುಣಗಳೇ ಆಕೆಯು ಅಷ್ಟು ನೈಜವಾಗಿಯೂ, ಆಡಂಬರವಿಲ್ಲದಂತೆಯೂ ದೃಢಸಂಕಲ್ಪವುಳ್ಳವಳಾಗಿಯೂ ಇರುವಂತೆ ಪರಿಣಾಮಗೊಳಿಸಿದ್ದುವು. ದೇಹವು ಹೋದಮೇಲೂ ಇರುವ ಅನಂತ ಜೀವನದಲ್ಲಿ ಈ ಇಹಲೋಕದ ಜೀವನವು ಕೇವಲ ಕ್ಷಣಮಾತ್ರದ ಅಲ್ಪಾಂಶವೆಂದು ಆಕೆಯು ಭಾವಿಸಿದ್ದಳು.

ಕಲ್ಕತ್ತೆಯ ವಿಶ್ವವಿದ್ಯಾನಿಲಯದಲ್ಲಿ ಧಾರ್ಮಿಕ ವಿಷಯಗಳ ಸಂಪರ್ಕವಿಲ್ಲದೆ ಲೌಕಿಕ ವಿಷಯಗಳನ್ನು ಮಾತ್ರವೇ ನಾನು ವ್ಯಾಸಂಗ ಮಾಡಿದ್ದುದರಿಂದಲೂ, ಹರ್ಬರ್ಟ್ ಸ್ಪೆನ್ಸರ್, ಡಾರ್ವಿನ್ ಮೊದಲಾದ ತತ್ತ್ವ ಜಿಜ್ಞಾಸುಗಳ ಸ್ವತಂತ್ರ ವಿಚಾರ ಮಾರ್ಗದ ಗ್ರಂಥಗಳನ್ನು ಓದಿದ್ದುದ ರಿಂದಲೂ, ನನ್ನ ಯೌವನದಲ್ಲಿಯೇ ನನಗೆ ಮತದಲ್ಲಿ ನಂಬಿಕೆ ತಪ್ಪಿದ್ದಿತು. ಸರೋಜ ನಳಿನಿಯಲ್ಲಾದರೋ, ಭಾರತೀಯ ಸ್ತ್ರೀಯರಿಗೆ ಪ್ರಾಣವಂತಿರುವ ದೈವಭಕ್ತಿಯೂ ಪಾರಮಾರ್ಥಿಕ ಬುದ್ಧಿಯೂ, ಗಾಢವಾಗಿಯೂ ತೀವ್ರ ವಾಗಿಯೂ ತುಂಬಿದ್ದುವು. ಆಕೆಯ ಈ ತೀವ್ರವೂ ಆಳವೂ ಆದ ದೈವ ಭಕ್ತಿಯ ಪ್ರವಾಹವು ನನ್ನ ಸಂಶಯಗಳನ್ನೆಲ್ಲ ತೊಲಗಿಸಿ ನನಗೂ ಭಕ್ತಿ ಹುಟ್ಟುವಂತೆ ಮಾಡಿತು. ನಮ್ಮಿಬ್ಬರಿಗೂ ಇದ್ದ ಮುಖ್ಯ ವ್ಯತ್ಯಾಸವು ಇಷ್ಟು: ನಾನು ಜೀವನದಲ್ಲಿ ನಿಷ್ಕರ್ಷೆಪಡಿಸಬೇಕಾದ ಅಂಶಗಳನ್ನು ಬುದ್ಧಿ ಶಕ್ತಿಯಿಂದಲೂ, ವಿಚಾರಶಕ್ತಿಯಿಂದಲೂ ಕೂಡಿ ಬಗೆ ಹರಿಸಲು ಯತ್ನ ಮಾಡುತ್ತಿದ್ದೆನು. ಆದರೆ ಆಕೆಯು ಭಕ್ತಿ ಪ್ರೇಮಗಳಿಂದ ಹಾಗೆ ಮಾಡಲು ಯತ್ನಿಸುತ್ತಿದ್ದಳು. ಕಷ್ಟವಾದ ಸಮಸ್ಯೆಗಳ ತೊಡಕು ನನ್ನ ತರ್ಕಕ್ರಮ ದಿಂದ ಇನ್ನೂ ಹೆಚ್ಚುತ್ತಿದ್ದಿತು. ಆದರೆ ಆಕೆಯ ಸರಳ ಮನಸ್ಸಿನ ಭಕ್ತಿ ಪ್ರೇಮ ಗಳ ಮಹಿಮೆಯಿಂದ ಅತಿ ಕ್ಲಿಷ್ಟವಾದ ವಿಷಯಗಳೂ ಸುಲಲಿತವಾಗಿ ಬಗೆಹರಿ ಯುತ್ತಿದ್ದುವು. ಆಕೆಯಿಂದ ನಾನು ಕಲಿತ ಮುಖ್ಯ ವಿಷಯವು ಇದು: ಜೀವ, ಆತ್ಮ, ದೈವ ಇವುಗಳ ನಿಜಾಂಶವು ಭಕ್ತಿಯಿಂದಲೂ ಪ್ರೇಮದಿಂದಲೂ ಗೋಚರವಾಗುವಂತೆ ತರ್ಕದಿಂದಲೂ ವಿಚಾರದಿಂದಲೂ ಗೋಚರವಾಗು ವುದಿಲ್ಲ.

ಸರೋಜ ನಳಿನಿಯು ಅನ್ಯರ ವಿಷಯದಲ್ಲಿ ತನಗಿದ್ದ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದಿದ್ದಳು. ಕಾಗದ ಬರೆಯುವುದರಲ್ಲಿಯೂ ಸಾಲಗಳನ್ನು ತೀರಿಸುವುದರಲ್ಲಿಯೂ ಆಕೆ ತನ್ನ ಜವಾಬ್ದಾರಿ ಬುದ್ಧಿಯನ್ನು ಚೆನ್ನಾಗಿ ತೋರ್ಪಡಿಸುತ್ತಿದ್ದಳು. ತನಗೆ ಒಂದು ಪತ್ರವು ಬಂದರೆ ಕೂಡಲೆ ಅದಕ್ಕೆ ಉತ್ತರ ಬರೆಯಬೇಕೆಂಬುದು ಆಕೆಯ ಇಚ್ಛೆ. ಉತ್ತರ ಬರೆಯಲು ಒಂದು ದಿವಸ ತಡವಾದರೂ ಆಕೆಯ ಮನಸ್ಸು ಶಾಂತವಾಗಿರುತ್ತಿರಲಿಲ್ಲ. ಆಕೆಯು ಸುಂದರವಾದ ಅಕ್ಷರಗಳಲ್ಲಿ ಚಿತ್ತಿಲ್ಲದೆ ಕಾಗದವನ್ನು ಬರೆಯುತ್ತಿದ್ದಳು; ಅಲ್ಲದೆ, ತನ್ನ ಹೃದಯದ ಭಾವನೆಗಳನ್ನೆಲ್ಲ ತನ್ನ ಪತ್ರಗಳಲ್ಲಿ ತುಂಬಿಬಿಡುತ್ತಿದ್ದಳು. ಆದಕಾರಣ ಆಕೆಯ ಪತ್ರಗಳನ್ನು ಅನೇಕರು ಭದ್ರವಾಗಿಟ್ಟುಕೊಂಡು ಅವುಗಳನ್ನು ನೋಡಿ ನೋಡಿ ಆನಂದಿಸುತ್ತಿದ್ದಾರೆ.

ಆಕೆಯು ಯಾವಾಗಲೂ ಸಾಮಾನುಗಳನ್ನು ನಗದಾಗಿ ಹಣಕೊಟ್ಟೇ ಕೊಂಡುಕೊಳ್ಳಲು ಇಷ್ಟಪಡುತ್ತಿದ್ದಳು. ಯಾವಾಗಲಾದರೂ ಸಾಲವಾಗಿ ಕೊಂಡು ತರಬೇಕಾದ ಸಮಯ ಒದಗಿದರೆ ಕೊಡಬೇಕಾದ ಬಾಕಿಯನ್ನು ಕ್ರಯಪಟ್ಟಿ (ಬಿಲ್) ಬಂದೊಡನೆಯೇ ಸ್ವಲ್ಪವೂ ಸಾವಕಾಶ ಮಾಡದೆ ಕೊಟ್ಟು ಹರಿಸಿಬಿಡುತ್ತಿದ್ದಳು. ಪ್ರತಿಯೊಂದು ತಿಂಗಳ ಆರಂಭದಲ್ಲಿಯೂ ಹಿಂದಿನ ತಿಂಗಳಿನ ಯಾವುದಾದರೊಂದು ಬಾಕಿಯು ಕೊಡದೆ ನಿಂತು ಹೋಗಿದ್ದರೆ ಆಕೆಯ ಮನಸ್ಸು ಎಂದಿಗೂ ಸಮಾಧಾನದಿಂದಿರುತ್ತಿರಲಿಲ್ಲ. ಕೆಲವು ಸಮಯಗಳಲ್ಲಿ ವರ್ತಕರೇ ಕ್ರಯಪಟ್ಟಿಗಳನ್ನು ಕಳುಹಿಸದೆ ಕೂಡಿಸಿಟ್ಟುಕೊಂಡಿದ್ದರೆ, ಆಕೆ ತಾನಾಗಿಯೇ ಅವರ ಅಂಗಡಿಗಳಿಗೆ ಹೋಗಿ ಪ್ರತಿಯೊಂದು ತಿಂಗಳಿನ ಕೊನೆಯಲ್ಲಿಯೂ ಅವರವರ ಕ್ರಯಪಟ್ಟಿಗಳನ್ನು ತಪ್ಪದೆ ಕಳುಹಿಸುತ್ತಿರಬೇಕೆಂದು ಹೇಳಿ ಬರುತ್ತಿದ್ದಳು. ಇದು ವರ್ತಕರಿಗೆ ನೂತನವಾಗಿತ್ತು. ಈ ವಿಷಯದಲ್ಲಿ ನಾನೂ ಆಗಾಗ್ಗೆ ಆಕೆಗೆ "ವರ್ತಕನು ತಾನೇ ಬಾಕಿ ಪಟ್ಟಿಯನ್ನು ಕಳುಹಿಸದೆ ತಡೆದಿರುವಾಗ, ಅದಕ್ಕೆ ಹಣ ಕೊಡಲು ನೀನು ಏತಕ್ಕೆ ಇಷ್ಟು ಪ್ರಯಾಸಪಡುತ್ತೀಯೋ ಕಾಣೆ. ಬಾಕಿ ಹಣವನ್ನು ನಾವು ಎಷ್ಟು ಸಾವಕಾಶವಾಗಿ ಕೊಡುತ್ತೇವೆಯೋ ಅಷ್ಟು ನಮಗೆ ಅನುಕೂಲವಲ್ಲವೆ" ಎನ್ನುತ್ತಿದ್ದೆನು. ಅದಕ್ಕೆ ಆಕೆಯು—"ಏಕೆನ್ನುವುದು ನನಗೇ ಗೊತ್ತಿಲ್ಲ. ಆದರೆ ಕೊಂಡ ವಸ್ತುವಿಗೆ ಹಣವನ್ನು ಕೊಡದೆ ಒಂದು

ದಿವಸವಾದರೂ ಸಾಲವಿಟ್ಟುಕೊಂಡರೆ ನನ್ನ ಮನಸ್ಸು ಸಮಾಧಾನವಾಗಿರುವುದಿಲ್ಲ" ಎನ್ನುತ್ತಿದ್ದಳು.

ಮಹಿಳಾ ಸಂಘಗಳ ಸಭೆಗಳಲ್ಲಿ ಆಕೆಯು ಅಗ್ರಾಸನವನ್ನು ವಹಿಸಿದ ಎಲ್ಲ ಸಂದರ್ಭಗಳಲ್ಲಿಯೂ ತನ್ನ ಭಾಷಣವಾದ ಕೂಡಲೆ ಸ್ತ್ರೀಯರ ಸಂಘವು ಅಭಿವೃದ್ಧಿಹೊಂದಿ ಸ್ತ್ರೀಯರು ಏಳಿಗೆಯಾಗಲೆಂದು ಪ್ರಾರ್ಥಿಸುತ್ತಿದ್ದಳು. ದೇವರ ಅನುಗ್ರಹವನ್ನು ಪ್ರತಿಯೊಂದು ಕಾರ್ಯದಲ್ಲೂ ಈ ರೀತಿ ಆಕೆಯು ಬೇಡುತ್ತಿದ್ದಳು.

ನಾನು ಒಂದಾನೊಂದು ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯಾಗಿದ್ದಾಗ ಒಂದು ಸಾರಿ, ಪದ್ಮಾ ನದಿಯ ವಡವಲ್ಲಿರುವ "ಚಾರ್" ಎಂಬ ಮರಳು ದ್ವೀಪಗಳಿಗೆ, ಆ ಡಿಸ್ಟ್ರಿಕ್ಟಿನ ಡಾಕ್ಟರಾಗಿದ್ದ, ಆಂಗ್ಲೋ ಇಂಡಿಯನ್ ಪಂಗಡಕ್ಕೆ ಸೇರಿದ್ದ, ನಮ್ಮ ಸ್ನೇಹಿತರಾದ ಕ್ಯಾಪ್ಟನ್‌ರವರು—, ಅವರ ಪತ್ನಿ, ಇಬ್ಬರು ಪುತ್ರರು—ನಾವೆಲ್ಲರೂ ಬೇಟೆಯಾಡಲು ಹೋದೆವು. ನಾವು ಆ ನದಿಯನ್ನು ಒಂದು ಚಿಕ್ಕ ದೋಣಿಯಲ್ಲಿಯೇ ಎರಡು ಸಲ ದಾಟಬೇಕಾಗಿತ್ತು. ನಾವು ಹಿಂತಿರುಗಿ ಬರುವಾಗ, ಆ ನದಿಯನ್ನು ದಾಟುವ ಸ್ಥಳದ ಅಗಲ ಸುಮಾರು ಒಂದು ಮೈಲಿ ಇತ್ತು. ನಾವು ನದಿಯ ಮಧ್ಯಕ್ಕೆ, ಎಂದರೆ ಅರ್ಧಮಾರ್ಗದವರೆಗೆ, ಬಂದ ಕೂಡಲೇ ಬಿರುಗಾಳಿ ಎದ್ದಿತು. ದಕ್ಷಿಣ ಬಂಗಾಳ ದೇಶದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಇಂಥ ಬಿರುಸಾದ ಈಶಾನ್ಯದ ಗಾಳಿಯು ಬೀಸುವುದು ಸಾಮಾನ್ಯವಾದುದಲ್ಲದೆ, ಇದು ಆ ಕಡೆಗಳಲ್ಲಿ ದೊಡ್ಡದೊಡ್ಡ ನದಿಗಳ ಮೇಲೆ ಚಿಕ್ಕಚಿಕ್ಕ ದೋಣಿಗಳಲ್ಲಿ ಪ್ರಯಾಣಮಾಡುವವರಿಗೆ ವಿಪರೀತವಾಗಿ ಅಪಾಯಕ್ಕೂ ಭೀತಿಗೂ ಕಾರಣವಾಗಿರುತ್ತದೆ. ಗಾಳಿಯ ಹೊಡೆತದಿಂದ ನದಿಯಲ್ಲಿ ಮಹತ್ತರವಾದ ದೊಡ್ಡದೊಡ್ಡ ಅಲೆಗಳೆದ್ದುವು. ಆ ಅಲೆಗಳ ಹೊಡೆತದಿಂದ ಆ ಚಿಕ್ಕದೋಣಿಯು ಮರು ನಿಮಿಷದಲ್ಲಿಯೇ ತಲೆಕೆಳಗಾಗುವುದೋ ಎಂಬಂತೆ ಇರಲು, ಅದನ್ನು ಕಂಡು ನನಗೂ ಕ್ಯಾಪ್ಟನ್‌ರವರಿಗೂ ನಿಜವಾಗಿಯೂ ಬಹಳ ಭಯವಾಯಿತು. ಆ ಕ್ಯಾಪ್ಟನ್‌ರವರ ಪತ್ನಿಯವರು ಬಹಳವಾಗಿ ಭಯಪಟ್ಟು ಅಳುವುದಕ್ಕೂ ಸಹ ಆರಂಭಿಸಿಬಿಟ್ಟರು. ಅಲ್ಲಿದ್ದವರಲ್ಲೆಲ್ಲ ಸರೋಜ ನಳಿನಿಯೊಬ್ಬಳೇ ತಾಳ್ಮೆಯಿಂದಲೂ ಶಾಂತಿಯಿಂದಲೂ ಕೂಡಿದ್ದವಳು. ಕಷ್ಟಕಾಲಗಳಲ್ಲಿ ಆಕೆಯು ಯಾವಾಗಲೂ ಮಾಡುತ್ತಿದ್ದಂತೆ ತನ್ನ ಕೈಗಳನ್ನು ಜೋಡಿಸಿ ಮೇಲಕ್ಕೆತ್ತಿ ಮೌನವಾಗಿ ಪ್ರಾರ್ಥನೆಯನ್ನು

ಮಾಡಿ, ಮಂದಹಾಸದಿಂದ ನಮ್ಮೆಲ್ಲರಿಗೂ ಸಮಾಧಾನವನ್ನು ಹೇಳಲಾರಂಭಿಸಿದಳು.

ಬಂಕೂರಾ ಪ್ರೌಢವಿದ್ಯಾಶಾಲೆಯ ಅಧಿಪತಿಗಳಾದ ರೆವರೆಂಡ್ ಎ. ಇ. ಬ್ರೌನ್, ಸಿ.ಐ.ಇ. ಅವರ ಪತ್ನಿಯೂ ವಿದ್ಯಾವತಿಯೂ ಆದ ಮಿಸೆಸ್ ಜೆರ್ಟ್ರೂಡ್ ಬ್ರೌನ್‌ರವರು ಸರೋಜನಳಿನಿಯನ್ನು ಚೆನ್ನಾಗಿ ಬಲ್ಲರು. ಸರೋಜನಳಿನಿಯ ವಿಚಾರವಾಗಿ ಆಕೆ ಹೀಗೆ ಬರೆದಿರುವರು :— "ನಾವಿಬ್ಬರೂ ಬೇರೆ ಬೇರೆ ಜನಾಂಗಕ್ಕೂ ಬೇರೆಬೇರೆ ಮತಕ್ಕೂ ಸೇರಿದವರಾದರೂ, ಹಿಂದೂ ಸ್ತ್ರೀಯರ ಏಳಿಗೆಗಾಗಿ ನಮಗಿರುವ ಶಕ್ತಿಯನ್ನೆಲ್ಲಾ ವಿನಿಯೋಗಿಸುವುದು ನಮ್ಮಿಬ್ಬರಿಗೂ ಸಮಾನ ಧರ್ಮವಾಗಿ, ನಾವು ಬಹಳ ಸ್ನೇಹದಿಂದಿದ್ದೆವು. ನಮ್ಮಿಬ್ಬರ ಸ್ನೇಹವು ೧೯೨೨ ರಿಂದ ಬೆಳೆದಿದ್ದರೂ ನಾನು ಆಕೆಯ ಹೆಸರನ್ನೂ ಕೀರ್ತಿಯನ್ನೂ ಹಿಂದೂದೇಶಕ್ಕೆ ನಾನು ಬರುವುದಕ್ಕೆ ಬಹುಕಾಲಕ್ಕೆ ಮುಂಚಿನಿಂದಲೇ, ಎಂದರೆ ೧೯೦೫ನೆಯ ಇಸವಿಯಿಂದಲೇ, ಕೇಳಿದ್ದೆನು. ಬಂಕೂರಾದಲ್ಲಿದ್ದ ನಮ್ಮ ಸ್ನೇಹಿತರೊಬ್ಬರು ರಜಾದ ಮೇಲೆ ಇಂಗ್ಲೆಂಡಿನಲ್ಲಿ ನಮ್ಮ ಮನೆಗೆ ಬಂದು ವಾಸಿಸುತ್ತಿದ್ದಾಗ ಅವರು ನಮಗೆ ಸರೋಜ ನಳಿನಿಯ ಭಾವಚಿತ್ರಗಳನ್ನು ತೋರಿಸಿ, ಈ ಭಾರತೀಯ ಯುವತಿಯು ಬಹು ಚೆನ್ನಾಗಿ "ಟೆನ್ನಿಸ್" ಚೆಂಡಾಟವನ್ನು ಆಡುವಳೆಂದು ನಮಗೆ ಹೇಳಿದ್ದರು. ೧೯೦೫ನೆಯ ಇಸವಿಯಲ್ಲಿ ಇದು ಬಹಳ ಅಪೂರ್ವವೇ ಸರಿ! ಈಗ ಆಕೆಯು ಪಡೆದಿರುವ ಯಶಸ್ಸಿಗೂ ಸ್ವಾರ್ಥರಹಿತವಾದ ಸೇವೆಗೂ ಸಾಧಕವಾಗುವ ಗುಣಗಳ ಸೂಚನೆ ಆಗಿನಿಂದಲೇ ಆಕೆಯಲ್ಲಿ ತೋರುತ್ತಿತ್ತು. ಆಕೆಯ ಯಾವ ಗುಣವು ನನ್ನ ಮನಸ್ಸನ್ನು ಆಕರ್ಷಿಸಿದ್ದಿತೆಂದು ನಾನು ನಿರ್ಧರಿಸಲು ಯತ್ನಿಸಿದಾಗ ನನಗೆ ಹೀಗೆ ತೋರಿತು:— ಸಾಮಾನ್ಯವಾಗಿ ಇಂಗ್ಲೆಂಡ್ ದೇಶದ ಹೆಂಗಸರಲ್ಲಿ ಮಾತ್ರ ಕಂಡುಬರುವ ಕಾರ್ಯಶ್ರದ್ಧೆಯೂ, ಹಿಡಿದ ಕೆಲಸವನ್ನು ಬಿಡದೆ ಶ್ರಮಿಸಿ ಸಾಧಿಸಿ ಪರಿಷ್ಕಾರವಾಗಿ ಕೊನೆಗಾಣಿಸುವ ಗುಣವೂ ಈಕೆಯಲ್ಲಿದ್ದುವಲ್ಲದೆ, ಇದರ ಜೊತೆಗೆ ಭಾರತೀಯ ಹೆಂಗಸರಿಗೆ ಅಲಂಕಾರಪ್ರಾಯವಾಗಿರುವ ಮರ್ಯಾದೆಯೂ, ಮಧುರತೆಯೂ ಆಕೆಯಲ್ಲಿದ್ದುವು; ತನ್ನ ಜನಾಂಗದ ಗುಣಗಳನ್ನು ತ್ಯಜಿಸದೆ ಮತ್ತೊಂದು ಜನಾಂಗದ ಗುಣಗಳನ್ನು ಪಡೆಯುವುದು ಸಾಧ್ಯವೆಂಬುದು ಅದರಿಂದ ವ್ಯಕ್ತವಾಯಿತು.

"ಸರೋಜ ನಳಿನಿಯವರು ನಿಜವಾಗಿಯೂ ಬಹಳ ಚೆನ್ನಾಗಿ "ಟೆನ್ನಿಸ್" ಚೆಂಡಾಟವನ್ನು ಆಡುತ್ತಿದ್ದರು. ಈ ಆಟವು ಆಂಗ್ಲೇಯರು ಆಡುವ ಆಟ. ಆ ದೇಶದ ಸ್ತ್ರೀಯರು ಲಂಗಗಳನ್ನೇ ಉಡುತ್ತಾರಾದುದ ರಿಂದ ಆಟವಾಡಲು ಸೌಲಭ್ಯವುಂಟು. ಸೀರೆಯನ್ನುಟ್ಟು ಆಡುವುದು ಲಂಗವನ್ನುಟ್ಟುಕೊಂಡು ಆಡುವುದಕ್ಕಿಂತ ಕಷ್ಟತರವಾಗಿಯೇ ಇರುವುದು. ಸರೋಜ ನಳಿನಿಯು ಲಂಗವನ್ನುಡದೆ ಸೀರೆಯನ್ನುಟ್ಟುಕೊಂಡೇ ಆಡು ತ್ತಿದ್ದರೂ ಆಕೆಯು ಬಹು ಚೆನ್ನಾಗಿಯೂ ಶ್ರದ್ಧೆಯಿಂದಲೂ ಆಡುತ್ತಿದ್ದರು. ನಮ್ಮಲ್ಲನೇಕರು ಆಕೆಯ ಚಾತುರ್ಯಕ್ಕೆ ಆಶ್ಚರ್ಯಪಡುತ್ತಿದ್ದೆವು. ಆಕೆಯ ಉದ್ಯಾನವನವನ್ನು ಕಂಡು ನಮ್ಮಲ್ಲಿ ಅನೇಕರಿಗೆ 'ನಮ್ಮ ಉದ್ಯಾನವನವು ಹೀಗಿಲ್ಲವಲ್ಲಾ'—ಎನ್ನಿಸುತ್ತಿತ್ತು. ಯಜಮಾನಿತಿ ಸೋಮಾರಿಯಾಗಿದ್ದು ಕೊಂಡು ತೋಟದ ಮಾಲಿಗೆ ಅಪ್ಪಣೆ ಮಾಡಿದರೆ ಆಗುವ ತೋಟವಾಗಿರಲಿಲ್ಲ ಅದು. ಮಾಲಿಯ ಸಹಾಯದ ಜೊತೆಗೆ ತಾನೇ ತನ್ನ ಕೈಗಳಿಂದಲೇ ಅನೇಕ ಘಂಟೆಗಳ ಕಾಲ ಕಷ್ಟ ಪಟ್ಟು ಕೆಲಸಮಾಡಿ ಆ ತೋಟವನ್ನು ಆಕೆಯು ಬೆಳಸಿದ್ದರು. ಅಲ್ಲದೆ ಆ ತೋಟದ ಮಾಲಿಯು ಸಹ ಆಕೆಯ ಕಾರ್ಯ ದಕ್ಷತೆಯನ್ನು ಮಾದರಿಯಾಗಿಟ್ಟುಕೊಂಡು ತಾನು ಇನ್ನೂ ಚೆನ್ನಾಗಿ ಕೆಲಸ ಮಾಡಬೇಕೆಂಬ ಆಶೆಯನ್ನು ಅವನಲ್ಲಿ ಆಕೆ ಉಂಟುಮಾಡಿದ್ದಳು. ಮನೆಯ ಹೊರಗಿನ ಎಲ್ಲ ಸಾಮಾಜಿಕ ಕಾರ್ಯಗಳನ್ನು ಮಾಡಿ ಕೊಂಡೂ, (ದತ್ತರವರ ಪತ್ನಿ) ಸರೋಜ ನಳಿನಿಯು ಚತುರೆಯಾದ ಗೃಹಿಣಿ ಯಾಗಿಯೂ, ಮಗುವನ್ನು ಉತ್ತಮರೀತಿಯಲ್ಲಿ ಸಾಕುವ ನಿಷ್ಠಳಾದ ತಾಯಿ ಯಾಗಿಯೂ ಇದ್ದರು. ಆಕೆಯ ಮನೆಯು ಚೊಕ್ಕಟವಾಗಿಯೂ, ಒಪ್ಪ ವಾಗಿಯೂ ಇರುವುದರಲ್ಲಿ ಮಾದರಿಯಾಗಿತ್ತು; ಮತ್ತು ಆಕೆಯ ಅಭಿ ರುಚಿಯು ಎಲ್ಲ ಸಂದರ್ಭಗಳಲ್ಲಿಯೂ ಸೊಗಸಾಗಿದ್ದಿತು. ದೇಹವನ್ನು ದೃಢಕಾಯವಾಗಿಟ್ಟಿರುವುದಕ್ಕಾಗಿ ಆಕೆಯು ಪ್ರಾತಃಕಾಲದಲ್ಲಿ ಸಂಚಾರ ಹೋಗುವುದನ್ನು ಪ್ರತಿನಿತ್ಯವೂ ನೋಡುತ್ತಿದ್ದೆವು. ಚಿತ್ರಲೇಖನ, ಹೊಲಿಗೆ ಮುಂತಾದ ಕೆಲಸಗಳನ್ನು ಮಾಡುವುದಕ್ಕೂ, ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರುವ ಅನೇಕ ಗ್ರಂಥಗಳನ್ನು ಓದುವುದಕ್ಕೂ ಆಕೆಯು ಹೇಗೋ ವಿರಾಮಮಾಡಿಕೊಳ್ಳುತ್ತಿದ್ದರು. ಅಲ್ಲದೆ, ಆಧುನಿಕ ವಿಚಾರಗಳನ್ನು ವೃತ್ತಾಂತ ಪತ್ರಿಕೆಗಳ ಮೂಲಕವೂ ಇತರ ರೀತಿ

ಯಿಂದಲೂ ಚೆನ್ನಾಗಿ ತಿಳಿಸುಕೊಂಡಿದ್ದರು. ಆಕೆಯು--ಪುರುಷರೇ ಆಗಲಿ, ಸ್ತ್ರೀಯರೇ ಆಗಲಿ, ಭಾರತೀಯರೇ ಆಗಲಿ, ಯೂರೋಪ್ ದೇಶದವರೇ ಆಗಲಿ—ಎಲ್ಲರಿಗೂ ಒಂದೇ ವಿಧವಾದ ಪ್ರೀತಿಯಿಂದಲೂ ಆದರದಿಂದಲೂ ಆತಿಥ್ಯವನ್ನೀಯುತ್ತಿದ್ದರು. ಆಕೆಯ ಸೊಬಗೂ ಗಾಂಭೀರ್ಯವೂ ಭಾರತೀಯ ಮತ್ತು ಆಂಗ್ಲೇಯ ಸಂಗಡಗಳವರಿಬ್ಬರಿಗೂ ಪರಸ್ಪರ ಒಂದು ವಿಧವಾದ ಸಹೋದರ ಭಾವವನ್ನು ಬೆಳಸಿತೆಂದು ನಾವು ತಿಳಿದಿದ್ದೆವು. ಹಿಂದೂ ಸ್ತ್ರೀಯರು ನವನಾಗರಿಕರಾಗಿ ಸ್ವಾತಂತ್ರ್ಯದಿಂದ ವರ್ತಿಸುವುದರಲ್ಲಿ ತಮ್ಮ ಸಹಜ ಗಾಂಭೀರ್ಯವನ್ನೂ ಸುಶೀಲವನ್ನೂ ಹಾಳುಮಾಡಿಕೊಳ್ಳು ತ್ತಾರೆಂದು ಫೋಷಾ ಹೆಂಗಸರನೇಕರು ನನಗೆ ಹೇಳಿರುವರು. ಆದರೆ ಸರೋಜ ನಳಿನಿಯ ವಿಷಯದಲ್ಲಿ ಮಾತ್ರ ಯಾರೂ ಯಾವ ಆಕ್ಷೇಪವನ್ನೂ ಮಾಡಿಲ್ಲ. ಸರೋಜ ನಳಿನಿಯಲ್ಲಿ ನನಗೆ ಕಂಡುಬಂದ ಮತ್ತೊಂದು ಹೆಚ್ಚು ವಿಷಯವು ಆಕೆಯ ಮೇಲ್ತರದ ಪ್ರಾಮಾಣಿಕತೆ ಮತ್ತು ಯಾವು ದನ್ನೂ ಮರೆಮಾಚದೆ ತಿಳಿಸಿಬಿಡುತ್ತಿದ್ದ ನಿಷ್ಕಾಪಟ್ಯ. ತನಗೆ ಒಪ್ಪಿಗೆ ಯಿಲ್ಲದ ವಿಷಯವಾದಲ್ಲಿ—ಅದು ಭಾರತೀಯರಿಗೆ ಸಂಬಂಧ ಪಟ್ಟಿರಲಿ, ಅಥವಾ ಯೂರೋಪಿಯನ್ನರಿಗೆ ಸಂಬಂಧಪಟ್ಟಿರಲಿ—ಆಕೆಯು ಧೈರ್ಯ ವಾಗಿ ಹೇಳಿಬಿಡುತ್ತಿದ್ದರು. ತನ್ನನ್ನು ಮುಖಸ್ತುತಿ ಮಾಡುವವರನ್ನು ಕಂಡರೆ ಆಕೆಗೆ ಅಸಹನೆ; ಆದಕಾರಣ ಆಕೆಯು ತಾನೂ ಇತರರನ್ನು ಮುಖ ಸ್ತುತಿಮಾಡುತ್ತಿರಲಿಲ್ಲ. ಆದಾಗ್ಗೂ ಶ್ಲಾಘನೆಗೆ ಅರ್ಹವಾದುದನ್ನು ಆಕೆಯೇ ಮೊದಲು ಶ್ಲಾಘಿಸುವರು. ಕಷ್ಟದಲ್ಲಿಯಾಗಲಿ ವ್ಯಥೆಯಲ್ಲಾಗಲಿ ಸಿಕ್ಕಿ ಕೊರಗುತ್ತಿರುವವರಲ್ಲಿ ಸಹಾನುಭೂತಿಯನ್ನು ತೋರಿಸಿ, ಅವರನ್ನು ಪ್ರೀತಿಯಿಂದಲೂ, ಆದರದಿಂದಲೂ ಕಾಣುತ್ತಿದ್ದರು.

"ಸರೋಜ ನಳಿನಿಯವರಿಗೆ ಬಹು ದೊಡ್ಡ ಉದ್ದೇಶಗಳಿದ್ದವು. ಸಾಧಾರಣವಾಗಿ ಭಾರತ ಸ್ತ್ರೀಯರಿಗೆ ಅವರವರ ಮನೆಯ ಕೆಲಸಗಳಿಂದ ಮಾತ್ರವೇ ತೃಪ್ತಿ. ಅವರಿಗೆ ಚಿಕ್ಕಂದಿನಿಂದಲೂ ಸ್ತ್ರೀಯರ ಮುಖ್ಯ ಧರ್ಮವು ಸೇವೆಯೆಂದು ಬೋಧಿಸಲ್ಪಡುವುದಾದರೂ, ಈ ಸೇವೆಯು ಗಂಡನ ಅಥವಾ ತನ್ನ ಸಂಸಾರದಲ್ಲಿರುವವರ ಇತರರ ಸೇವೆಯಲ್ಲಿಯೇ ಮುಕ್ತಾಯವಾಗುವುದು. ಸರೋಜ ನಳಿನಿಯವರಾದರೋ ಭಾರತ ಸ್ತ್ರೀಯ ರಪೈಕಿ ವಿಶಾಲ ಭಾವವುಳ್ಳ ಅತಿ ವಿರಳರಾದ ಕೆಲವರಲ್ಲಿ ಒಬ್ಬರಾಗಿದ್ದರು.

ಸೇವೆಯನ್ನು ತನ್ನವರಿಗೆ ಮಾತ್ರ ಮಾಡಿದಲ್ಲಿ ಅದೂ ಒಂದು ರೀತಿಯ ಸ್ವಾರ್ಥವೆಂದೇ ತಿಳಿದಿದ್ದರಲ್ಲದೆ, ಸೇವೆಯು ಇಷ್ಟ ಮಿತ್ರ ಬಂಧುಗಳಿಗೆ ಮಾತ್ರವಲ್ಲ, ಅಥವಾ ನಮ್ಮ ದೇಶಕ್ಕೆ ಮಾತ್ರವಲ್ಲ, ಸಮಸ್ತ ಪ್ರಪಂಚಕ್ಕೂ ಅನ್ವಯಿಸಬೇಕೆಂಬುದೇ ಅವರ ಉದ್ದೇಶವಾಗಿದ್ದಿತು. ಈ ಸೇವೆಗೆಲ್ಲ ಮೂಲವು ಪ್ರೀತಿಯೆಂಬುದನ್ನು ಆಕೆಯು ಅರಿತಿದ್ದರು. ಸ್ವಲ್ಪ ಮಾತ್ರವೂ ಶ್ರಮವನ್ನೆಣಿಸದೆ ಪ್ರೀತಿಯಿಂದಲೂ ಸ್ವಾರ್ಥರಹಿತವಾಗಿಯೂ ಆಕೆಯು ಸೇವೆ ಮಾಡುತ್ತಿದ್ದರು, ಸ್ವಲ್ಪ ಮಾತ್ರವೂ ಫಲಾಪೇಕ್ಷೆಯಿಲ್ಲದೆ ತಮ್ಮ ಮನಸ್ಸಂತೋಷಕ್ಕಾಗಿ ಮಾತ್ರವೇ ಸೇವೆ ಮಾಡುತ್ತಿದ್ದರು. ಆಕೆಯು ದಿವಂಗತರಾದ ಸಂಗತಿಯನ್ನು ನಾವು ಕೇಳಿದಾಗ, ಆಕೆಯಿಂದ ಸ್ಥಾಪಿತವಾದ ಮಹಿಳಾ ಸಂಘದ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರೆಲ್ಲರೂ ನಮ್ಮ ಮನೆಯಲ್ಲಿ ಕೂಡಿ, ಎಲ್ಲರೂ ಒಟ್ಟಿಗೆ ಅತ್ತೆವು. ಅಲ್ಲದೆ ಪ್ರತಿಯೊಬ್ಬರೂ—"ಆಕೆಯನ್ನು ನಾವು ಎಷ್ಟು ಪ್ರೀತಿಸುತ್ತಿದ್ದೆವೆಂಬುದನ್ನು ತೋರಿಸುವುದು ಇತರರಿಗೆ ಉಪಕಾರ ಮಾಡುವುದರಿಂದಲೇ ಸಾಧ್ಯ. ಅದನ್ನು ತೋರ್ಪಡಿಸಲು ನಾವು ಇತರರಿಗೆ ಏನು ಉಪಕಾರ ಮಾಡೋಣ? ಆಕೆಯು ಈಗಲೂ ನಮ್ಮೊಡನೆ ಸೇರಿದ್ದಾರೆಂದೇ ಭಾವಿಸಿ, ಆಕೆಯು ನಮ್ಮೊಡನೆ ಇದ್ದ ಪಕ್ಷಕ್ಕೆ ಕೆಲಸ ಮಾಡುತ್ತಿದ್ದಂತೆಯೇ ಇನ್ನು ಮುಂದೆಯೂ ನಡೆಯೋಣ, ಬನ್ನಿ"—ಎಂದು ಭಾಷಣಗಳನ್ನು ಮಾಡುವವರೇ ಆಗಿದ್ದೆವು. ಆದಕಾರಣ ಆಕೆಯ ವಿಷಯದಲ್ಲಿ

"ಬದುಕಿರುವಳವಳು, ಎಚ್ಚರಿರುವಳವಳು,
ಸತ್ತಿಹುದು ಸಾವು, ಸತ್ತಿಲ್ಲವವಳು"

ಎಂಬ ನುಡಿ ನಿಜವಾಗಿ ಅನ್ವಯಿಸುವಂತಿದೆ!"

---

## ಆರನೆಯ ಅಧ್ಯಾಯ

## ವಿವಾಹ ಧರ್ಮದ ಧ್ಯೇಯ

ಮದುವೆಯು ಒಂದು ಪವಿತ್ರ ಬಾಂಧವ್ಯವೆಂದು ಸರೋಜ ನಳಿನಿಯು ಭಾವಿಸಿದ್ದಳು. ನಮ್ಮ ಮದುವೆಯ ಮಂತ್ರವು ಅಚ್ಚಾಗಿತ್ತು. ಆದರ

ಒಂದು ಪ್ರತಿಯನ್ನು ಆಕೆ ತನ್ನ ಅಂತ್ಯಕಾಲದವರೆಗೂ ಭದ್ರಪಡಿಸಿಟ್ಟಿದ್ದಳು. ಆಕೆಯು ಆಗಾಗ್ಗೆ ಅದನ್ನು ತೆಗೆದು ಓದಿ ಆನಂದಿಸುತ್ತಿದ್ದಳು.

ನಮ್ಮ ಮದುವೆಗೆ ಕೆಲವು ತಿಂಗಳ ಹಿಂದೆ ಕಲ್ಕತ್ತೆಯಲ್ಲಿ ಆಕೆಯ ತಂದೆ ಒಂದು ಬಾಡಿಗೆ ಮನೆಯಲ್ಲಿದ್ದರು. ನಮ್ಮ ಮದುವೆ ಆ ಮನೆಯಲ್ಲಿ ನಡೆಯಿತು. ಆ ಬಳಿಕ ಆ ಮನೆಯ ಮುಂದೆ ನಾವು ಯಾವಾಗ ಹೋದಾಗಲೆಲ್ಲ ಆಕೆ "ನಾನು ಈ ಮನೆಯನ್ನು ಯಾವಾಗ ನೋಡಿದರೂ ನನಗೆ ಸಂಭ್ರಮವೂ ಆನಂದವೂ ಆಗದೆ ಇರದು. ನಮಗೆ ತಕ್ಕಷ್ಟು ಹಣ ಒದಗಿದಾಗ ನಾನು ಈ ಮನೆಯನ್ನು ಕೊಂಡು ನಮ್ಮ ಸ್ವಂತಮನೆಯನ್ನಾಗಿ ಮಾಡಿಕೊಳ್ಳಬೇಕು" ಎನ್ನುತ್ತಿದ್ದಳು.

ನಾನು ಕಾರ್ಯಾರ್ಥವಾಗಿ ಊರುಬಿಟ್ಟು ಎರಡುಮೂರು ದಿವಸ ಮಾತ್ರ ಹೋದರೂ ಆಕೆ ಪ್ರತಿನಿತ್ಯವೂ ನನಗೆ ಪತ್ರ ಬರೆಯುತ್ತಿದ್ದಳು. ಆಕೆಯ ಈ ಪದ್ಧತಿಯು ಎಂದಿಗೂ ತಪ್ಪಲಿಲ್ಲ. ೧೯೨೪ನೆಯ ಇಸವಿಯ ಸೆಪ್ಟೆಂಬರ್ ತಿಂಗಳಿನಲ್ಲಿ ಆಕೆಗಿಂತ ಮುಂಚಿತವಾಗಿಯೇ ನಾನು ಡಾರ್ಜಿಲಿಂಗ್ ನಗರಕ್ಕೆ ಹೋಗಬೇಕಾಯಿತು. ಆಗ ನಮ್ಮ ಹುಡುಗನ ಪಾಠಶಾಲೆಗೆ ಇನ್ನೂ ರಜ ಬಂದಿರಲಿಲ್ಲವಾದುದರಿಂದ, ಆಕೆ ಸ್ವಲ್ಪದಿವಸಗಳವರೆಗೆ ಕಲ್ಕತ್ತೆಯಲ್ಲಿ ನಿಲ್ಲಬೇಕಾಯಿತು; ಅನಂತರ ಆಕೆ ಡಾರ್ಜಿಲಿಂಗಿಗೆ ಬಂದಳು. ಈ ಕಾಲದಲ್ಲಿ ಒಂದು ದಿವಸ ನನ್ನ ಸ್ನೇಹಿತರಾದ ದಿವಂಗತ ನಡಿಯಾದ (Nadea ನವದ್ವೀಪ) ಮಹಾರಾಜ ಬಹದ್ದೂರ್ ಅವರ ಮನೆಗೆ ನಾನು ಹೋಗಿದ್ದಾಗ ನನ್ನ ಟಪ್ಪಾಲುಗಳು ಅಲ್ಲಿಗೆ ಬಂದುವು. ಆಗ ನಾನು ಆ ಕಾಗದಗಳನ್ನೆಲ್ಲಾ ತೆರೆದು ನೋಡಿ, ಬಂಗಾಳಿ ಭಾಷೆಯಲ್ಲಿ ೧೦-೧೨ ಹಾಳೆಗಳು ಬರೆದಿದ್ದ ಒಂದು ಕಾಗದವನ್ನು ಓದುತ್ತಲಿದ್ದೆನು. ಆ ಮಹಾರಾಜರು ಅಷ್ಟು ದೊಡ್ಡ ಕಾಗದವನ್ನು ನನಗೆ ಬರೆದವರಾರೆಂದು ಕೇಳಿದರು. ನನ್ನ ಪತ್ನಿಯು ಅದನ್ನು ಬರೆದಿರುವಳೆಂದು ನಾನು ಹೇಳಿದುದಕ್ಕೆ ಅವರು ಆಶ್ಚರ್ಯಪಟ್ಟರು. ನಾವಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟಿರುವಾಗ ಪ್ರತಿನಿತ್ಯವೂ ಒಬ್ಬರಿಗೊಬ್ಬರು ಕಾಗದವನ್ನು ಬರೆಯುತ್ತೇವೆಂದು ಹೇಳಿದೆನು. ಅವರಿಗೆ ಮತ್ತಷ್ಟು ಆಶ್ಚರ್ಯವಾಯಿತು. ಅದಕ್ಕವರು "ನಿಮಗೆ ಮದುವೆಯಾಗಿ ಹದಿನೆಂಟು ವರ್ಷಗಳು ಕಳೆದಮೇಲೂ ನಿಜವಾಗಿಯೂ ನೂತನ ವಧೂವರರಂತೆ ನೀವು ಒಬ್ಬರನ್ನೊಬ್ಬರು ಹೀಗೆ ಪ್ರೀತಿ

ಸುತ್ತಿದ್ದೀರಾ?" ಎಂದು ಕೇಳಿದರು. ಮಹಾರಾಜರು ಹೇಳಿದ್ದನ್ನು ಆಕೆಗೆ ನಾನು ಬರೆಯಲು, ಆಕೆ "ನನ್ನ ಪತಿ ನನಗೆ ಪ್ರತಿನಿತ್ಯವೂ ಕಾಗದ ಬರೆಯುತ್ತಾರೆಂಬುದು ಇತರರಿಗೆ ತಿಳಿಯಿತೆಂಬುದನ್ನು ಕೇಳಿ ನನ್ನ ಹೃದಯವು ಹೆಮ್ಮೆಯಿಂದ ತುಂಬಿತುಳುಕುತ್ತಿರುವುದು. ಬಸ್ತಾ (ಆಕೆಯ ತಮ್ಮ) ಯಾವಾಗಲೂ "ಈ ಪ್ರಿಯ ಯುಗಳವನ್ನು ನೋಡಿ!" ಎಂದು ಹೇಳಿ ನನ್ನನ್ನು ಹಾಸ್ಯ ಮಾಡುತ್ತಲೇ ಇರುವನು. ನನ್ನ ಅಂತ್ಯಕಾಲದವರೆಗೂ ನಾನು ನಿಮ್ಮ ಪ್ರೇಮವನ್ನು ಪಡೆದಿರುವಂತೆ ಮಾಡೆಂದು ದೇವರನ್ನು ಸದಾ ಪ್ರಾರ್ಥಿಸುತ್ತೇನೆ. ನನಗೆ ಇದಲ್ಲದೆ ಇನ್ನೇನೂ ಈ ಲೋಕದಲ್ಲಿ ಬೇಕಾಗಿಲ್ಲ" ಎಂದು ನನಗೆ ಉತ್ತರ ಬರೆದಳು.

ಸೆಪ್ಟೆಂಬರ್ ೨೩ನೆಯ ತಾರೀಖು ನಮಗೆ ಮದುವೆಯಾದ ದಿವಸ. ನಾನು ಮೇಲೆಹೇಳಿದ ಕಾರಣದಿಂದ ೧೯೨೪ನೆಯ ಇಸವಿಯಲ್ಲಿ ನಾನು ಡಾರ್ಜಿಲಿಂಗಿನಲ್ಲಿದ್ದಾಗ, ಆ ದಿವಸ ಆಕೆ ನನ್ನೊಡನೆ ಇರಲು ಅವಕಾಶವಾಗಲಿಲ್ಲ. ಆ ಶುಭ ದಿವಸದ ಜ್ಞಾಪಕಾರ್ಥವಾಗಿ ನಾನು ಕೆಲವು ಒಡವೆಗಳನ್ನು ಪಾರಿತೋಷಿಕವಾಗಿ ಕಳುಹಿಸಿಕೊಟ್ಟೆನು. ಅದರಲ್ಲಿ ಆಕೆಗೆ ಬೇಕಾದುದನ್ನು ಆರಿಸಿ ತೆಗೆದುಕೊಳ್ಳಬೇಕೆಂದು ಬರೆದಿದ್ದೆನು. ನಾನು ಆಕೆಗೆ ಬರೆದ ಕಾಗದದಲ್ಲಿ "ನಿನಗೆ ಸೆಪ್ಟೆಂಬರ್ ೨೩ನೆಯ ತಾರೀಖಿನ ದಿವಸವು ಜ್ಞಾಪಕವಿದೆಯೆ?" ಎಂದು ಕೇಳಿದ್ದೆನು. ಅದಕ್ಕಾಕೆ ಸೆಪ್ಟೆಂಬರ್ ೨೨ನೆಯ ತಾರೀಖಿನ ದಿವಸ "ನನ್ನ ಹೃದಯೇಶ್ವರ! ನನಗೆ ಆ ದಿವಸ ನೆನಪಿನಲ್ಲಿರದಿರುವುದೆ? ನಾನು ಆ ಶುಭ ದಿವಸವನ್ನು ಮರೆಯುವುದು ಎಂದಿಗಾದರೂ ಸಾಧ್ಯವೆ? ಈ ಕಾಗದ ನಿಮಗೆ ತಲಪುವ ದಿವಸ ನಿಮ್ಮ ಸರೋ (ನಾನು ಆಕೆಯನ್ನು ಪ್ರೇಮಪೂರ್ವಕವಾಗಿ 'ಸರೋ' ಎಂದು ಕರೆಯುತ್ತಿದ್ದೆನು) ನಿಮ್ಮನ್ನೇ ಸ್ಮರಿಸುತ್ತಿರುವಳು. ನಾಳೆಯ ದಿವಸ ತಾವು ನನ್ನೊಡನೆ ಇರುವುದಿಲ್ಲವಲ್ಲ ಎಂದು ನಾನು ಕೊರಗುತ್ತಿದ್ದೇನೆ. ಆದರೆ ನನ್ನ ಮುಂದಿನ ಜನ್ಮಗಳಲ್ಲೂ ನಾನು ನನ್ನ ಜೀವನದ ಬೆಳಕಾದ ತಮ್ಮನ್ನೇ ಕೈಹಿಡಿಯುವಂತೆ ಅನುಗ್ರಹ ಮಾಡಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಈ ದಿವಸಕ್ಕೆ ಹದಿನೆಂಟು ವರ್ಷಗಳಿಗೆ ಹಿಂದೆ ನಾನೊಬ್ಬ ಅಪರಿಚಿತರನ್ನು ಕೈಹಿಡಿಯಲಿಲ್ಲ. ನಾವಿಬ್ಬರೂ ಅನೇಕ ಜನ್ಮಗಳಿಂದ ದಂಪತಿಗಳಾಗಿದ್ದೇವೆಂದೂ, ಆ ಅನಂತ ಕಾಲದಿಂದ ತಾವು ನನ್ನವರೇ ಆಗಿರುವಿ

ರೆಂದೂ ನನ್ನ ನಂಬಿಕೆ. ನಮ್ಮ ವಿವಾಹದ ದಿನವು ಭೂಲೋಕದಲ್ಲಿ ಈ ಜನ್ಮದ ಸಂಬಂಧವನ್ನು ಸೂಚಿಸುವುದಾಗಿದೆ. ಆ ದಿವಸದ ಜ್ಞಾಪಕ್ಕಾಗಿ ತಾವು ಈ ಆಭರಣಗಳನ್ನು ಕಳುಹಿಸಿರುವಿರಿ. ನನಗೆ ಆಭರಣಗಳು ಬೇಕಾಗಿಲ್ಲ, ನೀವು ಮಾತ್ರ ಬೇಕು. ನಿಮ್ಮ ಸರೋ ನಿಮ್ಮನ್ನು ನಿಜವಾಗಿಯೂ ಸಂತೋಷಪಡಿಸಲು ಶಕ್ತಳಾಗಿರುವಳೆ?" ಎಂದು ಬರೆದಳು.

ಸೆಪ್ಟೆಂಬರ್ ೨೫ನೆಯ ತಾರೀಖಿನ ದಿವಸ ಆಕೆ "ನಿನ್ನೆ ನಾನು ಅವಸರದಲ್ಲಿ ತಮಗೆ ಒಂದು ಸಣ್ಣ ಕಾಗದವನ್ನು ಮಾತ್ರ ಬರೆಯಲು ಅನುಕೂಲಿಸಿತು. ನಾನು ಬರೆಯುತ್ತಿರುವಾಗ ನನ್ನ ತಂಗಿ ನೈನಾ ಅಲ್ಲಿಗೆ ಬಂದು ಕೂತಿದ್ದಳು. ಅವಳು ಅಲ್ಲಿ ಕುಳಿತಿರುವಾಗ ದೊಡ್ಡ ಕಾಗದವನ್ನು ಬರೆಯಲು ನನಗೆ ಧೈರ್ಯ ಬರಲಿಲ್ಲ. ನಾನು ತಮಗೆ ಕಾಗದವನ್ನು ಬರೆಯುತ್ತಿರುವಾಗ ಅವರೆಲ್ಲರೂ ನನ್ನನ್ನು ಕಾಡಿಸಿ ಹಾಸ್ಯಮಾಡುವುದು ತಮಗೆ ಗೊತ್ತೇ ಇದೆ. ತಮ್ಮ ೨೩ನೆಯ ತಾರೀಖಿನ ಪತ್ರವು ಈ ಸಾಯಂಕಾಲ ತಲಪಿತು. ಆ ಕಾಗದ ನನ್ನನ್ನು ನಿಶ್ಚಯವಾಗಿಯೂ ಆನಂದಗೊಳಿಸಿತು. ನಾನು ನಿಜವಾಗಿಯೂ ನಿಮ್ಮನ್ನು ಸಂತೋಷಪಡಿಸಿದ್ದೇನೆಯೇ, ಗುರುದೇವ? (ಆಕೆಯು ನನ್ನನ್ನು ಉಪಾಧ್ಯಾಯ ಮತ್ತು ಸ್ವಾಮಿ ಎಂಬ ಅರ್ಥದಲ್ಲಿ 'ಗುರುದೇವ' ಎಂದು ಕರೆಯುತ್ತಿದ್ದಳು.) ತಮ್ಮ ಕಾಗದವನ್ನು ಓದಿದಾಗಿನಿಂದ ನನ್ನ ಆತ್ಮಕ್ಕೆ ವಿಶೇಷವಾದ ಆನಂದವುಂಟಾಗಿದೆ. ನನ್ನ ಜೀವನವು ಅಪ್ರಯೋಜಕವಾಗಲಿಲ್ಲವಲ್ಲ? ನನ್ನ ಜೀವಕ್ಕಿಂತಲೂ ನನಗೆ ಪ್ರೀತಿಪಾತ್ರರಾದ ತಾವು ಸಂತೋಷದಿಂದಿರುವಿರೆಂಬುದನ್ನು ತಿಳಿಯಲು ನನಗೆ ಆಹಾ! ಎಷ್ಟು ಸಂತೋಷ! ಇದೇ ಅಲ್ಲವೆ ನನ್ನ ಜೀವನಕ್ಕೆ ದೊರೆಯಬಹುದಾದ ಉತ್ತಮ ಫಲ! ಯಾವಜ್ಜೀವವೂ ನನ್ನವರಾದ ಗುರುದೇವ, ನನಗಿನ್ನೇನೂ ಬೇಕಾಗಿಲ್ಲ. ನಾನು ಈ ಲೋಕದಲ್ಲಿರುವಾಗ ನನಗೆ ತಮ್ಮ ಪ್ರೇಮ, ನಾನು ಸಾಯುವಾಗ ನನ್ನ ತಲೆಯನ್ನು ತಮ್ಮ ಪಾದಗಳ ಮೇಲಿಟ್ಟುಕೊಂಡು ಪ್ರಾಣಬಿಡುವ ಸೌಖ್ಯ—ಇವೆರಡುಮಾತ್ರವಲ್ಲದೆ ನನಗಿನ್ನೇನು ಬೇಕು? ದೇವರಿಗೆ ನನ್ನದು ಇದೊಂದೇ ಪ್ರಾರ್ಥನೆ. ನಾನು ಪತಿವ್ರತೆಯಾಗಿದ್ದರೆ ಆತನು ಈ ಸೌಖ್ಯವನ್ನು ನನಗೆ ಕೊಡದೆ ಇರಲಾರನು. ಒಡವೆಗಳ ವಿಷಯದಲ್ಲಿ ನಾನು ತಮಗೆ ಮೊದಲೇ ಬರೆದಿರುವೆನು. ನಾನು ಅವುಗಳನ್ನು ನಿರಾಕರಿಸಿದೆನೆಂದು ನೊಂದುಕೊಳ್ಳಬೇಡಿ. ನಿಶ್ಚಯ

ವಾಗಿಯೂ ನನಗೆ ಅವು ಬೇಕಾಗಿಲ್ಲ. ನನಗೆ ನೀವಿರುವಾಗ ಇನ್ನು ಒಡವೆಗಳು ಏಕೆ ಬೇಕು? ಅವನ್ನು ನಾನು ಇಟ್ಟುಕೊಳ್ಳದೆ ಇದ್ದುದಕ್ಕೆ ನನ್ನನ್ನು ಕ್ಷಮಿಸಬೇಕೆಂದು ಬೇಡುತ್ತೇನೆ. ನನ್ನ ಕವಿ ಸದೃಶನಾದ ಪ್ರಿಯನ ರಮಣೀಯವಾದ ಮನೋಮಂದಿರದೊಳಕ್ಕೆ ಪ್ರವೇಶಿಸುವಷ್ಟು ಯೋಗ್ಯತೆ ನನಗಿತ್ತೆ? ಆಶ್ಚರ್ಯ! ಆದರೆ ನನಗೆ ಇಷ್ಟು ಗೊತ್ತಿದೆ:—ಆತನು ಯಾವಾಗಲೂ ನನ್ನ ಹೃದಯದ ಸುತ್ತ ಸುತ್ತಿಕೊಂಡಿರುವನು.

"ನೀವು ಕಳುಹಿಸಿದ ತಂತಿಯ ವರ್ತಮಾನವು ಸಕಾಲಕ್ಕೆ ಬಂದು ಸೇರಿತು. ನೀವು ಇದುವರೆಗೆ ನನಗೆ ಯಥೇಷ್ಟವಾಗಿ ಪಾರಿತೋಷಿಕಗಳನ್ನು ಕೊಟ್ಟಿರುವಿರಿ. ಆದರೆ ನಾನು ನಿಮಗೆ ಏನೂ ಕೊಡಲಾರೆ. ನನ್ನ ಸರ್ವಸ್ವವನ್ನೂ ತಮಗೆ ಆಗಲೇ ಕೊಟ್ಟಿರುವೆನೆಂಬುದನ್ನು ತಾವು ತಿಳಿದಿರುವಿರಿ. ನಾನಿನ್ನೇನನ್ನು ಕೊಡಲಿ? ನಾನು ಐಶ್ವರ್ಯವಂತಳಾಗಿದ್ದಿದ್ದರೆ ನಿಮಗೆ ಬೆಲೆ ಬಾಳುವ ಪಾರಿತೋಷಿಕಗಳನ್ನು ಕೊಂಡು ತರುತ್ತಿದ್ದೆ. ಆದರೆ ನಾನು ಹಣವಂತಳಲ್ಲ. ದಿನಗಳು ನಡೆಯುವುದು ಎಷ್ಟು ಸಾವಕಾಶ! ಅಕ್ಟೋಬರ್ ಮೊದಲನೆಯ ತಾರೀಖು ದೂರವಿರುವಂತೆ ತೋರುತ್ತಿದೆ! ನಿಮ್ಮ ಬಳಿ ಸೇರಲು ನಾನು ಆತುರಳಾಗಿದ್ದೇನೆ."

ಆ ಒಡವೆಗಳ ವಿಷಯವಾಗಿ ಆಕೆ ಸೆಪ್ಟೆಂಬರ್ ೨೩ ರಲ್ಲಿ ಈ ರೀತಿ ಬರೆದಳು:—"ನೀವು ಆ ಒಡವೆಗಳ ಮೇಲಿದ್ದ ಬೆಲೆ ಚೀಟಿಗಳನ್ನು ಅಳಿಸಿಬಿಟ್ಟಿದ್ದರೂ ನಾನು ಅದನ್ನು ಓದಬಲ್ಲೆ. ನಾನು ಅವುಗಳಲ್ಲಿ ಒಂದನ್ನೂ ಇಟ್ಟುಕೊಳ್ಳುವುದಿಲ್ಲ; ಅದಕ್ಕಾಗಿ ವ್ಯಸನಪಡಬೇಡಿ. ಈಚೆಗೆ ನಮ್ಮ ವೆಚ್ಚಗಳು ಬಹಳ ಹೆಚ್ಚಿವೆ. ಇಂಥ ಸಮಯದಲ್ಲಿ ನಾವು ಇಷ್ಟು ಹಣವನ್ನು ದುಂದು ವೆಚ್ಚಮಾಡುವುದು ಒಳ್ಳೆಯದೆ, ಗುರುದೇವ?"

ಅದಕ್ಕೆ ಉತ್ತರವಾಗಿ ನಾನು, ಅವು ಆಕೆಗೆ ನಾನು ಕೊಟ್ಟ ಬಹುಮಾನವಾದುದರಿಂದ ಅವುಗಳ ಬೆಲೆಯನ್ನು ಕುರಿತು ಆಕೆ ಯೋಚಿಸಕೂಡದೆಂದು ಬರೆದೆನು. ಅದಕ್ಕೆ ಆಕೆ "ಬೆಲೆ ವಿಷಯವನ್ನು ನಾನು ಬಹಳವಾಗಿ ಯೋಚಿಸಬೇಕಾಗಿದೆ. ಲಕ್ಷ್ಯವಿಲ್ಲದ ಹುಡುಗ, ನಿಮ್ಮ ಬ್ಯಾಂಕಿನ ಲೆಕ್ಕವನ್ನು ಚೆನ್ನಾಗಿ ಬಲ್ಲವರಾರು, ನೀವೋ, ನಾನೋ?" ಎಂದು ಉತ್ತರ ಬರೆದಳು.

ನಾನು ಯಾವ ಸಭೆಯಲ್ಲಿಯಾದರೂ ಭಾಷಣ ಮಾಡುವುದಕ್ಕೆಂದು ಹೊರಟಾಗ ಆಕೆ ನನ್ನೊಡನೆ ಬರಬೇಕೆಂದು ಒತ್ತಾಯ ಮಾಡುತ್ತಿದ್ದಳು. ೧೯೨೪ರ ಮಾರ್ಚಿ ತಿಂಗಳಲ್ಲಿ ಬಂಗಾಳದ ಶಾಸನ (ಲೆಜಿಸ್ಲೆಟಿವ್) ಸಭೆಯಲ್ಲಿ ಆಯವ್ಯಯ ಪಟ್ಟಿಯ ಚರ್ಚೆಯಾದಾಗ್ಗೆ ನಾನು, ಆ ಸರ್ಕಾರದ ಪ್ರಜಾರೋಗ್ಯದ ಇಲಾಖೆಯ ಸೆಕ್ರೆಟರಿಯಾಗಿದ್ದ ಕಾರಣ, ಆ ವಿಷಯವನ್ನು ಕುರಿತು ಭಾಷಣ ಮಾಡಿದೆನು. ಆಗ ನನಗೆ ಉತ್ತೇಜನ ಕೊಡುವುದಕ್ಕಾಗಿ ಸರೋಜ ನಳಿನಿಯು ಅಲ್ಲಿಗೆ ಬಂದು ಸ್ತ್ರೀಯರಿಗಾಗಿ ಏರ್ಪಡಿಸಿದ್ದ ಸ್ಥಳದಲ್ಲಿ ಕುಳಿತಿದ್ದಳು. ಒಂದು ಸಾರಿ ಡಾರ್ಜಿಲಿಂಗಿನಲ್ಲಿ ರಾಜಾರಾಮ ಮೋಹನ್ ರಾಯ್ ಅವರ ವಾರ್ಷಿಕೋತ್ಸವದ ಸಭೆಯಲ್ಲಿ ನಾನು ಅಗ್ರಾಸನವನ್ನು ವಹಿಸಬೇಕಾಯಿತು. ಆಗ ಆಕೆ ಬರುವುದಕ್ಕಾಗಲಿಲ್ಲವಾದುದರಿಂದ, ನನಗೆ "ನೀವು ಈ ದಿವಸ ರಾಮ ಮೋಹನರಾಯ್ ಅವರ ವಾರ್ಷಿಕೋತ್ಸವದಲ್ಲಿ ಅಗ್ರಾಸನವನ್ನು ವಹಿಸುವಿರಿ. ನಾನು ಅದನ್ನು ನೋಡಲು ಅಲ್ಲಿರುವುದಿಲ್ಲ. ಇಂಥಾ ಸಮಯದಲ್ಲಿ ನಾನು ಅಲ್ಲಿರುವುದಿಲ್ಲವಲ್ಲಾ ಎಂದು ಎಷ್ಟು ಮನಗುಂದಿರುವೆನೆಂಬುದನ್ನು ತಮಗೆ ವಿವರಿಸಲಾರೆ" ಎಂದು ಬರೆದಳು.

ನನಗೆ ದೇಹಾಲಸ್ಯವಾದಾಗ ನನ್ನನ್ನು ಉಪಚರಿಸುವುದು ತನಗೊಬ್ಬಳಿಗೇ ಸೇರಿದ ಒಂದು ವಿಶೇಷ ಹಕ್ಕೆಂದು ಆಕೆ ತಿಳಿದಿದ್ದಳು; ಮತ್ತು ಯಾವ ಕಾರಣದಿಂದಲಾದರೂ ಆ ಅವಕಾಶ ತನಗೆ ತಪ್ಪಿಹೋದರೆ ತನ್ನ ಹಕ್ಕುದಾರಿ ನಷ್ಟವಾದಂತೆ ಭಾವಿಸುತ್ತಿದ್ದಳು. ಮೇಲೆ ಹೇಳಿದ ಸಂದರ್ಭದಲ್ಲಿ ನಾನು ಡಾರ್ಜಿಲಿಂಗಿಗೆ ಹೋಗಿದ್ದಾಗ ಒಂದೇ ಒಂದು ದಿವಸ ನನಗೆ ಜ್ವರ ಬಂದಿದ್ದಿತು. ಆದನ್ನು ಆಕೆಯು ಕೇಳಿದೊಡನೆಯೇ "ನಿಮಗೆ ಜ್ವರ ಬಂದಿದ್ದಾಗ ನಿಮ್ಮನ್ನು ಉಪಚರಿಸಲು ನಾನು ಅಲ್ಲಿರಲಿಲ್ಲವಲ್ಲಾ ಎಂದು ಬಹಳ ವಿಷಾದವಾಗಿದೆ" ಎಂದು ನನಗೆ ಬರೆದಿದ್ದಳು.

---

## ಏಳನೆಯ ಅಧ್ಯಾಯ

## ಸಂಗೀತದಲ್ಲಿ ಪ್ರೀತಿ

ಸರೋಜ ನಳಿನಿಗೆ ಸಂಗೀತದಲ್ಲಿ ಬಹಳ ಪ್ರೀತಿ. ನಾನು ಮೊದಲೇ ಹೇಳಿರುವಂತೆ ಆಕೆ ಪಿಟೀಲು, ಎಸ್‌ರಾಜ್, ಸಿತಾರ್ ಮತ್ತು ಪಿಯಾನೋ

ವಾದ್ಯಗಳನ್ನು ನುಡಿಸುತ್ತಿದ್ದಳು. ಆಕೆ ಯಾವುದಾದರೊಂದು ಹೊಸ ಹಾಡನ್ನು ಒಂದು ಸಾರಿ ಕೇಳಿದ ಕೂಡಲೆ ಅದನ್ನು ಕಲಿತುಕೊಂಡುಬಿಡು ತ್ತಿದ್ದಳು. ನಮ್ಮ ಮದುವೆಯ ಕಾಲದಲ್ಲಿ ನನ್ನನ್ನು ಗಯಾಕ್ಕೆ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರ ಕೆಲಸಕ್ಕೆ ಹಾಕಿದ್ದರು. ಪ್ರಸಿದ್ಧ ನಾಟಕ ಲೇಖಕರೂ, ಕವಿಗಳೂ ಆದ ದ್ವಿಜೇಂದ್ರಲಾಲ್ ರಾಯ್ ಅವರು ಅಲ್ಲಿ ಸೀನಿಯರ್ ಡೆಪ್ಯುಟಿ ಮ್ಯಾಜಿಸ್ಟ್ರೇಟರಾಗಿದ್ದರು. ಅವರು ಸರೋಜ ನಳಿನಿಯಲ್ಲಿ ಹೆಚ್ಚು ಗೌರವವನ್ನಿಟ್ಟಿದ್ದರಲ್ಲದೆ ಆಕೆಗೆ ತಾವಾಗಿಯೇ ಹಾಡುವುದನ್ನು ಕಲಿಸಿ ಕೊಟ್ಟು, ತಮ್ಮ ಹಾಡಿಕೆಗೆ ವಾದ್ಯಗಳನ್ನು ನುಡಿಸುವುದನ್ನೂ ಹೇಳಿ ಕೊಟ್ಟರು. ಆಕೆಯ ಶಾರೀರವು ಇನ್ನೂ ಇಂಪಾಗುವಂತೆ ಸಂಗೀತ ಸಾಧಕ ಮಾಡಿಸಲು ಅವರು ಒಬ್ಬ ಸಂಗೀತದ ಉಪಾಧ್ಯಾಯರನ್ನು ಗೊತ್ತುಮಾಡಿ ಕೊಟ್ಟರು. ಅವರು ಆಗಾಗ್ಗೆ ತಮ್ಮ ಹಾಡುಗಳಲ್ಲಿ ಕೆಲವನ್ನು ನಮಗೆ ಹಾಡುತ್ತಿದ್ದರು. ಈಗ ಇಂಡಿಯಾ ದೇಶದ ಸಂಗೀತಗಾರರಲ್ಲಿ ಪ್ರಖ್ಯಾತಿ ಪಡೆದಿರುವ ಅವರ ಪುತ್ರ ದಿಲೀಪ್ ಕುಮಾರ್ ರಾಯ್ ಅವರೂ ಅವರ ಪುತ್ರಿ ಮಾಯಾದೇವಿಯೂ ಆಗ ಚಿಕ್ಕ ಮಕ್ಕಳಾಗಿದ್ದರು. ಆ ಮಕ್ಕಳು ಆಗಾಗ್ಗೆ ಅವರ ತಂದೆಯ ವಿನೋದದ ಹಾಡುಗಳನ್ನು ಹಾಡಿಯೂ, ಅದಕ್ಕೆ ತಕ್ಕಂತೆ ಅಭಿನಯಿಸಿ ತೋರಿಸಿಯೂ ನಮ್ಮನ್ನು ಆನಂದಪಡಿಸುತ್ತಿದ್ದರು. ಅನೇಕ ವರ್ಷಗಳ ಅನಂತರ ದ್ವಿಜೇಂದ್ರ ಲಾಲ್ ಅವರು ಕಲ್ಕತ್ತೆಯಲ್ಲಿದ್ದಾಗ, ಅವರು ರಚಿಸಿದ "ದುರ್ಗಾದಾಸ್" ಎಂಬ ನಾಟಕದ ಅಭಿನಯ ಕಾಲದಲ್ಲಿ ಒಂದು ದಿನ ರಾತ್ರಿ ನಾವು ಬರಬೇಕೆಂದು ಹೇಳಿ ಕಳುಹಿಸಿದ್ದರು. ಅವರು ರಚಿಸಿದ ಒಂದು ಪ್ರಸಿದ್ಧ ಗೀತವನ್ನು ಸರೋಜ ನಳಿನಿ ಬಹು ಪ್ರೀತಿಯಿಂದ ಆಗಾಗ ಹಾಡುತ್ತಿದ್ದಳು. "ನಗು ನಗುತ ಕಳೆಯಿರೀ ಧರೆಯ ಪ್ರವಾಸ ವನು"—ಎಂಬ ಪದಗಳಿಂದ ಆ ಹಾಡು ಪ್ರಾರಂಭವಾಗುತ್ತದೆ.

ದಿಲೀಪ್ ಕುಮಾರ್ ರಾಯ್ ಅವರೂ, ಅವರ ಸಹೋದರಿ ಮಾಯಾ ದೇವಿಯವರೂ ಸರೋಜ ನಳಿನಿಯು ತಮ್ಮ ತಂದೆಯ ಹಳೆಯ ಸ್ನೇಹಿತೆ ಯೆಂದು ಆಕೆಯನ್ನು ವಿಶೇಷ ಗೌರವದಿಂದ ಕಾಣುತ್ತಿದ್ದರು. ದಿಲೀಪ್ ಕುಮಾರ್ ರಾಯ್ ಅವರು ತಮ್ಮ ಸಂಗೀತ ಕಛೇರಿಗಳಿಗೆ ಬರಲು ಆಕೆಗೆ ಪ್ರತ್ಯೇಕವಾದ ಆಹ್ವಾನಗಳನ್ನು ಕಳುಹಿಸುತ್ತಿದ್ದರು. ನಾವು ವೀರಭೂಮಿ (ಬೀರ್ ಭೂಮ್) ಎಂಬಲ್ಲಿದ್ದಾಗ ಅದೇ ಜಿಲ್ಲೆಯ ಶಾಂತಿನಿಕೇತನದಲ್ಲಿದ್ದ

ರವೀಂದ್ರನಾಥ ಠಾಕೂರರವರ ಪಾಠಶಾಲೆಗೆ ನಾವು ಪದೇ ಪದೇ ಹೋಗುತ್ತಿದ್ದೆವು. ಠಾಕೂರರವರ ಮನೆಯ ಹೆಂಗಸರು ಸರೋಜ ನಳಿನಿಯಲ್ಲಿ ಬಹಳ ಪ್ರೀತಿಯನ್ನಿಟ್ಟಿದ್ದರಲ್ಲದೆ, ಆಕೆಯನ್ನು ಯಾವಾಗಲೂ ಸಂತೋಷದಿಂದ ಬರಮಾಡಿಕೊಳ್ಳುತ್ತಿದ್ದರು. ನಾವು ಒಂದು ದಿವಸ ಕವಿಶ್ರೇಷ್ಠರಾದ ರವೀಂದ್ರನಾಥ ಠಾಕೂರ್ ಅವರನ್ನು ಕಾಣಲು ಹೋಗಿದ್ದೆವು. ರವೀಂದ್ರನಾಥರವರ ಸಂಗೀತವನ್ನು ಕೇಳುವ ಸುಯೋಗವು ನಾನು ವಿದ್ಯಾರ್ಥಿಯಾಗಿದ್ದಾಗ ಲಭಿಸಿತ್ತೆಂದೂ, ಅವರು ಬಹು ಚೆನ್ನಾಗಿ ಹಾಡುತ್ತಿದ್ದರೆಂದೂ ನಾನು ಸರೋಜ ನಳಿನಿಗೆ ಹೇಳಿದ್ದ. ಆಕೆ ಅವರು ಹಾಡುವುದನ್ನು ಕೇಳಿರಲಿಲ್ಲವಾದುದರಿಂದ ಅದನ್ನು ಕೇಳಬೇಕೆಂದು ಬಹು ಕತೂಹಲ ಪಟ್ಟಳು. ಕವಿವರ್ಯರು ಮೊದಮೊದಲು ತಮ್ಮ ಕಂಠ ಯೌವನದಲ್ಲಿದ್ದಂತೆ ಇಲ್ಲವೆಂದು ಮುಂತಾಗಿ ಹೇಳಿ, ತಪ್ಪಿಸಿಕೊಳ್ಳಲು ಯತ್ನಿಸಿದರು. ಆಕೆ ಆ ಸಬಬು ಕೇಳುವುದಿಲ್ಲವೆಂದ ಬಳಿಕ ಅವರು ಎರಡು ಮೂರು ಹಾಡುಗಳನ್ನು ಹಾಡಿದರು. ಶಾಂತಿ ನಿಕೇತನದಲ್ಲಿರುವ ರವೀಂದ್ರ ನಾಥರವರ ಸಣ್ಣ ಮನೆಯ ಮಾಳಿಗೆಯ ಮೇಲೆ, ಆಕಾಶದ ನಿರುಪಾಧಿಕವಾದ ವಿತಾನದ ಕೆಳಗೆ, ಶುಭ್ರವಾದ ಬೆಳದಿಂಗಳಲ್ಲಿ ನಾವು ಕುಳಿತು, ಅವರ ಹಾಡುಗಳನ್ನು ಕೇಳುತ್ತಿರಲು ಅದು ಎಂದಿಗಿಂತಲೂ ಇಂಪಾಗಿಯೂ ಹೃದಯಂಗಮವಾಗಿಯೂ ಇತ್ತು. ಅವರ ಹಾಡಿನ ಜೊತೆಗೆ ವಾದ್ಯಗಳು ಯಾವುದೂ ಇರಲಿಲ್ಲ. ಅವರೇ ಕೈ ಚಪ್ಪಾಳೆಯಿಂದ ತಾಳ ಹಾಕುತ್ತಿದ್ದರು. ಅವರ ಹಾಡುಗಳಲ್ಲೊಂದು ಈ ಕೆಳಗೆ ಕಂಡಂತೆ ಪ್ರಾರಂಭವಾಗುತ್ತದೆ:—

“ ಎಲೊ ಮುರುಳಿ, ಬಾ ಬಾರೊ ;
ನಿನ್ನ ನೀ ಮರೆತುಕೊಳೊ. ”

ಈ ಹಾಡನ್ನು ಕೇಳಿ ಸರೋಜ ನಳಿನಿಯು ಬಹಳವಾಗಿ ಸಂತೋಷಿಸಿ, ಕವಿಯ ಬಂಧುಗಳೂ ನನ್ನ ಬಹಳ ಹಳೆಯ ಸ್ನೇಹಿತರೂ ಆದ ದಿನೇಂದ್ರನಾಥ ಠಾಕೂರ್ ಅವರಿಂದ ಅದಕ್ಕೆ ಸ್ವರವನ್ನು ಬರೆಯಿಸಿಕೊಂಡು ಅಭ್ಯಾಸ ಮಾಡಿದಳು. ಅದು ಆಕೆಗೆ ಬಹು ಇಷ್ಟವಾದ ಹಾಡುಗಳಲ್ಲೊಂದಾಗಿತ್ತು. ಅಂದಿನಿಂದ ಆಕೆ ಪ್ರತಿವಾರವೂ ಶಾಂತಿನಿಕೇತನದಲ್ಲಿ ದೇವಪ್ರಾರ್ಥನಾ ಸಭೆಗಳಲ್ಲಿ ಆಗುತ್ತಿದ್ದ ಕವಿವರ್ಯರ ಸಂಗೀತವನ್ನೂ ಅವರ ಭಾಷಣಗಳನ್ನೂ ಪದೇ ಪದೇ ಕೇಳುತ್ತಿದ್ದಳು.

ನಾವು ಜಪಾನ್ ದೇಶಕ್ಕೆ ಹೋಗಿದ್ದಾಗ ಕೋಬೆ ಎಂಬ ಊರಲ್ಲಿರುವ 'ಕೋಟೊ ಜೊಗಾಕೊ' (Koto-Jogakko) ಎಂಬ ಬಾಲಿಕಾ ಪಾಠ ಶಾಲೆಯನ್ನು ನೋಡಲು ಹೋಗಿದ್ದೆವು. ಅದರ ಅಧಿಕಾರಿಗಳು ಒಂದು ಹಿಂದೂ ದೇಶದ ಹಾಡನ್ನು ಹಾಡಬೇಕೆಂದು ಸರೋಜ ನಳಿನಿಯನ್ನು ಕೇಳಿ ಕೊಂಡರು. ಆಕೆಯು ಏಳುನೂರು ಜಪಾನ್ ಹುಡುಗಿಯರೆದುರಿಗೆ ಹಾಡ ಬೇಕಾಗಿತ್ತು. ಪಿಯಾನೋವನ್ನು ತಾನೇ ಬಾರಿಸುತ್ತ, ಅದಕ್ಕೆ ಸರಿಯಾಗಿ ಹಾಡಿದಳು. "ಹೇ ಜಗನ್ಮೋಹಿನಿ" ಎಂದು ಪ್ರಾರಂಭವಾಗುವ ಕವಿ ರವೀಂದ್ರ ನಾಥರವರ ದೇಶೀಯ ಗೀತವೊಂದನ್ನು ಹಾಡಿದಳು. ಅದನ್ನು ಕೇಳಿ ಅಲ್ಲಿ ಕೂಡಿದ್ದ ಏಳುನೂರು ಹುಡುಗಿಯರೂ ಸ್ತಬ್ಧರಾದರು. ಆ ಹಾಡನ್ನು ಹಾಡಿ ಮುಗಿಸಿದ ಕೂಡಲೇ ಅವರೆಲ್ಲರೂ ಆಕೆಯನ್ನು ಮತ್ತೆರಡು ಹಾಡುಗಳನ್ನು ಹೇಳುವಂತೆ ಕೇಳಿಕೊಂಡರು.

ರಾಷ್ಟ್ರಗೀತಗಳೆಂದರೆ ಸರೋಜ ನಳಿನಿಗೆ ಬಹು ಇಷ್ಟ. ನಾವು ಬಂಕೂರಾದಲ್ಲಿದ್ದಾಗ, ನಮ್ಮ ಮನೆಯಲ್ಲಿ ನಡೆದ ಒಂದು ಔತಣಕ್ಕೆ ಅತಿಥಿ ಗಳೆಲ್ಲರೂ ಆಂಗ್ಲೇಯರೇ ಬಂದಿದ್ದರು; ಆ ಜಿಲ್ಲೆಯ ಜಡ್ಜಿಯವರೂ, ಪೋಲೀಸ್ ಸೂಪರಿಂಟೆಂಡೆಂಟರವರೂ ಕೂಡ ಬಂದಿದ್ದರು. ಊಟವಾದ ಬಳಿಕ ನಮ್ಮ ಸಂಭಾಷಣೆಯು ರಾಷ್ಟ್ರಗೀತಗಳ ವಿಷಯಕ್ಕೆ ಬಂತು. "ಈಗ ಅಂಥಾ ಗೀತಗಳು ಹೆಚ್ಚಾಗಿ ಕೇಳಬರುತ್ತಿಲ್ಲ. ಕೊಂಚ ದಿನದ ಹಿಂದೆ "ಅಯಿ ಮಾತೃಭೂಮಿ" ಎಂಬುದು ಬಹು ಪ್ರಚಾರದಲ್ಲಿತ್ತು. ಅದು ಬಹಳ ರೇಗಿಸತಕ್ಕದ್ದು, ಅಲ್ಲವೆ?" ಎಂದು ಪೋಲೀಸ್ ಸೂಪರಿಂಟೆಂಡೆಂಟ್ ರವರು ಕೇಳಿದರು. "ನಿಮಗೆ ಆ ಹಾಡನ್ನು ಕೇಳಬೇಕೆಂಬ ಅಭಿಲಾಷೆ ಯಿದ್ದರೆ ನಾನು ಅದನ್ನು ಹಾಡಬಲ್ಲೆನು" ಎಂದು ಸರೋಜ ನಳಿನಿಯು ಹೇಳಿದಳು. ಈ ಮಾತನ್ನು ಕೇಳಿದ ಪೋಲೀಸ್ ಸೂಪರಿಂಟೆಂಡೆಂಟರವರು ಬೆರಗಾಗಿ, "ಏನು! ನೀವು ಈ ರಾಷ್ಟ್ರಗೀತಗಳನ್ನು ನಿಜವಾಗಿಯೂ ಹಾಡು ತ್ತೀರಾ?" ಎಂದು ಕೇಳಿದರು. ಅದಕ್ಕೆ ಆಕೆಯು "ಹೌದು, ನಾನು ಹಾಡಬಲ್ಲೆ. ಮತ್ತು ನನಗೆ ರಾಷ್ಟ್ರಗೀತಗಳ ಮೇಲೆ ಬಹಳ ಪ್ರೀತಿಯೂ ಉಂಟು. ನನಗೆ ಅವುಗಳಲ್ಲಿ ಪ್ರತಿಯೊಂದು ಹಾಡೂ ಬರುತ್ತದೆ. ತಾವು ಸೂಚಿಸಿದ ಆ 'ಅಯಿ ಮಾತೃಭೂಮಿ' ಎಂಬುದು ನನಗೆ ಬಹಳ ಪ್ರಿಯ ವಾದುದು' ಎಂದು ಹೇಳಿ, ಅದನ್ನೂ 'ವಂದೇ ಮಾತರಂ' ಎಂಬ ರಾಷ್ಟ್ರ ಗೀತವನ್ನೂ ಹಾಡಿದಳು.

ನಮ್ಮ ಹುಡುಗನ ಮತ್ತು ನನ್ನ ಹುಟ್ಟಿದ ದಿವಸಗಳನ್ನು ಪ್ರತಿ ವರ್ಷವೂ ಹಬ್ಬವಾಗಿ ಆಚರಿಸುವುದು ಆಕೆಯ ಪದ್ಧತಿ. ಆ ದಿನಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸಲು ತಕ್ಕ ಏರ್ಪಾಡು ಮಾಡುತ್ತಿದ್ದಳು. ಆ ದಿವಸಗಳಲ್ಲಿ ಆಕೆಯು ಪ್ರಾತಃಕಾಲದಲ್ಲಿ ಬೇಗನೆ ಎದ್ದು ಮನೆಯೆಲ್ಲ ವನ್ನೂ ಊಟದ ಮೇಜನ್ನೂ ಹೂವುಗಳಿಂದ ಸಿಂಗರಿಸುತ್ತಿದ್ದಳು. ಮೇಜಿನ ಮೇಲೆ ಪುಷ್ಪಗಳಿಂದಲೂ ಎಲೆಗಳಿಂದಲೂ ವಂಗಭಾಷೆಯಲ್ಲಿ "ವರ್ಷ ವರ್ಷವೂ ಈ ಸುದಿನವು ಆನಂದದಿಂದಲೂ ಪ್ರೀತಿಯಿಂದಲೂ ಒಡಗೂಡಿ ಹಿಂದಿರುಗಿ ಬರುತ್ತಿರಲಿ" ಎಂದು ತೋರುವ ಪದಗಳ ಆಕಾರ ಬರುವಂತೆ ತನ್ನ ಕೈಯಿಂದಲೇ ಅಲಂಕರಿಸುತ್ತಿದ್ದಳು.

ಅನಂತರ ನಮಗೆ ಪುಷ್ಪಹಾರಗಳನ್ನು ಹಾಕಿ, ನಮಗೆ ಹುಟ್ಟಿದ ಹಬ್ಬಕ್ಕಾಗಿ ಉಡುಗರೆಗಳನ್ನು ಕೊಟ್ಟು ದೇವರನ್ನು ಪ್ರಾರ್ಥಿಸುತ್ತಿದ್ದಳು. ಆ ದಿನ ತಾನೇ ಅಡಿಗೆಮಾಡಿ ಹಬ್ಬದ ಊಟವನ್ನು ಬಡಿಸುತ್ತಿದ್ದಳು. ನನ್ನ ಹುಟ್ಟಿದ ಹಬ್ಬದ ದಿವಸ ನನ್ನ ಕಾಲುಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿ, ಎದ್ದುನಿಂತು ಕೈ ಜೋಡಿಸಿ ವಂದಿಸುತ್ತಿದ್ದಳು.

ಆಕೆಯ ಮಗನ ಹುಟ್ಟಿದ ಹಬ್ಬದ ದಿನದಲ್ಲಿ ಈ ಕೆಳಗಿನ ಅಭಿಪ್ರಾಯ ವುಳ್ಳ ಹಾಡನ್ನು ಹಾಡಿ ಹರಸುತ್ತಿದ್ದಳು:—

ಮಗುವೆ ನೀನ್ ಈ ಹರಕೆಯನು ಕೊಳುವುದಿಂದು:
ದೀರ್ಘಾಯುವಾಗಿ ಸೌಖ್ಯದಲಿ ನೀಂ ಬಾಳು.
ನಿನ್ನ ಜೀವವು ದೇವ ನಿಯಮಕನುವಕ್ಕೆ.
ಪರಹಿತಾರ್ಥಕೆ ಸ್ವಾರ್ಥ ತಲೆಬಾಗಿ ನಡೆಗೆ.
ಸುಗುಣದೊಳಮ್ ಉನ್ನತ ಪ್ರಜ್ಞೆಯೊಳಮ್ ಎಂದುಂ
ಎತ್ತಲೆತ್ತಲುಮ್ ಅಮಲ ಯಶವ ನೀಂ ಗಳಿಸು.
ನೈಚ್ಯದುಷ್ಟತೆಗಳನು ನೀಂ ದೂರ ಬಿಟ್ಟು,
ನಿರ್ಭಯದ ಮನಸಿಂದೆ ಮುನ್ ಮುಂದೆ ಸಾರು.
ದಿವ್ಯತೇಜದಿ ನಡೆದು ಸದ್ಭಕ್ತಿಯಿಂದೆ
ವಿಜಯ ಮಾಲೆಗೆ ತಕ್ಕನಾಗು ನೀಂ, ಮಗುವೆ.

ಆಕೆಯು ಯಾವಾಗಲೂ ಸಮಯಕ್ಕೆ ಉಚಿತವಾದ ಹಾಡನ್ನು ಆರಿಸಿ ಹಾಡುತ್ತಿದ್ದಳು. ಬಂಗಾಳಿ ಭಾಷೆಯಲ್ಲಿ ಆಕೆ ಹೇಳುತ್ತಿದ್ದ ಒಂದು ಪುಟ

ಜೋಗುಳದ ಹಾಡು ನಿದ್ರಾದೇವಿಯ ಪರಿವಾರವನ್ನು ಸಂಬೋಧಿಸಿದ್ದು. ಅದರ ಭಾವ ಹೀಗಿತ್ತು:—

ಬನ್ನಿ, ಬನ್ನಿರಿ; ಎಲ್ಲರೂ ಬೇಗ ಬನ್ನಿ;
ಎಲ್ಲ ಹರಕೆಗಳ ನಿದ್ದೆಯ ಮನೆಗೆ ತನ್ನಿ.
ನಿಮಗಿಲ್ಲಿ ಕೂಡೆ ಮಣೆ ಮಂದಲಿಗೆಯಿಲ್ಲ;
ಈ ಹಸುಳೆ ಕಣ್ಣೆವೆಯೆ ಚಾಪೆ ನಿಮಗೆಲ್ಲ.
ಮೆಲುಗಾಳಿ, ಕಿರುತೆರೆಯ ಚಂದದಿಂ ಬಂದು
ಬೀಸು ಕಂದನ ಕಣ್ಗೆ ನಿದ್ದೆಯನು ತಂದು.
ಬನ್ನಿ, ಬನ್ನಿರಿ; ಎಲ್ಲರೂ ಬೇಗ ಬನ್ನಿ;
ಹೊರೆ ಹೊರೆಗಳಲಿ ನಿದ್ದೆಯನು ಹೊತ್ತು ತನ್ನಿ.
ಮುದ್ದು ಮಗು, ಈ ಕೆನ್ನೆಗಿಟ್ಟಿರುವೆ ಮುತ್ತ;
ಆ ಕೆನ್ನೆಗಿಡುವೆ, ನೀಂ ಬೇಗ ತಿರುಗತ್ತ.
ತೂಗಡಿಕೆ ತರುವ ಮುತ್ತುಗಳ ಮಧುವನ್ನು
ಕುಡಿದು ನೀಂ ಪಡೆಯೀಗ ಸುಖನಿದ್ರೆಯನ್ನು.

ಆಕೆಯ ಹಾಡುಗಳ ದಾಸ್ತಾನ ಅಪಾರವಾಗಿದ್ದದ್ದಲ್ಲದೆ, ಅವನ್ನು ಆಕೆ ಬಹು ಇಂಪಾಗಿ ಹಾಡುತ್ತಿದ್ದಳು. ಅವು ಇನ್ನೂ ನನ್ನ ಕಿವಿಗಳಲ್ಲಿ ಮೊಳಗುತ್ತ ನನ್ನ ಮನಸ್ಸಿನಲ್ಲಿ ಸಂತೋಷವನ್ನು ತುಂಬಿವೆ.

ಮಗುವು ಸ್ವಲ್ಪ ದೊಡ್ಡವನಾದ ಮೇಲೆ ಈ ರೀತಿಯಾದ ಅರ್ಥವುಳ್ಳ ಹಾಡುಗಳನ್ನು ಹಾಡುತ್ತಿದ್ದಳು:—

ಅಗೋ, ಚಂದ್ರ ಬಂದನು,
ಧರೆಗೆ ಮುದವ ತಂದನು.

ಇನ್ನು ಸ್ವಲ್ಪ ದೊಡ್ಡವನಾದ ಮೇಲೆ:

ಇದು ಪುಟ್ಟ ಮುದ್ದಾದ ಸುಳಿ ಸುಳಿವ ಹುಳುವು;
ಈ ಸಣ್ಣ ಜೀವವನು ನೋಯಿಸದೆ ಉಳಿಸು.

ಹುಡುಗನಾದ ಮೇಲೆ ಅವನಿಗೆ ಈ ತೆರದ ಸ್ತೋತ್ರಗಳನ್ನು ಕಲಿಸುತ್ತಿದ್ದಳು:

ನಿನ್ನ ನಿಜ ಭವನದಲಿ
ಪ್ರೇಮಮಯ ಗಮನದಲಿ
ನೀನೆಮ್ಮ ಕಾಯುತಿಹೆ
ನಲ್ಮೆಯೊಡೆಯ.

ಮಗುವಿನಲ್ಲಿ ದೇಶಾಭಿಮಾನವು ಹುಟ್ಟುವುದಕ್ಕಾಗಿ ಬಗೆ ಬಗೆಯ ರಾಷ್ಟ್ರ ಗೀತಗಳನ್ನೂ ಹಾಡುತ್ತಿದ್ದಳು. ಅವನಿಗೆ ಸಂಗೀತದಲ್ಲಿ ಅಭಿರುಚಿ ಹುಟ್ಟುವಂತೆ ಅನೇಕ ವಾದ್ಯಗಳನ್ನು ನುಡಿಸಲು ಹೇಳಿಕೊಟ್ಟಳು.

ನಾನು ಹಾಡಲು ಕಲಿಯುವಂತೆ ಪ್ರೋತ್ಸಾಹ ಕೊಡುತ್ತಿದ್ದಳಲ್ಲದೆ ನನ್ನ ಧ್ವನಿಗೆ ತನ್ನ ಧ್ವನಿಯನ್ನು ಹೊಂದಿಸಿ ಇಂಪಾಗಿ ಹಾಡುತ್ತಿದ್ದಳು. ನನ್ನ ಕೆಲಸಕ್ಕೂ ನಂಬಿಕೆಗೂ ಸ್ಫೂರ್ತಿ ಬಂದದ್ದು ಆಕೆಯ ಸಂಗೀತದಿಂದ. ಜೀವನವು ಸುಖಮಯವಾಗಿ ತೋರುವಂತಾದುದೂ ಆಕೆಯ ಸಂಗೀತದ ಸುಖಾನುಭವದಿಂದ. ಆಕೆಯು ಹಾಡುತ್ತಿದ್ದ ಗೀತಗಳಲ್ಲಿ ಕೆಲವು ಈ ಬಗೆಯ ಅರ್ಥವುಳ್ಳವು:—

ನೀಂ ಕರೆಯಲೊರ್ವನುಂ
ಬಾರದಿರಲಾಗ, ನೀ
ನೊರ್ವನೇ ಮುಂದೆ ನಡೆ
ಪಿಂತೆ ನಿಲದೆ.

ಮತ್ತು

ಎನ್ನ ಮುಳ್ ಅರಳುವುದು ಒಳ್ಳೆ ಮಲರಾಗಿ
ಎನ್ನ ನೋವ್ ತೋರ್ಪುದು ಗುಲಾಬಿ ರಂಗಾಗಿ.

ಆಕೆಯ ತಂದೆಯ ಜನ್ಮೋತ್ಸವದ ದಿನ ಮನೆಯನ್ನು ಅಲಂಕರಿಸುವುದರಲ್ಲಿಯೂ, ಸಂಗೀತದಲ್ಲಿಯೂ ಆಕೆಯೇ ಮುಖ್ಯ ಭಾಗವಹಿಸುತ್ತಿದ್ದಳು ಅನೇಕ ವರ್ಷಗಳ ಹಿಂದೆ, ಇಂಥ ಹಬ್ಬಗಳಲ್ಲೊಂದರಲ್ಲಿ ಆ ಕುಟುಂಬದವರು ರಾಮಾಯಣ ಕಥಾಂಶವಾದ "ಪ್ರಮೀಳೆಯ ಲಂಕಾ ಪ್ರವೇಶ" ಎಂಬ ನಾಟಕವನ್ನು ಆಡಿದರು. ಆಗ ಎಲ್ಲ ಪಾತ್ರಗಳನ್ನೂ ಆ ಕುಟುಂಬದವರೇ ವಹಿಸಿದ್ದರು. ಸರೋಜ ನಳಿನಿಯು ಮುಖ್ಯ ಪಾತ್ರವಾದ ಪ್ರಮೀಳೆಯ ವೇಷವನ್ನು ಧರಿಸಿ ಅಭಿನಯಿಸಿದಳು.

---

# ಎಂಟನೆಯ ಅಧ್ಯಾಯ

## ದೇಶಾಭಿಮಾನ

ಸರೋಜ ನಳಿನಿಯಲ್ಲಿ ದೇಶಾಭಿಮಾನವು ರೂಢಮೂಲವಾಗಿತ್ತು. ನಮ್ಮ ದೇಶದಲ್ಲಿ ತಯಾರಾದ ವಸ್ತುಗಳು ಸಿಕ್ಕುತ್ತಿದ್ದಾಗ, ಇತರ ದೇಶದ ವಸ್ತುಗಳನ್ನು ಆಕೆಯು ಕೊಳ್ಳುತ್ತಿರಲಿಲ್ಲ. ಸಾಧಾರಣವಾದ ಖಾದಿ ಬಟ್ಟೆಗಳನ್ನೇ ಕೊಂಡು ತಂದು ಅದರ ಮೇಲೆ ಚಿತ್ರ, ಬರೆದೂ, ಕಸೂತಿ ಹಾಕಿಯೂ ಸುಂದರವಾದ ಪರದೆಗಳನ್ನೂ ಮೇಜಿನ ಬಟ್ಟೆಗಳನ್ನೂ ಸಿದ್ಧ ಪಡಿಸುತ್ತಿದ್ದಳು. ಅವನ್ನು ನೋಡಿ ಎಲ್ಲರೂ ಮೆಚ್ಚುತ್ತಿದ್ದರು. ಮನೆಯನ್ನು ಅಲಂಕರಿಸಲು ಆಕೆಯು ಎಂದಿಗೂ ಪರದೇಶದ ಸಾಮಾನುಗಳನ್ನು ಕೊಳ್ಳುತ್ತಿರಲಿಲ್ಲ. ಆಕೆ ಸರ್ಕಾರಿ ಉದ್ಯೋಗಸ್ಥನ ಪತ್ನಿಯಾಗಿದ್ದರೂ, ನಾವು ಬಂಕೂರಾದಲ್ಲಿದ್ದಾಗ, ಅಲ್ಲಿಯ ಕಾಂಗ್ರೆಸ್ ಸಮಿತಿಯ ಸಹಾಯವನ್ನು ಪಡೆದು, ಗ್ರಾಮಾಂತರಗಳಲ್ಲಿರುವ ಮನೆಗಳಿಗೆ ಹೋಗಿ ಜನರಿಗೆ ಚರಕದಿಂದ ನೂಲು ತೆಗೆಯುವುದನ್ನು ಹೇಳಿಕೊಟ್ಟು ಬರುತ್ತಿದ್ದಳು.

ಹಿಂದೂ ದೇಶದ ವಸ್ತುಗಳಲ್ಲಿ ಆಕೆಯು ಇಟ್ಟಿದ್ದ ಈ ಬಗೆಯ ಪ್ರೀತಿಗಾಗಿ ಆಕೆಯ ಆಂಗ್ಲೇಯ ಸ್ನೇಹಿತರೆಲ್ಲರೂ ಆಕೆಯನ್ನು ಮೆಚ್ಚಿ, ಗೌರವಿಸುತ್ತಿದ್ದರು. ಆಕೆ ಆಗಾಗ್ಗೆ ಹೀಗೆ ಹೇಳುತ್ತಿದ್ದಳು:—"ನಮ್ಮ ದೇಶವು ಹೀನಸ್ಥಿತಿಗೆ ಬರಲು ಅನ್ಯದೇಶದವರೇ ಕಾರಣವೆಂದು ನಾನು ತಿಳಿದಿದ್ದೆನು. ಆದರೆ ನಾನು ಪರೀಕ್ಷಿಸಿಯೂ ಯೋಚಿಸಿಯೂ ನೋಡಿದ್ದರಲ್ಲಿ, ಅದಕ್ಕೆ ನಾವೇ ಮುಖ್ಯ ಕಾರಣರೆಂದು ಗೊತ್ತಾಗುತ್ತದೆ. ನಮ್ಮ ಜನರು ಉನ್ನತ ಸ್ಥಿತಿಗೆ ಬರಬೇಕೆಂದು ನಿಜವಾಗಿಯೂ ಪ್ರಯತ್ನಿಸಿದರೆ, ನಮ್ಮ ಕಷ್ಟವು ತಾನಾಗಿಯೇ ತೊಲಗುವುದು. ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ಬೇಕಾಗಿರುವುದು ಮೂರು ಅಂಶಗಳು. ಮೊದಲನೆಯದು ವಿದ್ಯೆ. ನಾವು ಇತರರಿಗೆ ವಿದ್ಯಾರ್ಜನೆಗೆ ಸಹಾಯ ಮಾಡುವುದಿರಲಿ; ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸಲು ಉಪಪತ್ತಿ ಇರುವವರು ಕೂಡ ಹಾಗೆ ಕಲಿಸುವುದಿಲ್ಲ. ಅದರಲ್ಲೂ, ಹೆಣ್ಣು ಮಕ್ಕಳನ್ನಂತು ಪಾಠಶಾಲೆಗೆ ಕಳುಹಿಸುವುದೇ ಇಲ್ಲ. ನಮ್ಮ ಸ್ವಭಾವದಲ್ಲಿರುವ ಈ ದೋಷವನ್ನು ನಿವಾರಣೆ ಮಾಡಿಕೊಳ್ಳಬೇಕು. ಎರಡನೆಯದೇನೆಂದರೆ, ಸಮಾಜ ಸೇವೆ. ಇದಕ್ಕೆ ನಮ್ಮ ನಮ್ಮ ಮನೆಗಳೇ ಸಜೀವ

ಗಳಾದ ಆದರ್ಶಗಳಾಗಬೇಕು. ನಾವು ನಮ್ಮ ಕುಟುಂಬದವರ ಸೌಖ್ಯ ಕ್ಕಾಗಿ ಮಾತ್ರ ದುಡಿದರೆ ಸಾಕೆಂದೂ, ಅಲ್ಲಿಗೆ ನಮ್ಮ ಕರ್ತವ್ಯ ಮುಗಿಯಿ ತೆಂದೂ ತಿಳಿದುಕೊಳ್ಳುವುದುಂಟು. ಅದು ಸಾಲದು. ನಮ್ಮ ಕುಟುಂಬ ಕ್ಕಾಗಿ ನಾವು ಪ್ರತಿನಿತ್ಯವೂ ಕೆಲಸ ಮಾಡಲೇ ಬೇಕು. ಇದು ಸಹಜ. ಆದರೆ ಅಷ್ಟಕ್ಕೇ ನಿಲ್ಲಿಸದೆ ಪ್ರತಿಯೊಬ್ಬ ಪುರುಷನೂ ಪ್ರತಿಯೊಬ್ಬ ಸ್ತ್ರೀಯೂ ತನ್ನ ಮಾತೃಭೂಮಿಯ ಹಿತವನ್ನು ಸಾಧಿಸುವುದಕ್ಕೋಸ್ಕರ ಸ್ವಲ್ಪಮಟ್ಟಿಗಾದರೂ ಕೆಲಸ ಮಾಡಲೇಬೇಕು. ನಮ್ಮಲ್ಲಿರುವ ಮೂರ ನೆಯ ದೋಷವೇನೆಂದರೆ ಪರಸ್ಪರ ಅಸೂಯೆ. ಈ ದುರ್ಗುಣವು ಇತರ ಜನಾಂಗಗಳಲ್ಲಿರುವುದಕ್ಕಿಂತ ನಮ್ಮ ದೇಶದಲ್ಲಿ ಹೆಚ್ಚಾಗಿರುವಂತೆ ತೋರು ತ್ತದೆ. ಇತರ ದೇಶಗಳ ಜನರು ಎಷ್ಟೇ ಒಳಕಲಹಗಳಿದ್ದರೂ ದೇಶದ ಸಾರ್ವಜನಿಕ ಹಿತದಲ್ಲಿ ಒಟ್ಟಾಗಿ ಸೇರುವರು. ಅವರಲ್ಲಿ ಯಾರಾದರೂ ಒಬ್ಬರು ಅದೃಷ್ಟವಶಾತ್ ಹಣವಂತರಾದರೂ ಅಥವಾ ಪ್ರಜಾಸೇವೆಯಿಂದ ಪ್ರಸಿದ್ಧಿಪಡೆದರೂ, ಅವರನ್ನು ಕಂಡು ಇತರರು ಅಸೂಯೆ ಪಡುವುದಿಲ್ಲ. ನಾವು ಜನಾಂಗದಲ್ಲಿ ಸಾರ್ವಜನಿಕ ದೃಷ್ಟಿಯನ್ನೂ, ಪರಸ್ಪರ ಸಹೋದರ ಭಾವವನ್ನೂ ವೃದ್ಧಿ ಮಾಡಿ, ಅವನ್ನು ಜನಾಂಗದ ದಿನಚರ್ಯೆಯಲ್ಲಿ ಆಚರಣೆಗೆ ತರಿಸಬೇಕು. ನಮ್ಮಲ್ಲಿ ಪ್ರತಿಯೊಬ್ಬ ಪುರುಷನೂ ಪ್ರತಿಯೊಬ್ಬ ಸ್ತ್ರೀಯೂ ಮನೆಯೊಳಗೂ ಹೊರಗೂ ಮೇಲೆ ಕಂಡ ಮೂರು ಅಂಶಗಳನ್ನೂ ನೆನಪಿನಲ್ಲಿಟ್ಟುಕೊಂಡು, ಆ ಮೂರು ಧ್ಯೇಯಗಳನ್ನೂ—ಎಂದರೆ ವಿದ್ಯಾ ಭ್ಯಾಸ, ಸಮಾಜಸೇವೆ ಮತ್ತು ಸಾರ್ವಜನಿಕ ಬುದ್ಧಿ ಇವುಗಳನ್ನು—ಸಾಧಿ ಸಲು ಪ್ರಯತ್ನ ಮಾಡುವುದು ತನ್ನ ಕರ್ತವ್ಯವೆಂದು ಭಾವಿಸಿರಲಿ.''

ಸ್ತ್ರೀಯರಿಗೆ ಚುನಾವಣೆಯಲ್ಲಿ ಅಭಿಮತಗಳನ್ನು ಕೊಡುವ ಅಧಿಕಾರ ಬರುವ ವಿಷಯದಲ್ಲಿ ಆಕೆ ಅಷ್ಟೇನೂ ಉತ್ಸಾಹವನ್ನು ತೋರಿಸುತ್ತಿರಲಿಲ್ಲ. ಈ ದೇಶದಲ್ಲಿ ಈಗ ಸ್ತ್ರೀಯರು ಇರುವ ಸ್ಥಿತಿಯನ್ನು ಸರಿಯಾಗಿ ಯೋಚಿಸಿ ನೋಡಿದರೆ, ಅವರಲ್ಲಿ ವಿದ್ಯಾ ಪ್ರಚಾರಕ್ಕೂ ಸಾಮಾಜಿಕ ವ್ಯವಹಾರಗಳಲ್ಲಿ ಸಂಸ್ಕರಣ ಮಾಡಿ ನವೀನ ಸುಧಾರಣೆಗಳನ್ನು ಆಚರಣೆಗೆ ತರುವುದಕ್ಕೂ ಸದ್ಯಕ್ಕೆ ಪ್ರಯತ್ನಿಸಬೇಕೇ ಹೊರತು, ಅವರೂ ಅಭಿಮತ ಕೊಡುವ ಅಧಿಕಾರ ಪಡೆಯುವಂತೆ ಪ್ರಯತ್ನಪಡುವುದು ಈಗ ಅವಶ್ಯ ವಲ್ಲ'' ಎಂದು ಆಕೆ ಹೇಳುತ್ತಿದ್ದಳು.

ತಾನು ಶಾಲೆಯಲ್ಲಿ ವಿದ್ಯೆ ಕಲಿಯಲಿಲ್ಲವೆಂದು ಆಕೆ ಜೀವಿಸಿರುವ ವರೆಗೂ ಪದೇ ಪದೇ ವ್ಯಥೆಪಡುತ್ತಿದ್ದಳು. "ಪಾಠಶಾಲೆಯಲ್ಲಿ ವಿದ್ಯೆ ಕಲಿಯುವ ಕಾಲವು ಹೆಣ್ಣು ಮಕ್ಕಳ ಜೀವನದಲ್ಲಿ ಚಿನ್ನದಂಥ ಕಾಲ; ಆ ವಯಸ್ಸಿನಲ್ಲಿ ಪ್ರತಿಯೊಬ್ಬ ಹುಡುಗಿಗೂ ಪಾಠಶಾಲೆಯಲ್ಲಿ ವಿದ್ಯೆ ಕಲಿಯಲು ಅವಕಾಶ ಕಲ್ಪಿಸುವುದು ನಮ್ಮ ಕರ್ತವ್ಯ" ಎಂದು ಆಕೆ ಹೇಳುತ್ತಿದ್ದಳು. ಪ್ರತಿಯೊಂದು ಗ್ರಾಮದಲ್ಲಿಯೂ ಕೊನೆಯ ಪಕ್ಷ ಒಂದನ್ನಾದರೂ ಹೆಣ್ಣು ಮಕ್ಕಳ ಪಾಠಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಆಕೆ ನಿರಂತರವಾಗಿ ದುಡಿಯುತ್ತಿದ್ದಳು. ನಾವು ಗ್ರಾಮಾಂತರಗಳಿಗೆ "ಸರ್ಕ್ಯೂಟ್" ಹೋದಾಗ ಜನರು ಸುಖಾಗಮನವನ್ನು ಬಯಸಿ ಬಿನ್ನವತ್ತಳಿಕೆಗಳನ್ನು ಒಪ್ಪಿಸಿದಾಗ ಆಕೆ ಈರೀತಿ ಉತ್ತರ ಹೇಳುತ್ತಿದ್ದಳು:—"ನಿಮ್ಮ ಗ್ರಾಮದಲ್ಲಿ ಹೆಣ್ಣು ಹುಡುಗರಿಗೊಂದು ಪಾಠಶಾಲೆಯನ್ನು ಸ್ಥಾಪಿಸಿ, ಅದಕ್ಕೊಬ್ಬ ಸ್ತ್ರೀಯನ್ನು ಉಪಾಧ್ಯಾಯಿನಿಯಾಗಿ ಏರ್ಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಪ್ರತಿಯೊಬ್ಬ ಹುಡುಗಿಯೂ ಅವಳ ಹದಿನಾಲ್ಕನೆಯ ಅಥವಾ ಹದಿನೈದನೆಯ ವಯಸ್ಸಿನವರೆಗಾದರೂ ಪಾಠಶಾಲೆಗೆ ಹೋಗುವಂತೆ ಮಾಡಿ. ನಿಮ್ಮ ಸ್ವಾಗತವೂ ಬಿನ್ನವತ್ತಳೆಯೂ ನನಗೆ ಕೊಡಬಹುದಾದ ಸಂತೋಷಕ್ಕಿಂತಲೂ ಇದು ನನಗೆ ಹೆಚ್ಚು ಸಂತೋಷವನ್ನುಂಟುಮಾಡುವುದು. ನಾನು ಇಲ್ಲಿಗೆ ಮತ್ತೊಂದು ಸಾರಿ ಬಂದಾಗ ನೀವು ನನ್ನ ಈ ಸಲಹೆಯನ್ನು ಕಾರ್ಯರೂಪಕ್ಕೆ ತಂದಿರುವುದನ್ನು ನೋಡುವೆನೆಂದು ನಂಬಿದ್ದೇನೆ"

ಆಕೆ ಈರೀತಿ ಮನಃಪೂರ್ವಕವಾಗಿ ಪ್ರಾರ್ಥಿಸುತ್ತಿದ್ದುದರ ಫಲವಾಗಿ ಅನೇಕ ಸ್ಥಳಗಳಲ್ಲಿ ಪಾಠಶಾಲೆಗಳು ಹೊಸದಾಗಿ ಸ್ಥಾಪಿತವಾದುವು. ಮತ್ತು ಮಕ್ಕಳನ್ನು ಪಾಠಶಾಲೆಗಳಿಗೆ ಕಳುಹಿಸಕೂಡದೆಂಬ ತಪ್ಪು ತಿಳಿವಳಿಕೆಯಿದ್ದ ಪೂರ್ವ ಸಂಪ್ರದಾಯದ ಹಿಂದುಗಳೂ ಕೂಡ ಆಕೆಯನ್ನು ಸಂತೋಷಪಡಿಸುವುದಕ್ಕಾಗಿ ತಮ್ಮ ಹೆಣ್ಣು ಮಕ್ಕಳನ್ನು—ಮದುವೆಯಾದ ಹೆಣ್ಣು ಹುಡುಗಿಯರನ್ನು ಸಹ—ಪಾಠಶಾಲೆಗೆ ಕಳುಹಿಸಲಾರಂಭಿಸಿದರು.

ಬಂಗಾಳ ಪ್ರಾಂತದ ಹೆಂಗಸರು ತಮ್ಮ ಹೆಣ್ಣು ಮಕ್ಕಳನ್ನು ಪ್ರಾಯಸ್ಥರಾಗುವವರೆಗೂ ಪಾಠಶಾಲೆಗೆ ಕಳುಹಿಸಲು ಒಪ್ಪದೆ ಇದ್ದುದನ್ನು

ಕಂಡು ಸರೋಜ ನಳಿನಿ ಬಹಳವಾಗಿ ಚಿಂತಿಸುತ್ತಿದ್ದಳು. ಆದಾಗ್ಯೂ ಹುಡುಗಿಯರ ವಿದ್ಯೆಗಾಗಿ ಸರಿಯಾದ ಸೌಕರ್ಯಗಳು ಇಲ್ಲದೆ ಇರುವುದೇ ಈ ಅಸಮ್ಮತಿಗೆ ಕಾರಣವೆಂದು ಆಕೆ ಚೆನ್ನಾಗಿ ತಿಳಿದಿದ್ದಳು. ಗ್ರಾಮಾಂತರ ಗಳಲ್ಲಿ ಹುಡುಗಿಯರ ಪಾಠಶಾಲೆಗಳಲ್ಲಿ ಸಾಮಾನ್ಯವಾಗಿ ಪುರುಷರೇ ಉಪಾಧ್ಯಾಯರುಗಳಾಗಿ ಇದ್ದರಲ್ಲದೆ, ಅವರು ಹೆಂಗಸರಿಗೆ ವಿದ್ಯೆ ಕಲಿಸುವ ರೀತಿಯನ್ನೂ ಅರಿಯದವರಾಗಿದ್ದರು. ಆ ಪಾಠಶಾಲೆಗಳ ಕಟ್ಟಡಗಳೂ, ಸಲಕರಣೆಗಳೂ ಬಹಳ ಹೀನಸ್ಥಿತಿಯಲ್ಲಿರುತ್ತಿದ್ದುವು. ಬೀರ್ ಭೂಮಿಗೆ ನಾವು ವರ್ಗವಾಗಿ ಹೋದಾಗ, ಅಲ್ಲಿಯ ಪಾಠಶಾಲೆಯು ಬಂಗಾಳದಲ್ಲಿ ಹಿಂದೆ ಲೆಫ್ಟಿನೆಂಟ್ ಗವರ್ನರಾಗಿದ್ದ ಸರ್ ರಿವರ್ಸ್ ಥಾಮ್‌ಸನ್‌ರವರ ದೊಡ್ಡ ಹೆಸರನ್ನುಳ್ಳದ್ದಾದರೂ, ದನದ ಕೊಟ್ಟಿಗೆಗಿಂತ ಸ್ವಲ್ಪವೂ ಮೇಲಲ್ಲದ ಒಂದು ಗುಡಿಸಲಿನಲ್ಲಿದ್ದಿತು. ಆ ಪಾಠಶಾಲೆಯ ಉಪಾಧ್ಯಾಯನು ಮುದುಕ ನಾಗಿಯೂ ತನ್ನ ಕರ್ತವ್ಯವನ್ನೇ ಅರಿಯದ ದಡ್ಡನಾಗಿಯೂ ಇದ್ದುದನ್ನು ಕಂಡು ಸರೋಜ ನಳಿನಿಯ ಮನಸ್ಸಿಗೆ ವ್ಯಾಕುಲವಾಯಿತು. ಆ ಊರಿನ ಹೆಂಗಸರಿಗೆ ತಮ್ಮ ಹುಡುಗಿಯರನ್ನು ಪಾಠಶಾಲೆಗೆ ಕಳುಹಿಸಿರೆಂದು ಹೇಳುವುದಕ್ಕೆ ಮೊದಲು ಆ ಪಾಠಶಾಲೆಯನ್ನು ವಿದ್ಯಾಶಾಲೆಯೆಂಬ ಹೆಸರಿಗೆ ತಕ್ಕಂತೆ ಸರಿಯಾದ ಸ್ಥಿತಿಗೆ ತರಬೇಕೆಂದು ಸರೋಜ ನಳಿನಿ ನಿಶ್ಚಯಿಸಿದಳು. ಅನುಕೂಲವಾದ ಕಟ್ಟಡವೊಂದನ್ನು ಕಟ್ಟಿಸಿಕೊಡುವಂತೆ ಅಲ್ಲಿಯ ರಾಜರನ್ನು ಒತ್ತಾಯಪಡಿಸಿದಳಲ್ಲದೆ, ಅದಕ್ಕೆ ಬೇಕಾದ ದ್ರವ್ಯ ಸಹಾಯವನ್ನು ಸರಕಾರದಿಂದ ಕೊಡಿಸುವಂತೆ ಆ ಪ್ರಾಂತದ ಕಮಿಷನರು ಅಲ್ಲಿಗೆ ಬಂದಿದ್ದಾಗ ಅವರನ್ನು ಒಡಂಬಡಿಸಿದಳು. ಆ ಪಾಠಶಾಲೆಯ ನಿರ್ವಾಹಕ ಸಮಿತಿಯನ್ನು ನನ್ನಿಂದ ಪುನರ್ವ್ಯವಸ್ಥೆ ಮಾಡಿಸಿದಳಲ್ಲದೆ, ಆ ಸಮಿತಿಯವರು ದೊಡ್ಡದೊಂದು ಜಮೀನನ್ನು ಕೊಂಡು, ಎರಡು ಅಂತಸ್ತು ಗಳ ಸುಂದರವಾದ ಕಟ್ಟಡವೊಂದನ್ನು ಕಟ್ಟುವವರೆಗೂ ಆಕೆ ಸುಮ್ಮನಾದವ ಳಲ್ಲ. ಆಕೆ ಪಾಠಶಾಲೆಗೆ ಸರ್ಕಾರದಿಂದ ಪ್ರತಿವರ್ಷವೂ ಮತ್ತಷ್ಟು ಹಣ ಬರುವಂತೆ ಏರ್ಪಾಟು ಮಾಡಿಸಿ, ಆ ಹಣದಿಂದ ಆ ಪಾಠಶಾಲೆಯ ವಿದ್ಯಾರ್ಥಿನಿಯರ ಸಂಚಾರ ಸೌಕರ್ಯಕ್ಕಾಗಿ ಮೋಟಾರ್ ಬಸ್ ಒಂದನ್ನು ಇಡಿಸಿ, ಮೊದಲಿದ್ದ ಉಪಾಧ್ಯಾಯರಿಗೆ ಬದಲಾಗಿ ಚೆನ್ನಾಗಿ ಶಿಕ್ಷಣ ಪಡೆ ದಿದ್ದ ಅರ್ಹರಾದ ಇಬ್ಬರು ಉಪಾಧ್ಯಾಯಿನಿಯರನ್ನು ಬರಮಾಡಿ, ಅವ

ರಿಗೆ ವಾಸಮಾಡಲು ಆ ಪಾಠಶಾಲೆಯ ಹೊಸ ಕಟ್ಟಡದ ಮಹಡಿಯಲ್ಲಿ ಸ್ಥಳವನ್ನೂ ಕೊಡಿಸಿದಳು. ಆಕೆ ಆ ಸ್ಥಳದಲ್ಲಿ ಮನೆ ಮನೆಗೂ ತಾನೇ ಹೋಗಿ, ಬಾಲೆಯರ ತಾಯಂದಿರನ್ನು ನೋಡಿ, ಅವರು ತಮ್ಮ ಹುಡುಗಿಯರನ್ನು ಪಾಠಶಾಲೆಗೆ ಕಳುಹಿಸುವಂತೆ ಉಪದೇಶಿಸಿ ಸಮ್ಮತಿ ಪಡಿಸಿದಳು. ಈ ಕಾರಣದಿಂದ ಮೂರು ನಾಲ್ಕು ತಿಂಗಳೊಳಗಾಗಿಯೇ ವಿದ್ಯಾರ್ಥಿನಿಯರ ಸಂಖ್ಯೆಯು ಮೊದಲಿದ್ದದ್ದರ ನಾಲ್ಕರಷ್ಟಕ್ಕೆ ಹೆಚ್ಚಿತು. ಆಕೆಯು ಆಗಿಂದಾಗ್ಗೆ ಸ್ವತಃ ಆ ಪಾಠಶಾಲೆಗೆ ಹೋಗಿ ಬರುತ್ತಲೂ, ಹೊಸ ಉಪಾಧ್ಯಾಯಿನಿಯರು ಮಾಡುತ್ತಿದ್ದ ಕೆಲಸಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಲೂ, ಗೃಹಕೃತ್ಯ ವಿಚಾರಗಳಲ್ಲಿ ಶಿಕ್ಷಣಕ್ಕೆ ಏರ್ಪಾಡು ಮಾಡುತ್ತಲೂ ಇದ್ದಳು. ವಿದ್ಯಾರ್ಥಿನಿಯರು ಓಡಾಡುವುದು ಹೊರಗಿನವರಿಗೆ ಕಾಣದಂತೆ ಮಾಡುವುದಕ್ಕೂ, ಬೆಳೆದಿರುವ ಹುಡುಗಿಯರನ್ನು ಪಾಠಶಾಲೆಗೆ ಕಳುಹಿಸಿಕೊಡಲು ಅವರ ಮಾತಾಪಿತೃಗಳಿಗೆ ಧೈರ್ಯವನ್ನುಂಟುಮಾಡುವುದಕ್ಕೂ, ಆಕೆಯು ಆ ಪಾಠಶಾಲೆಯ ಕಟ್ಟಡದ ಸುತ್ತಲೂ ಎತ್ತರವಾದ ಗೋಡೆಯನ್ನು ಹಾಕಿಸಿದಳು. ಇದರಿಂದಲೂ ಬಹಳ ಪ್ರಯೋಜನವಾಯಿತು.

ಹುಡುಗಿಯ ವಿದ್ಯಾಭ್ಯಾಸದ ವಿಷಯದಲ್ಲಿ ತಾಯಿಯೋ ಅತ್ತೆಯೋ ಹಟಹಿಡಿದು ಶಾಲೆಗೆ ಕಳುಹಿಸಲು ಒಪ್ಪದೆ ಇದ್ದಲ್ಲಿ, ಸರೋಜ ನಳಿನಿಯು ಅಂಥವರನ್ನು ತನ್ನ ಮಾರ್ಗಕ್ಕೆ ತಿರುಗಿಸಿಕೊಳ್ಳಲು ಅನೇಕ ಉಪಾಯಗಳನ್ನು ಹೂಡುತ್ತಿದ್ದಳು. ಬಂಕೂರಾದಲ್ಲಿ ಒಂದು ಸಾರಿ ನಮ್ಮ ಹಿಂದೂ ಸ್ನೇಹಿತರೊಬ್ಬರು ಅವರ ಮೊಮ್ಮಗಳ ಮದುವೆಗೆ ನಮ್ಮನ್ನು ಕರೆದಿದ್ದರು. ಆ ಹುಡುಗಿಗೆ ೧೨ ವರ್ಷ ವಯಸ್ಸು. ಅವಳು ಆ ಊರಿನ ಪಾಠಶಾಲೆಯಲ್ಲಿ ಓದುತ್ತಿದ್ದಳು. ಆ ಹುಡುಗಿಯ ಮಾವನಾಗತಕ್ಕವರು ಮದುವೆಗೂ, ಮದುವೆಯಾದ ತರುವಾಯ ನಡೆಯುವ (ಬಂಗಾಳದಲ್ಲಿ "ಬೌಭಾತ್" ಎಂದು ಕರೆಯಲ್ಪಡುವ) ಔತಣಕ್ಕೂ ನಮ್ಮನ್ನು ಕರೆದಿದ್ದರು. ಮದುವೆಯಾದ ಮೇಲೆ ಆ ಹುಡುಗಿ ಪಾಠಶಾಲೆಗೆ ಹೋಗುವುದನ್ನು ತಪ್ಪಿಸಿಬಿಡಬೇಡಿರೆಂದು ಸರೋಜ ನಳಿನಿ ಆ ಹುಡುಗಿಯ ತಾಯಿಯನ್ನು ಕೇಳಿಕೊಂಡಳು. ಆದರೆ ಇದು ಅಳಿಯನ ಕಡೆಯವರ ಇಚ್ಛೆಯಂತೆ ನಡೆಯಬೇಕಾದ ವಿಷಯವೆಂಬುದಾಗಿ ಆಕೆ ಉತ್ತರ ಕೊಟ್ಟದ್ದರಿಂದ,

ಈ ವಿಷಯವಾಗಿ ಅಳಿಯನನ್ನೂ ಮಾವನನ್ನೂ ನಾನು ವಿಚಾರಿಸಿದೆನು. ಅವರಿಬ್ಬರೂ ತಾವು ಸಮ್ಮತಿಸಿದರೂ, ಹುಡುಗಿಯ ಅತ್ತೆಯ ಸಮ್ಮತಿಯು ದೊರೆಯಬೇಕೆಂದು ಹೇಳಿಬಿಟ್ಟರು. ಆ ಅತ್ತೆಯನ್ನು ಒಪ್ಪಿಸುವುದು ಕಷ್ಟದ ಕೆಲಸವಾಯಿತು. ಆಕೆ ಪ್ರಾಚೀನ ಪದ್ಧತಿಯವಳಾಗಿದ್ದುದರಿಂದ, ತನ್ನ ಸೊಸೆಗೆ ವಿದ್ಯೆ ಖಂಡಿತ ಆಗಲಾರದೆಂದುಬಿಟ್ಟಳು. ಅಳಿಯನಾದವನು ಸರೋಜ ನಳಿನಿಯ ಯೋಚನೆಯನ್ನು ಅನುಮೋದಿಸಿ ಹೇಳಿದ ಒಂದು ಉಪಾಯದಿಂದ ಕಡೆಗೆ ಈ ಕೆಲಸ ನೆರವೇರಿತು. ಆ ಉಪಾಯವೇನೆಂದರೆ, ಸರೋಜ ನಳಿನಿಯು ಮದುವೆಗೂ "ಬೌಭಾತ್" ಊಟಕ್ಕೂ ಹೋಗುವಂತೆ ಒಪ್ಪಿಕೊಂಡಿದಾಗ್ಗೂ, ಮದುವೆಯಾದ ಮೇಲೆ ಆ ಹುಡುಗಿ ಪಾಠಶಾಲೆಗೆ ಹೋಗುವುದನ್ನು ತಪ್ಪಿಸುವುದಿಲ್ಲವೆಂದು ಅವಳ ತಾಯಿ ಮನೆ ಅತ್ತೆಮನೆಯವರಿಬ್ಬರೂ ವಾಗ್ದಾನಮಾಡಿದ ಹೊರತು ತಾನು ಆ ಮದುವೆ ಮನೆಗೆ ಹೋಗಲು ಆಗಲಾರದೆಂದು ಹೇಳಿ ಕಳುಹಿಸಿಬಿಟ್ಟಳು. ಆ ಸ್ಥಳದಲ್ಲಿ ಎಲ್ಲ ಮನೆತನದವರಿಗೂ ಸರೋಜ ನಳಿನಿ ಬಹಳ ಆಪ್ತಳಾಗಿದ್ದುದರಿಂದ ಎರಡು ಕಡೆಯವರಿಗೂ ಆಕೆಯನ್ನು ಅಸಮಾಧಾನ ಪಡಿಸಲು ಮನಸ್ಸು ಬರಲಿಲ್ಲ. ಕಲೆಕ್ಟರವರ ಪತ್ನಿ "ಬೌಭಾತ್" ಔತಣಕ್ಕೆ ಬಾರದಿದ್ದರೆ ಆ ಕುಟುಂಬದ ಗೌರವವು ಬಹಳ ಲೋಪವಾದಂತೆಯೇ ಎಂದೂ, ಆಕೆಯ ಇಚ್ಛೆಯಂತೆ ಮಾತುಕೊಡುವುದು ಮೇಲೆಂದೂ ವರನ ತಾಯಿಗೆ ಅವರೆಲ್ಲರೂ ಸೇರಿ ಹೇಳತೊಡಗಿದರು. ಇದರಲ್ಲಿ ಮಗನ ಒಳಸಂಚನ್ನು ಕಾಣಲಾರದ ಆ ತಾಯಿಗೆ ಮದವಣಿಗನೂ ಇದನ್ನು ಒತ್ತಿಹೇಳಲು, ಆ ಮುದುಕಿಯು ಕಟ್ಟಕಡೆಗೆ ತನ್ನ ಸೊಸೆಯ ವಿದ್ಯಾಭ್ಯಾಸಕ್ಕೆ ಸಮ್ಮತಿಸುವುದೇ ಮೇಲೆಂದು ಕಂಡುಕೊಂಡಳು. ಆ ಹುಡುಗಿಯನ್ನು ಆ ಮೇಲೆ ಎರಡು ವರ್ಷಗಳ ಕಾಲ ಪಾಠಶಾಲೆಗೆ ಕಳುಹಿಸುತ್ತಿದ್ದರೆಂದು ನನಗೆ ಕ್ರಮೇಣ ತಿಳಿಯಬಂದಿತು. ಮದುವೆಯಾದ ಹುಡುಗಿಯರು ಪಾಠಶಾಲೆಗೆ ಹೋಗುವುದನ್ನು ನಿಲ್ಲಿಸದಂತೆ ಮಾಡಲು ಸರೋಜ ನಳಿನಿ ಇನ್ನೂ ಅನೇಕ ಸಾರಿ ಇದರಂತೆಯೇ ಬಗೆಬಗೆಯ ಉಪಾಯಗಳನ್ನು ಮಾಡಿದ್ದರ ನಿದರ್ಶನಗಳು ಅನೇಕವಾಗಿವೆ.

ಪಾಠಶಾಲೆಗಳಲ್ಲಿರುವ ವಿದ್ಯಾರ್ಥಿನಿಯರು ಆಕೆಯ ಮಾತಿನಲ್ಲಿ ಬಹು ವಿಶ್ವಾಸವನ್ನಿಟ್ಟಿದ್ದರು. ನಾವು ಬೀರ್ ಭೂಮ್ ಜಿಲ್ಲೆಯನ್ನು ಬಿಟ್ಟು

ಬಂದಾಗ ಆ ಊರಿನ ಪಾಠಶಾಲೆಯ ಹುಡುಗಿಯರೊಬ್ಬೊಬ್ಬರೂ ತಮ್ಮ ಉದಾರ ಮನಸ್ಸನ್ನೂ ಸರಳತೆಯನ್ನೂ ತೋರಿಸುವ ಬಿನ್ನವತ್ತಳೆಗಳನ್ನು ತಮ್ಮ ತಮ್ಮ ಕೈಯಿಂದಲೇ ಬರೆದು ಆಕೆಗೆ ಒಪ್ಪಿಸಿದರು. ಅವುಗಳಲ್ಲಿ ಎರಡು ಪತ್ರಗಳನ್ನು ಮಾತ್ರ ಮಾದರಿಗಾಗಿ ಕೆಳಗೆ ಕೊಟ್ಟಿದೆ:—

"ದೇವರು ದಯಪಾಲಿಸಿದ್ದ ಅಮೌಲ್ಯವಾದ ಒಂದು ವರವನ್ನು ಅದೃಷ್ಟ ಚಕ್ರದ ಪರಿವರ್ತನೆಯ ಕಾರಣದಿಂದ ಈಗ ನಾವು ಕಳೆದು ಕೊಳ್ಳಬೇಕಾಗಿ ಬಂದಿದೆ. ಒಂದು ದಿವಸದ ಹಿಂದೆ ಮತ್ತೊಂದು ದಿವಸ ಬರುತ್ತಿರುವುದು; ತಿಂಗಳಾದ ಮೇಲೆ ತಿಂಗಳು ಬರುತ್ತಿರುವುದು. ಆದರೆ ಅತ್ಯಂತ ಪ್ರಕಾಶಮಾನವಾದ ನಿರ್ಮಲ ಶಾಂತಿಯ ಕಿರಣಗಳನ್ನು ಬೀರುವ ಈ ರತ್ನ ಮಾತ್ರ ನಮ್ಮ ಊರಿಗೆ ತಿರುಗಿ ಬರಲಾರದು.

"ನಮ್ಮದು ದುಃಖದ ಗತಿ. ದೇವದೂತೆಯಂಥ ಹಿತಕಾರಿಣಿಯನ್ನೂ, ದೈವ ಸೃಷ್ಟಿಯಲ್ಲಿ ಅತ್ಯುತ್ತಮವಾದ ವಸ್ತುವನ್ನೂ ಈಗ ನಾವು ಕಳೆದುಕೊಳ್ಳಬೇಕಾಗಿದೆ.

"ಇತರರ ದುಃಖಕ್ಕಾಗಿ ಮರುಗುತ್ತಿದ್ದ ಈ ಘನವಂತೆಯೂ ಉದಾರಿಯೂ ಆದ ಸಾಧ್ವಿಯನ್ನು ದೇವರು ನಮಗೆ ಬಹಳ ದಯೆಯಿಂದ ಕೊಟ್ಟಿದ್ದನು. ಈ ದಯಾಶಾಲಿನಿಯಾದ ಸತೀಮಣಿಯು ತನ್ನ ಜೀವನದ ಒಂದೊಂದು ನಿಮಿಷದಲ್ಲಿಯೂ ನಮ್ಮ ಶ್ರೇಯಸ್ಸನ್ನೇ ಕುರಿತು ಯೋಚಿಸುತ್ತಿದ್ದಳು. ಈ ಪ್ರಪಂಚವೇನೋ ಸೂರ್ಯಪ್ರಕಾಶದಲ್ಲಿ ಎಂದಿನಂತೆ ಆನಂದಗೊಂಡಿರುವುದು. ಆದರೆ ಈಕೆ ಇನ್ನೆಂದೆಂದಿಗೂ ನಮ್ಮನ್ನು ಬಿಟ್ಟು ಹೋಗಿರುವಳು. ಕತ್ತಲೆಯಿಂದ ತುಂಬಿದ ಗುಹೆಗಳಂತಿದ್ದ ನಮ್ಮ ಹೃದಯದಲ್ಲಿ ಜ್ಞಾನದ ದೀವಿಗೆಯನ್ನು ಹಿಡಿಯಲು ಬಹಳ ಕಷ್ಟಪಟ್ಟಿರುವ ಈಕೆಗೆ ಸುಖ ಪ್ರಯಾಣವನ್ನು ಬಯಸಲು ನಾವು ಇಲ್ಲಿ ಸೇರಿದ್ದೇವೆ.

"ನಮ್ಮ ಧ್ಯೇಯಗಳನ್ನು ಸಾಧಿಸಿ, ಜಯವನ್ನು ಪಡೆದು, ನಮ್ಮ ಉತ್ಸಾಹವನ್ನೂ ಬುದ್ಧಿಬಲವನ್ನೂ ಧೈರ್ಯವನ್ನೂ ಕಾಪಾಡಿಕೊಂಡು, ಒಳ್ಳೆಯ ಕೆಲಸಮಾಡಲು ಈ ಸ್ತ್ರೀರತ್ನದ ಮೇಲ್ಪಂಕ್ತಿಯನ್ನನುಸರಿಸುವುದೊಂದೇ ನಮಗಿರುವ ದಾರಿ.

"ಓ ನಮ್ಮ ತಾಯಿ, ನಮ್ಮ ಶಾಲೆಯನ್ನು ಕಾಪಾಡುತ್ತಿರುವ ದೇವಿ, ನೀವೆಲ್ಲಿ ಹೋದರೂ ನಮ್ಮನ್ನು ಮರೆಯಬೇಡಿರಿ. ನಿಮ್ಮ ಯಶಸ್ಕರವಾದ ದಾರಿಯಲ್ಲಿ ನಾವು ನಡೆದು, ನಿಮ್ಮ ಪವಿತ್ರವಾದ ಹೆಸರನ್ನು ನಾವು ನೆನೆದು, ಕೃತಜ್ಞರಾಗಿರುವಂತೆ ನಮ್ಮನ್ನು ಆಶೀರ್ವದಿಸಿರಿ.

"ಓ, ಜಗದೀಶನೆ! ನಮ್ಮ ಬಡತನವನ್ನು ಹೋಗಲಾಡಿಸಲು ನಿನ್ನ ಮಿತಿಯಿಲ್ಲದ ಕರುಣೆಯನ್ನು ಸ್ವಲ್ಪಮಾತ್ರ ತೋರಿಸಿ ಉದ್ಧರಿಸು. ನಮ್ಮ ಹಿತವನ್ನೇ ಬಯಸುತ್ತಿದ್ದ ಈಕೆಯನ್ನು ನಿರಂತರವೂ ಸೌಖ್ಯದಲ್ಲಿಟ್ಟಿರು! ಈಕೆಯ ಉದಾಹರಣೆಯು ನಮ್ಮ ಜೀವನಕ್ಕೆ ಆದರ್ಶವಾಗಿ ನಮ್ಮ ಜೀವನವನ್ನು ಬೆಳಗಲಿ.

ಇಂತು ನಿಮ್ಮ ಪ್ರೇಮವನ್ನು ಅಂಗಲಾಚಿ ಬೇಡುತ್ತಿರುವ,
"ನಾನಿ ಬಾಲಾ ಸೆನ್."

"ಹೇ ಮಹಾತ್ಮೆಯೆ,—ನೀವು ಹೊರಟು ಹೋಗುತ್ತೀರೆಂದು ನನಗೆ ಬಹು ದುಃಖವಾಗಿದೆ. ನೀವು ನಮಗೆ ಮಾಡಿರುವ ಉಪಕಾರವನ್ನು ನಾವು ಎಂದೆಂದಿಗೂ ಮರೆಯಲಾರೆವು. ನಾವು ಹತ್ತಿರದಲ್ಲಿದ್ದಾಗ ನೀವು ನಮ್ಮನ್ನು ಪ್ರೀತಿಸುತ್ತಿದ್ದಿರಿ. ನಾವು ದೂರದಲ್ಲಿರುವಾಗಲೂ ನೀವು ನಮ್ಮನ್ನು ಪ್ರೀತಿಸಬೇಕು, ತಾಯಿ. ನೀವು ಮತ್ತೊಂದಾವರ್ತಿ ಬಂದು ನಮಗೆ ದರ್ಶನ ಕೊಡುವಿರೆಂದು ನಂಬಿದ್ದೇವೆ. ನಾವು ನಿಮ್ಮನ್ನು ನಮ್ಮ ತಾಯಿಯೆಂದು ಭಾವಿಸಿದ್ದೇವೆ. ಇನ್ನುಮೇಲೆ ನಾವು ತಬ್ಬಲಿಗಳಂತಾದೆವು. ನಾವು ನಿಮ್ಮ ಪ್ರೇಮವನ್ನೂ ಕರುಣೆಯನ್ನೂ ಹಗಲೂ ಇರುಳೂ ನೆನೆಯುತ್ತಿರುವೆವು. ನಿಮ್ಮ ಪುಟ್ಟ ಮಕ್ಕಳನ್ನು ಮರೆಯಬೇಡಿ, ತಾಯಿ. ನಿಮ್ಮನ್ನು ಬೀಳ್ಕೊಡಲು ನಮಗೆ ಬಹು ದುಃಖವಾಗಿದೆ.

ಇಂತು ನಿಮ್ಮ ಪಾದ ಸೇವಕಿ,
ಜಯಂತೀ ರಾಯ್."

ಹಿಂದೂ ವಿತಂತುಗಳ ಕಷ್ಟವನ್ನು ನೋಡಿ ಸರೋಜ ನಳಿನಿಯು ಬಹುವಾಗಿ ಪರಿತಾಪ ಪಡುತ್ತಿದ್ದಳು. ವಿಧವೆಯರು ಇತರರಿಗೆ ಭಾರವಾಗದಂತೆಯೂ, ತಮ್ಮ ಜೀವನಕ್ಕಾಗಿ ಗುಲಾಮರಂತೆ ಇತರರ ಮನೆಯಲ್ಲಿ ದುಡಿಯದಂತೆಯೂ ಮಾಡುವುದಕ್ಕಾಗಿ ಒಂದೊಂದು ಗ್ರಾಮದಲ್ಲಿಯೂ

ನಗರದಲ್ಲಿಯೂ ವಿಧವೆಯರಿಗಾಗಿ ಉದ್ಯೋಗ ಶಿಕ್ಷಣವನ್ನು ಕೊಡುವ ಒಂದೊಂದು ಪಾಠಶಾಲೆಯನ್ನು ಸ್ಥಾಪಿಸಬೇಕೆಂಬುದು ಆಕೆಯ ಅಭಿಲಾಷೆಗಳಲ್ಲೊಂದಾಗಿತ್ತು. ಈ ಪಾಠಶಾಲೆಗಳಲ್ಲಿ ಶಿಕ್ಷಣಹೊಂದಿದ ವಿತಂತುಗಳು ಅವರವರ ಆತ್ಮಗೌರವವನ್ನು ಕಳೆದುಕೊಳ್ಳದ ರೀತಿಯಲ್ಲಿ ಯಾವುದಾದರೊಂದು ಜೀವನ ಮಾರ್ಗವನ್ನು ಹುಡುಕಿಕೊಳ್ಳುವರೆಂದು ಆಕೆಗೆ ಬಹಳವಾಗಿ ನಂಬಿಕೆಯಿತ್ತು.

ವಿಧವಾ ವಿವಾಹದ ವಿಷಯದಲ್ಲಿ ಆಕೆಯು ಸ್ವತಂತ್ರ ಅಭಿಪ್ರಾಯವನ್ನಿಟ್ಟುಕೊಂಡಿದ್ದಳು. ಆಕೆಯು ಹೇಳುತ್ತಿದ್ದುದು ಹೀಗೆ:— "ಪುನಃ ವಿವಾಹ ಮಾಡಿಕೊಳ್ಳಬೇಕೆಂದು ಇಷ್ಟಪಡುವ ವಿಧವೆಯರು ಮದುವೆ ಮಾಡಿಕೊಳ್ಳಲಿ. ಆದರೆ ಹಿಂದೂ ಸ್ತ್ರೀಯರು ಮದುವೆಯೆಂಬುದು ಒಂದು ಪವಿತ್ರ ಸಂಬಂಧವೆಂದು ಭಾವಿಸಿರುವುದರಿಂದ, ಪತಿಯಲ್ಲಿ ಪ್ರೀತಿ ಬೆಳಸಲು ಅವಕಾಶ ಪಡೆದಿದ್ದಂಥವರಲ್ಲಿ ಅನೇಕರು ಪುನಃ ಮದುವೆಯಾಗಲು ಸಮ್ಮತಿಸಲಾರರೆಂದು ತಿಳಿದಿದ್ದೇನೆ. ಆದರೆ ಬಾಲ ವಿಧವೆಯರ ವಿಷಯವೇ ಬೇರೆ. ಬಾಲ ವಿಧವೆಯರೇ ಇಲ್ಲದಂತೆ ಮಾಡೋಣ. ಬಾಲ ವಿಧವೆಯರೇ ಇಲ್ಲದಿರುವಂತೆ ಮಾಡಲು ಯಾವ ಹುಡುಗಿಗೂ ಅವಳ ೧೬ನೆಯ ವಯಸ್ಸು ತುಂಬುವವರೆಗೂ ವಿವಾಹವನ್ನು ಮಾಡದಿರುವುದೊಂದೇ ಉಪಾಯ. ಹಿಂದೂ ತಾಯಿ ತಂದೆಗಳಲ್ಲಿ ಪ್ರತಿಯೊಬ್ಬರೂ ಯಾವ ಹುಡುಗಿಗೂ ಅವಳ ೧೬ನೆಯ ವಯಸ್ಸು ತುಂಬುವುದರೊಳಗೆ ವಿವಾಹ ಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿಕೊಂಡರೆ, ವಿಧವಾ ವಿವಾಹಕ್ಕೆ ಅವಕಾಶವನ್ನು ಕಲ್ಪಿಸಬೇಕೆಂಬ ಚಳವಳಿಯೇ ಅನಾವಶ್ಯಕವಾಗುವುದು. ಪ್ರತಿಯೊಬ್ಬ ಹುಡುಗಿಗೂ ಅವಳ ವಿವಾಹಕ್ಕೆ ಮೊದಲು ತಕ್ಕಮಟ್ಟಿಗೆ ಕೈಗಾವಲಾಗಿರುವಂತೆ ಯಾವುದಾದರೂ ಜೀವನೋಪಾಯದ ವಿದ್ಯೆಯನ್ನು ಕಲಿಸಿಕೊಟ್ಟಿದ್ದರೆ, ದುರದೃಷ್ಟ ವಶದಿಂದ ಅವಳು ಚಿಕ್ಕಂದಿನಲ್ಲಿ ತನ್ನ ಪತಿಯನ್ನು ಕಳೆದುಕೊಂಡರೂ, ಆ ವಿದ್ಯೆಯ ಸಹಾಯದಿಂದ ಅವಳು ಜೀವನವನ್ನು ಸಂಪಾದಿಸಿಕೊಂಡು ಇತರರಿಗೆ ಭಾರವಾಗದೆ ಇರುವಂತೆ ಅನುಕೂಲವಾಗುವುದು."

ಆಕೆಯು ಪದೇ ಪದೇ ಹೇಳುತ್ತಿದ್ದ ಮತ್ತೊಂದು ವಿಷಯ ಇದು:— "ಬಂಗಾಳಿ ಹೆಂಗಸಿನ ಜೀವನವು ಮಂಕಾಗಿಯೂ ಉಲ್ಲಾಸ ಹೀನ

ವಾಗಿಯೂ ಇರುವುದು ಏಕೆಂದರೆ, ಅವಳಿಗೆ ಬಾಲ್ಯವೆಂದರೇನೆಂಬುದನ್ನು ತಿಳಿಯಲು ಅವಕಾಶವೇ ಇಲ್ಲದಿರುವುದರಿಂದ. ನಮ್ಮ ಜೀವನದ ಉಲ್ಲಾಸವು ಉಚ್ಚಸ್ಥಿತಿಯಲ್ಲಿರುವುದು ಬಾಲ್ಯದಲ್ಲಿ. ಅದು ಶೈಶವದಶೆ ಮುಗಿದು ಯೌವನ ಆರಂಭಿಸುವ ವರೆಗೆ—ಎಂದರೆ ಹತ್ತರಿಂದ ಹತ್ತೊಂಬತ್ತನೆಯ ವರ್ಷದ ವರೆಗೆ. ಇತರ ದೇಶಗಳಲ್ಲಿ ಹುಡುಗಿಯರು ೨೪-೨೫ ವರ್ಷಗಳು ತುಂಬುವುದಕ್ಕೆ ಮುಂಚಿತವಾಗಿ ವಿವಾಹವನ್ನು ಮಾಡಿಕೊಳ್ಳುವುದಿಲ್ಲ. ಆದುದರಿಂದ ಅವರಿಗೆ ವಿದ್ಯೆ ಕಲಿಯುವುದಕ್ಕೆ ಮಾತ್ರವಲ್ಲದೆ ಬಾಲ್ಯೋಚಿತ ವಾದ ವಿನೋದಗಳನ್ನನುಭವಿಸುವುದಕ್ಕೂ ತಕ್ಕಷ್ಟು ಅವಕಾಶಗಳುಂಟು. ಅವರು ಆಟಪಾಟಗಳಲ್ಲಿ ಇತರ ಹುಡುಗಿಯರೊಡನೆ ಕಲೆಯುವುದರಿಂದ ದೇಹವೂ ಮನಸ್ಸೂ ಸಂತೋಷಪಡುವ ಶಕ್ತಿಯೂ ಚೆನ್ನಾಗಿ ಬೆಳೆಯಲು ಅನುಕೂಲವಾಗುವುದು. ನಮ್ಮ ದೇಶದಲ್ಲಾದರೋ, ಹುಡುಗಿಯರು ಶೈಶವದಿಂದ ಹಾಗೆಯೇ ಮಾತೃದಶೆಗೆ ಬಂದು ಬಿಡುತ್ತಾರಾದುದರಿಂದ ಅವರಿಗೆ ಬಾಲ್ಯವೆಂದರೇನೆಂಬುದು ಗೊತ್ತಿರುವುದಿಲ್ಲ. ಅವರು ಅದರ ಸಂತೋಷವನ್ನೂ ಅದರ ವಿದ್ಯಾವಿಕಾಸದ ಅವಕಾಶಗಳನ್ನೂ ಮಾತ್ರ ವಲ್ಲದೆ, ದೇಹಾರೋಗ್ಯಕ್ಕೂ ಶಕ್ತಿ ಸಂಪಾದನೆಗೂ ಅದರಿಂದೊದಗುವ ಅನುಕೂಲಗಳನ್ನೂ ಸಹ ಕಳೆದುಕೊಳ್ಳುತ್ತಾರೆ. ನಾವು ಎದುವರೆಗೂ ಈ ವಿಷಯುಗಳಿಗೆ ಗಮನ ಕೊಡದೆ ಸುಮ್ಮನಿರುವೆವೋ ನಮ್ಮ ಸ್ತ್ರೀಯರು ಅದುವರೆಗೂ ತಮ್ಮ ಬುದ್ಧಿಯನ್ನೂ ದೇಹಾರೋಗ್ಯವನ್ನೂ ಪೂರ್ತಿಯಾಗಿ ವೃದ್ಧಿಪಡಿಸಿಕೊಳ್ಳಲು ಅವಕಾಶ ಹೊಂದಲಾರರು; ಮತ್ತು ನಮ್ಮ ದೇಶವು ಅಭ್ಯುದಯ ಹೊಂದದೆ ಹಿಂದುಳಿದಿರುವುದು. ಆದುದರಿಂದ ಹುಡುಗಿಯರ ವಿವಾಹದ ವಯಸ್ಸನ್ನು ಕಡೆಯಪಕ್ಷ ೧೮-೧೯ ವರ್ಷಗಳಿಗಾದರೂ ಹೆಚ್ಚಿಸು ವುದು ನಾವು ಉಪೇಕ್ಷಿಸಲಾಗದಂಥ ಆವಶ್ಯಕತೆ."

ಘೋಷಾ ಹೆಂಗಸರಿಗೆ ಘೋಷಾದಿಂದ ಬಿಡುಗಡೆಯಾಗಿ ಅವರಿಗೆ ಅನುಕೂಲವಾದ ಹೊರತು ನಮ್ಮ ದೇಶಕ್ಕೆ ಸ್ವಾತಂತ್ರ್ಯದ ಆಶೆಯಿಲ್ಲವೆಂದು ಆಕೆ ಹೇಳುತ್ತಿದ್ದಳು. ಘೋಷಾ ಹೆಂಗಸರಿಗಾಗಿ ಆಕೆಯ ಮನಸ್ಸು ಬಹು ಕಳವಳಿಸುತ್ತಿತ್ತು. ಅವರವರ ಮನೆಗಳಲ್ಲಿ ಮಾತ್ರವೇ ಅಲ್ಲ, ನಾಟಕ ಶಾಲೆಗಳಲ್ಲೇ ಆಗಲಿ, ಸಭೆಗಳಲ್ಲೇ ಆಗಲಿ, ಘೋಷಾ ಹೆಂಗಸರು ಸಂಧಿ ಸುವ ಸ್ಥಳಗಳಲ್ಲೆಲ್ಲಾ ಆಕೆಯ ಮನಸ್ಸು ಅವರ ಕಡೆಗೆ ಆಕರ್ಷಿಸಲ್ಪಡು

ತ್ತಿದ್ದಿತಲ್ಲದೆ, ಆ ಆಟವೋ ಉಪನ್ಯಾಸವೋ ಮುಗಿಯುವುದರೊಳಗಾಗಿ ಆಕೆ ಪರದೆಯ ಹಿಂದೆ ಹೋಗಿ ಅವರನ್ನು ಕಂಡು ಮಾತನಾಡಿದ ಹೊರತು ಆ ಸ್ಥಳವನ್ನು ಬಿಟ್ಟು ತೆರಳುತ್ತಿರಲಿಲ್ಲ.

ಘೋಷಾ ಪದ್ಧತಿಯನ್ನವಲಂಬಿಸಿದ್ದವರು ತನ್ನನ್ನು ಆ ಪದ್ಧತಿಗೆಳೆದಷ್ಟೂ ಅವರನ್ನು ಹೊರಕ್ಕೆಳೆದು ಘೋಷಾ ಪದ್ಧತಿಯಿಂದ ಬಿಡುಗಡೆ ಮಾಡಲು ಆಕೆ ಆಶೆ ಪಡುತ್ತಿದ್ದಳು. ಆಕೆ ನನ್ನೊಡನೆ ಯಾವ ಸಾರ್ವಜನಿಕ ಸಭೆಗೆ ಬಂದರೂ, ಘೋಷಾ ಸ್ತ್ರೀಯರು ಅಲ್ಲಿಗೆ ಬರಲು ತಕ್ಕ ಅವಕಾಶಗಳನ್ನು ಮಾಡಬೇಕೆಂದು ಹಟ ಹಿಡಿಯುತ್ತಿದ್ದಳು. ಆದರಿಂದ ಅವರು ಭಾವಿಯೊಳಗಿನ ಕಪ್ಪೆಗಳಂತೆ ಇರದೆ ಹೊರಗಿನ ಪ್ರಪಂಚದಲ್ಲಿ ಕಲೆತು ಲೋಕವ್ಯವಹಾರ ಜ್ಞಾನವನ್ನು ಪಡೆಯಲು ಅನುಕೂಲಿಸುವುದೆಂಬುದು ಆಕೆಯ ಅಭಿಪ್ರಾಯ. ಹುಡುಗರಿಗೆ ಬಹುಮಾನಗಳನ್ನು ಹಂಚುವುದಕ್ಕಾಗಿ ಬರಬೇಕೆಂದು ಆಕೆಯನ್ನು ಕೋರಿದರೆ, ಅದಕ್ಕೆ ಆಕೆ—"ನೀವು ಘೋಷಾ ಹೆಂಗಸರನ್ನೂ ಕರೆಯಬೇಕು. ಹುಡುಗರೂ ಹುಡುಗಿಯರೂ ಅವರು ಕಲಿತಿರುವ ಪದ್ಯಗಳನ್ನೂ ಹಾಡುಗಳನ್ನೂ ಹೇಳಿ ಸನ್ಮಾನವನ್ನು ಪಡೆಯಬೇಕು. ಅವರ ತಾಯಿಯವರೂ ಸಹೋದರಿಯರೂ ಅದನ್ನು ನೋಡಬೇಕು. ಇಲ್ಲದಿದ್ದರೆ ಅವರ ಮಕ್ಕಳು ಎಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದುತ್ತಿರುವರೆಂಬುದನ್ನು ಅವರು ಹೇಗೆ ತಿಳಿದುಕೊಳ್ಳಬಲ್ಲರು?" ಎಂದು ಹೇಳುತ್ತಿದ್ದಳು.

ನಾವು ಬಂಕೂರಾದಲ್ಲಿದ್ದಾಗ ಆ ಊರಿನ ಹೈಸ್ಕೂಲಿನಲ್ಲಿ ಸನ್ಮಾನಗಳನ್ನು ಹಂಚಿಸುವ ಉತ್ಸವದಲ್ಲಿ, ಅಲ್ಲಿಗೆ ಘೋಷಾ ಹೆಂಗಸರೂ ಬರುವಂತೆ ಮಾಡಿದಳು. ಅಂಥಾ ಸಂದರ್ಭದಲ್ಲೊಂದು ಸಾರಿ ಹುಡುಗರು ಆಟಗಳಾಡುತ್ತ ಹಾಡು ಹೇಳುತ್ತಿದ್ದ ಸಮಯದಲ್ಲಿ ಘೋಷಾ ಹೆಂಗಸರು ಇದ್ದ ಸ್ಥಳದಿಂದ ಸಂತೋಷ ಸೂಚನೆಗಳು ಬಂದುವಲ್ಲದೆ, ಉತ್ಸಾಹದಿಂದ ಇನ್ನೂ ಹೆಚ್ಚು ಬಹುಮಾನಗಳನ್ನು ಕೊಡುವುದಾಗಿ ವಾಗ್ದಾನಗಳೂ ಬಂದುವು. "ವಿದ್ಯಾಭ್ಯಾಸದಲ್ಲಿ ತಾಯಿಯರ ಕರ್ತವ್ಯ" ಎಂಬ ವಿಷಯದಲ್ಲಿ ಉತ್ತಮ ಪ್ರಬಂಧವನ್ನು ಬರೆದವರಿಗೆ ಬಹುಮಾನವನ್ನು ತಾವು ಕೊಡುವುದಾಗಿ ಅವರ ಪೈಕಿ ಒಬ್ಬರು ತಾವಾಗಿಯೇ ವಾಗ್ದಾನಮಾಡಿದರು. ಈ ಸ್ಪರ್ಧೆ

ಯನ್ನು ಏರ್ಪಡಿಸಿದಾಗ ಅನೇಕರು ಪ್ರಬಂಧಗಳನ್ನು ಬರೆದು ಕಳುಹಿಸಿದ್ದರು. ಮಹಿಳಾ ಸಮಿತಿಯ ಸದಸ್ಯರುಗಳು ಅವುಗಳನ್ನು ಪರಿಶೀಲಿಸಿದ ಬಳಿಕ, ಅವುಗಳಲ್ಲಿ ಬಹಳ ಚೆನ್ನಾಗಿದ್ದ ಎರಡು ಪ್ರಬಂಧಗಳಿಗೆ ಬಹುಮಾನಗಳನ್ನು ಕೊಡಲಾಯಿತು. ಅದು ಹುಡುಗರಿಗೆ ಉತ್ತೇಜನವನ್ನು ಕೊಟ್ಟಿತಲ್ಲದೆ, ಹೆಂಗಸರಿಗೆ ಅವರ ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿಯನ್ನುಂಟುಮಾಡಿ ಅವರ ದೃಷ್ಟಿಯನ್ನು ವಿಶಾಲಪಡಿಸಿತು.

ಬಂಗಾಳ ಪ್ರಾಂತದ ಪ್ರಖ್ಯಾತ ಪುರುಷರಲ್ಲಿ ಒಬ್ಬರಾದ ಈಶ್ವರ ಚಂದ್ರ ವಿದ್ಯಾಸಾಗರರವರ ಜ್ಞಾಪಕಾರ್ಥವಾಗಿ ನಡೆದ ವಾರ್ಷಿಕೋತ್ಸವದ ಸಭೆಗೆ ಪಾಬ್ನಾದಲ್ಲಿ ನಾವಿದ್ದಾಗ ನಮ್ಮನ್ನು ಕರೆದಿದ್ದರು. ಆ ಸಭೆ ಅಲ್ಲಿಯ ಪೌರಸಭಾಮಂದಿರದಲ್ಲಿ ಜರುಗಿತು. ಘೋಷಾ ಹೆಂಗಸರೂ ಬರಲು ತಕ್ಕ ಏರ್ಪಾಟುಗಳನ್ನು ಮಾಡಬೇಕೆಂಬುದಾಗಿ ಸರೋಜ ನಳಿನಿ ತೀರ್ಮಾನಿಸಿದಳು. ಅಂಥ ಹೆಂಗಸರಲ್ಲನೇಕರು ಅಲ್ಲಿಗೆ ಬಂದು ಭಾಷಣಗಳನ್ನು ಕೇಳಿ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡರು. ಇದಕ್ಕೆ ಮೊದಲು ಎಂದೂ ಪಾಬ್ನಾದಲ್ಲಿ ಹಾಗೆ ನಡೆದಿರಲಿಲ್ಲ.

ಹಳೆಯ ಪದ್ಧತಿಗಳನ್ನು ಆಚರಣೆಯಲ್ಲಿಟ್ಟುಕೊಂಡಿದ್ದ ಅನೇಕ ಹಿಂದೂ ಮನೆತನಗಳ ಸ್ತ್ರೀಯರು ಸರೋಜ ನಳಿನಿಯ ಪ್ರೇರೇಪಣೆಯಿಂದಲೂ, ಆಕೆಯ ಮೇಲ್ಪಂಕ್ತಿಯನ್ನನುಸರಿಸಿಯೂ, ತಮ್ಮ ಪತಿಗಳ ಪೂರ್ಣ ಸಮ್ಮತಿಯನ್ನು ಪಡೆದುಕೊಂಡು, ತಮಗೆ ಅದುವರೆಗೂ ಮನೆಯಲ್ಲಿದ್ದ ಬಂಧನದಿಂದ ಹೊರಗೆ ಬಂದು, ದೇವರು ಸೃಷ್ಟಿಸಿರುವ ಗಾಳಿ ಬೆಳಕುಗಳಲ್ಲಿ ಸ್ವತಂತ್ರವಾಗಿ ತಿರುಗಾಡುವುದಕ್ಕೂ, ಆ ಮೂಲಕ ತಮ್ಮ ಮನೆಯ ಕೆಲಸಗಳನ್ನೂ ಸಾಮಾಜಿಕ ಕಾರ್ಯಗಳನ್ನೂ ಮತ್ತಷ್ಟು ದಕ್ಷತೆಯಿಂದ ನಿರ್ವಹಿಸುವುದಕ್ಕೂ ಅವಕಾಶವನ್ನು ಪಡೆದರು.

ಸರೋಜ ನಳಿನಿಯು—"ಯಾರು ತಮ್ಮ ಮತಾಚಾರದ ನೆಪದಲ್ಲಿ ಹೆಂಗಸರನ್ನು ಮನೆಯಲ್ಲಿ ಸೆರೆಹಾಕಿ, ಅನಂತರ ತಮ್ಮ ಹುಡುಗರು ದುಷ್ಟ ಚಾಳಿಗೆ ಬಿದ್ದಿದ್ದಾರೆಂದು ಆಕ್ಷೇಪಿಸುವರೋ ಅವರಿಗೆ ನಾನಿಷ್ಟೇ ಹೇಳುವುದು:—ನಮ್ಮ ಸ್ತ್ರೀಯರು ಮನೆಯಿಂದ ಹೊರಗೆ ಬರಲು ನೀವು ಅವಕಾಶ ಕೊಡದಿರುವುದರಿಂದಲೇ ನಮ್ಮ ಪುರುಷರ ನಡತೆಯು ಎಲ್ಲಾ ವಿಧದಲ್ಲೂ

ಕೆಟ್ಟುಹೋಗಿದೆ. ಪತಿವ್ರತೆಯರನ್ನೂ ಕುಲೀನ ಸ್ತ್ರೀಯರನ್ನೂ ಪರದೆಯ ಹಿಂದೆಯೂ ಮನೆಯ ಒಳಗೂ ಸೆರೆ ಹಾಕಿದರೆ, ಅವರುಗಳು ಜನತೆಯಲ್ಲೂ ದೇಶ ಜೀವನದಲ್ಲೂ ಕಲೆತು ಅವುಗಳಲ್ಲಿ ತಮ್ಮ ಸದ್ಗುಣಗಳ ಪ್ರಭಾವವು ವ್ಯಾಪಿಸುವಂತೆ ಮಾಡುವುದು ಸಾಧ್ಯವಿರುವುದಿಲ್ಲ. ಇಂಥ ಜನಾಂಗದಲ್ಲಿ ಪುರುಷರು ತಪ್ಪದೆ ದುಶ್ಶೀಲವುಳ್ಳವರಾಗುವರು. ದೊಡ್ಡ ದೊಡ್ಡವರು ಕೂಡ ದುರ್ಮಾರ್ಗದಿಂದ ತಪ್ಪಲು ಅವಕಾಶವಿಲ್ಲದಿರುವಲ್ಲಿ ಚಿಕ್ಕವರ ಪಾಡೇನು? ಜಪಾನ್ ದೇಶದ ಚರಿತ್ರೆಯಿಂದ ಈ ವಿಷಯವು ಚೆನ್ನಾಗಿ ವ್ಯಕ್ತವಾಗುತ್ತದೆ. ಅಲ್ಲಿ ಶ್ರೀಮಂತ ಮನೆತನಗಳ ಸ್ತ್ರೀಯರನ್ನು ಮನೆಯೊಳಗೆ ಸೆರೆ ಹಾಕುವ ಪದ್ಧತಿಯು ಇದ್ದವರೆಗೂ ಗಂಡಸರ ವಿಷಯ ಲಂಪಟತೆಗೆ ಮಿತಿಯಿರಲಿಲ್ಲ. ಈ ಪದ್ಧತಿಯು ತಪ್ಪಿದಂದಿನಿಂದ ಜಪಾನ್ ದೇಶದಲ್ಲಿ ಜನಾಂಗದ ನೀತಿಯೂ ಸಮಾಜ ಪರಿಶುದ್ಧಿಯೂ ವೃದ್ಧಿಹೊಂದಿ, ಪ್ರತಿಯೊಬ್ಬ ಮನುಷ್ಯನೂ ಶೀಲವಂತನಾಗಿರಲನುಕೂಲಿಸಿದೆಯೆಂದು ಹೇಳಬಹುದು."

ನಾವು ಜಪಾನ್ ದೇಶದಲ್ಲೂ ಯೂರೋಪ್ ಖಂಡದಲ್ಲೂ ಪ್ರಯಾಣ ಮಾಡುತ್ತಿದ್ದಾಗ, ಸರೋಜನಳಿನಿಯು ಪದೇ ಪದೇ ಹೇಳುತ್ತಿದ್ದದ್ದು ಈಗಲೂ ನನ್ನ ಜ್ಞಾಪಕಕ್ಕೆ ಬರುತ್ತದೆ:—"ಈ ದೇಶಗಳ ಸ್ತ್ರೀಯರ ಸ್ಥಿತಿಯನ್ನು ನೋಡಿ, ನಮ್ಮ ದೇಶದ ಸ್ತ್ರೀಯರು ಇವರಿಗಿಂತ ವಿದ್ಯೆಯಲ್ಲಿಯೂ ಕಾರ್ಯ ಶೀಲತೆಯಲ್ಲಿಯೂ ಎಷ್ಟು ಹಿಂದುಳಿದಿರುವರೆಂಬುದನ್ನು ಯೋಚಿಸಿದರೆ, ನನ್ನ ಹೃದಯವು ದುಃಖದಿಂದ ತುಂಬಿಹೋಗುತ್ತದೆ. ಇಂಥ ವಿಷಯಗಳಲ್ಲಿ ನಮ್ಮ ದೇಶದ ಗಂಡಸರು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ನಾವು ಮುಂದುವರಿಯಲು ಪ್ರೋತ್ಸಾಹ ಕೊಡುವ ಕಾಲವು ಎಂದಿಗೆ ಬರುವುದೋ! ಯಾವ ದೇಶದಲ್ಲೇ ಆಗಲಿ, ಪುರುಷರು ಮಾತ್ರ ಶ್ರಮಿಸುತ್ತ ಮುಂದುವರಿದರೆ ದೇಶವು ಅಭ್ಯುದಯವನ್ನೆಂದಿಗೂ ಪಡೆಯದೆಂಬುದನ್ನು ಅವರು ಯಾವಾಗ ತಿಳಿಯುವರೋ!"

ಒಂದು ಸಾರಿ ನಾನು ಊರುಬಿಟ್ಟು ಹೋಗಿದ್ದಾಗ, ತುರ್ಕೀ ದೇಶದ ಸ್ತ್ರೀಯರು ಹೊಸದಾಗಿ ಪಡೆದ ಸ್ವಾತಂತ್ರ್ಯದ ವಿಚಾರವನ್ನೂ, ಅದುವರೆಗೂ ಉಡುಗಿ ಹೋಗಿದ್ದ ಅವರ ಸಾಮರ್ಥ್ಯವು ಅದರಿಂದ ವೃದ್ಧಿಹೊಂದಿ, ಆ ಮೂಲಕ ತುರ್ಕೀದೇಶವು ಸ್ವಾತಂತ್ರ್ಯದಿಂದ ಕೂಡಿದ ಪ್ರಬಲ

ಜನಪದವಾಗಲು ದಾರಿಯಾದ ವಿಚಾರವನ್ನೂ ವರ್ತಮಾನ ಪತ್ರಿಕೆಗಳಲ್ಲಿ ಓದಿದೆನು. ಆ ಲೇಖನವನ್ನು ನಾನು ತೆಗೆದು ಆಕೆಗೆ ಕಳುಹಿಸಿದುದಕ್ಕೆ, ಆಕೆಯು ಬಹಳ ದುಃಖದೊಡನೆ "ತುರ್ಕೀ ದೇಶದಲ್ಲಿ ಮಾತ್ರವೇ ಏಕೆ? ಎಲ್ಲೆಲ್ಲೂ ಹಾಗೆಯೇ ನಡೆಯುತ್ತಿದೆ! ನಮ್ಮ ಭರತಭೂಮಿಯಲ್ಲಿ ಮಾತ್ರವೇ ನಾವು ಹಿಂದೆ ಬಿದ್ದಿರುವುದು!" ಎಂದು ಉತ್ತರ ಬರೆದಳು.

ಹೆಂಗಸರ ಸೌಶೀಲ್ಯದ ಮತ್ತು ವಿದ್ಯಾಭ್ಯಾಸದ ವಿಷಯವಾಗಿ ಸರೋಜ ನಳಿನಿಯು ಏನೆನ್ನುತ್ತಿದ್ದಳೆಂದರೆ:—"ನಾವು ಈ ಪ್ರಪಂಚದಲ್ಲಿಯ ಜೀವನದ ಪೈಪೋಟಿಯಲ್ಲಿ ಪರಾಜಿತರಾಗದೆ ತಲೆಯೆತ್ತಿಕೊಂಡು ಬಾಳಬೇಕಾದರೆ, ನಮ್ಮ ದೇಶದ ಹೆಂಗಸರು ಒಂದು ಭಾಗದಲ್ಲಿ ಮಾತ್ರ ಶಕ್ತಿ ಸಾಮರ್ಥ್ಯಗಳನ್ನು ಪಡೆದರೆ ಸಾಲದು. ನಾನಾ ವಿಚಾರಗಳಲ್ಲಿ ಪೂರ್ಣ ಶಿಕ್ಷಣವನ್ನು ಪಡೆದು ಅವರು ಅಭಿವೃದ್ಧಿಹೊಂದಬೇಕು. ಒಂದು ಕಡೆ ಉತ್ತಮವಾದ ಭಾರತೀಯ ಸಂಪ್ರದಾಯಗಳನ್ನೂ, ಭಾರತೀಯ ಸ್ತ್ರೀಯರಿಗಿರಬೇಕಾದ ಸದಾಚಾರಗಳನ್ನೂ ಧರ್ಮವನ್ನೂ ದ್ವೇಷಿಸುತ್ತ ಅವುಗಳನ್ನು ಅನುಸರಿಸದಿರುವವರೂ, ಇನ್ನೊಂದುಕಡೆ ತೆರೆಯ ಹಿಂದೆ ಅವಿತುಕೊಂಡು, ಈ ಪ್ರಪಂಚದಲ್ಲಿ ಏನು ನಡೆಯುತ್ತಿದೆಯೆಂಬುದನ್ನು ತಿಳಿಯದೆ, ಕಣ್ಣು ಮುಚ್ಚಿಕೊಂಡು ಭಾರತದ ಪುರಾತನ ಪದ್ಧತಿಗಳನ್ನೆಲ್ಲವನ್ನೂ ಗೌರವಿಸುತ್ತ ಕುಳಿತಿರುವವರೂ,—ಈ ಎರಡು ತೆರದ ಜನರೂ ಖಂಡಿತವಾಗಿ ನಾಶವಾಗುವರು. ನಾವು ಇವೆರಡಕ್ಕೂ ಮಧ್ಯದ ಮಾರ್ಗವನ್ನು ಹಿಡಿಯಬೇಕು; ಎಂದರೆ ನಮ್ಮ ಭಾರತೀಯತೆಯ ಲಕ್ಷಣಗಳನ್ನು ಬಿಡದೆ ಇಟ್ಟುಕೊಂಡು, ಪ್ರಗತಿ ಸಾಧಕವಾದ ಭಾವನೆಗಳನ್ನು ಗ್ರಹಿಸುತ್ತಾ, ಕಾಲಕ್ಕೆ ತಕ್ಕಂತೆ ನಾವೂ ಮುಂದುವರಿಯಬೇಕು. ಹೀಗೆ ಮಾಡಿದರೆ ಮಾತ್ರವೇ ನಮ್ಮ ದೇಶವೂ ಇತರ ದೇಶಗಳಂತೆ ಮುಂಬರಿಯುವಂತೆ ಮಾಡುವುದು ನಮಗೆ ಸಾಧ್ಯವಾದೀತು. ಜಪಾನ್ ದೇಶದಲ್ಲಿ ಸ್ತ್ರೀಪುರುಷರಿಬ್ಬರೂ ಇದನ್ನು ಚೆನ್ನಾಗಿ ತಿಳಿದಿರುವರು. ಆದುದರಿಂದಲೇ ಅವರು ಈಗ ಅಭಿವೃದ್ಧಿಯ ಶಿಖರವನ್ನು ಮುಟ್ಟಿರುತ್ತಾರೆ. ನಾವಾದರೋ ಇನ್ನೂ ಶೋಚನೀಯವಾದ ಸ್ಥಿತಿಯಲ್ಲಿ ಹಿಂದುಳಿದಿರುವೆವು."

ಆಕೆ ತನ್ನ ಭಾರತೀಯ ಸ್ನೇಹಿತೆಯರಲ್ಲಿ ಒಬ್ಬರಿಗೆ ಬರೆದಿದ್ದ ಕಾಗದದಲ್ಲಿ ಕೆಲವು ಗಮನಾರ್ಹಗಳಾದ ವಾಕ್ಯಗಳಿದ್ದುವು:—"ಕುಲೀನ

ವರ್ಗಕ್ಕೆ ಸೇರಿದ ಕೆಲವು ಬಂಗಾಳೀ ಯುವತಿಯರಿಗೆ ಪಾಶ್ಚಾತ್ಯರ ಪ್ರತಿಯೊಂದು ಪದ್ಧತಿಯನ್ನೂ ಅನುಕರಿಸುವ ಹುಚ್ಚು ಹಿಡಿದಿರುವುದನ್ನು ಕಂಡರೆ ನನಗೆ ಹೇಳಲಾರದಷ್ಟು ಸಂಕಟವುಂಟಾಗುತ್ತದೆ. ಉದಾಹರಣೆಗಾಗಿ, ಯೂರೋಪಿನವರ ನರ್ತನ ಮುಂತಾದುವನ್ನು ಕೂಡ ನಮ್ಮ ಜನದಲ್ಲಿ ಆಚರಣೆಗೆ ತರಲು ಅವರು ಇಷ್ಟು ಆಶೆಪಡುವುದೇಕೋ ನನಗೆ ತಿಳಿಯದೆ ಇದೆ. ಪಾಶ್ಚಾತ್ಯರು ನಮಗೆ ಕಲಿಸಬಲ್ಲ ವಿದ್ಯೆ ಇದಕ್ಕಿಂತ ಉತ್ತಮವಾದದ್ದೇನೂ ಇಲ್ಲವೆ? ಪಾಶ್ಚಾತ್ಯರಿಗೆ ವಿಶೇಷ ಲಕ್ಷಣವಾಗಿರುವ ಇಂಥ ಪದ್ಧತಿಗಳನ್ನು ನಾವು ಅವರಿಗೇ ಬಿಟ್ಟುಬಿಟ್ಟು, ಅವರಲ್ಲಿ ಕಂಡು ಬರುವ ಒಳ್ಳೆಯ ಗುಣಗಳನ್ನು,—ಸ್ವಲ್ಪವೂ ಬೇಸರಿಕೆಯಿಲ್ಲದೆ ಶ್ರದ್ಧೆಯಿಂದ ದುಡಿಯುವುದು, ಧೈರ್ಯದಿಂದಲೂ ಆಸಕ್ತಿಯಿಂದಲೂ ಹೊಸ ಹೊಸ ಕೆಲಸಗಳನ್ನು ಆರಂಭಿಸುವುದು, ವಿಜ್ಞಾನ ಶಾಸ್ತ್ರಗಳಲ್ಲಿ ಚತುರತೆಯಿಂದ ಸಂಶೋಧನೆ ನಡಸಿ ಹೊಸ ಹೊಸ ಅಂಶಗಳನ್ನು ಕಂಡುಹಿಡಿಯುವುದು, ಪ್ರಜಾ ಸಮ್ಮತಿಯಿಂದ ಆಡಳಿತ ನಡೆಯಿಸಿ ಜನರ ಅಭಿವೃದ್ಧಿಯನ್ನೇ ಮುಖ್ಯವಾಗಿ ಭಾವಿಸಿ ಕೆಲಸಮಾಡುವುದು, ರಾಷ್ಟ್ರೀಯ ವಿಚಾರಗಳಲ್ಲಿ ಅವರಲ್ಲಿರುವ ಒಗ್ಗಟ್ಟು, ಅವರ ಸ್ತ್ರೀಯರಲ್ಲಿ ಕಂಡುಬರುವ ಆತ್ಮಸಹಾಯ ಮತ್ತು ಆತ್ಮಾವಲಂಬನೆ, ಮತ್ತು ಅವರಲ್ಲಿರುವ (ವಿಶೇಷವಾಗಿ ಇಂಗ್ಲಿಷರಲ್ಲಿರುವ) ಆಶ್ಚರ್ಯಕರವಾದ ಸಮಾಜ ಸೇವಾಸಕ್ತಿ ಮತ್ತು ಅನ್ಯೋನ್ಯ ಸಹಾಯಶೀಲತೆ ಇವೇ ಮುಂತಾದ ಸದ್ಗುಣಗಳನ್ನು—ನಾವು ಕಲಿಯಬಾರದೇಕೆ?"

ಸ್ತ್ರೀಯರ ಶಿಕ್ಷಣ ಕ್ರಮದಲ್ಲಿ ಗೃಹಕೃತ್ಯ ನಿರ್ವಾಹದ ವಿಚಾರವನ್ನೂ ಮತ್ತು ಮನೆಯಲ್ಲಿ ಮಾಡಬಹುದಾದ ಸಣ್ಣ ಸಣ್ಣ ಕೈಗಾರಿಕೆಗಳ ಕಲೆಯನ್ನೂ ಬೋಧಿಸಲು ಏರ್ಪಾಡು ಮಾಡುವುದು ಆವಶ್ಯಕವೆಂದು ಆಕೆ ಅರಿತಿದ್ದಳು. ಈ ಉದ್ದೇಶದಿಂದ ಆಕೆ ಹೋದೆಡೆಯಲ್ಲೆಲ್ಲಾ ವಿದ್ಯಾರ್ಥಿನಿಯರಿಗೆ ಹೊಲಿಯುವುದು, ಬಟ್ಟೆಗಳನ್ನು ಉಡುಪುಗಳಿಗಾಗಿ ಕತ್ತರಿಸುವುದು, ಸಾಧಾರಣ ಉಡುಪುಗಳನ್ನು ತಯಾರಿಸುವುದು ಮುಂತಾದುವನ್ನು ಪಾಠಶಾಲೆಯಲ್ಲಿ ಕಲಿಸಲು ಆಯಾ ಸ್ಥಳಗಳ ಮಹಿಳಾ ಸಂಘಗಳ ಮೂಲಕ ಏರ್ಪಾಡುಮಾಡುತ್ತಿದ್ದಳು. ಮತ್ತು ಸಮಿತಿಯ ಸದಸ್ಯರುಗಳೊಡನೆ ತಾನೂ ಪಾಠಶಾಲೆಗೆ ಹೋಗಿ ಹೊಲಿಗೆ, ಅಡಿಗೆ ಮಾಡುವುದು ಮೊದಲಾದ

ಗೃಹಿಣೀ ಕಲೆಗಳನ್ನು ಕಲಿತಿದ್ದ ಹುಡುಗಿಯರನ್ನು ಪರೀಕ್ಷಿಸಿ, ಅದರಲ್ಲಿ ನಿಪುಣರಾಗಿದ್ದವರಿಗೆ ಬಹುಮಾನಗಳನ್ನು ಕೊಡುತ್ತಿದ್ದಳು. ಬಂಕೂರಾ ದಲ್ಲಿದ್ದಾಗ ಆಕೆ ಘೋಷಾ ಹೆಂಗಸರಿಗಾಗಿ ಒಂದು ಔದ್ಯೋಗಿಕ ಪಾಠ ಶಾಲೆಯನ್ನು ಏರ್ಪಡಿಸಿ, ಅಲ್ಲಿಯ ಪಾಠಗಳ ಮೇಲ್ವಿಚಾರಣೆಯನ್ನು ನಡಸಲು ತಾನೇ ಪ್ರತಿನಿತ್ಯವೂ ಅಲ್ಲಿಗೆ ಹೋಗುತ್ತಿದ್ದಳು.

ಕಳೆದ ಮಹಾ ಯುದ್ಧದ ಕಾಲದಲ್ಲಿ ಸರೋಜ ನಳಿನಿಯು ಬೀರ್ ಭೂಮ್ ಜಿಲ್ಲೆಯಲ್ಲಿ ಜನಕ್ಕೆ ಭಾರೀ ಸಹಾಯವನ್ನು ಮಾಡಿದಳು. ಜನರನ್ನು ಸೈನ್ಯಕ್ಕೆ ಸೇರಿಸಲು ನಾನು ಕೂಡಿಸುತ್ತಿದ್ದ ಪ್ರತಿಯೊಂದು ಸಭೆಗೂ ಆಕೆಯೂ ಬರುತ್ತಿದ್ದಳು. ಸೈನ್ಯಕ್ಕೆ ಸೇರಲು ಅಲ್ಲಿಂದ ರೈಲು ಹತ್ತಿ ಹೊರಟ ಯುವಕರನ್ನು ಕಳುಹಿಸಿಕೊಟ್ಟು ಬರಲು ಆಕೆ ತಾನೇ ಸ್ಟೇಷನ್ನಿಗೆ ಹೋಗುತ್ತಿದ್ದಳು. ಸೈನಿಕವೃತ್ತಿಗೆ ಉಮೇದುವಾರರನ್ನು ಸಂಪಾದಿಸಬೇಕೆಂದು ಆ ಸ್ಥಳಕ್ಕೆ ಕೆಲವು ಬಂಗಾಳಿ ಸಿಪಾಯಿಗಳು ಬಂದಿದ್ದರು. ಆಗ ಆಕೆ ಮಹಿಳಾ ಸಂಘದ ಪರವಾಗಿ ಒಂದು ಔತಣವನ್ನು ಏರ್ಪಡಿಸಿದ್ದಲ್ಲದೆ, ಘೋಷಾ ಹೆಂಗಸರೇ ಅಡಿಗೆ ಮಾಡಿ ಅವರಿಗೆ ಬಡಿಸು ವಂತೆ ಮಾಡಿದ್ದಳು. ಮೆಸೊಪೊಟೇಮಿಯಾದಲ್ಲಿ ಯುದ್ಧಮಾಡುತ್ತಿದ್ದ ಸಿಪಾಯಿಗಳಿಗೆ ಪ್ರತಿಯೊಂದು ತಿಂಗಳೂ ಬಟ್ಟೆಗಳನ್ನೂ ತಿಂಡಿಗಳನ್ನೂ ಉಪ್ಪಿನಕಾಯಿ ಮುಂತಾದುವನ್ನೂ ವರ್ತಮಾನ ಪತ್ರಿಕೆಗಳನ್ನೂ ಕಳುಹಿಸಿ ಕೊಡಲು ಆಕೆ ತಕ್ಕ ಏರ್ಪಾಟುಗಳನ್ನು ಮಾಡಿದಳು.

ಗ್ರಾಮಾಂತರಗಳಲ್ಲಿ ನಡೆಯುತ್ತಿದ್ದ ವ್ಯವಸಾಯದ ಇಲಾಖೆಯ ಪ್ರದರ್ಶನಗಳಲ್ಲಿ, ಸ್ತ್ರೀಯರಿಗಾಗಿ ಗೊತ್ತಾಗಿದ್ದ ದಿನದಲ್ಲಿ, ಆಕೆ ಅಲ್ಲಿಗೆ ಹೋಗಿ, ಸ್ತ್ರೀಯರಿಗೆ ಪ್ರದರ್ಶನದಲ್ಲಿಟ್ಟಿರುವ ವಸ್ತುಗಳನ್ನು ಸ್ವಲ್ಪವೂ ಬೇಸರವಿಲ್ಲದೆ ವಿವರಿಸಿ ಹೇಳುತ್ತಿದ್ದಳು. ೧೯೨೦ನೆಯ ಇಸವಿಯಲ್ಲಿ ಕಲ್ಕತ್ತೆಯಲ್ಲಿ ನಡೆದ ಶಿಶು ಪೋಷಣೆಯ ಪ್ರದರ್ಶನದಲ್ಲಿ ಹೆರಿಗೆಯ ಶಾಖೆಯ ವಸ್ತುಗಳ ಬಳಿಯಲ್ಲಿ ಆಕೆ ಸ್ವತಃ ನಿಂತುಕೊಂಡು, ಘೋಷಾ ಸ್ತ್ರೀಯರಿಗೆ ಆ ವಸ್ತುಗಳ ವಿವರಗಳನ್ನು ತಿಳಿಸಿಕೊಡುವ ಕಾರ್ಯವನ್ನು ತಾನಾಗಿ ವಹಿಸಿಕೊಂಡಳು. ಮಹಾ ಯುದ್ಧದ ಕಾಲದಲ್ಲಿ ಶಿಪಾಯಿಗಳಿಗೆ ಸೌಕರ್ಯ ಗಳನ್ನು ಕಲ್ಪಿಸುವುದಕ್ಕೋಸ್ಕರವಾಗಿ ಹಣವನ್ನು ಕೂಡಿಸಲು ಕಲ್ಕತ್ತೆಯ

ಬಂಗಾಳಿ ಮಹಿಳೆಯರು "ಟ್ಯಾಬ್ಲೋ"* ಎಂಬ ಮೌನಾಭಿನಯವನ್ನು ಪ್ರದರ್ಶಿಸಿದರು. ಆ ಪ್ರದರ್ಶನದ ಮಧ್ಯದಲ್ಲಿ ಭಾರತ ಮಾತೆಯ ಆಕೃತಿಯೂ ಅದರ ಸುತ್ತಲೂ ಆಕೆಯ ಮಕ್ಕಳಂತೆ ಒಂದೊಂದು ಪ್ರಾಂತದ ಒಂದೊಂದು ಆಕೃತಿಯೂ ಇದ್ದುವು. ಅದರಲ್ಲಿ ಸರೋಜ ನಳಿನಿ ಬಂಗಾಳ ಪ್ರಾಂತವಾಗಿ ಪಾತ್ರ ವಹಿಸಿದ್ದಳು; ಆ ಪಾತ್ರ ಆಕೆಗೆ ಬಹು ಚೆನ್ನಾಗಿ ಒಪ್ಪಿತ್ತು.

ಸ್ತ್ರೀಯರ ಉದ್ಧಾರಕ್ಕಾಗಿ ನಿರಂತರವೂ ಏನನ್ನಾದರೂ ಮಾಡುತ್ತಲಿರುವುದೇ ಆಕೆಯ ಕೆಲಸವಾಗಿತ್ತು. "ಮನೆಯ ಕೆಲಸಗಳ ಜೊತೆಗೆ ಸಾಮಾಜಿಕ ಸೇವೆಯನ್ನು ಸ್ವಲ್ಪವಾದರೂ ಮಾಡದೆ ಒಂದು ದಿವಸವನ್ನೂ ಕಳೆಯಬಾರದು" ಎಂಬುದೇ ಆಕೆಯ ಧ್ಯೇಯ. ಹಾಗೆ ಕೆಲಸಮಾಡದೆ ಒಂದು ದಿವಸವನ್ನು ಕಳೆದರೂ ಆಕೆಯ ಮನಸ್ಸಿಗೆ ಅತೃಪ್ತಿಯಾಗುತ್ತಿತ್ತು. ಬಾರಸೆಟ್ ಎಂಬಕಡೆ ವಸ್ತುಪ್ರದರ್ಶನ ನಡೆದ ಕಾಲದಲ್ಲಿ, ಆ ಊರಿನಲ್ಲಿ ಒಂದು ಸೇವಾ ಸಂಘವನ್ನು ಸ್ಥಾಪಿಸುವುದಕ್ಕಾಗಿ ಸೇರಿದ ಒಂದು ಸ್ತ್ರೀಯರ ಸಭೆಗೆ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಆ ಊರಿನ ಮುಖ್ಯ ಜನರೆಲ್ಲರೂ ಆಕೆಯನ್ನು ಕರೆದರು. ಆಕೆ ಅಲ್ಲಿಗೆ ಹೋಗಿ ಆ ಕಾರ್ಯವನ್ನು ನೆರವೇರಿಸಬೇಕೆಂದು ಕುತೂಹಲದಿಂದಿದ್ದಳು. ಆದರೆ ಆ ವಸ್ತುಪ್ರದರ್ಶನವು ಆರಂಭವಾಗುವುದಕ್ಕೆ ಮುಂಚೆ ಆಕೆಗೆ ಮೈ ಸ್ವಸ್ಥವಿಲ್ಲದೆ ಹೋಯಿತು. ಅದೇ ಆಕೆಯ ಕೊನೆಗಾಲದ ಕಾಯಿಲೆ. ಸ್ತ್ರೀಯರ ಏಳಿಗೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲವಲ್ಲಾ ಎಂದು ಆಕೆ ಪದೇ ಪದೇ ಪೇಚಾಡುತ್ತಿದ್ದಳು.

ಸಮಾಜ ಸೇವೆಯಿಂದ ಆಕೆಗೆ ಉಂಟಾಗಿದ್ದ ಸಂತೋಷದ ಮುಂದೆ ಜೀವನದ ಯಾವ ವಿನೋದವೂ ಗಣ್ಯವಾಗಿರಲಿಲ್ಲ. ಆಕೆಯ ಸಲಹೆ ಸಹಾಯಗಳಿಂದ ಡಾರ್ಜೀಲಿಂಗಿನ ಹೆಂಗಸರ ಕೈಗಾರಿಕೆಯ ಶಾಲೆಯು ಮಹಿಳಾ ಸಮಿತಿಯಾಗಿ ಮಾರ್ಪಡಿಸಲ್ಪಟ್ಟಿತು. ೧೯೩೪ನೆಯ ಇಸವಿಯಲ್ಲಿ (ನವರಾತ್ರಿಯ) ದುರ್ಗಾ ಪೂಜೆಯ ರಜದ ಕಾಲದಲ್ಲಿ ಆಕೆ ಡಾರ್ಜೀಲಿಂಗಿನಲ್ಲಿದ್ದಾಗ, ಆಕೆಯ ಇಷ್ಟದಂತೆ ಬಂಗಾಳದ ಆರೋಗ್ಯ ಶಾಖೆಯ

---

* ಪಾತ್ರಗಳನ್ನು ಧರಿಸಿದವರು ಮಾತನಾಡದೆ ವಿವಿಧ ಭಂಗಿಗಳಲ್ಲಿ ಅಭಿನಯಿಸುವ ನಾಟಕ.

ಮುಖ್ಯಾಧಿಕಾರಿಗಳಾದ ಡಾಕ್ಟರ್ ಬೆಂಟ್ಲಿ ಅವರು ಡಾಕ್ಟರ್ ಮುರಾರಿ ಮಹಾನ್ ಬೋಸ್‌ರವರನ್ನು ಗ್ರಾಮ ನೈರ್ಮಲ್ಯದ (ಸ್ಯಾನಿಟೇಷನ್) ವಿಷಯವಾಗಿ ಚಿತ್ರ ಪ್ರದರ್ಶನ ಸಹಿತ ಉಪನ್ಯಾಸ ಮಾಡಲು ಕಳುಹಿಸಿಕೊಟ್ಟಿದ್ದರು. ಆ ಕಾಲದಲ್ಲಿ ಬಂಗಾಳದ ದೇಶ ಸೇವಾ ಸಮಿತಿಯ ಪ್ರಸಿದ್ಧ ಉಪನ್ಯಾಸಕರಾದ ಶ್ರೀ|| ನಿಶಿಕಾಂತ ಬೋಸ್ ರವರೂ ಡಾರ್ಜಿಲಿಂಗಿನಲ್ಲಿದ್ದರು. ಸರೋಜ ನಳಿನಿಯು ಇವರಿಬ್ಬರನ್ನೂ ಕಂಡು ಮಾತನಾಡಿದ ಬಳಿಕ, ಡಾರ್ಜೀಲಿಂಗಿನ ಹೆಂಗಸರು ಮಕ್ಕಳಿಗೋಸ್ಕರ ಆರೋಗ್ಯ ವಿಚಾರವಾಗಿ ಕೆಲವು ಉಪನ್ಯಾಸಗಳನ್ನು ಏರ್ಪಾಟು ಮಾಡಿದಳು. ಇದರಲ್ಲಿ ಒಂದು ಉಪನ್ಯಾಸವು ಸ್ಥಳೀಯ ಶಾಲೆಗಳಲ್ಲಿದ್ದ ಆಂಗ್ಲೇಯ, ಬಂಗಾಳಿ, ನೇಪಾಳಿ ಮತ್ತು ಭೂತಿಯಾ ಹುಡುಗಿಯರಿಗಾಗಿ "ಟೌನ್ ಹಾಲಿ" ನಲ್ಲಿ ಒಂದು ಸಾಯಂಕಾಲ ಏರ್ಪಾಡಾಗಿತ್ತು. ಅದೇ ಸಾಯಂಕಾಲ ಮತ್ತೊಂದು ಕಡೆಯಲ್ಲಿ ಬಂಗಾಳದ ಗವರ್ನರವರ ಪತ್ನಿಯ ಗೌರವಾರ್ಥವಾಗಿ ಒಂದು ನಾಟಕ ನಡೆಯಲು ಸಿದ್ಧವಾಗಿತ್ತು. ಊರಿನ ಅನೇಕ ಶ್ರೀಮಂತ ಸ್ತ್ರೀಯರು ನಾಟಕವನ್ನು ನೋಡಲು ಹೊರಟುಹೋದರು. ಆದರೆ ಸರೋಜ ನಳಿನಿಯು ಹಾಗೆ ಮಾಡದೆ ಟೌನ್ ಹಾಲಿನಲ್ಲೇ ಇದ್ದಳಲ್ಲದೆ, ಯಾವ ಯಾವ ವಿಷಯಗಳನ್ನು ಚಿತ್ರ ಸಹಿತವಾಗಿ ಬೋಧಿಸಬೇಕೆಂಬ ವಿಷಯದಲ್ಲಿ ಉಪನ್ಯಾಸಕರಿಗೆ ಸಲಹೆಗಳನ್ನು ಕೊಟ್ಟಳು.

ಡಾರ್ಜೀಲಿಂಗಿನ ಭೂತಿಯಾ ಮತ್ತು ಬಂಗಾಳಿ ಸ್ತ್ರೀಯರಿಗಾಗಿ ಮತ್ತೊಂದು ಉಪನ್ಯಾಸವನ್ನು "ನೃಪೇಂದ್ರ ನಾರಾಯಣ ಮಂದಿರ" ದಲ್ಲಿ ಸರೋಜ ನಳಿನಿಯು ಏರ್ಪಡಿಸಿದಳು. ಶ್ರೀಮಂತರಾದ ಹಿಂದೂ ಸ್ನೇಹಿತರೊಬ್ಬರು ಅದೇ ದಿವಸ ಡಾರ್ಜಿಲಿಂಗ್ "ಜಮಖಾನ ಕ್ಲಬ್ಬಿ"ನಲ್ಲಿ ಒಂದು ಸಂತೋಷ ಕೂಟವನ್ನೇರ್ಪಡಿಸಿದ್ದರು. ಸರೋಜ ನಳಿನಿಯನ್ನು ಅಲ್ಲಿಗೆ ಬರಬೇಕೆಂದು ಅವರು ಬಹು ಬಲಾತ್ಕಾರ ಮಾಡಿದರು. ಉಪನ್ಯಾಸ ಮಂದಿರವು ಬಹು ದೂರದಲ್ಲಿತ್ತು. ಆಕೆಗೆ ಬಹಳ ನೆಗಡಿಯೂ ಆಗಿತ್ತು. ಆ ದಿನ ಸಂಜೆ ಬಹಳ ಚಳಿ. ಆದರೂ ಅವಳು ಅದೊಂದನ್ನೂ ಲಕ್ಷ್ಯ ಮಾಡದೆ ಉಪನ್ಯಾಸಕ್ಕೆ ಹೋದಳೇ ಹೊರತು ಔತಣದ ಊಟಕ್ಕೆ ಹೋಗಲಿಲ್ಲ.

ಸರೋಜ ನಳಿನಿಯು ತನ್ನ ಕೈಕೆಳಗಿನ ನೌಕರರ ಮನೆಗೆ ಹೋಗಿ ಅವರ ಪತ್ನಿಯರನ್ನು ತಾನೇ ಭೇಟಿಮಾಡಿ ಬರುತ್ತಿದ್ದಳು. ಮೊದಲು ಅವರೇ ಬಂದು ತನ್ನನ್ನು ನೋಡಬೇಕೆಂದು ಅವಳು ಇಟ್ಟುಕೊಂಡಿರಲಿಲ್ಲ. ಸರ್ಕ್ಯೂಟು ಹೋದಾಗ, ನಾನು ಪೋಲೀಸು ಠಾಣೆಯನ್ನೋ ಅಥವಾ ಯಾವುದಾದರೂ ಕಛೇರಿಯನ್ನೋ ತನಖಿ ಮಾಡುವ ಕಾಲದಲ್ಲಿ, ಆಕೆ ಜನಾನಾಗಳಿಗೆ ಹೋಗಿ ಕೆಳ ನೌಕರರುಗಳ ಹೆಂಡತಿಯರನ್ನು ನೋಡಿ ಅವರ ಘನಸ್ಸಿಗೆ ಸಂತೋಷವನ್ನುಂಟುಮಾಡಿ ಬರುತ್ತಿದ್ದಳು. ಅವಳಿಗೆ ಯಾವಾಗಲೂ ಬಡವರ ಚಿಂತೆ.

೧೯೦೮ ರಲ್ಲಿ ಸೆಪ್ಟಂಬರ್ ತಿಂಗಳಲ್ಲಿ ಮಳೆಯಾಗದೆ ಬೆಳೆಹೋಗಿ ಎಲ್ಲೆಲ್ಲೂ ಹಾಹಾಕಾರವೆದ್ದಿತ್ತು. ಮಹಿಳಾ ಸಮಿತಿಯ ಪರವಾಗಿ ಆಕೆ ಅನೇಕ ಕಡೆಗಳಿಂದ ಚಂದಾ ಹಣವನ್ನೆತ್ತಿ, ಜಿಲ್ಲೆಯ ಪ್ರತಿಭಾಗದಲ್ಲಿಯೂ ಅಕ್ಕಿಯನ್ನು ಬಡವರಿಗೆ ಪೇಟೆ ಧಾರಣೆಗಿಂತ ಕಡಮೆ ಬೆಲೆಗೆ ದೊರಕಿಸುವಂತೆ ಏರ್ಪಾಟು ಮಾಡಿದಳು.

ನಾವು ಜಪಾನಿನಲ್ಲಿಯೂ ಯೂರೋಪಿನಲ್ಲಿಯೂ ಸಂಚರಿಸುತ್ತಿದ್ದಾಗ ಮಕ್ಕಳ ಮತ್ತು ಹೆಂಗಸರ ಏಳಿಗೆಗಾಗಿ ಸ್ಥಾಪಿತವಾಗಿದ್ದ ಪ್ರತಿಯೊಂದು ಶಾಲೆಯನ್ನೂ ಇತರ ಸಂಸ್ಥೆಗಳನ್ನೂ ಆಕೆ ಪರಿಶೀಲಿಸಿ, ಅಲ್ಲಿಯ ಏರ್ಪಾಡುಗಳನ್ನು ತಿಳಿದುಕೊಂಡಳು. ಇದರಿಂದ ತನಗೆ ಎಷ್ಟು ಶ್ರಮವಾದರೂ ಲಕ್ಷ್ಯಮಾಡದೆ, ಇಂಡಿಯಕ್ಕೆ ಹಿಂತಿರುಗಿ ಬಂದ ಮೇಲೆ ತನ್ನ ದೇಶದ ಸ್ತ್ರೀಯರ ಏಳಿಗೆಗಾಗಿ ಸೇವೆ ಮಾಡಲು ತಾನು ತಿಳಿದಿರಬೇಕಾದ ವಿಷಯಗಳನ್ನೆಲ್ಲಾ ಬಹು ಕುತೂಹಲದಿಂದ ಆಗ ಅವಳು ತಿಳಿದುಕೊಂಡಳು. ತಾನು ಅಲ್ಲಿ ಕಂಡದ್ದನ್ನು ಪುಸ್ತಕರೂಪದಲ್ಲಿ ಪ್ರಚುರಪಡಿಸಿದರೆ ತನ್ನ ದೇಶೀಯರಿಗೆ ಉಪಯೋಗವಾಗಬಹುದೆಂಬ ಉದ್ದೇಶದಿಂದ ತಾನು ಪ್ರತಿದಿವಸವೂ ಅಲ್ಲಿ ಕಲಿತ ಹೊಸ ವಿಷಯಗಳನ್ನೆಲ್ಲ ಬರೆದಿಡುತ್ತಿದ್ದಳು. *

ನಾವು ಇಂಗ್ಲೆಂಡಿನಲ್ಲಿದ್ದಾಗ ಮಿಸೆಸ್ ಸರೋಜಿನಿ ನಾಯಿಡು ಅವರು ಆಕೆಗೆ ಬಹು ಸಹಾಯ ಮಾಡಿ, ಹೆಂಗಸರ ಪುರೋಭಿವೃದ್ಧಿಗಾಗಿ ಏರ್ಪ

---

* ಈಕೆಯ ಜಪಾನ್ ಪ್ರವಾಸದ ಚರಿತ್ರೆಯು ವಂಗ ಭಾಷೆಯಲ್ಲಿ ಪ್ರಚುರವಾಗಿದೆ.

ಟ್ಟಿದ್ದ ಅನೇಕ ಸಂಸ್ಥೆಗಳಿಗೆ ಕರೆದುಕೊಂಡು ಹೋದರು. ಈ ಸಮಯದಲ್ಲಿ ಆಕೆ ಅನೇಕ ಸ್ತ್ರೀಯರ "ಕ್ಲಬ್ಬು" ಗಳೆಂಬ ಗೋಷ್ಠೀ ಗೃಹಗಳನ್ನೂ, ಅನಾಥ ಸಂರಕ್ಷಣ ಶಾಲೆಗಳನ್ನೂ, ಪ್ರಸವ ಶಾಲೆಗಳನ್ನೂ, ಶಿಶು ಪೋಷಣಾಲಯಗಳನ್ನೂ ನೋಡಿ ಬಂದಳು.

ಇಂಗ್ಲೆಂಡಿನಲ್ಲಿ ಸರೋಜ ನಳಿನಿ ನೋಡಿದ ಅನೇಕ ಸಂಗತಿಗಳನ್ನು ಮೆಚ್ಚಿದಳು. ಮಹಾ ಯುದ್ಧದ ಅನಂತರ ಇಂಗ್ಲಿಷ್ ಜನದ ಪ್ರತಿಯೊಂದು ಅಂತಸ್ಸಿನಲ್ಲಿಯೂ ನೆಲಸಿದ್ದ ನಿಜವಾದ ಸಮಾಜ ಸೇವೆಯ ಭಾವನೆಯನ್ನು ನೋಡಿ ಬಹು ಸಂತೋಷಪಟ್ಟಳು. ಸಾಮಾನ್ಯ ಇಂಗ್ಲಿಷ್ ಹುಡುಗಿಯರ ಚಟುವಟಿಕೆಯೂ, ಅವರಿಗೆ ಸದಾಕಾಲದಲ್ಲಿಯೂ ಇರತಕ್ಕ ಸಂತೋಷ ಚಿತ್ತವೂ ಅವಳ ಮನಸ್ಸಿಗೆ ಹರ್ಷವನ್ನುಂಟುಮಾಡಿತಲ್ಲದೆ, ಆಗಾಗ್ಗೆ "ಅಯ್ಯೋ, ನಮ್ಮ ಹುಡುಗಿಯರು ೨೦ ವರ್ಷಕ್ಕೇ ಮುದುಕಿಯರಾಗಿ ಉತ್ಸಾಹ ಶೂನ್ಯವಾದ ಜೀವವನ್ನು ಕಳೆಯುವುದು ಎಂದಿಗೆ ನಿವಾರಣೆ ಯಾಗಿ, ಅವರುಗಳು ಈ ರೀತಿ ನಗುನಗುತ ವಿನೋದಶೀಲರಾಗಿರಲು ಎಂದಿಗೆ ಆದೀತೋ!" ಎನ್ನುತ್ತಿದ್ದಳು.

ಆದರೆ ಹಿಂದೂಸ್ಥಾನದಲ್ಲ ಹಿಂದೂ ಸ್ತ್ರೀಯರು ಯೂರೋಪಿನವರಂತೆ "ಬಾಲ್ ರೂಂ" ಮಂದಿರಗಳಲ್ಲ ಕುಣಿಯುವುದನ್ನು ಯಾವ ಕಾರಣದಿಂದ ಆಕೆ ಖಂಡಿಸಿದಳೋ, ಅದೇ ಕಾರಣದಿಂದಲೇ ಇಂಗ್ಲೆಂಡಿನ ಸಮುದ್ರ ತೀರ ಸ್ಥಳಗಳಲ್ಲಿ ಗಂಡಸರೂ ಹೆಂಗಸರೂ ಒಟ್ಟಿಗೆ ಸ್ನಾನ ಮಾಡುವುದೇ ಮುಂತಾದ ಅಮರ್ಯಾದೆಗಳನ್ನೂ ಆಕೆ ಖಂಡಿಸಿದಳು.

ಇಂಗ್ಲೆಂಡಿನಲ್ಲಿದ್ದಾಗ ಷೇಕ್ಸ್ಪಿಯರ್ ಮೊದಲಾದ ದೊಡ್ಡ ಕವಿಗ ಳಿಂದ ರಚಿತವಾದ ನಾಟಕಗಳನ್ನೂ ಮತ್ತು ಇತರ ಗಂಭೀರವಾದ ನಾಟಕ ಗಳನ್ನೂ ನೋಡಿ ಆಕೆಯು ಸಂತೋಷಪಡುತ್ತಿದ್ದಳು. ಆದರೆ ಆ ಕಾಲ ದಲ್ಲಿ ಸಾಮಾನ್ಯ ಜನರು ವಿಶೇಷವಾಗಿ ಮೆಚ್ಚುತ್ತಿದ್ದ, ಅಸಭ್ಯವಾದ ಮಾತು ಗಳಿಂದಲೂ ಹಾಸ್ಯದಿಂದಲೂ ಕೂಡಿದ, ಸಂಗೀತ ನಾಟಕಗಳನ್ನು ಕಂಡು ಆಕೆಗೆ ಅಸಹ್ಯವುಂಟಾಯಿತು. ಆ ನಾಟಕಗಳಲ್ಲಿ ನಟರು ಹಾಕಿಕೊಳ್ಳತಕ್ಕ ಉಡುಪುಗಳು ಆಕೆಗೆ ಬಹು ಅಶ್ಲೀಲವಾಗಿಯೂ ಅಸಹ್ಯಕರವಾಗಿಯೂ ತೋರಿದುವಲ್ಲದೆ, ಈ ಬಗೆಯ ಹೇಯವಾದ ನಾಟಕಗಳನ್ನು ನೋಡಲು

ಆಂಗ್ಲೇಯರಲ್ಲಿ ಚಿಕ್ಕವರೂ ದೊಡ್ಡವರೂ ಏಕೆ ಇಷ್ಟು ಆಶೆಪಡುತ್ತಾರೆಂದೂ ಆಕೆ ಆಶ್ಚರ್ಯಪಡುತ್ತಿದ್ದಳು.

೧೯೨೧ನೆಯ ಇಸವಿಯಲ್ಲಿ ನಾವು ಇಂಗ್ಲೆಂಡ್ ಮತ್ತು ಜಪಾನ್ ದೇಶಗಳಿಂದ ನಮ್ಮ ದೇಶಕ್ಕೆ ಹಿಂತಿರುಗಿ ಬರುತ್ತಿದ್ದಾಗ ತನ್ನ ಸ್ನೇಹಿತರೊಬ್ಬರಿಗೆ ಅವಳು ಹೀಗೆ ಬರೆದಳು:—"ಒಂದೂವರೆ ವರ್ಷದ ಅನಂತರ ನಾವು ಹಿಂತಿರುಗಿ ಬರುತ್ತಿದ್ದೇವೆ. ನಮ್ಮ ಹೃದಯವು ಭಾವಭರಿತವಾಗಿದೆ. ಈ ಲೋಕದಲ್ಲಿ ಸ್ವಗೃಹ ಸ್ವದೇಶಗಳಿಗೆ ಸಮಾನವಾದದ್ದು ಯಾವುದೂ ಇಲ್ಲ."

---

## ಒಂಬತ್ತನೆಯ ಅಧ್ಯಾಯ

## ಒಂದು ಹಳ್ಳಿಯಲ್ಲಿ

ಮೊದಲಿನಿಂದ ತಾಯಿ ಅಜ್ಜಿಯರ ಸಹವಾಸದಲ್ಲಿದ್ದು, ಸ್ತ್ರೀಯರಿಗೆ ಸ್ವಾಭಾವಿಕವಾದ ನಮ್ರತೆ, ಲಜ್ಜೆ, ಸರಳವರ್ತನೆ, ಸಂಪ್ರದಾಯ ಶ್ರದ್ಧೆ ಮುಂತಾದವುಗಳನ್ನು ಸರೋಜನಳಿನಿಯು ಅವರಿಂದ ಬಾಲ್ಯದಲ್ಲಿಯೇ ಕಲಿತಿದ್ದಳು. ಆ ಗುಣಗಳು ಅವಳ ಸ್ವಭಾವವೇ ಆಗಿ ಪರಿಣಮಿಸಿದ್ದುವು. ಆ ಗುಣಗಳೇ ಆಕೆಯಲ್ಲಿ ಮಹಿಳೆಯರು ಇಟ್ಟಿದ್ದ ನಂಬಿಕೆಗೂ ಆದರಕ್ಕೂ ಕಾರಣಗಳಾಗಿದ್ದುವು. ಅವುಗಳಿಂದಲೇ ಸರೋಜನಳಿನಿಯು ಘೋಷಾ ಹೆಂಗಸರ ಸಂಗಡ ಸಲಿಗೆಯಿಂದ ಕಲೆತು ಮಾತನಾಡುವುದಕ್ಕೂ, ಅದೇ ರೀತಿ ಅವರೂ ಆಕೆಯನ್ನು ತಮ್ಮವಳಂತೆ ಭಾವಿಸಿ ಸಂಕೋಚಪಡದೆ ಮಾತನಾಡುವುದಕ್ಕೂ ಅವಕಾಶವಾಯಿತು. ನಮ್ಮ ಮದುವೆಯಾದ ಮೂರು ವರ್ಷಗಳ ಅನಂತರ ನಾವು ನಮ್ಮ ಪೂರ್ವದ ಮನೆಯನ್ನು ನೋಡಲು ಹೋಗಬೇಕೆಂದು ನಿಶ್ಚಯಮಾಡಿದಾಗ ಈ ಗುಣಗಳು ಪರೀಕ್ಷಿತವಾದುವು. ಆ ಊರು ಕಲ್ಕತ್ತೆಯಿಂದ ಕೆಲವುನೂರು ಮೈಲಿಗಳ ದೂರದಲ್ಲಿರುವ ಅಸ್ಸಾಮ್ ಪ್ರಾಂತದ ಸಿಲ್ಹೆಟ್ ಡಿಸ್ಟ್ರಿಕ್ಟಿನಲ್ಲಿ ವೀರಶ್ರೀ ಎಂಬ ಒಂದು ಗ್ರಾಮ. ಸರೋಜನಳಿನಿಗೆ ನಮ್ಮ ನೆಂಟರನ್ನೂ ನಾನು ಹುಟ್ಟಿ ಬೆಳೆದ ಸ್ಥಳಗಳನ್ನೂ ನೋಡಬೇಕೆಂಬ ತಡೆಯಲಾಗದ ಆಶೆಯಿದ್ದದ್ದೇ ಈ ಪ್ರಯಾಣಕ್ಕೆ ಕಾರಣವಾಗಿತ್ತು. ತಾನು ತನ್ನ ಗಂಡನ ಬಂಧುಬಳಗ

ಗಳನ್ನೆಲ್ಲ ನೋಡಬೇಕು; ಅವರು ತನ್ನನ್ನು ಹೊಸ ಸೊಸೆಯಂತೆ ಆದರದಿಂದ ಬರಮಾಡಿಕೊಳ್ಳಬೇಕು—ಎಂಬ ಆಶೆ ಅವಳಿಗಿತ್ತು. ನಾನೇನೋ ನಾವು ಅಲ್ಲಿಗೆ ಹೋಗುವುದು ಸರಿಯಾಗದೆಂದೇ ಶಂಕೆಪಡುತ್ತ ಅಡ್ಡಿ ಪಡಿಸುತ್ತಿದ್ದೆ. ವಿಲಾಯತಿಯಿಂದ ಬಂದಮೇಲೆ ನಾನು ನಮ್ಮ ಗ್ರಾಮಕ್ಕೆ ಹೋಗಿರಲಿಲ್ಲ. ಗ್ರಾಮಾಂತರಗಳಲ್ಲಿರುವ ಪೂರ್ವಸಂಪ್ರದಾಯದವರು ಸಮುದ್ರ ಪ್ರಯಾಣ ಮಾಡಿದವರನ್ನು ಸವ್ಯವಹಾರಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಆದುದರಿಂದ ಅವರು ನಮ್ಮನ್ನು ಆದರದಿಂದ ಕಾಣುವರೆಂದು ನಾನು ನಂಬಿರಲಿಲ್ಲ. ಆದರೆ ಸರೋಜ ನಳಿನಿಯ ಬಗ್ಗೆ ನನ್ನ ಶಂಕೆ ಇನ್ನೂ ಹೆಚ್ಚಾಗಿತ್ತು. ಆಕೆಯು ಅಂಥ ಹಳ್ಳಿಗಾಡಿನ ಸ್ಥಳಕ್ಕೆ ಎಂದೂ ಹೋದವಳೇ ಅಲ್ಲ. ಸಾಧಾರಣವಾಗಿ ಪಟ್ಟಣವಾಸ ಮಾಡಿದ ಈ ಕಾಲದ ಹುಡುಗಿಯರಿಗೆ, ಗ್ರಾಮವಾಸಿಗಳಾಗಿ ಪುರಾತನ ಪದ್ಧತಿಗಳನ್ನವಲಂಬಿಸಿರುವ ಗ್ರಾಮಸ್ಥರುಗಳನ್ನು ಕಂಡರೆ ಹೇಗೆ ಒಂದು ಬಗೆಯ ಅಸಹ್ಯವುಂಟಾಗುವುದೋ, ಅದೇ ರೀತಿ ಆಕೆಯೂ ಅಸಹ್ಯಪಡುವಳೆಂದು ನನಗೆ ತೋರಿತ್ತು; ಮತ್ತು ನನ್ನ ಬಂಧುಗಳು ಆಕೆಯನ್ನು ಆದರಿಸುವರೋ ಇಲ್ಲವೋ ಎಂದೂ ನನಗೆ ಬಹಳ ಸಂದೇಹವಾಗಿತ್ತು. ಪ್ರಾಚೀನ ಸಂಪ್ರದಾಯದ ಹಿಂದೂ ಜನರಲ್ಲಿ,—ಅದರಲ್ಲೂ ಪಾಶ್ಚಾತ್ಯ ಸಂಪ್ರದಾಯಗಳ ಸಂಪರ್ಕವೇ ಇಲ್ಲದ ಇಂಥ ಗ್ರಾಮಾಂತರಗಳಲ್ಲಿ,—ಜನರು ವಿದ್ಯಾವತಿಯರಾದ ಹೆಂಗಸರನ್ನು ಹೀನಾಯವಾಗಿ ನೋಡುತ್ತಿದ್ದರಲ್ಲದೆ, ಅವರು ಮರ್ಯಾದೆ ಮೀರಿದವರೆಂದೂ ತಿಳಿದಿದ್ದರು. ಅಂಥ ಸ್ತ್ರೀಯರನ್ನು ಅವರು ಅಪಹಾಸ್ಯದಿಂದ "ಮೆಮ್‌ಗಳು" (ಇಂಗ್ಲಿಷಿನ "ಮ್ಯಾ'ಮ್" ಅಥವಾ "ಮ್ಯಾಡಮ್" ಎಂಬುದರ ತದ್ಭವರೂಪ) ಎಂದು ಕರೆಯುತ್ತಿದ್ದರು. ಸಂಪ್ರದಾಯ ನಿಷ್ಠರಾದ ಹಿಂದುಗಳು ಐರೋಪ್ಯ ಹೆಂಗಸರನ್ನೆಲ್ಲಾ ವಿದ್ಯಾವತಿಯರಂತೆ ನಟನೆ ಮಾಡುವವರೆಂದೂ, ಆ ಹೆಂಗಸರು ಅಡಿಗೆ ಮುಂತಾದ ಮನೆ ಕೆಲಸಗಳಿಗೆ ಕೈ ಹಾಕುವವರೇ ಅಲ್ಲವೆಂದೂ ತಿಳಿದಿದ್ದರು. ಎಲ್ಲಾ "ಮೆಮ್"ಗಳೂ ಲಘು ಪ್ರವೃತ್ತಿಯುಳ್ಳವರೆಂದೂ, ಕುದುರೇ ಸವಾರಿ ಮಾಡುವುದು, ನಾಟ್ಯವಾಡುವುದು ಅಥವಾ ಕಾಂಬರಿಗಳನ್ನು ಓದುವುದು—ಇವುಗಳಲ್ಲಿ ಕಾಲ ಕಳೆಯುತ್ತಾ, ಮನೆಗೆಲಸಗಳನ್ನೂ ಮಕ್ಕಳ ಪೋಷಣೆಯನ್ನೂ "ಆಯಾ" (ದಾದಿ)ಗಳಿಗೆ ವಹಿಸತಕ್ಕವರೆಂದೂ ತಿಳಿ

ದಿದ್ದರು. ಹಿಂದೂ ಹೆಂಗಸರುಗಳಂತೆ "ಮೆಮ್"ಗಳು ತಮ್ಮ ಹಿರಿಯರಿಗೆ ನಮಸ್ಕರಿಸುವುದಾಗಲಿ ಅಥವಾ ಇತರ ವಿಧಗಳಲ್ಲಿ ಗೌರವ ತೋರುವುದಾಗಲಿ ಇಲ್ಲವೆಂದೂ, ಅವರು ಮಾನಸ್ಥರೂ ಮಹಿಳೋಚಿತ ಶೀಲೆಯರೂ ಅಲ್ಲವೆಂದೂ ತಿಳಿದಿದ್ದರು. "ಮೆಮ್"ಗಳು ಊಟವಾದ ಮೇಲೆ ಬಾಯಿ ಮುಕ್ಕಳಿಸಿ ಕೈಕಾಲು ತೊಳೆಯುವುದಿಲ್ಲವೆಂದೂ, ತಮ್ಮ ಪತಿಗಳಿಗೂ ಕೂಡ ಮರ್ಯಾದೆ ತೋರಿಸುವುದಿಲ್ಲವೆಂದೂ, ಅವರನ್ನು ತಮ್ಮ ಸೇವಕರಂತೆ ಕಾಣುತ್ತಾರೆಂದೂ, "ಮೆಮ್"ಗಳು ಗಂಭೀರವಾಗಿ ನಡೆಯುವುದಿಲ್ಲವೆಂದೂ, ಹಾರುತ್ತಲೂ ವಕ್ರ ವಕ್ರವಾಗಿಯೂ ಓಡಾಡುತ್ತಾರೆಂದೂ, ಔದ್ಧತ್ಯದಿಂದ ವರ್ತಿಸುವರೆಂದೂ, ಗ್ರಾಮಾಂತರದ ಜನರನ್ನೂ ಅವರ ನಡತೆಗಳನ್ನೂ ಕಂಡು ಅಸಹ್ಯಪಡುತ್ತಾರೆಂದೂ, "ಮೆಮ್"ಗಳು ತಮ್ಮ ಮಕ್ಕಳಿಗೆ ತಾವು ಹಾಲು ಕೊಡುವುದಿಲ್ಲವೆಂದೂ, ಅವುಗಳನ್ನು "ಆಯಾ" (ದಾದಿ) ಗಳ ರಕ್ಷಣೆಗೆ ಒಪ್ಪಿಸಿ, ಸೀಸೆಯಿಂದ ಹಾಲು ಕುಡಿಸುತ್ತಾರೆಂದೂ, ಹಳ್ಳಿಯ ಜನರು ನಂಬಿದ್ದರು. ಐರೋಪ್ಯ ಸ್ತ್ರೀಯರು ಮಾತ್ರವಲ್ಲದೆ, ಈಗಿನ ಕಾಲದ ವಿದ್ಯಾವತಿಯರಾದ ಎಲ್ಲಾ ಭಾರತೀಯ ಸ್ತ್ರೀಯರೂ ಗ್ರಾಮವಾಸಿಗಳ ದೃಷ್ಟಿಗೆ "ಮೆಮ್"ಗಳೇ ಆಗಿದ್ದರು! "ಮೆಮ್"ಗಳಂತೆ ಕಾಲು ಚೀಲಗಳನ್ನೂ ಮೋಜಾಗಳನ್ನೂ ತೊಟ್ಟು, ಮನೆಯ ಕೆಲಸಗಳೆಲ್ಲಾ ತುಚ್ಛವೆಂದೂ ಅಗೌರವಕರವೆಂದೂ ಭಾವಿಸಿ, ಅವುಗಳನ್ನು ಮಾಡದೆ, ಕಾದಂಬರಿಗಳನ್ನು ಓದುತ್ತಾ ಕುಳಿತುಕೊಳ್ಳುತ್ತಾರೆಂಬುದೇ ಅವರ ಭಾವನೆ. ಈ ಕಾರಣಗಳಿಂದ ಈಗಿನ ಕಾಲದ ನಾಗರಿಕ ವಿದ್ಯಾಭ್ಯಾಸವು ನಮ್ಮ ಸ್ತ್ರೀಯರಿಗೆ ಸರಿಯಲ್ಲವೆಂದೂ, ಅದು ಅವರ ನೈಜಗುಣವನ್ನು ಹಾಳುಮಾಡಿ "ಮೆಮ್"ಗಳನ್ನಾಗಿ ಮಾಡುವುದೆಂದೂ ಅವರು ಅಭಿಪ್ರಾಯಪಡುತ್ತಿದ್ದರು.

ನಾವು ಬರುವ ಸಮಾಚಾರವು ನನ್ನ ನಂಟರಿಗೂ ಗ್ರಾಮಸ್ಥರಿಗೂ ತಿಳಿದಾಗ ನನ್ನ ಜೊತೆಯಲ್ಲಿ ಬರುವ "ಮೆಮ್ ಬೌ" * ವಿಷಯದಲ್ಲಿ ಊಹಾಪೋಹೆಗಳೂ ಮತ್ತು ಅವಳು ಹೇಗಿರುವಳೋ, ಹೇಗೆ ನಡೆದು

* "ಬೌ" ಅಂದರೆ ಬಂಗಾಳಿಯಲ್ಲಿ ಸೊಸೆ ಮತ್ತು ಮದವಣಗಿತ್ತಿ. . ಮದುವೆಯಾದ ಹೆಂಗಸು ಮನೆಗೆ ಹಿರಿಯಳಾಗುವವರೆಗೂ ಆಕೆಯನ್ನು ಗಂಡನ ಮನೆಯಲ್ಲಿ "ಬೌ" ಎಂದು ಕರೆಯುವುದು ವಾಡಿಕೆ.

ಕೊಳ್ಳುವಳೋ, ನೋಡಬೇಕೆಂಬ ಕುತೂಹಲವೂ ಅವರಲ್ಲಿ ಬಹಳವಾಗಿ ಉಂಟಾದುವು.

"ಮೆಮ್"ಗಳು ಆಂಗ್ಲೇಯರಾಗಲಿ, ಭಾರತೀಯರಾಗಲಿ,—ಅವರು ಹಳ್ಳಿಯವರನ್ನು ತುಚ್ಛಮಾಡಿ ಅವಮಾನ ಪಡಿಸುವುದು ಸಾಮಾನ್ಯವಾಗಿದ್ದುದರಿಂದ, ನನ್ನ ಬಂಧುಗಳಲ್ಲನೇಕರು ತಾವು ಬಹಳ ಕಳವಳಪಡುತ್ತಿದ್ದುದಾಗಿಯೂ, ಬೈಗಳನ್ನು ಕೇಳಿ ಅಪಮಾನವನ್ನು ಸಹಿಸಲು ತಾವು ಸಿದ್ಧವಾಗಿದ್ದುದಾಗಿಯೂ ನನಗೆ ಆಮೇಲೆ ಹೇಳಿದರು.

ಪ್ರಯಾಣಕ್ಕೆ ಗೊತ್ತಾಗಿದ್ದ ದಿನ ಬಂತು. ರೆಯಿಲಿನಿಂದ ನಮ್ಮ ಗ್ರಾಮಕ್ಕೆ ಎಷ್ಟು ಹತ್ತಿರ ಹೋಗಬಹುದೋ ಅಷ್ಟು ಪ್ರಯಾಣಮಾಡಿ, ಮುಂದಕ್ಕೆ ಒಂದು ಚಿಕ್ಕ ನಾಡದೋಣಿಯನ್ನು ಹತ್ತಿದೆವು. ವಂಶಪಾರಂಪರ್ಯವಾಗಿ ನಮ್ಮ ಮನೆಯಲ್ಲೇ ಕೆಲಸಮಾಡುತ್ತಿದ್ದ ಅಂಬಿಗನು ದೋಣಿ ನಡೆಯಿಸಿದನು. ಆರೇಳು ಮೈಲಿ ದೂರ ನದಿಯ ಇಳಿಮುಖದಲ್ಲಿ ಹೋದೆವು. ನಾವು ದಡವನ್ನು ಮುಟ್ಟುವ ಕಡೆ "ಮೆಮ್-ಬೌ" ಅವರನ್ನು ನೋಡಬೇಕೆಂದು ಜನರು ನೆರೆದಿದ್ದರು. ಗ್ರಾಮದ ಮೇಳದವರು ವಾದ್ಯ ಮಾಡಲು ಬಂದಿದ್ದರಲ್ಲದೆ ನನ್ನ ಭಾವಂದಿರೊಬ್ಬರು ಸೊಸೆಯನ್ನು ಮನೆಗೆ ಕರೆದೊಯ್ಯಲು ಬಂದಿದ್ದರು! ದೋಣಿಯಲ್ಲೇ ಮೋಜವನ್ನು ಕಳಚಿ ಹಾಕಿದ್ದ ಸರೋಜ ನಳಿನಿಯನ್ನು ಚಿಕ್ಕದೊಂದು (ಮ್ಯಾನಾ) ಡೋಲಿಯಲ್ಲಿ ಕುಳ್ಳಿರಿಸಿ, ಸುತ್ತಲೂ ತೆರೆಗಳಿಂದ ಮುಚ್ಚಿ, ವಾದ್ಯ ಮೇಳಗಳ ಸಮೇತ ನಮ್ಮ ಮನೆಗೆ ಕರೆದುಕೊಂಡು ಹೋದರು. ಆ ಮ್ಯಾನಾದ ಹಿಂದೆ ನಾನೂ ನನ್ನ ಭಾವನವರೂ ಕಾಲ್ನಡೆಯಲ್ಲಿ ಹೊರಟೆವು. ನಮ್ಮ ಹಿಂದೆ ಉಳಿದವರೆಲ್ಲರೂ ಬಂದರು.

ಹೆಂಗಸರು ದೂರದಿಂದಲೂ ಹತ್ತಿರದಿಂದಲೂ ಬಂದು ನಮ್ಮ ಮನೆಯಲ್ಲಿ ತುಂಬಿದ್ದರು. ಸರೋಜ ನಳಿನಿಗೆ ಅತ್ತೆಯಾದ ನನ್ನ ತಾಯಿ ದಿವಂಗತರಾಗಿದ್ದುದರಿಂದ, ಆಕೆಯ ಸ್ಥಾನದಲ್ಲಿ ಹಿರಿಯರಾಗಿ ನಿಂತು ಸೊಸೆಯನ್ನು ಶಾಸ್ತ್ರೋಕ್ತವಾಗಿ ಬರಮಾಡಿಕೊಳ್ಳಲು ನನ್ನ ದೊಡ್ಡಪ್ಪನವರ ಸೊಸೆಯರಿಬ್ಬರು ಬಂದಿದ್ದರು. ನನ್ನ ಅಕ್ಕ ತಂಗಿಯರೂ, ಅವರ ಮದುವೆಯಾದ ಹೆಣ್ಣುಮಕ್ಕಳು ಕೆಲವರೂ ಮತ್ತು ನನ್ನ ದೂರದ ಬಂಧುಗಳಾದ ಇನ್ನೂ ಅನೇಕ ಹೆಂಗಸರೂ ಕೆಲವು ದಿನಗಳಿಗೆ ಮುಂಚಿತವಾಗಿಯೇ

ಬಂದು ನಮ್ಮ ಮನೆಯಲ್ಲೇ ಇಳಿದಿದ್ದರು. ಗ್ರಾಮದ ಎಲ್ಲ ಹೆಂಗಸರೂ ನಮ್ಮ ಪಂಗಡದವರೂ ಮತ್ತು ಸುತ್ತಮುತ್ತ ಮೂರು ಮೈಲಿಯೊಳಗಾಗಿ ಇರುವ ನಾಲ್ಕೈದು ಗ್ರಾಮಗಳ ಹೆಂಗಸರೂ "ಸೊಸೆ" (ಬೌ) ಊರಿಗೆ ಬರುವುದನ್ನು ನೋಡಲು ಬಂದಿದ್ದರು. ನಾವು ಮನೆಗೆ ಬಂದ ಕೂಡಲೆ ಆ ಮಹಿಳೆಯರ "ಉಲು" * "ಉಲು" ಎಂಬ "ಬೌ"ಗೆ ಸ್ವಾಗತ ಬಯಸುವ ಶಬ್ದದಿಂದ ವಾತಾವರಣ ತುಂಬಿಹೋಯಿತು. ಸರೋಜ ನಳಿನಿಯು ಡೋಲಿಯಿಂದ ಇಳಿದಾಗ ಆಕೆಯ ಕಾಲುಚೀಲ ಮೋಜಗಳಿಲ್ಲದ ಬರಿಯ ಕಾಲುಗಳನ್ನೂ, ಆಕೆ ಅತಿ ನಮ್ರತೆಯಿಂದ ಸೆರಗನ್ನು ತಲೆಯ ಮೇಲೆ ಹೊದ್ದುಕೊಂಡು, ಸಾಮಾನ್ಯವಾದ ಸೀರೆಯನ್ನುಟ್ಟು, ಕೈಗಳಿಗೆ ಶಂಖದ ಬಳೆಗಳನ್ನೂ, ಎಡಗೈಗೆ ಕಬ್ಬಿಣದ ಬಳೆಯನ್ನೂ ("ಶಂಖಾ ಮತ್ತು "ನೋಆ" ಗಳನ್ನು) ತೊಟ್ಟು, ವಾಡಿಕೆಯಂತೆ ಹಣೆಯಲ್ಲಿ ಕುಂಕುಮವನ್ನು ಧರಿಸಿರುವುದನ್ನೂ ಆ ಜನರು ನೋಡಿ, ಬೆರಗಾಗಿ ತಮ್ಮತಮ್ಮಲ್ಲೇ ಮಾತನಾಡಿಕೊಂಡು ಆಕೆಯನ್ನು ಮೆಚ್ಚಿದರು. "ಇದೇನು? ಈಕೆ ನಿಜವಾದ "ಬೌ!" "ಮೆಮ್ ಅಲ್ಲ!" ಎಂದುಕೊಂಡರು. "ಬೌ" ಕೆಳಕ್ಕಿಳಿದು ಬಂದು, ಹಿರಿಯರಾದ ಬಂಧುಗಳಿಗೆಲ್ಲ ಕಾಲುಮುಟ್ಟಿ ನಮಸ್ಕರಿಸಿದಳು. ಸ್ವಲ್ಪ ಪರಿಚಯ ಬೆಳೆದ ಮೇಲೆ ಅವಳ ವಿನಯವನ್ನೂ ಡಾಂಭಿಕವಿಲ್ಲದ ಸರಳತೆಯನ್ನೂ ನೋಡಿದಾಗ ಅವಳು ಸಹಜವಾಗಿಯೂ "ಬೌ" ಎಂದೂ, ಅವಳು "ಮೆಮ್" ಆಗಿದ್ದಿದ್ದರೆ ಆ ರೀತಿ ವರ್ತಿಸಲು ಸಾಧ್ಯವೇ ಇರುತ್ತಿರಲಿಲ್ಲವೆಂದೂ ಅಲ್ಲಿ ನೆರೆದಿದ್ದವರಿಗೆ ಮುಂದಟ್ಟಾಯಿತು.

ತಮ್ಮ ಮೆಚ್ಚಿಕೆಯನ್ನೂ ಪ್ರೀತಿಯನ್ನೂ ತೋರ್ಪಡಿಸುವುದಕ್ಕಾಗಿ ನನ್ನ ಸ್ತ್ರೀ ಬಂಧುಗಳೆಲ್ಲ—ಸಮೀಪದವರೂ ದೂರದವರೂ ಸಹ—ಒಂದೇ ಸಮನಾಗಿ, ಒಬ್ಬರಿಗೊಬ್ಬರು ಪೈಪೋಟಿಯಿಂದ ನಾನು ತಾನೆಂದು ಬಂದು, ಹೊಸ ಸೊಸೆಗೆ ಹೆರಳು ಹಾಕುವುದು, ಬೈತಲೆಯ ಹತ್ತಿರವೂ ಹಣೆಯಲ್ಲೂ ಕುಂಕುಮವನ್ನಿಡುವುದು, ಕಾಲು ಹೆಜ್ಜೆಯ ಅಂಚಿನಲ್ಲಿ "ಆಲ್ಟ" ಎಂಬ ಒಂದು ವಿಧವಾದ ಅರಗಿನಿಂದ ಮಾಡಿದ ಕೆಂಪು ಬಣ್ಣವನ್ನು ಹಚ್ಚುವುದು, —ಇವೇ ಮುಂತಾದ ಸಿಂಗಾರಗಳನ್ನು ಮಾಡಿ ನಲಿಯುತ್ತಿದ್ದರು. ಈ ಬಗೆಯ ಉಪಚಾರಗಳಿಂದ ಸರೋಜ ನಳಿನಿ ನಾಚಿಕೆಪಟ್ಟುಕೊಳ್ಳದೆ ಅಥವಾ

* "ಉಲು" ಎಂಬುದು ಆಶೀರ್ವದಿಸಿ ಸ್ವಾಗತವನ್ನು ಬಯಸುವ ಶಬ್ದ.

ಬೇಸರಪಟ್ಟುಕೊಳ್ಳದೆ, ತನ್ನ ಬಾಲ್ಯದ ಶಿಕ್ಷಣದ ಪ್ರಭಾವದಿಂದ ಅವುಗಳನ್ನೆಲ್ಲ ಅಂಗೀಕರಿಸಿ ಆನಂದಿಸುವಂತಾಯಿತು. ಆಕೆಯ ನಡೆನುಡಿಗಳನ್ನು ಉಳಿದವರೆಲ್ಲರೂ ಬಹಳ ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿದ್ದರು. ಆಕೆ ಪ್ರತಿ ಸಲ ಊಟವಾದಮೇಲೂ ಚೆನ್ನಾಗಿ ಬಾಯಿ ಮುಕ್ಕಳಿಸುವುದನ್ನೂ, ಬಹಳ ಆಶೆಯಿಂದ ತಾಂಬೂಲ ಹಾಕಿಕೊಳ್ಳುವುದನ್ನೂ, ಇತರರನ್ನು ಹೀನಾಯವಾಗಿ ಕಾಣದೆ ಪ್ರತಿಯೊಬ್ಬರ ಜೊತೆಗೂ—ಅದರಲ್ಲೂ ಮಕ್ಕಳೊಂದಿಗೆ—ನಗುಮುಖದಿಂದ ಮಾತನಾಡುವುದನ್ನೂ, ನೋಡಿ ಪ್ರತಿಯೊಬ್ಬರೂ ಆಶ್ಚರ್ಯಪಟ್ಟು, ಅವಳು ನಿಜವಾದ "ಸೊಸೆ" (ಬೌ) ಎಂದು ಹೊಗಳಿದರು. ನಮ್ಮ ಗ್ರಾಮದ ಗಂಡಸರು ನನ್ನೊಡನೆಯೂ, ಮತ್ತು—ಮುಖ್ಯವಾಗಿ ಗ್ರಾಮದಲ್ಲಿ ಹೆಂಗಸರು ಗಂಡಸರಷ್ಟು ಮುಂದುವರಿಯದೆ ಇರುವುದರಿಂದ—ಹೆಂಗಸರು ಸರೋಜ ನಳಿನಿಯೊಡನೆಯೂ ಊಟಮಾಟಲು ಒಪ್ಪಲಾರರೆಂದು ನಾನು ಹೆದರಿದ್ದೆನು. ಆದರೆ, ಸರೋಜ ನಳಿನಿಯು ಗೋಮಾಂಸವನ್ನು ಮುಟ್ಟರಲಿಲ್ಲವೆಂಬುದನ್ನು ಅವರೆಲ್ಲ ಅರಿತು, ಎಲ್ಲ ಹೆಂಗಸರೂ ಆಕೆಯ ಜೊತೆಗೆ ಊಟಕ್ಕೆ ಕುಳಿತುಕೊಂಡರು. ಹಿಂದುಗಳಲ್ಲಿ ಎಲ್ಲಕ್ಕಿಂತ ದೊಡ್ಡ ಪಾಪ ಗೋಮಾಂಸ ಭಕ್ಷಣ. ಅದರಿಂದ ಹಿಂದುವು ಕುಲಭ್ರಷ್ಟನಾಗುವನು. ನನ್ನ ಸಹೋದರಿಯೊಬ್ಬಳು ಅಂತರಂಗದಲ್ಲಿ ನನ್ನೊಡನೆ ಹೀಗೆ ಹೇಳಿದಳು:—"ಬೌ "ಮೆಮ್" ಆಗಿರಬಹುದೆಂದು ನಾವೆಲ್ಲ ಹೆದರಿದ್ದೆವು. ಆದರೆ ಅವಳು ಹಾಗಿಲ್ಲದಿರುವುದನ್ನು ನೋಡಿ ಸಂತೋಷವಾಗಿದೆ. ಆದರೂ ಬೌ ನಿಜವಾಗಿಯೂ "ಮೆಮ್"ಗಳ ಹಾಗೆ ಬುದ್ಧಿಶಾಲಿಯಾಗಿಯೂ ಓದಿದವಳಾಗಿಯೂ ಇದ್ದಾಳೆ. ಕುದುರೆ ಸವಾರಿ ಮಾಡುತ್ತಾಳೆ! ಇಂಗ್ಲಿಷಿನವರ ಸಂಗಡ ಮಾತನಾಡುತ್ತಾಳೆ! ಆದಾಗ್ಗೂ ನಮ್ಮೆಲ್ಲರಿಗಿಂತ ಎಷ್ಟು ಚೆನ್ನಾಗಿ ಕಾಯಿಪಲ್ಯಗಳನ್ನು ಹೆಚ್ಚಿ ರುಚಿಯಾಗಿ ಅಡಿಗೆ ಮಾಡುತ್ತಾಳೆ!"

ಸರೋಜ ನಳಿನಿಯಾದರೋ, ತಾನು ನನ್ನೊಡನೆ ಸಂಪೂರ್ಣವಾಗಿ ಏಕೀಭವಿಸಿರುವುದನ್ನೂ, ನನ್ನ ಬಂಧುಗಳನ್ನೆಲ್ಲ ತಾನು ತನ್ನವರಂತೆ ಅಂಗೀಕರಿಸಿರುವುದನ್ನೂ ಎಲ್ಲರಿಗೂ ತೋರಿಸಿ ಕೊಡುವಂತಾದದ್ದೇ ತಾನು ಆ ಗ್ರಾಮಕ್ಕೆ ಬಂದದ್ದಕ್ಕೆ ಫಲವೆಂದು ಎಣಿಸಿದಳು. ಹಿಂದೂ ಸಾಧ್ವಿಯ ವಿಷಯದಲ್ಲಿ ಹೇಳಬಹುದಾದ ಶ್ಲಾಘನೆಯ ಮಾತುಗಳನ್ನು ತನ್ನ ವಿಷಯದಲ್ಲಿ

ಜನರು ಹೇಳಿದುದನ್ನು ಕೇಳಿ ಆಕೆ ಹಿಗ್ಗಿದಳು. ಅವಳಿಗಿಂತ ವಯಸ್ಸಿನಲ್ಲಿ ಚಿಕ್ಕವರಾಗಿದ್ದ ಹೆಂಗಸರು, "ನಾವೂ ಆಕೆಯಂತೆ ಇರಬೇಕೆಂದು ಎಷ್ಟು ಆಶೆಯಾಗುತ್ತದೆ! ಎಷ್ಟು ಅಪಾಯವಿದ್ದರೂ ಈಕೆ ಗಂಡನನ್ನು ಸಾವಿತ್ರಿಯಂತೆ ಎಡಬಿಡದೆ ಹಿಂಬಾಲಿಸುತ್ತಾಳೆ!" ಎಂದೂ, ಹಿರಿಯ ಹೆಂಗಸರೂ, ಗಂಡಸರೂ "ಬೌ ಲಕ್ಷ್ಮಿಯಂತಿದ್ದಾಳೆ" ಎಂದೂ ಬಹಳ ಆದರದಿಂದ ಹೇಳುತ್ತಿದ್ದರು. ಗ್ರಾಮದ ವೈದಿಕರೂ "ಬೌ ತಾಯಿಗೆ ಸರಸ್ವತೀ ದೇವಿಯ ಎಲ್ಲಾ ಗುಣಗಳೂ ಇವೆ. ಈಕೆ ಗಂಡನಿಗೆ ನಿಜವಾದ ಸಹಧರ್ಮಿಣಿಯಾಗಿದ್ದಾಳೆ" ಎಂದು ಹೇಳಿದರು.

ಸರೋಜ ನಳಿನಿಯ ಉದಾಹರಣೆಯಿಂದ ಗ್ರಾಮದಲ್ಲಿದ್ದ ತಾಯಿಯರು ತಮ್ಮ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ತಮಗಿದ್ದ ತಪ್ಪು ಅಭಿಪ್ರಾಯವನ್ನು ಬಿಟ್ಟುಬಿಟ್ಟರು. ಇದರಿಂದ ಗ್ರಾಮದಲ್ಲಿ ಹೆಣ್ಣು ಹುಡುಗಿಯರ ಪಾಠಶಾಲೆಯೊಂದು ಏರ್ಪಡಲು ದಾರಿಯಾಯಿತು; ಮತ್ತು ಅಲ್ಲಿ ಉಪಾಧ್ಯಾಯಿನಿಯಾಗಲು ವಿದ್ಯಾವತಿಯಾದ ಚಿಕ್ಕವಯಸ್ಸಿನ ವಿಧವೆಯೊಬ್ಬಳು ಮುಂದೆ ಬಂದಳು.

---

## ಹತ್ತನೆಯ ಅಧ್ಯಾಯ

## ಮಹಿಳಾ ಸಮಿತಿಗಳು

ಪತಿಸೇವೆ, ಮಗನ ಪೋಷಣೆ, ಗೃಹಪರಿಪಾಲನೆ—ಈ ಮೂರನ್ನೂ ಆಕೆ ತನ್ನ ಪ್ರಥಮ ಕರ್ತವ್ಯವೆಂದು ಪರಿಗಣಿಸಿ, ಅದರ ಜೊತೆಗೆ ದೇಶ ಸೇವೆಗಾಗಿ,—ಅದರಲ್ಲಿ ಮುಖ್ಯವಾಗಿ ಬಂಗಾಳದ ಸ್ತ್ರೀ ಜನರ ವಿದ್ಯಾಭ್ಯಾಸ, ಪ್ರಬೋಧೆಗಳಿಗಾಗಿ,—ಸರೋಜ ನಳಿನಿ ತನ್ನ ಜೀವನವನ್ನು ಅಂಕಿತಮಾಡಲೆಳಸಿದ್ದಳು. ತನ್ನ ದೇಶೀಯರ ದುರವಸ್ಥೆಯನ್ನು ನೋಡಿ ಆಕೆ ಬಹಳವಾಗಿ ವ್ಯಥೆಪಡುತ್ತಿದ್ದಳು. ನಾವು ಎಲ್ಲಿ ಹೋದರೂ, ನಾನು ಗಂಡಸರೊಂದಿಗೆ ಕಲೆತು ನನ್ನ ಕೆಲಸವನ್ನು ಮಾಡುವಾಗ, ಆಕೆ ಹೆಂಗಸರೊಂದಿಗೆ ಅವರವರ ಮನೆಗಳಿಗೆ ಹೋಗಿ ಅವರಲ್ಲಿ ಕಲೆತು ಮಾತಾಡುತ್ತಿದ್ದಳು. ನಾನು ಸರ್ಕಾರಿ ಉದ್ಯೋಗದ ಬಲದಿಂದ, ಸರ್ಕಾರದ ಕಾಯಿದೆ ಕಟ್ಟಲೆಗಳ ಮೂಲಕ, ಜನರೊಡನೆ ಕಲೆಯುತ್ತಿದ್ದೆನು. ಆಕೆಯಾದರೋ ಪ್ರೀತಿಯ

ಮೂಲಕ ಅವರೊಡನೆ ಕಲೆಯುವಳು. ಜನರ ಕಷ್ಟ ಸುಖಗಳನ್ನು ಆಕೆ ಆದರದಿಂದ ವಿಚಾರಿಸಿ, ತನ್ನ ಹೃದಯವನ್ನೇ ಅವರೆದುರಿಗೆ ಹಿಡಿದಂತೆ ಸಹಾನುಭೂತಿಯನ್ನು ತೋರಿಸುತ್ತಿದ್ದುದರಿಂದ, ದೇಶಕ್ಕಿರುವ ನಿಜವಾದ ಪ್ರಶ್ನೆಗಳನ್ನು ಆಕೆ ನನಗಿಂತ ಬಹು ಚೆನ್ನಾಗಿ ಅರಿತುಕೊಳ್ಳಲು ಶಕ್ತಳಾದಳು.

ಆಕೆಯ ನಿಷ್ಕಾಪಟ್ಯವನ್ನೂ ಸರಳತೆಯನ್ನೂ ಹೆಂಗಸರೆಲ್ಲ ಕಂಡುಕೊಂಡು, ಆಕೆಯಲ್ಲಿ ಪೂರ್ಣ ವಿಶ್ವಾಸವನ್ನಿಟ್ಟದ್ದರು. ತಾವು ಜನ್ಮವೆತ್ತಿದಾಗಿನಿಂದ ಪರದೆ ತೆಗೆಯದಿದ್ದ ಹೆಂಗಸರು ಕೂಡ ಆಕೆಯ ಮಾತುಗಳಿಂದ ಪ್ರೇರಿತರಾಗಿ, ಟೌನ್‌ಹಾಲಿಗೂ ಬಂದು, ಸ್ತ್ರೀಯರ ಏಳಿಗೆಯ ಸಂಬಂಧವಾಗಿ ಚರ್ಚಿಸುವುದಕ್ಕೂ, ಆಸ್ಪತ್ರೆಗಳನ್ನು ನೋಡಿ ರೋಗಿಗಳ ಕಷ್ಟ ಸುಖಗಳನ್ನು ವಿಚಾರಿಸುವುದಕ್ಕೂ, ತಾವು ದಾನಮಾಡಿದ ಪಾತ್ರೆ ಮೊದಲಾದ ಸಾಮಾನುಗಳು ಸರಿಯಾಗಿ ಉಪಯೋಗಿಸಲ್ಪಡುತ್ತವೆಯೋ ಇಲ್ಲವೋ ಎಂಬುದನ್ನು ನೋಡುವುದಕ್ಕೂ ಬರುವಂತಾಯಿತು. ಹಿಂದೂ ಮತ್ತು ಮಹಮ್ಮದೀಯ ಘೋಷಾ ಹೆಂಗಸರುಗಳ ನಿಷ್ಕಾಪಟ್ಯವನ್ನೂ ಸರಳತೆಯನ್ನೂ ನಮ್ರತೆಯನ್ನೂ ನೋಡಿ ಸರೋಜ ನಳಿನಿ ಅವರನ್ನು ಕೊಂಡಾಡುತ್ತಿದ್ದಳು. ತನ್ನ ಸತ್ತ್ವ ಮಹಿಮೆಯಿಂದ ಅವರನ್ನು ಆಕೆ ಸುಲಭವಾಗಿ ಪ್ರೇರೇಪಿಸುತ್ತಿದ್ದಳು; ಅವರು ಬಹು ಬೇಗನೆ ಅವಳ ದಾರಿಯನ್ನು ಅನುಸರಿಸುತ್ತಿದ್ದರು.

ದೇಶವು ಉದ್ಧಾರವಾಗಬೇಕಾದರೆ ಹೆಂಗಸರು ಮೊದಲು ಜಾಗ್ರತೆಗೊಳ್ಳಬೇಕೆಂಬುದನ್ನು ಸರೋಜ ನಳಿನಿಯು ಚೆನ್ನಾಗಿ ಅರಿತಿದ್ದಳು. ಗಂಡಸರು ಹೆಂಗಸರ ಏಳಿಗೆಗೆ ಸಹಾಯ ಮಾಡುವುದು ಸಾಧ್ಯವಾದರೂ, ಹೆಂಗಸರಿಗೇ ತಾವು ಅಭಿವೃದ್ಧಿಯಾಗಬೇಕೆಂಬ ಆಸಕ್ತಿ ಪ್ರಯತ್ನಗಳು ಇಲ್ಲವಾದರೆ, ಪುರುಷರ ಭಾಷಣಗಳಿಂದಲೂ ಪ್ರಯತ್ನಗಳಿಂದಲೂ ಫಲವಿಲ್ಲದೆ ಹೋಗುವುದೆಂದು ಅವಳು ತಿಳಿದಿದ್ದಳು. ಆದುದರಿಂದಲೇ ಸ್ತ್ರೀಯರ ಉನ್ನತಿಗಾಗಿ ಸ್ತ್ರೀಯರೇ ಒಗ್ಗಟ್ಟಾಗಿ, ತಮ್ಮ ಉದ್ಧಾರಕ್ಕೆ ತಾವೇ ಪ್ರಯತ್ನ ಮಾಡುವಂತೆ ಹುರುಪುಗೊಳಿಸಲು ತವಕಪಡುತ್ತಿದ್ದಳು. ಸ್ತ್ರೀಯರ ಚೈತನ್ಯ ಸಾಮರ್ಥ್ಯಗಳು ಈಗಿನಂತೆ ಪ್ರಸುಪ್ತವಾಗಿರದೆ ಪ್ರಕಾಶವಾದ ಪಕ್ಷದಲ್ಲಿ, ಜನಾಂಗಕ್ಕೆ ಅದೊಂದು ಅಪಾರ ಶಕ್ತಿಯಾಗಿ ಪರಿಣಮಿಸಿ, ದೇಶವನ್ನು

ಉದ್ಧರಿಸುವುದೆಂಬುದು ಆಕೆಯ ಮನಸ್ಸಿನಲ್ಲಿ ನಿರಂತರವೂ ಇದ್ದ ಭಾವನೆ. ಇದರಿಂದ ನಮ್ಮ ಸಾಮಾಜಿಕ ನ್ಯೂನತೆಗಳು ಪರಿಹಾರವಾಗುವುವೆಂದು ಆಕೆ ತಿಳಿದಿದ್ದಳು. ಬಂಗಾಳದ ಅನೇಕ ಘೋಷಾ ಹೆಂಗಸರು ಅಕ್ಷರ ಗಂಧ ವಿಲ್ಲದವರಾಗಿದ್ದರೂ, ಅವರುಗಳ ಪ್ರಾಮಾಣಿಕತೆ, ಒಳ್ಳೆಯ ನಡತೆ ಮತ್ತು ಕಾರ್ಯದಕ್ಷತೆ— ಇವುಗಳಲ್ಲಿ ಸರೋಜ ನಳಿನಿಗೆ ನಿಶ್ಚಲವಾದ ನಂಬಿಕೆ ಯಿತ್ತು. ಆದುದರಿಂದ ಅವರುಗಳನ್ನು ಭೇಟಿಮಾಡುವುದು; ಅವರೊಡನೆ ಸ್ನೇಹ ಬೆಳಸಿ ಮಾತನಾಡುವುದು; ಅಭಿಪ್ರಾಯಗಳನ್ನೂ ಉದ್ದೇಶಗಳನ್ನೂ ಪರಸ್ಪರ ತಿಳಿದುಕೊಳ್ಳುವುದು; ಹಾಗೆ ಹೆಚ್ಚು ಜ್ಞಾನವನ್ನು ಸಂಪಾದಿಸಿ, ನಡತೆಯನ್ನು ತಿದ್ದಿಕೊಂಡು, ಸಂಸಾರದ ಮತ್ತು ಜನಾಂಗದ ಆರ್ಥಿಕ ಮತ್ತು ಆರೋಗ್ಯ ವಿಷಯಗಳಲ್ಲಿ ಮುಂದುವರಿಯುವಂತೆ ಮಾಡುವುದು— ಈ ಕೆಲಸಗಳಿಗಾಗಿಯೇ ಅವಳು ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸಿದಳು. ಈ ಉದ್ದೇಶದಿಂದ ತಾನು ಹೋದೆಡೆಗಳಲ್ಲೆಲ್ಲಾ ಮಹಿಳಾ ಸಮಿತಿಗಳನ್ನು ಏರ್ಪಡಿಸಿ ತನ್ನ ಕೈಯಲ್ಲಾದಷ್ಟು ಮಟ್ಟಿಗೂ ಸ್ತ್ರೀಯರನ್ನು ಹುರುಪು ಗೊಳಿಸುವಂತೆ ಮಾಡಿದಳು.

ಅನೇಕರು ಆಕೆಯನ್ನು ಕುರಿತು, "ವಿದ್ಯಾಭ್ಯಾಸವಿಲ್ಲದೆ ಹಿಂದುಳಿ ದಿರುವ ನಮ್ಮ ಹೆಂಗಸರು ಸಭೆಗಳಲ್ಲಿ ಭಾಗವಹಿಸುವುದೂ ಮತ್ತು ನಿಮ್ಮ ಜೊತೆಯಲ್ಲಿ ಸಂಭಾಷಿಸುವುದೂ ಹೇಗೆ ಸಾಧ್ಯ?" ಎಂದು ಕೇಳುತ್ತಿದ್ದರು. ಅದಕ್ಕೆ ಆಕೆ—"ಭಾರತೀಯ ಸ್ತ್ರೀಯರಿಗೆ ಓದು ಬರಹಗಳು ಬಾರದೆ ಇರಬಹುದು. ಆದರೆ ಅವರು ಅಸಂಸ್ಕೃತರಲ್ಲ. ಅವರಿಗೆ ಚೆನ್ನಾಗಿ ಸಂಭಾಷಿಸಲು ಬರುವುದಿಲ್ಲವೆಂಬುದು ತಪ್ಪು ಅಭಿಪ್ರಾಯ. ಅವರಿಗೆ ಸರಿಯಾದ ಅವಕಾಶವನ್ನು ಕೊಟ್ಟು, ಸಮಾಜ ವ್ಯವಹಾರದಲ್ಲಿರುವ ಇತರ ಹೆಂಗಸರೊಡನೆ ಸ್ನೇಹಮಾಡಿಸಿ, ಸಾಮಾಜಿಕವಾದ ಅಥವಾ ಸಾರ್ವಜನಿಕ ವಾದ ಯಾವುದಾದರೂ ಉದ್ಯಮದಲ್ಲಿ ಅವರು ಕೆಲಸ ಮಾಡಲು ಏರ್ಪಾಟು ಮಾಡಿಕೊಟ್ಟು ಆಗ ನೋಡಿರಿ; ಅವರು ಆಗ ಅನೇಕ ವಿಷಯಗಳನ್ನು ಕುರಿತು ಮಾತನಾಡಿ ಕಾರ್ಯಶಕ್ತಿಯನ್ನೂ ತೋರ್ಪಡಿಸುವರು. ಈಗಿನ ಮೂಕರು ಆಗ ಮಾತನಾಡುವರು. ಈಗ ಗುಪ್ತವಾಗಿರುವ ಕಾರ್ಯ ಯೋಗ್ಯತೆ ಆಗ ಪ್ರಬುದ್ಧವಾಗಿ, ಅದರಿಂದ ಕುಟುಂಬಕ್ಕೂ ದೇಶಕ್ಕೂ ಬಹಳ ಪ್ರಯೋಜನವುಂಟಾಗುವುದು" ಎಂದು ಉತ್ತರ ಹೇಳುತ್ತಿದ್ದಳು.

ಹಿಂದೂ ದೇಶದ ಹೆಚ್ಚು ವಯಸ್ಸಿನ ಹೆಂಗಸರಿಗೆ ವಿದ್ಯೆಯನ್ನೂ ಸಂಘ ಶಕ್ತಿಯನ್ನೂ ಕೊಡಲು ಎಲ್ಲಕ್ಕಿಂತ ಉತ್ತಮವಾದ ರೀತಿ ಯಾವುದೆಂಬ ವಿಷಯದಲ್ಲಿ ಸರೋಜ ನಳಿನಿ ತನ್ನ ಅನುಭವದಿಂದ ಕಂಡುಬಂದ ಅಭಿ ಪ್ರಾಯಗಳನ್ನು ಒಟ್ಟುಗೂಡಿಸಿ ಈ ಕೆಳಗೆ ಕಂಡಂತೆ "ಕಮಲಾ" ಎಂಬ ಪತ್ರಿಕೆಗೆ ಬರೆದಿರುವಳು :—

"ಈಚೆಗೆ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ವಿಚಾರ ಪೂರ್ವಕವಾದ ಅನೇಕ ಲೇಖನಗಳನ್ನು ನೋಡಿದರೆ, ನಮ್ಮ ದೇಶದ ಸ್ತ್ರೀಯರು ಜಾಗೃತಿಗೊಳ್ಳುತ್ತಿರುವರೆಂದು ಚೆನ್ನಾಗಿ ವ್ಯಕ್ತಪಡುತ್ತದೆ. ಇದು ಸಂತೋಷಕರವಾದ ಸೂಚನೆಯೇ ಸರಿ. ಆದರೂ ಇತರ ಜನಾಂಗ ಗಳೊಡನೆ ಹೋಲಿಸಿ ನೋಡಿದರೆ ನಾವು ನಿರಾಶರಾಗುವಷ್ಟು ಹಿಂದುಳಿ ದಿದ್ದೇವೆ. ಯಾವ ಜನಪದದ ಹೆಂಗಸರು ಅಜ್ಞಾನಿಗಳಾಗಿರುವರೋ ಆ ಜನಪದವು ಎಂದಿಗೂ ಮುಂದುವರಿಯಲಾರದು. ನಮ್ಮ ಜನದ ಒಂದು ಭಾಗವು ನಿಶ್ಚೇತನವಾಗಿರುವಷ್ಟು ಕಾಲವೂ ರಾಜಕೀಯ ಚಳವಳಿ ಎಷ್ಟು ನಡೆದರೂ ಪ್ರಯೋಜನಕಾರಿಯಾಗದು. ಭಾರತ ದೇಶದ ಅರ್ಧಭಾಗವು ಬಾಲ್ಯ ವಿವಾಹ, ಪರದಾ ಪದ್ಧತಿ, ಮೊದಲಾದ ರೋಗಗಳಿಂದ ಚೈತನ್ಯ ಹೀನವಾಗಿದೆ. ಈ ವ್ಯಾಧಿಗಳಿಗೆ ಚಿಕಿತ್ಸೆಯಾಗದಿದ್ದರೆ ಯಾವ ಆಶೆಯನ್ನು ತಾನೆ ಇಟ್ಟುಕೊಳ್ಳಲಾದೀತು? ನಾವೆಲ್ಲರೂ ಯಾವ ಕೆಲಸವನ್ನೂ ಮಾಡಲು ಶೋಚದೆ ಕಳೆಗುಂದಿದವರಾಗಿ ಈ ದುಃಖಕರವಾದ ಸ್ಥಿತಿ ಯನ್ನು ಸುಮ್ಮನೆ ನೋಡುತ್ತಾ ಕುಳಿತಿರುವುದೆ? ಪುರುಷರು ರಾಜಕೀಯ ವಿಷಯಗಳಲ್ಲಿ ಮಗ್ನರಾಗಿದ್ದಾರೆ. ಅವರಿಗೆ ಬೇರೆ ಯಾವ ಕೆಲಸಕ್ಕೂ ಮನಸ್ಸು ಕೊಡಲು ವಿರಾಮವೇ ಇಲ್ಲ. ಹೆಂಗಸರಾದ ನಾವುಗಳು ಈಗ ಲಾದರೂ ಜಡತೆಯಿಂದ ಎಚ್ಚತ್ತುಕೊಂಡು ದೇಶಕ್ಕೊದಗಿರುವ ರೋಗ ವನ್ನು ವಾಸಿಮಾಡಲು ಯತ್ನಿಸೋಣ. ಆದರೆ ನಮ್ಮಲ್ಲಿ ಎಷ್ಟು ಜನ ಈ ಕೆಲಸ ಮಾಡಲು ಪ್ರಯತ್ನಮಾಡುತ್ತಿರುವರು? ನಮ್ಮಲ್ಲಿ ವಿದ್ಯಾವತಿಯ ರಾಗಿರುವವರಿಗೆ ಉತ್ಸಾಹವಿಲ್ಲ. ಪ್ರತಿಯೊಬ್ಬ ಹೆಂಗಸಿಗೂ ತನ್ನ ಮಕ್ಕಳಿಗೆ ವಿದ್ಯೆ ಕಲಿಸುವುದು ಮುಖ್ಯ ಕರ್ತವ್ಯ. ಆದರೆ ಎಷ್ಟು ಮಂದಿ ಹೆಂಗಸರು ಈ ಕೆಲಸವನ್ನಾದರೂ ಮಾಡುತ್ತಿರುವರು? ವಿದ್ಯೆಯಿಲ್ಲದಿದ್ದರೆ ಏಳಿಗೆ ಇಲ್ಲವೆಂಬ ವಿಷಯವೇ ಅನೇಕ ತಾಯಿಯರಿಗೆ ತಿಳಿಯದು. ತಮ್ಮ ಹುಡುಗಿ

ಯರಿಗೆ ವಿದ್ಯೆ ಕಲಿಸುವುದರ ಆವಶ್ಯಕತೆಯೇನೆಂದು ತಿಳಿದಿರುವ ಹೆಂಗಸರ ಸಂಖ್ಯೆಯು ಅದಕ್ಕಿಂತಲೂ ಕಡಮೆ. ಅನೇಕರು ವಿದ್ಯೆ ಕಲಿಸುವುದು ನಿಷ್ಪ್ರಯೋಜನವಾದ ದುಂದುವೆಚ್ಚವೆಂದು ತಿಳಿದಿದ್ದಾರೆ. "ವಿದ್ಯಾವತಿಯರಾದ ಹುಡುಗಿಯರು ಹಣ ಸಂಪಾದಿಸಿ ಮನೆಯ ವರಮಾನವನ್ನು ಹೆಚ್ಚಿಸುವುದಿಲ್ಲ. ಹೆಣ್ಣುಮಕ್ಕಳನ್ನು ಏತಕ್ಕಾಗಿ ಓದಿಸಬೇಕು? ಅವರೇನೂ ಉದ್ಯೋಗಗಳಿಗೆ ಸೇರಿ ಹಣ ಸಂಪಾದಿಸಬೇಕಾಗಿಲ್ಲ ತಾನೆ?" ಎನ್ನುವರು. ವಿದ್ಯೆ ಕಲಿಯುವುದು ಸರ್ಕಾರದಲ್ಲಿ ಚಾಕರಿ ಪಡೆಯುವುದಕ್ಕೆ ಮಾತ್ರ ಎಂದು ಅವರು ತಿಳಿದಿದ್ದಾರೆ, ಪಾಪ!"

"ಹಿಂದೂಸ್ಥಾನದ ಸ್ತ್ರೀಯರ ವಿಷಯವಾಗಿ ಬರೆಯತಕ್ಕುದು ವಿಶೇಷವಾಗಿದ್ದರೂ, ಇಲ್ಲಿ ಒಂದೇ ಒಂದು ವಿಷಯವನ್ನು ಕುರಿತು—ಎಂದರೆ ಸ್ತ್ರೀ ವಿದ್ಯಾಭ್ಯಾಸ ಸಂಬಂಧವಾಗಿ ಮಾತ್ರ—ಬರೆಯುತ್ತೇನೆ. ಮೂರು ವರ್ಷಗಳ ಹಿಂದೆ ನಾನು ಜಪಾನ್ ದೇಶಕ್ಕೆ ಹೋಗಿದ್ದೆ. ಜಪಾನ್ ದೇಶವು ಏಷ್ಯಾಖಂಡದಲ್ಲೆಲ್ಲಾ ಹೆಚ್ಚು ಮುಂದುವರಿದಿರುವ ದೇಶ. ಇದು ಏತರಿಂದ? ಈ ಪ್ರಶ್ನೆಗೆ ಒಂದೇ ಮಾತಿನಲ್ಲಿ ಉತ್ತರ ಕೊಡಬಹುದು:—ವಿದ್ಯೆಯಿಂದ."

"ವಿದ್ಯಾ ಪ್ರಚಾರದಿಂದ ಏನೇನು ಪ್ರಯೋಜನವೆಂಬುದನ್ನು ತಿಳಿಯಬೇಕಾದರೆ ಜಪಾನಿಗೆ ಹೋಗಿ ನೋಡಬೇಕು. ದೇಶದ ಒಂದು ಕೊನೆಯಿಂದ ಮತ್ತೊಂದು ಕೊನೆಯವರಿಗೆ ಎಲ್ಲೆಲ್ಲಿಯೂ ಪ್ರಾಥಮಿಕ (ಪ್ರೈಮರಿ) ವಿದ್ಯಾಭ್ಯಾಸವು ನಡೆಯುತ್ತಿದೆ. ಅವರ ಪ್ರಾಥಮಿಕ ವಿದ್ಯಾಶಾಲೆಗಳು ಹಿಂದೂಸ್ಥಾನದ ಕಾಲೇಜುಗಳಷ್ಟು ದೊಡ್ಡವಾಗಿವೆ! ಜಪಾನ್ ದೇಶದಲ್ಲಿ ಚಿಕ್ಕ ಮಕ್ಕಳು ಮೊದಲ್ಗೊಂಡು ಪ್ರತಿಯೊಬ್ಬ ಹುಡುಗನೂ ಹುಡುಗಿಯೂ ಮರದ ಹಾವುಗೆಗಳನ್ನು ಕಾಲಿಗೆ ಮೆಟ್ಟಿಕೊಂಡು "ಟಪ್, ಟಪ್" ಎಂದು ಸದ್ದುಮಾಡಿಕೊಂಡು, ಶಾಲೆಗಳಿಗೆ ಕಾಲುನಡೆಯಲ್ಲಿ ಹೋಗುವ ಮನೋಹರವಾದ ದೃಶ್ಯವನ್ನು ಪ್ರತಿದಿನವೂ ಪ್ರಾತಃಕಾಲ ಹಾಸಿಗೆಯಿಂದ ಎದ್ದಕೂಡಲೆ ನೋಡಬಹುದು. ನಮ್ಮ ದೇಶದಲ್ಲಾದರೋ ಹುಡುಗಿಯರು ಒಂದು ಹೆಜ್ಜೆ ಕೂಡ ನಡೆಯುವುದಿಲ್ಲ. ಗಾಡಿಗಳು ಎಲ್ಲ ಕಡೆಗಳಲ್ಲಿಯೂ ಸಿಕ್ಕುವುದಿಲ್ಲವಾದುದರಿಂದ ಹುಡುಗಿಯರು ಶಾಲೆಗಳಿಗೆ ಹೋಗದೆಯೇ ಇದ್ದು ಅಜ್ಞಾನಿಗಳಾಗಿ ಬೆಳೆಯುತ್ತಾರೆ. ಅನೇಕ

ಕಡೆಗಳಲ್ಲಿ ತಾಯಿಯರು ಹುಡುಗಿಯರನ್ನು ಮನೆಗೆಲಸಗಳಲ್ಲಿ ತಮಗೆ ಸಹಾಯವಾಗಲು ಇರಿಸಿಕೊಂಡು ಪಾಠಶಾಲೆಗೆ ಕಳುಹಿಸದೆ ಇರುವುದೂ ಉಂಟು."

"ತಾಯಂದಿರಿಗೆ ವಿದ್ಯೆಯ ನಿಜವಾದ ಬೆಲೆ ಮಾತ್ರ ತಿಳಿದಿದ್ದ ಪಕ್ಷದಲ್ಲಿ, ಮನೆಯ ಕೆಲಸಗಳಿಗೆ ಅನುಕೂಲವಾಗಿ ತಮಗೆ ಶ್ರಮ ಸ್ವಲ್ಪ ಕಡಮೆಯಾಗುವುದೆಂಬ ಸ್ವಾರ್ಥಕ್ಕಾಗಿ ಅವರು ಹುಡುಗಿಯರನ್ನು ಶಾಲೆಗಳಿಗೆ ಕಳುಹಿಸದೆ ಮನೆಯಲ್ಲಿ ನಿಲ್ಲಿಸಿಕೊಂಡು ಅವರ ಭವಿಷ್ಯವನ್ನೆಂದಿಗೂ ಹಾಳುಮಾಡುತ್ತಿರಲಿಲ್ಲ. ನಮ್ಮ ದೇಶದಲ್ಲಿ ಯಾವ ದಿವಸ ಪ್ರತಿಯೊಂದು ಮನೆಯಿಂದಲೂ ಆ ಮನೆಯ ಹುಡುಗಿಯರು ಶಾಲೆಗೆ ತಪ್ಪದೆ ಹೋಗುವರೋ ಅದು ಚಿರಸ್ಮರಣೀಯವಾದ ಉತ್ಸವ ದಿನವಾಗುವುದು. ನಾನು ತಾಯಂದಿರನ್ನು ದೂಷಿಸುವುದಿಲ್ಲ. ಪಾಪ, ಅವರಿಗೆ ವಿದ್ಯೆಯ ಬೆಲೆ ಹೇಗೆತಾನೆ ತಿಳಿಯಬೇಕು? ಜ್ಞಾನದ ರುಚಿಯನ್ನು ಸವಿಯದವರು ಅದರ ಬೆಲೆಯನ್ನು ತಿಳಿಯಲಾರರು."

"ನಾವು ಮಾಡಬೇಕಾದ ಕೆಲಸಗಳು ಅನೇಕವಾಗಿವೆ. ಆದರೆ ಅವುಗಳಲ್ಲಿ ಮುಖ್ಯವಾದುದು ತಾಯಿಯರ ಶಿಕ್ಷಣ. "ತಾಯಂದಿರನ್ನೇ ಶಾಲೆಗೆ ಕಳುಹಿಸುವುದಿಲ್ಲ ತಾನೆ?" ಎಂದು ಕೆಲವರು ಆಶ್ಚರ್ಯದಿಂದ ನನ್ನನ್ನು ಕೇಳುವರು. "ಸಾಧ್ಯವಾದಲ್ಲಿ ಅದನ್ನೂ ಮಾಡುವುದೇ" ಎಂಬುದು ನನ್ನ ಉತ್ತರ. ಆದರೆ ಜ್ಞಾನವನ್ನು ಸಂಪಾದಿಸಲು ಶಾಲೆಗೇ ಹೋಗಬೇಕಾದುದಿಲ್ಲ. ಜನರೊಡನೆ ಸೇರಿ, ಅವರ ಸ್ವಭಾವವನ್ನು ತಿಳಿದುಕೊಂಡು, ಅವರ ಜೊತೆಗೆ ಸ್ನೇಹ ಬೆಳಸಿ ವ್ಯವಹರಿಸುವುದರಿಂದಲೇ ಎಷ್ಟೋ ಹೊಸ ವಿಷಯಗಳು ತಿಳಿಯುತ್ತವೆ. ಇದೇ ಒಂದು ವಿದ್ಯಾಭ್ಯಾಸವೆಂದು ಅನುಭವಸ್ಥರಿಗೆಲ್ಲ ತಿಳಿದಿದೆ. ತಾಯಿಯರನ್ನು ಶಾಲೆಗೆ ಕಳುಹಿಸುವುದು ಕಷ್ಟಸಾಧ್ಯವಾದುದರಿಂದ ಅವರಿಗೆ ಇತರ ವಿಧಗಳಲ್ಲಿ ವಿದ್ಯೆ ಕಲಿಸಬೇಕೆಂಬುದೇ ನನ್ನ ಅಭಿಪ್ರಾಯ. ಉದಾಹರಣೆಗಾಗಿ, ಕಲ್ಕತ್ತೆಯಲ್ಲಿ ಅನೇಕ ಮಹಿಳಾ ಸಮಿತಿಗಳಿವೆ. ಆದರೆ ಕಲ್ಕತ್ತೆಯ ಹೊರಗೆ ಎಷ್ಟು ಸಮಿತಿಗಳಿವೆ? ಪ್ರತಿಯೊಂದು ಪಟ್ಟಣದಲ್ಲೂ, ಗ್ರಾಮದಲ್ಲೂ, ಸ್ತ್ರೀಯರು ಸೇರಿ ಚರ್ಚೆ ನಡಸಲು ಅವಕಾಶವಾಗುವಂತೆ ಒಂದೊಂದು ಸಮಿತಿ ಯಾದರೂ ಇರಬೇಕೆಂದು ನನಗೆ ತೋರುತ್ತದೆ. ಅದಕ್ಕೆ ಸಮಿತಿಯೋ,

ಸಂಘವೋ, ಏನೆಂದು ಬೇಕಾದರೂ ಹೆಸರಿಡಬಹುದು. ಆದರೆ ಮಹಿಳೆಯರು ಒಬ್ಬರನ್ನೊಬ್ಬರು ಭೇಟಿ ಮಾಡಿ ಮಾತನಾಡಲು ಅವಕಾಶವಿರಬೇಕು. ಇಷ್ಟು ಮಾಡಿದ ಒಡನೆಯೇ ಊರಿನ ಮಹಿಳೆಯರಲ್ಲಿ ಮೈತ್ರೀಭಾವ ವುಂಟಾಗುವುದು; ಅನಂತರ ಅವರಿಗೆ ಪ್ರಯೋಜನಕರವಾದ ಕಲೆಗಳನ್ನೂ ವಿಷಯಗಳನ್ನೂ ಬೋಧಿಸಲು ಉಪಕ್ರಮಿಸಬಹುದು."

"ಇದರಿಂದ ಪರಸ್ಪರವಾಗಿ ಸ್ತ್ರೀಯರು ಒಬ್ಬರೊಬ್ಬರ ಅಭಿಪ್ರಾಯ ಗಳನ್ನು ತಿಳಿದುಕೊಳ್ಳಲು ಅವಕಾಶವಾಗುವುದು. ನನಗೆ ತಿಳಿಯದಿರುವ ವಿಷಯವನ್ನು ನಾನು ಮತ್ತೊಬ್ಬರಿಂದ ತಿಳಿಯಬಹುದು; ಆಕೆಗೆ ತಿಳಿಯದಿರುವ ವಿಷಯವನ್ನು ನನ್ನಿಂದ ಆಕೆಯೂ ತಿಳಿದುಕೊಳ್ಳಬಹುದು. ಮುಖ್ಯವಾಗಿ, ಯಾವ ವಿಧವಾದ ಸಂಘವನ್ನು ಏರ್ಪಡಿಸುವುದಕ್ಕೂ ಉತ್ಸಾಹದಿಂದಲೂ ಸ್ವತಃಪ್ರಯತ್ನದಿಂದಲೂ ಕೆಲಸಮಾಡುವವರು ಕೆಲ ವರು ಇರಬೇಕೆಂಬುದೇನೋ ಸರಿ. ಆದರೆ ಪ್ರಯತ್ನವು ಮಾಡಲರ್ಹ ವಾದದ್ದು. ಶ್ರದ್ಧೆಯಿಂದ ಮಾಡಿದಲ್ಲಿ ಅದು ಸಫಲವಾಗುವುದು ನಿಶ್ಚಯ. ಒಂದೇ ಒಂದು ಮಹಿಳಾ ಸಮಿತಿಯು ತಾನಿರುವ ಪಟ್ಟಣದಲ್ಲಾಗಲಿ ಹಳ್ಳಿ ಯಲ್ಲಾಗಲಿ ನೆರೆಹೊರೆಗೆ ಎಷ್ಟು ಉಪಕಾರಮಾಡಬಲ್ಲುದೆಂಬುದನ್ನು ನಾನು ಕಣ್ಣಾರ ನೋಡಿದ್ದೇನೆ. ಈ ವಿಷಯದಲ್ಲಿ ನನಗೆ ದೊರೆತಿರುವ ಅನುಭವವು ಮತ್ತೆಲ್ಲಾದರೂ ಸಮಿತಿಯನ್ನು ಸ್ಥಾಪಿಸಲು ಉಪಯುಕ್ತವಾದರೆ ಅದು ಸಾರ್ಥಕವಾಗುವುದು."

"ಪ್ರಾರಂಭದಲ್ಲಿ ಪ್ರತಿಯೊಂದು ಜಿಲ್ಲಾ ಪಟ್ಟಣದಲ್ಲಿಯೂ ನಾವು ಸಮಿತಿಗಳನ್ನು ಸ್ಥಾಪಿಸಿ, ಅನಂತರ ಗ್ರಾಮಾಂತರಗಳಲ್ಲಿ ಸ್ಥಾಪಿಸಲು ಪ್ರಯತ್ನಿಸಬಹುದು. ಇಷ್ಟುಮಟ್ಟಿಗೆ ನಾವು ಸಾಧಿಸಿದಲ್ಲಿ ನಮ್ಮ ಉದ್ದೇ ಶವು ಮುಕ್ಕಾಲುಪಾಲು ನೆರವೇರಿದಂತಾಗುವುದು. ಸಮಿತಿಯು ಮೊಟ್ಟ ಮೊದಲು ಸ್ತ್ರೀಯರು ಒಂದೆಡೆಯಲ್ಲಿ ಕೂಡುವಂತೆ ಮಾಡಬೇಕು. ಇದಾದ ಕೂಡಲೆ ಹೆಂಗಸರಿಗೆ ತಾವು, ಪರದೆಯನ್ನು ಬಿಡದೆಯೇ, ಮಾಡಬಹುದಾದ ಅನೇಕ ಉಪಯುಕ್ತ ಕಾರ್ಯಗಳು ತಾವಾಗಿ ತೋರಿಬರುತ್ತವೆ."

"ಉದಾಹರಣೆಗೆ, ಅವರು ಆ ಊರಿನ (ಆಸ್ಪತ್ರೆ) ವೈದ್ಯಶಾಲೆಗಳ ಕಡೆಗೆ ಗಮನಕೊಟ್ಟು, ರೋಗಿಗಳಿಗೆ ಸರಿಯಾದ ಆಹಾರ ಉಪಚಾರಗಳು ನಡೆಯುವಂತೆ ನೋಡಿಕೊಳ್ಳಬಹುದು. ಸ್ವಲ್ಪ ಚಂದಾಹಣವನ್ನು

ಕೂಡಿಸಿ, ರೋಗಿಗಳ ಸೌಖ್ಯಕ್ಕೆ ಅವಶ್ಯವಾದ ಪದಾರ್ಥಗಳನ್ನು ಕೊಂಡು ಕೊಂಡು ಹೋಗಿ ಕೊಟ್ಟು, ಅವರನ್ನು ವಿಚಾರಿಸಿ ಬರಬಹುದು. ವೈದ್ಯ ಶಾಲೆಯ ಅಧಿಕಾರಿಗಳೇ ಈ ಎಲ್ಲ ಕೆಲಸಗಳನ್ನೂ ಮಾಡಿಕೊಳ್ಳಬಹು ದೆಂದು ಭಾವಿಸಿರುವವರು ಅನೇಕ ವೈದ್ಯಶಾಲೆಗಳಿಗೆ ದ್ರವ್ಯ ಸಂಕೋಚ ದಿಂದ ಇಂಥ ಹೆಚ್ಚಿನ ಉಪಚಾರಕಾರ್ಯ ಅಸಾಧ್ಯವಾಗಿದೆ ಎಂಬ ಸಂಗತಿ ಯನ್ನು ಕಂಡವರಲ್ಲ! ರೋಗಿಯ ಪೋಷಣೆಯು ಸ್ತ್ರೀಗೆ ಸಹಜವಾಗಿ ಬಂದಿರುವ ಕೆಲಸ. ಇತರ ಕೆಲಸಗಳಿಗಿಂತ ಈ ಕೆಲಸ ಸ್ತ್ರೀಯರಿಗೆ ಚೆನ್ನಾಗಿ ಒಪ್ಪುತ್ತದೆ. ರೋಗಿಗಳ ಆವಶ್ಯಕತೆಗಳನ್ನು ಗಂಡಸರಿಗಿಂತ ಹೆಂಗಸರು ಚೆನ್ನಾಗಿ ಅರಿಯ ಬಲ್ಲರು. ನಾನು ಮಹಿಳಾ ಸಮಿತಿಗಳನ್ನು ಸ್ಥಾಪಿಸಿರುವ ಕಡೆಗಳಲ್ಲೆಲ್ಲಾ ಆಯಾ ಊರಿನ ಜಿಲ್ಲಾ ಆಸ್ಪತ್ರೆಗಳಿಗೆ ಅಲ್ಲಿಯ ಸಮಿತಿ ಯಿಂದ ಈ ವಿಧವಾದ ಉಪಕಾರ ಬಹಳಮಟ್ಟಿಗೆ ದೊರೆತಿದೆ."

"ನಮ್ಮ ಸಮಿತಿಗಳ ಪೈಕಿ ಒಂದು ಸಮಿತಿಯವರು ಹೋಗಿ ನೋಡಿ ದಂಥಾ ಆಸ್ಪತ್ರೆಯೊಂದರಲ್ಲಿ ರೋಗಿಗಳು ಊಟಮಾಡಲು ಅಥವಾ ಕುಡಿ ಯಲು ಯಾವ ಬಗೆಯ ಪಾತ್ರೆಗಳೂ ಇರಲಿಲ್ಲ. ಹಾಲು ಗಂಜಿಗಳನ್ನು ಎಲೆದೊನ್ನೆಗಳಲ್ಲೋ ಮಣ್ಣಿನ ಕುಡಿಕೆಗಳಲ್ಲೋ ಅವರಿಗೆ ಕೊಡುತ್ತಿದ್ದರು. ಸಮಿತಿಯ ಸದಸ್ಯರುಗಳಲ್ಲಿ ಮುಕ್ಕಳಿದ್ದ ಹೆಂಗಸರು ಇದನ್ನು ಕಂಡು ಮನ ಮರುಗಿದರು. ಒಡನೆಯೇ ಅವರೆಲ್ಲರೂ ಸೇರಿ ಈ ಲೋಪವನ್ನು ಹೋಗ ಲಾಡಿಸಲು ಏರ್ಪಾಟು ಮಾಡಿಕೊಂಡು, ಇಷ್ಟು ದೀರ್ಘಕಾಲದಿಂದಲೂ ಯಾವ ಪಾತ್ರೆಯೂ ಇಲ್ಲದ ಆಸ್ಪತ್ರೆಗೆ ಸಾಕಾದಷ್ಟು ಪಾತ್ರೆಗಳನ್ನು ತರಿಸಿ ಕೊಟ್ಟರು. ನಮ್ಮ ಸುತ್ತಮುತ್ತಲಿನ ಸ್ಥಿತಿಗತಿಗಳನ್ನು ತಿಳಿಯದೆ ಇರುವ ಮೌಢ್ಯವೇ ನಮ್ಮ ತೊಂದರೆಗಳಲ್ಲಿ ಮುಕ್ಕಾಲು ಮೂರು ವೀಸ ಪಾಲಿಗೆ ಕಾರಣವಾದುದು. ಕೆಲವು ಸಮಿತಿಯ ಸದಸ್ಯರು ಕೆಲವು ಪಾತ್ರೆಗಳನ್ನು ದಾನವಾಗಿ ಕೊಟ್ಟರು. ಉಳಿದ ಪಾತ್ರೆಗಳನ್ನು ಸಮಿತಿಯವರು ಎತ್ತಿದ ಚಂದಾಹಣದಿಂದ ಕೊಳ್ಳಲಾಯಿತು. ಅನೇಕ ವರ್ಷಗಳಿಂದಲೂ ಇದ್ದ ಈ ಕೊರತೆಯು ಗಂಡಸರ ಬುದ್ಧಿಗೆ ಗೋಚರವಾಗಿಯೇ ಇರಲಿಲ್ಲ; ಅಥವಾ ಗೋಚರವಾಗಿದ್ದರೂ ಅವರು ಮನಸ್ಸಿಗೆ ತಂದುಕೊಂಡಿರಲಿಲ್ಲವೆಂದು ಹೇಳ ಬೇಕು. ಇದು ಅತ್ಯವಶ್ಯಕವಾಗಿ ಪರಿಹಾರವಾಗಬೇಕಾಗಿದ್ದ ಒಂದು ಕೊರತೆಯಲ್ಲವೆ? ಸ್ತ್ರೀಯರು ಈ ಕೊರತೆಯನ್ನು ಬಹು ಜಾಗ್ರತೆಯಲ್ಲಿ

ಮನಗಂಡರಲ್ಲದೆ, ಕೂಡಲೆ ಅದನ್ನು ನಿವಾರಣೆ ಮಾಡಿದರು. ಈ ಸಮಿತಿಯು ಸ್ಥಾಪಿತವಾಗಿ ಒಂದು ವರ್ಷ ಕಾಲವೂ ಆಗಿರಲಿಲ್ಲ. ಆದರೆ ಈ ಸಮಿತಿಯಿಂದ ಆದ ಉಪಕಾರವು ಪರದಾ ಹೆಂಗಸರಿಂದ—ಯಾವ ಆಡಂಬರವೂ ಇಲ್ಲದೆ, ಮನೆಯಿಂದ ಬಹುದೂರ ಹೋದದ್ದಿಲ್ಲದೆ—ನಡೆಯಿತು. ಸಮಿತಿಯ ಪ್ರತಿಯೊಬ್ಬ ಸದಸ್ಯಳೂ ದಿನಕ್ಕೊಂದು ಹಿಡಿ ಅಕ್ಕಿಯನ್ನು ತೆಗೆದಿಡುವಳು. ಪ್ರತಿಯೊಬ್ಬಾಕೆಯೂ ಹೀಗೆ ಸೇರಿಸಿದ ಅಕ್ಕಿಯನ್ನು ಮಾರಿ, ಅದರಿಂದ ಸಮಿತಿಯವರು ವೈದ್ಯಶಾಲೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ರೋಗಿಗಳಿಗೆ ಆವಶ್ಯಕವಾದ ಬಟ್ಟೆ, ಹೊದ್ದಿಕೆ ಮುಂತಾದುವುಗಳನ್ನು ಕೊಂಡು ಕೊಡುವರು."

"ಮಹಿಳಾ ಸಮಿತಿಯಿಂದ ಆಗುವ ಮತ್ತೊಂದು ಉಪಕಾರವೇನೆಂದರೆ, ಸ್ತ್ರೀ ಮಂಡಲದಲ್ಲಿ ಉಪಯುಕ್ತವಾದ ತಿಳಿವಳಿಕೆ ಹರಡುವಂತೆ ಮಾಡುವುದು. ಉದಾಹರಣೆಗಾಗಿ, ವಿತಂತುಗಳಿಗೆ ಕೈಗಾರಿಕೆಗಳನ್ನು ಕಲಿಸಲು ಒಂದು ಶಾಲೆಯನ್ನು ಏರ್ಪಡಿಸುವುದು; ಪರದಾ ಹೆಂಗಸರಿಗಾಗಿ ಪಾಠಶಾಲೆಗಳನ್ನು ಜನಾನಾದಲ್ಲಿಯೇ ಏರ್ಪಡಿಸುವುದು; ಬಾಲಿಕಾ ಪಾಠಶಾಲೆಗಳಲ್ಲಿ ಚೆನ್ನಾಗಿ ತೇರ್ಗಡೆ ಹೊಂದಿದವರಿಗೆ ಬಹುಮಾನಗಳನ್ನು ಕೊಡುವುದು; ಸೂಲಗಿತ್ತಿಯರುಗಳನ್ನು ತರಬೇತು ಮಾಡುವುದು; ಶಿಶುಸಂರಕ್ಷಣಸ್ಥಾನಗಳನ್ನೇರ್ಪಡಿಸುವುದು—ಇಂಥ ಕೆಲಸಗಳನ್ನು ಮಹಿಳಾ ಸಮಿತಿಗಳು ಮಾಡಬಹುದು. ಇವುಗಳಿಗೆಲ್ಲಾ ದ್ರವ್ಯ ಬೇಕೆಂಬುದು ನಿಶ್ಚಯ. ಆದರೆ ಇದಕ್ಕೆ ಬೇಕಾದ ದೃಢಸಂಕಲ್ಪವಿದ್ದು, ಆ ಸಂಕಲ್ಪ ನೆರವೇರಲು ಸಾಧನವಾಗಿ ಒಂದು ಸಮಿತಿ ಇದ್ದಲ್ಲಿ, ಹಣ ಒದಗದೆ ಹೋಗುವುದಿಲ್ಲ. ಕೆಲಮಂದಿ ಸ್ತ್ರೀಯರು ಐಕಮತ್ಯದಿಂದ ಸಹಕರಿಸುವುದು ಮುಖ್ಯ."

"ಒಬ್ಬ ಬಿಡಿ ಹೆಂಗಸು ಏನು ಮಾಡುವುದೂ ಸಾಧ್ಯವಿಲ್ಲ. ಆದರೆ ಒಂದು ಸಮಿತಿಯವರು ಆರೋಗ್ಯ ನೈರ್ಮಲ್ಯಗಳ ವಿಷಯವಾಗಿ ದೀಪಚಿತ್ರ ಸಹಿತವಾದ ಉಪನ್ಯಾಸಗಳನ್ನು ಕೊಡಿಸಬಹುದು. ಇಂಥ ಉಪನ್ಯಾಸಗಳಿಂದ ಎಷ್ಟು ಪ್ರಯೋಜನವುಂಟೆಂಬುದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳಬಲ್ಲೆನು. ಒಂದುಸಲ ಸಮಿತಿಯವರಿಂದ ಏರ್ಪಡಿಸಲ್ಪಟ್ಟ ಇಂಥ ಒಂದು ಉಪನ್ಯಾಸಕ್ಕೆ ಒಬ್ಬ ಆರು ವರ್ಷದ ಹುಡುಗಿಯು ತನ್ನ ತಾಯಿಯ ಸಂಗಡ ಬಂದಿದ್ದಳು. ಕೆಲವು ದಿವಸಗಳಾದಮೇಲೆ ಆ ಹುಡುಗಿ

ಒಂದು ದಿನ ಊಟಕ್ಕೆ ಕುಳಿತಿದ್ದಾಗ ನೊಣಗಳು ತನಗೆ ಬಡಿಸಿದ್ದ ಅನ್ನದ ಮೇಲೆ ಕೂತುಕೊಂಡುದನ್ನು ನೋಡಿ, ಅವಳು ಊಟಮಾಡದೆ ಹಾಗೆಯೇ ಎದ್ದುಬಿಟ್ಟಳು. ಅವಳ ತಾಯಿ ಕಾರಣವೇನೆಂದು ತಿಳಿಯದೆ ಪ್ರಶ್ನಿಸಿದಾಗ, ಆ ಹುಡುಗಿ "ಹೋದವಾರದ ಉಪನ್ಯಾಸದಲ್ಲಿ ನೊಣ ಮುಟ್ಟಿದ ಆಹಾರವು ರೋಗವನ್ನುಂಟುಮಾಡುವುದೆಂದು ಕೇಳಿದ್ದು ಮರೆತುಹೋಯಿತೇನಮ್ಮಾ? ನಾನು ಆ ಅನ್ನವನ್ನು ತಿನ್ನಲಾರೆ" ಎಂದಳು. ಆ ಉಪನ್ಯಾಸವನ್ನು ಕೇಳಿದ ಇನ್ನೂ ಅನೇಕ ಮಂದಿ ತಾಯಿಯರ ಪೈಕಿ ಈ ವಿಷಯವನ್ನು ಮರೆಯದೆ ಇದ್ದವರು ಎಷ್ಟು ಜನರಿದ್ದರೋ ತಿಳಿಯದು. ಅಂತು ಆ ಮಗುವೇನೋ ಅದನ್ನು ಮರೆತಿರಲಿಲ್ಲ! ಆ ಉಪನ್ಯಾಸದಲ್ಲಿ ಬಿತ್ತಿದ್ದ ಬೀಜವು ಬೇರೂರಿ ಮೊಳಕೆ ಬಂದಿತ್ತು. ಆ ಹುಡುಗಿ ಮುಂದೆ ತಾಯಿಯಾಗುವವಳು. ಆ ವೇಳೆಗೆ ಈ ಅಭಿಪ್ರಾಯವು ಅವಳ ಸ್ವಭಾವದಲ್ಲಿ ಬೇರೂರಿರುವುದು. ಈ ಕಾಲದ ತಾಯಿಯರಲ್ಲಿ ಇಂಥ ಉಪನ್ಯಾಸಗಳ ಪ್ರಯೋಜನವು ತೋರದೇ ಇದ್ದರೂ, ಮುಂದೆ ತಾಯಿಯರಾಗುವ ಈಗಿನ ಹುಡುಗಿಯರಿಗೇನೋ ಇದರಿಂದ ಬಹಳ ಪ್ರಯೋಜನವುಂಟು. ನಮ್ಮ ಮನೆಗಳಲ್ಲಿ ಪ್ರತಿಯೊಬ್ಬ ಹೆಂಗಸಿನ ಮನಸ್ಸಿನಲ್ಲಿಯೂ ಇರುವ ಅಜ್ಞಾನದ ಅಂಧಕಾರವು ಪರಿಹಾರವಾಗಬೇಕು. ಅದು ಪರಿಹಾರವಾಗದೆ ಯಾವ ಮಹತ್ತರವಾದ ಚಳವಳಿ ನಡೆದರೂ ದೇಶಕ್ಕೆ ಪ್ರಯೋಜನವಾಗುವುದಿಲ್ಲ. ನಮ್ಮ ದೇಶದಲ್ಲಿ ಅನೇಕ ವೇಳೆ ಹುಡುಗಿಯರಿಗೆ ಹತ್ತನೆಯ ವಯಸ್ಸಿನಲ್ಲೇ ಮದುವೆಯಾಗಿ ಹದಿನಾಲ್ಕನೆಯ ವಯಸ್ಸಿನಲ್ಲಿ ಆಕೆ ತಾಯಿಯಾಗಿಬಿಡುತ್ತಾಳೆ. ಇಂಥ ಶಿಶು-ತಾಯಿಯರು ಶಿಶುಗಳನ್ನು ಬೆಳಯಿಸಲು, ಅವರುಗಳಿಗೆ ಯಾವ ವಿಧವಾದ ಅನುಭವವಿದ್ದೀತು? ಆದಕಾರಣ ಅವರುಗಳಿಗೆ ಮದುವೆಯಾದ ಮೇಲೂ, ಮಕ್ಕಳನ್ನು ಪಡೆದ ಮೇಲೂ, ಅವರಿಗೆ ನಾನಾ ವಿಚಾರಗಳನ್ನು ಬೋಧಿಸಬೇಕು. ಇದು ಶಾಲೆಗಳಿಂದ ನೆರವೇರುವ ಕೆಲಸವಲ್ಲ. ಅದು ಆವರವರ ಮನೆಗಳಲ್ಲಿ—ಮಹಿಳಾ ಸಮಿತಿಗಳ ಮೂಲಕ—ನಡೆಯಬೇಕಾದ ಕೆಲಸವೇ ಹೊರತು, ಅದಕ್ಕೆ ಬೇರೆ ದಾರಿ ಯಾವುದೂ ಇಲ್ಲ."

"ಆದುದರಿಂದ ನಾನು ನಮ್ಮ ನಾಡಿನ ತಾಯಂದಿರಿಗೂ ಸಹೋದರಿಯರಿಗೂ ಹೇಳುವುದೇನೆಂದರೆ:—"ನಿಮ್ಮ ನಿದ್ರೆಯಿಂದ ಎಚ್ಚೆತ್ತು

ಕೊಳ್ಳಿ! ಪ್ರತಿ ಜಿಲ್ಲೆಯಲ್ಲಿಯೂ ಪ್ರತಿ ಪಟ್ಟಣದಲ್ಲಿಯೂ ಪ್ರತಿ ಗ್ರಾಮ ದಲ್ಲಿಯೂ ಮಹಿಳಾ ಸಮಿತಿಗಳನ್ನು ಏರ್ಪಡಿಸಿರಿ. ಸ್ತ್ರೀ ವಿದ್ಯಾಭ್ಯಾಸದ ಬೆಳಕಿನ ಪ್ರವಾಹವನ್ನು ದೇಶದಲ್ಲೆಲ್ಲೆತ್ತಲೂ ನುಗ್ಗಿಸಿರಿ, ಹೀಗೆ ಮಾಡ ದಿದ್ದರೆ ನಮ್ಮ ದೇಶಕ್ಕೆ ಅಭ್ಯುದಯದ ಆಶೆಯಿಲ್ಲ. ಸ್ವದೇಶ ಮಹಿಳೆಯರೇ, ಎಚ್ಚೆತ್ತುಕೊಳ್ಳಿ! ಇಲ್ಲದಿದ್ದರೆ ಈ ದೇಶಕ್ಕೆ ಸ್ವಾತಂತ್ರ್ಯವೆಂಬುದು ಎಂದಿಗೂ ವಾಸ್ತವವಾಗಲಾರದ ಕನಸಾಗಿ ಉಳಿದಿರುವುದು."

ಹಿಂದೂ ದೇಶದ ಗೃಹ ಜೀವನ ಸಮಾಜ ಜೀವನಗಳಲ್ಲಿ ನಿಜ ವಾದ ಅಧಿಕಾರವು ಗಂಡಸರಲ್ಲಿಲ್ಲವೆಂದೂ, ಮನೆಯಲ್ಲಿ ವಯಸ್ಸಾದ ಹೆಂಗಸ ರುಗಳ ಕೈಯಲ್ಲೇ ಆ ಎಲ್ಲ ಅಧಿಕಾರವೂ ಇರುವುದೆಂದೂ ಸರೋಜ ನಳಿನಿಗೆ ಚೆನ್ನಾಗಿ ಗೊತ್ತಿತ್ತು. ಆದುದರಿಂದ ಹಿರಿಯ ಹೆಂಗಸರುಗಳ ಸಹಾನು ಭೂತಿಯಿಲ್ಲದೆ ಸಾಮಾಜಿಕ ಸುಧಾರಣೆಗಳಾಗಲಿ ವಿದ್ಯಾಭಿವೃದ್ಧಿಯಾಗಲಿ ಸಾಧ್ಯವಿಲ್ಲವೆಂದು ಆಕೆ ತಿಳಿದಿದ್ದಳು. ನಮ್ಮ ದೇಶದ ಸ್ತ್ರೀಯರು ಮುಕ್ಕಾಲು ಪಾಲು ಅನಕ್ಷರಸ್ಥರಾಗಿದ್ದರೂ, ಅವರು ಸಾಧಾರಣವಾಗಿ, ಜನರು ತಿಳಿದಿರು ವಂತೆ, ಹೊಸ ಅಭಿಪ್ರಾಯಗಳನ್ನು ಗ್ರಹಿಸಲಾರದವರೂ ತಮ್ಮ ಏಳಿಗೆಗೆ ಪ್ರಯತ್ನ ಮಾಡದೆ ಇರುವವರೂ ಅಲ್ಲ. ಅವರುಗಳ ಹಿತಕ್ಕಾಗಿ ಯಾವ ಪ್ರಯತ್ನವನ್ನು ಮಾಡಿದರೂ ಅವರು ಸಹಕರಿಸುವರಲ್ಲದೆ, ಮಹಿಳಾ ಸಮಿತಿಯು ಕೈಕೊಳ್ಳುವ ಯಾವುದೊಂದು ಕಾರ್ಯದಲ್ಲಿಯಾದರೂ ಅವರ ಸಹಾಯವನ್ನು ಪ್ರಾರ್ಥಿಸಿದರೆ ಅವರು ಅವಶ್ಯವಾಗಿ ಸಹಕರಿಸುವರು. ಒಂದು ಸಲ ಅವರನ್ನು ಈ ರೀತಿ ಸಂಘರೂಪವಾಗಿ ಸೇರಿಸಿದರೆ, ಅನಂತರ ಅವರುಗಳೇ ಸಾಮಾಜಿಕ ವಿಚಾರಗಳಲ್ಲಿಯೂ ವಿದ್ಯಾ ವಿಚಾರಗಳಲ್ಲಿಯೂ, ಆರ್ಥಿಕ ವಿಚಾರಗಳಲ್ಲಿಯೂ ಪ್ರಗತಿಕಾರಕವಾದ ಒಂದು ದೊಡ್ಡ ಶಕ್ತಿಯಾ ಗುವರು. ಇದನ್ನೆಲ್ಲಾ ಸರೋಜ ನಳಿನಿಯು ಚೆನ್ನಾಗಿ ಅರಿತಿದ್ದಳು.

ಸರೋಜ ನಳಿನಿ ಮೊದಲು ಮಹಿಳಾ ಸಮಿತಿಯನ್ನು ಏರ್ಪಡಿಸಿದ್ದು ಪಾಬ್ನಾದಲ್ಲಿ ೧೯೧೩ ರಲ್ಲಿ. ಪರದಾ ಹೆಂಗಸರಲ್ಲಿ ಸ್ನೇಹಪೂರ್ವಕವಾದ ಸಹ ಕಾರವನ್ನು ಅಭ್ಯಾಸ ಮಾಡಿಸುವುದು; ಮನೆಯ ಹೊರಗಣ ಸಮಾಜಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅವರಿಗೆ ಆಸಕ್ತಿಯನ್ನುಂಟುಮಾಡುವುದು; ಆರೋಗ್ಯ, ನೈರ್ಮಲ್ಯ, ಮಿತವ್ಯಯ ಮುಂತಾದ ಉಪಯುಕ್ತ ವಿಷಯ ಗಳಲ್ಲಿ ಉಪನ್ಯಾಸಗಳನ್ನೇರ್ಪಡಿಸುವುದು; ಮಹಿಳೆಯರು—ಅದರಲ್ಲೂ

ವಿಧವೆಯರು—ಕೈಗಾರಿಕೆಗಳನ್ನು ಕಲಿತು ತಮ್ಮ ಜೀವನವನ್ನು ತಾವೇ ಸಂಪಾದಿಸಿಕೊಳ್ಳಲು ಬೇಕಾದ ಸಾಧನವನ್ನು ಕಲ್ಪಿಸಿ ಕೊಡುವುದು—ಇವುಗಳೇ ಪಾಬ್ನಾ ಸಮಿತಿಯ ಉದ್ದೇಶಗಳು.

ಆಕೆ ಸ್ಥಾಪಿಸಿದ ಎರಡನೆಯ ಮಹಿಳಾ ಸಮಿತಿ ಬೀರ್‌ಭೂಮಿನದು; ಅದು ೧೯೧೬ ರಲ್ಲಿ. ಆಗ ಯೂರೋಪಿನ ಮಹಾ ಯುದ್ಧ ನಡೆಯುತ್ತಿತ್ತು. ನಾನು ಬೀರ್‌ಭೂಮಿನ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್ ಆಗಿದ್ದೆ. ಈ ಸಮಿತಿಗೆ ಸರೋಜ ನಳಿನಿಯು ಜೀವಕಳೆಯನ್ನು ತುಂಬಿ, ಅದರ ಪ್ರಭಾವವು ಪ್ರತಿಯೊಂದು ಮನೆಗೂ ವ್ಯಾಪಿಸುವಂತೆ ಮಾಡಿದಳು. ಗೃಹಕಾರ್ಯ ನಿರ್ವಾಹಕ್ರಮದ ಬೋಧನೆಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಆ ಊರಿನ ಬಾಲಿಕಾ ಪಾಠಶಾಲೆಗಳಿಗೆ ಈ ಸಮಿತಿಯು ಬಹುಮಾನಗಳನ್ನು ಕೊಟ್ಟಿತು. ಸಮಿತಿಯ ಸದಸ್ಯರು ಈ ವಿಷಯದಲ್ಲಿ ಶಾಲೆಯ ಹುಡುಗಿಯರನ್ನು ಪರೀಕ್ಷಿಸುತ್ತಿದ್ದರು; ಸದಸ್ಯರು ಓದಲು ಮಾಸಪತ್ರಿಕೆಗಳನ್ನೂ ಪುಸ್ತಕಗಳನ್ನೂ ಒದಗಿಸಿದರು; ಅನಕ್ಷರಸ್ಥರಾದ ಘೋಷಾ ಹೆಂಗಸರ ವಿದ್ಯಾಭ್ಯಾಸಕ್ಕಾಗಿ ಅಲ್ಲಲ್ಲಿ ಶಾಲೆಗಳನ್ನೇರ್ಪಡಿಸಿದರು; ಆ ಊರಿನ ಆಸ್ಪತ್ರೆಗೆ ಹೋಗಿ ಅಲ್ಲಿನ ರೋಗಿಗಳಿಗೆ ಅನುಕೂಲ್ಯಗಳನ್ನು ಕಲ್ಪಿಸುತ್ತಿದ್ದರು; ಯುದ್ಧವು ನಡೆಯುತ್ತಿದ್ದಾಗ ಯುದ್ಧರಂಗದಲ್ಲಿ ಹೋರಾಡುತ್ತಿದ್ದ ಸೈನಿಕರುಗಳಿಗೆ ಅವಶ್ಯವಾದ ಸಾಮಾನುಗಳನ್ನು ಕಳುಹಿಸಲು ಚಂದಾ ಎತ್ತಿದರು; ಮತ್ತು ಪ್ರತಿವಾರವೂ ಸಮಿತಿಯ ಸದಸ್ಯರು ಸೇರಿ ಬಗೆ ಬಗೆಯ ಬಟ್ಟೆಗಳನ್ನು ತಂದು ಕತ್ತರಿಸಿ, ಕವಚಗಳನ್ನೂ ಅಂಗಿಗಳನ್ನೂ ಹೊಲಿದು, ಮೆಸೊಪೊಟೇಮಿಯಾದಲ್ಲಿ ಯುದ್ಧ ಮಾಡುತಲಿದ್ದ ಹಿಂದೂಸ್ಥಾನದ ಸಿಪಾಯಿಗಳಿಗೆ ಕಳುಹಿಸಿದರು.

೧೯೧೭ ಮತ್ತು ೧೯೧೮ನೆಯ ಇಸವಿಗಳಲ್ಲಿ ಸರೋಜ ನಳಿನಿ ಬೀರ್‌ಭೂಮ್ ಜಿಲ್ಲೆಯಲ್ಲಿರುವ ಸುಲ್ತಾನ್‌ಪುರ ಮತ್ತು ರಾಂಪುರ್‌ಹಾಟ್ ಎಂಬಲ್ಲಿ ಮಹಿಳಾ ಸಮಿತಿಗಳನ್ನು ಏರ್ಪಡಿಸಿದಳು.

ಆಕೆ ಸ್ಥಾಪಿಸಿದ ಮತ್ತೊಂದು ಸಮಿತಿಯು ಬಹಳ ಉಪಯುಕ್ತವಾದ ಸಾಮಾಜಿಕ ಮತ್ತು ವಿದ್ಯಾವರ್ಧಕ ಕಾರ್ಯಗಳನ್ನು ಮಾಡಿದೆ. ಇದು ಬಂಕೂರಾದಲ್ಲಿ ೧೯೨೧ ರಲ್ಲಿ ಸ್ಥಾಪಿತವಾಯಿತು. ಈ ಸಮಿತಿಯವರು

ಸ್ಥಳೀಯ ವೈದ್ಯಶಾಲೆಗಳಿಗೂ ಬಾಲಿಕಾ ಪಾಠಶಾಲೆಗಳಿಗೂ ಸಹಾಯ ಮಾಡಿರುವುದಲ್ಲದೆ, ಸದಸ್ಯರಲ್ಲಿ ಉಪಯುಕ್ತ ಜ್ಞಾನವನ್ನು ಹರಡಲು ವ್ಯಾಸಂಗ ಗೋಷ್ಠಿಗಳನ್ನು ಏರ್ಪಡಿಸಿ, ಸೂಲಗಿತ್ತಿಯರ ತರಬೇತಿಗಾಗಿ ಒಂದು ಏರ್ಪಾಟು ಮಾಡಿ, ಒಂದು ಬಾಣಂತಿ ಶಾಲೆಯನ್ನೂ ಸ್ಥಾಪನೆ ಮಾಡಿದ್ದಾರೆ.

ಬಂಕೂರಾವನ್ನು ಬಿಟ್ಟು ಬಂದ ಮೇಲೂ ಸರೋಜ ನಳಿನಿಯು ಬಂಕೂರಾ ಸಮಿತಿಯ ಕಾರ್ಯದರ್ಶಿಗೆ ತಪ್ಪದೆ ಕಾಗದ ಬರೆದು ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೊಳ್ಳುತಲಿದ್ದಳು. ಅಲ್ಲದೆ ಆಗಾಗ್ಗೆ ತಾನೂ ಯುಕ್ತವಾದ ಸಲಹೆಗಳನ್ನು ಕೊಡುತ್ತಲಿದ್ದಳು. ಒಂದು ಪತ್ರದಲ್ಲಿ— "ನೀವು ನನ್ನನ್ನು ಇಷ್ಟೊಂದು ಪ್ರೀತಿಸುತ್ತಿದ್ದೀರಿ. ಆದುದರಿಂದ ನನ್ನ ಸಮಿತಿಯನ್ನೂ ನೀವು ತುಂಬ ಪ್ರೀತಿ ವಿಶ್ವಾಸಗಳಿಂದ ನೋಡಿಕೊಳ್ಳು ವಿರೆಂದೂ ಅದನ್ನು ಸರಿಯಾದ ರೀತಿಯಲ್ಲಿಟ್ಟುಕೊಳ್ಳುವಿರೆಂದೂ ನಂಬಿದ್ದೇನೆ" ಎಂದು ಬರೆದಿದ್ದಳು. ಮತ್ತೊಂದರಲ್ಲಿ "ಹದಿಮೂರು ಜನ ಸೂಲಗಿತ್ತಿಯರು ಉತ್ತೀರ್ಣರಾಗಿದ್ದಾರೆಂಬುದನ್ನು ತಿಳಿದು ನನಗೆ ಬಹಳ ಸಂತೋಷವಾಯಿತು. ಆದರೆ ಈ ಸೂಲಗಿತ್ತಿಯರಿಗೂ ಸ್ತ್ರೀ ವೈದ್ಯರುಗಳಿಗೂ ಜನರಿಂದ ಸರಿಯಾದ ಉತ್ತೇಜನ ದೊರೆಯದಿದ್ದರೆ ಯಾವ ಪ್ರಯೋಜನವೂ ಇಲ್ಲ. ಕ್ರಮವಾದ ತರಬೇತು ಪಡೆಯದೆ ಇರುವ ಸೂಲಗಿತ್ತಿಯರ ಸಹಾಯವನ್ನು ಯಾರೂ ಬಯಸದಿರುವಂತೆ ನೀವು ನೋಡಿಕೊಳ್ಳಬೇಕು."

ಬೀರ್‌ಭೂಮಿನ ಸ್ತ್ರೀ ಪ್ರಮುಖರು ಒಂದು ಅಂದವಾದ ಕಟ್ಟಡವನ್ನು ಕಟ್ಟಿಸಿ, ಸರೋಜ ನಳಿನಿಯಲ್ಲಿ ತಮಗಿರುವ ಕೃತಜ್ಞತೆಯನ್ನು ತೋರ್ಪಡಿಸುವುದಕ್ಕಾಗಿಯೂ ಮತ್ತು ಆಕೆಯ ಸ್ಮರಣಾರ್ಥವಾಗಿಯೂ ಆ ಕಟ್ಟಡಕ್ಕೆ "ಸರೋಜ ನಳಿನೀ ಮಿಲನ ಮಂದಿರ" (ಅಂದರೆ ಸಭೆ ಕೂಡುವ ಸ್ಥಳ ಅಥವಾ "ಮೀಟಿಂಗ್ ಹಾಲ್") ಎಂದು ಹೆಸರಿಟ್ಟರು. ಈ ಕಟ್ಟಡ ಬೀರ್‌ಭೂಮಿನ ಮಹಿಳಾ ಸಮಿತಿಯ ಉಪಯೋಗಕ್ಕಾಗಿ ಕಟ್ಟಿದ್ದು. ಕೆಲವು ತಿಂಗಳುಗಳ ಅನಂತರ ಸರೋಜ ನಳಿನಿಯು ಆ ಸ್ಥಳದಿಂದ ಹೊರಡಲು ಸಮಿತಿಯ ಸದಸ್ಯರುಗಳ ಅಪ್ಪಣೆ ಬೇಡುವಾಗ್ಗೆ, ಅವರು ಆ ಕಟ್ಟಡದಲ್ಲಿ ಸೇರಿದ್ದಾಗ, ಹೀಗೆ ಹೇಳಿದಳು:—"ಈಗ ಬೆಳೆಯುತ್ತಿರುವ ಹುಡುಗಿಯರು

ದೊಡ್ಡವರಾದಾಗ ಈ ಮಹಿಳಾ ಸಮಿತಿಯ ಕಟ್ಟಡವನ್ನು ಸ್ತ್ರೀಯರ ಉದ್ಧಾರಕ್ಕೂ ಮತ್ತು ದೇಶದ ಅಭಿವೃದ್ಧಿಗೂ ಅವಶ್ಯವಾದ ಸಾಮಾಜಿಕ ಸೇವೆಗಾಗಿ ನಿರ್ಮಿತವಾಗಿರುವ ದೇವಾಲಯವೆಂದು ಭಾವಿಸಲಿ! ಇದೇ ದೇವರಲ್ಲಿ ನನ್ನ ಪ್ರಾರ್ಥನೆ."

ಹಳಬರಾದ ಗಂಡಸರು ಕೆಲವುಂದಿ ಮಹಿಳಾ ಸಮಿತಿಯ ಏರ್ಪಾಟನ್ನು ಅನುಮೋದಿಸದವರಾಗಿದ್ದರು. ಅಂಥವರಲ್ಲೊಬ್ಬ ಸಮಾಜ ಪ್ರಮುಖನು—"ಈ ರೀತಿ ನಮ್ಮ ಸ್ತ್ರೀಯರು ಮನೆಯ ಹೊರಗಣ ಹವ್ಯಾಸಗಳಲ್ಲಿ ಆಸಕ್ತರಾಗುವಂತೆ ಮಾಡುವುದು ನಮ್ಮ ದೇಶದ ಸಂಸ್ಕೃತಿಗೆ ವ್ಯತಿರಿಕ್ತವಲ್ಲವೆ? ನಮ್ಮ ಸ್ತ್ರೀಯರು ಅದರಿಂದ ಸ್ವಜನಧರ್ಮಭ್ರಷ್ಟರಾಗುವುದಿಲ್ಲವೆ?" ಎಂದು ಕೇಳಿದನು. ಸರೋಜನಳಿನಿ ಒಡನೆಯೆ ಹೀಗೆ ಉತ್ತರ ಕೊಟ್ಟಳು:—"ಖಂಡಿತವಾಗಿಯೂ ಅದು ಅವರುಗಳನ್ನು ಸ್ವಜನಧರ್ಮದಿಂದ ಭ್ರಷ್ಟರನ್ನಾಗಿ ಮಾಡುವುದಿಲ್ಲ. ಅದು ನಮ್ಮ ಸಂಸ್ಕೃತಿಗೆ ವ್ಯತಿರಿಕ್ತವಾದದ್ದಲ್ಲ. ಪೂರ್ವಕಾಲದಲ್ಲಿ ಭರತ ಖಂಡದಲ್ಲಿ ಮಹಿಳೆಯರು ದೇಶದ ಜ್ಞಾನ ಜೀವನದಲ್ಲಿ ಮುಖ್ಯ ಭಾಗಿಗಳಾಗಿರಲಿಲ್ಲವೆ? ಮೈತ್ರೇಯಿ, ಗಾರ್ಗಿ, ಲೀಲಾವತಿ* ಮತ್ತು ಮಂಡನ ಮಿಶ್ರ ಪ್ರಖ್ಯಾತಳಾದ ಧರ್ಮಪತ್ನಿ (ಉಂಬೆ, ಅಥವಾ ಸರಸವಾಣಿ) ಇವರುಗಳ ಮಹಿಮೆಯನ್ನು ಕೇಳದಿರುವವರು ಯಾರಿದ್ದಾರೆ? ಇದು ಹಿಂದಿನ ಮಾತಾಯಿತು. ಈಚಿನ ಕಾಲದವರಲ್ಲಿ ನಮ್ಮ ವಂಗದೇಶದ ಖನಾ ಎಂಬಾಕೆಯು ವ್ಯವಸಾಯ ಶಾಸ್ತ್ರದಲ್ಲಿಯೂ ವ್ಯವಸಾಯದ ಲೆಕ್ಕಾಚಾರದಲ್ಲಿಯೂ ಈಗಲೂ ಪರಮ ಪ್ರಮಾಣ ಭೂತಳಾಗಿಲ್ಲವೆ?" ಈ ಪ್ರಶ್ನೆಗಳಿಗೆ ಆ ವೃದ್ಧನ ಉತ್ತರ ಒಪ್ಪಿಕೆಯ ಮಾತೇ ಆಗಿತ್ತು.

---

* ಮೈತ್ರೇಯಿ ಮತ್ತು ಗಾರ್ಗಿ—ಇವರುಗಳು ಪುರಾತನ ಭರತಖಂಡದಲ್ಲಿ ತತ್ತ್ವಪ್ರಜ್ಞೆಯಿಂದ ಪ್ರಖ್ಯಾತಿಪಡೆದವರು. ಗಣಿತ ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಗ್ರಂಥವೊಂದನ್ನು ಲೀಲಾವತಿಯು ಬರೆದಳೆಂಬ ಹೇಳಿಕೆಯಿದೆ. ಮಂಡನ ಮಿಶ್ರರವರ ಪತ್ನಿಯು ತನ್ನ ಗಂಡನಿಗೂ ವೇದಾಂತ ಶಾಸ್ತ್ರ ನಿಪುಣರಾದ ಶಂಕರಾಚಾರ್ಯರಿಗೂ ನಡೆದ ವೇದಾಂತ ಸಂಬಂಧವಾದ ಚರ್ಚೆಯಲ್ಲಿ ನ್ಯಾಯ ವಿಮರ್ಶನಾಧಿಕಾರವನ್ನು ವಹಿಸಿ ತೀರ್ಪುಕೊಟ್ಟವಳು. ಖನಾ ಎಂಬಾಕೆ ವ್ಯವಸಾಯ ಶಾಸ್ತ್ರ ತತ್ತ್ವಗಳನ್ನು ಸ್ವಾರಸ್ಯವಾದ ಚಿಕ್ಕ ಪದ್ಯಗಳಲ್ಲಿ ಹೇಳಿದ್ದಾಳೆ.

ಬಳಿಕ ಸರೋಜ ನಳಿನಿ, "ಅದೂ ಅಲ್ಲದೆ, ಬಂಗಾಳದಲ್ಲಿ ಗೃಹಿಣಿಯರು ಈಗಲೂ ತಮ್ಮ ಕೆಲಸದ ವಿಷಯ ಮಾತನಾಡುವಾಗ "ಮನೆ ಸಂಸಾರ" ಎಂದು ಹೇಳುವುದಿಲ್ಲವೆ?" ಎಂದು ಕೇಳಿದಳು. ಇದಕ್ಕೂ ಆ ವೃದ್ಧನಿಂದ ಹೌದು ಎಂದು ಉತ್ತರ ಬಂತು. ಆಗ ಸರೋಜ ನಳಿನಿ "ಇದರಿಂದಲೇ ಪುರಾತನ ಕಾಲದಲ್ಲಿ ಕೂಡ ಮಹಿಳೆಯ ಕಾರ್ಯರಂಗವು ಮನೆಯೊಂದು ಮಾತ್ರವೇ ಆಗಿರದೆ, ಹೊರಗಿನ ಪ್ರಪಂಚ ಮತ್ತು ಮನೆ ಇವೆರಡೂ ಆಗಿದ್ದುವೆಂದು ನಿಸ್ಸಂಶಯವಾಗಿ ಗೊತ್ತಾಗುತ್ತದೆ. ಇವುಗಳಲ್ಲಿ ಯಾವ ಒಂದನ್ನು ಅಲಕ್ಷ್ಯಮಾಡಿದರೂ ಮತ್ತೊಂದಕ್ಕೆ ಹಾನಿಯುಂಟಾಗುವುದು. ಕಾಲಕ್ರಮದಲ್ಲಿ, ಪುರುಷರು ದೂರದೃಷ್ಟಿಯಿಲ್ಲದೆ ಸ್ವಾರ್ಥಪರರಾಗಿ, ತಮ್ಮ ಸ್ತ್ರೀಯರಿಗೆ ಅವರ ಪ್ರಪಂಚವು ಅವರ ಮನೆ ಎಷ್ಟೋ ಅಷ್ಟೇ ಎಂದು ಬೋಧಿಸಿ, ಅವರ ಕರ್ತವ್ಯಗಳೂ ಮನೋವೃತ್ತಿಗಳೂ ಅವರ ಮನೆಯ ನಾಲ್ಕು ಗೋಡೆಗಳ ಒಳಗಡೆಯೇ ಮುಗಿಯುವುವೆಂದು ಸಾರಿ, ಬಾಹ್ಯ ಪ್ರಪಂಚದ ವಿಷಯಗಳನ್ನೆಲ್ಲಾ ಅವರು ಲಕ್ಷ್ಯದಲ್ಲಿಡದಂತೆ ಮಾಡಿದರು. ಇದರಿಂದ ಎಷ್ಟು ಅನರ್ಥವಾಗಿದೆಯೆಂಬುದನ್ನು ನಾವೆಲ್ಲರೂ ಬಲ್ಲೆವು. ಗಂಡಸರು ಎಲ್ಲವನ್ನೂ ಕೊಳಸುಮಾಡಿಟ್ಟಿದ್ದಾರೆ. ಅದನ್ನು ಈಗ ಸರಿಪಡಿಸಲು ಹೆಂಗಸರಿಂದ ಮಾತ್ರವೇ ಸಾಧ್ಯ" ಎಂದು ಹೇಳಿದಳು.

ಗಂಡಸರ ಮನಸ್ಸನ್ನು ತಿರುಗಿಸುವುದಕ್ಕಿಂತ ವಯಸ್ಸಾದ ಹೆಂಗಸರನ್ನು ಒಡಂಬಡಿಸುವುದು ಸರೋಜ ನಳಿನಿಗಿದ್ದ ದೊಡ್ಡ ಕಷ್ಟ. ಬೀರ್‌ಭೂಮಿನಲ್ಲಿ ಒಬ್ಬ ಮುದುಕಿಯೊಡನೆ,—ಶ್ರೀಮತಿ ಬಿ.—ಯವರೊಡನೆ, ಸರೋಜ ನಳಿನಿ ನಡಸಿದ ಸಂಭಾಷಣೆಯೊಂದನ್ನು ಆಕೆಯ ದಿನಚರಿಯ ಪುಸ್ತಕದಿಂದ ತೆಗೆದು ಈ ಕೆಳಗೆ ಬರೆದಿದೆ. ಆ ಮುದುಕಿಗೆ ಅನೇಕಮಂದಿ ಸೊಸೆಯರಿದ್ದರು. ಸಾಧಾರಣವಾಗಿ ಒಬ್ಬ ಹಿಂದೂ ಯಜಮಾನಿತಿಯನ್ನು ತನ್ನ ಕಡೆಗೆ ತಿರುಗಿಸಿಕೊಳ್ಳಬೇಕಾದರೆ ಸರೋಜ ನಳಿನಿ ತನಗಿದ್ದ ಒಡಂಬಡಿಸುವ ಶಕ್ತಿಯನ್ನೆಲ್ಲ ಹೇಗೆ ಉಪಯೋಗಿಸಬೇಕಾಗಿತ್ತೆಂಬುದು ಈ ಸಂಭಾಷಣೆಯಿಂದ ಚೆನ್ನಾಗಿ ವ್ಯಕ್ತವಾಗುತ್ತದೆ:—

ಸರೋಜ ನಳಿನಿ:—ನಾವು ಈ ವೂರಿನಲ್ಲಿ ಒಂದು ಮಹಿಳಾಸಮಿತಿಯನ್ನೇರ್ಪಡಿಸಬೇಕೆಂದಿದ್ದೇವೆ. ಅದಕ್ಕೆ ದಯವಿಟ್ಟು ತಮ್ಮ ಸಹಕಾರವನ್ನು ನೀಡಬೇಕು.

ಶ್ರೀಮತಿ ಬಿ.—ಅವರು :—ಸಮಿತಿಯಿಂದ ಆಗತಕ್ಕ ಪ್ರಯೋಜನ ವೇನು ?

ಸ. ನ. — ಸಮಿತಿಯಿಂದ ಅನೇಕತೆರದ ಪ್ರಯೋಜನಗಳುಂಟು. ಮೊದಲನೆಯದೇನೆಂದರೆ, ಈ ಸ್ಥಳದ ಮಹಿಳೆಯರೆಲ್ಲರೂ ಒಂದು ಕಡೆಯಲ್ಲಿ ಸೇರಿ ಪರಸ್ಪರ ಸ್ನೇಹ ಬೆಳಸಲು ಅವಕಾಶವಾಗುವುದು. ಆದಷ್ಟೇ ಒಂದು ದೊಡ್ಡ ಪ್ರಯೋಜನ. ಅದು ಒಂದು ವಿದ್ಯಾಭ್ಯಾಸವೂ ಹೌದು. ಅವಲ್ಲದೆ ನಮ್ಮ ಸ್ತ್ರೀಯರಿಗೆ ಅತ್ಯವಶ್ಯವಾಗಿ ತಿಳಿಯಬೇಕಾದ ಆರೋಗ್ಯ, ನೈರ್ಮಲ್ಯ, ವ್ಯಾಯಾಮ ಮೊದಲಾದ ಅನೇಕ ವಿಷಯಗಳಲ್ಲಿ ಉಪನ್ಯಾಸಗಳನ್ನೇರ್ಪಡಿಸಬಹುದು.

ಶ್ರೀ. —ಅಷ್ಟು ಜನ ಹೆಂಗಸರು ಒಂದುಕಡೆ ಸೇರಿದರೆ ಜಗಳವಾಡಲು ಅನುಕೂಲ, ಅಷ್ಟೇ.

ಸ. ನ. —ಹಾಗೇಕೆ ಆಗಬೇಕು ?

ಶ್ರೀ. —ಓಹೋ, ಅದು ಯಾವಾಗಲೂ ಹಾಗೆಯೇ. ಹೆಂಗಸರು ಸೇರಿದೆಡೆ ಜಗಳ ಸಿದ್ಧ. ಅದು ನಮ್ಮ ಹುಟ್ಟು ಗುಣ.

ಸ. ನ. —ಹಾಗಲ್ಲ, ಜಗಳವಾಡುವುದು ಹೆಂಗಸರ ಹುಟ್ಟುಗುಣವೇನೂ ಅಲ್ಲ. ಅವರು ಪದೇ ಪದೇ ಜಗಳವಾಡುವುದು ನಿಜ; ಆದರೆ ವಿದ್ಯೆಯಿಲ್ಲದಿರುವುದೇ ಅದಕ್ಕೆ ಕಾರಣ. ಅವರು ವಿದ್ಯಾವತಿಯರಾದರೆ ಈ ಅಭ್ಯಾಸ ಬೇಗ ವಾಸಿಯಾಗುವುದು.

ಶ್ರೀ. —ನಮ್ಮ ದೇಶದ ಹೆಂಗಸರೆಲ್ಲ ವಿದ್ಯಾವತಿಯರೇ. ಅವರಿಗೆ ಇಂಗ್ಲಿಷ್ ಭಾಷೆ ಬರುವುದಿಲ್ಲ, ಹೌದು. ಆದರೆ ಅದರ ಹೊರತು ಅವರು ಕಲಿಯಬೇಕಾದದ್ದು ಏನಿದೆ?

ಸ. ನ. —ನಮ್ಮ ಹೆಂಗಸರು ಆವಶ್ಯಕವಾದ ವಿಷಯಗಳನ್ನೆಲ್ಲವನ್ನೂ ಆಗಲೇ ಕಲಿತುಕೊಂಡಿದ್ದಾರೆಂದು ಹೇಳುವಿರಾ ? ಕಲಿಯಬೇಕಾದದ್ದು ಇನ್ನೇನೂ ಇಲ್ಲವೆ?

ಶ್ರೀ. — ಸ್ತ್ರೀಯರಿಗೆ ಯಾವುದು ಅವಶ್ಯವೋ ಅದೆಲ್ಲಾ ನಮಗೆ ತಿಳಿದೇ ಇದೆ. ಮನೆಯ ಹೊರಗಣ ಲೋಕದ ವಿಷಯಗಳನ್ನು ನಾವು ತಿಳಿದುಕೊಳ್ಳಬೇಕಾದ ಆವಶ್ಯಕತೆಯೇನು ? ಅವು ಗಂಡಸರ ವಿಚಾರ.

ಸ. ನ.—ಸ್ತ್ರೀಯರು ಎಲ್ಲ ವಿಷಯಗಳನ್ನೂ ಅರಿತವರೆಂದು ನೀವು ಹೇಳುವುದಾದರೆ, ನಮ್ಮ ದೇಶದಲ್ಲಿ ಶಿಶುಗಳು ಇಷ್ಟು ಹೆಚ್ಚು ಸಂಖ್ಯೆಯಲ್ಲಿ ಮರಣಹೊಂದಲು ಕಾರಣವೇನೆಂಬುದನ್ನು ತಾವು ಹೇಳಬಲ್ಲಿರಾ?

ಶ್ರೀ.—(ನಕ್ಕು) ಮಹಿಳಾಸಮಿತಿಯನ್ನು ಸೇರಿದ ಮಾತ್ರದಿಂದ ಮಕ್ಕಳ ಹಣೆಯಲ್ಲಿ ಬರೆದಿರುವ ಆಯುಸ್ಸನ್ನು ಹೆಚ್ಚಿಸಲಾಗುವುದಿಲ್ಲವಷ್ಟೆ!

ಸ. ನ.—ನಮ್ಮ ದೇಶವೊಂದರಲ್ಲಿ ಮಾತ್ರ ಶಿಶುಗಳು ಕೋಟಿಗಟ್ಟಲೆ ಸಾಯಬೇಕೆಂದು ದೇವರು ವಿಧಿಸಿಲ್ಲವಷ್ಟೆ? ನಮ್ಮ ದೇಶದಲ್ಲಿ ಪ್ರತಿವರ್ಷವೂ ಕೋಟ್ಯನುಕೋಟಿ ಶಿಶುಗಳು ಸಾಯುವುದಕ್ಕೆ ನಮ್ಮ ಹೆಂಗಸರ ಮೌಢ್ಯವೆಂಬ ಪಾಪವೇ ಕಾರಣ. ಇನ್ನಾವ ದೇಶದಲ್ಲೂ ಹಸುಳೆಗಳು ಇಂಥ ವಿಶೇಷ ಸಂಖ್ಯೆಯಲ್ಲಿ ಮರಣಹೊಂದುತ್ತಿಲ್ಲ. ಆರೋಗ್ಯ ಶಾಸ್ತ್ರ, ದೇಹನೈರ್ಮಲ್ಯ, ಮಾತೃಕರ್ತವ್ಯ—ಮೊದಲಾದ ವಿಷಯಗಳಲ್ಲಿ ಹೆಂಗಸರು ಯೋಗ್ಯ ಶಿಕ್ಷಣವನ್ನು ಪಡೆದಲ್ಲದೆ ಈ ಅಜ್ಞಾನದ ಪಾಪವು ಹೋಗುವುದಿಲ್ಲ. ಹೀಗೆ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದರ ಮೂಲಕ ದೈವವನ್ನು ಒಲಿಸಿಕೊಂಡರೆ, ನಮ್ಮ ಮಕ್ಕಳ ಆಯುಸ್ಸು ವೃದ್ಧಿಯಾದೀತು. ಅದೂ ಅಲ್ಲದೆ, ತಾಯಿ ಆರೋಗ್ಯ ನಿಯಮಗಳನ್ನರಿತವಳಾದರೆ, ಮಗುವನ್ನು ರೋಗವಿಲ್ಲದೆ ದೃಢಕಾಯವಾಗಿರುವಂತೆ ಪೋಷಿಸಬಹುದು. ನಮ್ಮ ದೇಶದಲ್ಲಿ ಎಷ್ಟುಮಂದಿ ತಾಯಿಯರಿಗೆ ಈ ವಿಷಯಗಳು ಗೊತ್ತಿವೆ?

ಶ್ರೀ.—(ಸ್ವಲ್ಪ ಯೋಚಿಸಿ) ಹೌದು, ನೀವು ಹೇಳುವುದು ನಿಜವೆಂದು ಒಪ್ಪುತ್ತೇನೆ. ಹಿಂದೆ ಇಲ್ಲಿ ಜಿಲ್ಲಾಧಿಕಾರಿಗಳಾಗಿದ್ದ — ಸಾಹೇಬರವರ ಹೆಂಡತಿಯ ಜ್ಞಾಪಕ ಬರುತ್ತದೆ. ಆಕೆಯ ಮೊದಲನೆಯ ಮಗುವಿಗೆ ಒಂದು ವರ್ಷ ತುಂಬುತ್ತಿದ್ದಂತೆಯೇ ಆಕೆಗೆ ಮತ್ತೊಂದು ಮಗು ಹುಟ್ಟಿತು. ಇಂಥ ಸಂದರ್ಭಗಳಲ್ಲಿ ಮೊದಲನೆಯ ಕೂಸು ಬಲಹೀನವೂ ರೋಗಿಷ್ಟವೂ ಆಗುವುದು ಸಾಮಾನ್ಯ. ಆದರೆ ಆಕೆಯ ಎರಡು ಮಕ್ಕಳೂ ಚೆನ್ನಾಗಿಯೇ ಇದ್ದುವು. ಆಕೆ ಒಬ್ಬ ದಾದಿಯನ್ನು ಇರಿಸಿಕೊಂಡಿದ್ದಳು. ಆದರೆ ನಾವೆಲ್ಲ ಹಾಗೆ ಮಾಡಲಾಗುವುದಿಲ್ಲ.

ಸ. ನ. —ಪ್ರತಿಯೊಬ್ಬರೂ ದಾದಿಯನ್ನು ನೇಮಿಸಿಕೊಳ್ಳಬೇಕಾದ ಅಗತ್ಯವಿಲ್ಲ. ತಾಯಂದಿರು ಮಾತೃಕರ್ತವ್ಯ ಶಾಸ್ತ್ರವನ್ನು ಅಭ್ಯಾಸಮಾಡಿಕೊಂಡರೆ ದಾದಿಯರು ಪೋಷಿಸುವಂತೆಯೇ ಅವರೂ ಮಕ್ಕಳನ್ನು ಪೋಷಿಸಲು ಶಕ್ತರಾಗುವರು.

ಶ್ರೀ. —ಅದು ನಿಜ. ಆದರೆ ನಾನು ಹೆಂಗಸು. ಈ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಮನೆಯಿಂದ ಹೊರಗೆ ಹೋಗಿ ಅಲೆದಾಡಲು ನನಗೆ ಇಷ್ಟವಿಲ್ಲ. ಮನೆಯಲ್ಲೇ ಇರುವುದು ನನಗೆ ಒಪ್ಪಿತ.

ಸ. ನ. — ಮನೆಯಲ್ಲಿದ್ದುಕೊಂಡೇ ಅನೇಕ ವಿಷಯಗಳನ್ನು ಹೆಂಗಸರು ಕಲಿತುಕೊಳ್ಳಬಹುದು. ಈ ಕಾರಣದಿಂದಲೇ ಮಹಿಳಾ ಸಮಿತಿಗಳು ಅತ್ಯಾವಶ್ಯಕ. ವಿಜ್ಞಾನ ಶಾಸ್ತ್ರಗಳ ಅನೇಕ ವಿಷಯಗಳನ್ನು ಹೆಂಗಸರಿಗೆ ಅವರವರ ಮನೆಯ ಬಾಗಿಲಿಗೇ ತಂದುಕೊಡುವುದು ಸಮಿತಿಗೆ ಸಾಧ್ಯ. ಸಮಿತಿಯಲ್ಲಿ ಹೆಂಗಸರೂ ಮತ್ತು ಗೃಹಿಣೀಧರ್ಮವನ್ನರಿತ ಮಹಿಳೆಯರೂ ಕಲೆತು ಮಾತನಾಡಬಹುದು. ಅದೂ ಅಲ್ಲದೆ ಈಗ ಕಾಲವು ಬದಲಾಯಿಸುತ್ತಿದೆ. ಯಾವ ಹೆಂಗಸೇ ಆಗಲಿ ಮನೆಯೊಳಗೇ ಬಾಗಿಲು ಹಾಕಿಕೊಂಡು ಕುಳಿತುಕೊಂಡರೆ ತನಗೂ ಮತ್ತು ತನ್ನ ಸಂಸಾರಕ್ಕೂ ಹಾನಿಯನ್ನು ತಂದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಮಹಿಳಾಸಮಿತಿಯನ್ನು ಸೇರುವುದರಿಂದ ನೀವು ಇಡೀ ಪ್ರಪಂಚದಲ್ಲಿ ನಡೆಯುವುದನ್ನೆಲ್ಲಾ ಅರಿಯಲು ಅವಕಾಶವಾಗುವುದು.

ಶ್ರೀ. — ಹೌದು. ನನ್ನ ಮಕ್ಕಳು ಕೂಡ, ನಾವುಗಳು ಹೊರಗಡೆ ಏನು ನಡೆಯುತ್ತಿದೆ ಎಂಬುದನ್ನು ತಿಳಿಯಬೇಕಾದದ್ದು ಆವಶ್ಯವೆಂದು ಹೇಳುತ್ತಿರುವರು. ಹಾಗೇ ಆಗಲಿ; ನನ್ನ ಸೊಸೆಯರೂ ನಾನೂ ಸಮಿತಿಗೆ ಸೇರಿ ಅದು ಹೇಗೆ ನಡೆಯುವುದೋ ನೋಡುತ್ತೇವೆ.

ಕೆಲವು ಕಾಲದ ಅನಂತರ ಈ ಶ್ರೀಮತಿ—ಯವರು ಸಮಿತಿಯ ಸದಸ್ಯರ ಪೈಕಿ ಅತ್ಯಂತ ಆಸಕ್ತಿವಹಿಸಿ ಚಟುವಟಿಕೆಯಿಂದ ಕೆಲಸ ಮಾಡಿದವರಲ್ಲೊಬ್ಬರಾದರೆಂದು ಸರೋಜನಳಿನಿ ತನ್ನ ದಿನಚರಿಯ ಪುಸ್ತಕದಲ್ಲಿ ಬರೆದಿದ್ದಾಳೆ.

ಸಂತೋಷರಹಿತವೂ ಪರಿತಾಪಕರವೂ ಆದ ವಿತಂತುಗಳ ಜೀವನ ವನ್ನು ನೋಡಿ ಸರೋಜ ನಳಿನಿಯ ಹೃದಯವು ಕರಗಿಹೋಗುತ್ತಿತ್ತು. ಬಂಕೂರಾದಲ್ಲಿ ಸ್ಥಳೀಯ ಪ್ರಮುಖರೂ ಹಣವಂತರೂ ಆಗಿದ್ದ ಒಬ್ಬ ದೊಡ್ಡಮನುಷ್ಯರ ವಿಧವೆಯಾದ ಮಗಳಲ್ಲಿ ಸರೋಜ ನಳಿನಿಗೆ ಬಹಳ ಪ್ರೀತಿಯಿತ್ತು. ಈ ಹುಡುಗಿ ಕಲ್ಕತ್ತೆಯಲ್ಲಿ ಒಂದು ಪಾಠಶಾಲೆಯಲ್ಲಿ ತಕ್ಕ ಮಟ್ಟಿಗೆ ಹೊಲಿಗೆಯನ್ನೂ ಕಸೂತಿ ಕೆಲಸವನ್ನೂ ಮದುವೆಯಾಗುವುದಕ್ಕೆ ಮುಂಚೆಯೇ ಕಲಿತಿದ್ದಳು. ಆಕೆಗೆ ಮಾಡಲು ಯಾವ ಕೆಲಸವೂ ಇಲ್ಲದೆ ಇದ್ದುದರಿಂದ ಅವಳಿಗೆ ಜೀವನವು ಒಂದು ದೊಡ್ಡ ಹೊರೆಯಾಗಿ ತ್ತೆಂಬುದನ್ನು ಸರೋಜ ನಳಿನಿಯು ತಿಳಿದಿದ್ದಳು. ದೊಡ್ಡಮನುಷ್ಯರ ಮನೆ ಗಳಲ್ಲಿ ಅಡಿಗೆಯವನು ಬೇರೆ ಇರುತ್ತಾನೆ. ಆದಕಾರಣ ಪ್ರತಿ ದಿವಸದ ಸ್ನಾನ ಪೂಜೆಗಳ ಹೊರತು, ಸಾಧಾರಣವಾಗಿ ಹಿಂದೂಜನರ ಮನೆಗಳಲ್ಲಿ ವಿತಂತುಗಳು ಮಾಡುವ ಅಡಿಗೆಯ ಕೆಲಸವೂ ಕೂಡ ಈ ಹುಡುಗಿಗೆ ಇರಲಿಲ್ಲ. ಈಕೆಯ ತಾಯಿ ಒಂದಾನೊಂದು ದಿನ ಸರೋಜ ನಳಿನಿಯ ಹತ್ತಿರ ತನ್ನ ಮಗಳ ವಿಷಯವಾಗಿ—"ಆಕೆಯ ವ್ಯಸನತುಂಬಿದ ಮುಖವನ್ನು ನೋಡಿದರೆ ನನ್ನ ಎದೆ ಒಡೆದುಹೋಗುತ್ತದೆ. ಆಕೆಗೆ ದೈವವು ನಿರ್ದಯ ವಾಗಿದೆ. ಹೊತ್ತು ಹೋಗಲು ಏನೊಂದು ಕೆಲಸವೂ ಇಲ್ಲ. ಸಾಕುವುದಕ್ಕೆ ಒಂದು ಮಗುವು ಕೂಡ ಇಲ್ಲ" ಅಂದಳಂತೆ. ಹೊಲಿಗೆಯ ಕೆಲಸ ಅವಳಿಗೆ ಬರುತ್ತಿದ್ದುದರಿಂದ ಆ ಕೆಲಸವನ್ನು ತಾನು ಮಾಡಿ ಪ್ರಯೋಜನಪಡೆಯ ಬಹುದೆಂದು ಸರೋಜ ನಳಿನಿಯು ಹೇಳಿದುದಕ್ಕೆ "ಅದರಿಂದೇನು ಪ್ರಯೋಜನ ನಮಗೆ? ಆಕೆ ಉಪಾಧ್ಯಾಯಿನಿಯಾಗುವವಳಲ್ಲ. ನಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳಲು ಅನುಕೂಲವಿದೆ. ಆಕೆಯು ನಮಗಾಗಿ ಏನೂ ಸಂಪಾದಿಸಬೇಕಾಗಿಲ್ಲ" ಎಂದಳು. ಕಡೆಗೆ ಸರೋಜ ನಳಿನಿ ಆ ಹುಡುಗಿ ಸೇವಾಸಮಿತಿಯನ್ನು ಸೇರಿ, ಅಲ್ಲಿ ಇತರ ಸದಸ್ಯರಿಗೆ ಪಾಠ ಕಲಿಸಬಹುದೆಂದು ಆ ತಾಯಿಯಿಂದ ಅಪ್ಪಣೆ ಪಡೆದಳು. ಅದೇ ತಾಯಿ ಕೆಲವುಕಾಲ ಕಳೆದ ಮೇಲೆ ತನಗೆ ಹೇಳಿದ ಮಾತನ್ನು ಸರೋಜ ನಳಿನಿ ಬರೆದಿಟ್ಟಿದ್ದಾಳೆ:—"ಸಂಕಟಪಡುತ್ತಿದ್ದ ಆ ಹುಡುಗಿಯ ಜೀವನವೇ ಇದರಿಂದ ಬದಲಾಯಿಸಿಬಿಟ್ಟಿದೆ. ಈಗ ಆಕೆಯ ಮುಖವು ಯಾವಾಗಲೂ ಸಂತೋಷದಿಂದಲೂ ಮುಗುಳುನಗೆಯಿಂದಲೂ ಕೂಡಿದೆ. ಈ ಮಾರ್ಪಾ

ಟನ್ನು ನೋಡಿದಾಗಿನಿಂದ ನನ್ನ ಮೇಲಿದ್ದ ದೊಡ್ಡ ಹೊರೆಯನ್ನು ಇಳಿಸಿದಂತಾಗಿದೆ" ಹೀಗೆಂದು ಆ ತಾಯಿ ಹೇಳಿದ್ದಳು.

ಮಧ್ಯಮ ತರಗತಿಗೆ ಸೇರಿದ ಮತ್ತೊಂದು ಬಡ ಹಿಂದೂ ಕುಟುಂಬದ ವಿಷಯವಾಗಿ ಸರೋಜ ನಳಿನಿ ತನ್ನ ಅನುಭವವನ್ನು ಬರೆದಿಟ್ಟಿದ್ದಾಳೆ. ಈ ಕುಟುಂಬದಲ್ಲಿ ತಾಯಿ, ತಂದೆ, ಅವರ ಉಳಿದಿದ್ದ ಒಬ್ಬನೇ ಮಗ, ಇಬ್ಬರು ಸೊಸೆಯರು—ಇವರಲ್ಲಿ ಒಬ್ಬಾಕೆ ವಿಧವೆ—ಇಷ್ಟು ಜನರಿದ್ದರು. ಸರೋಜ ನಳಿನಿ ಈ ಮನೆಯ ಯಜಮಾನಿಯನ್ನು ಆಕೆ ಸೊಸೆಯರೊಡನೆ ಸಮಿತಿಯನ್ನು ಸೇರಬೇಕೆಂದು ಕೇಳಿದಾಗ, ಆಕೆ ನಕ್ಕು ತಮಾಷೆ ಮಾಡಿದಳಂತೆ. "ನಮಗೆ ಮನೆಯ ಕೆಲಸವೇ ಬೇಕಾದಷ್ಟು ಇದೆ. ಸಭೆಗಳಿಗೆ ಹೋಗಲು ಹೊತ್ತಿಲ್ಲ" ಎಂದಳಂತೆ. ಸರೋಜ ನಳಿನಿಯು ಬಹಳಹೊತ್ತು ಚರ್ಚೆ ನಡಸಿದ ನಂತರ, ತನ್ನ ಸೊಸೆಯರಲ್ಲಿ ವಿಧವೆಯಾಗಿದ್ದಾಕೆಯನ್ನು ಮಾತ್ರ ಸಮಿತಿಯ ಕೆಲವು ಗೋಷ್ಠಿಗಳಿಗೆ ಕಳುಹಿಸಲು ಆ ಯಜಮಾನಿತಿ ಸಮ್ಮತಿಸಿದಳು. ಆ ಗೋಷ್ಠಿಗಳಲ್ಲಿ ಆ ಸೊಸೆಯು ಬಟ್ಟೆಗಳನ್ನು ಕತ್ತರಿಸಿ ಹೊಲಿಯುವುದನ್ನು ಕಲಿತುಕೊಂಡಳು. ಸುಮಾರು ಒಂದು ತಿಂಗಳಾದ ಮೇಲೆ ಈಕೆಯ ಮಾವಂದಿರಾದ ಆ ಮನೆಯ ಯಜಮಾನರು ಬಹಳ ಹೆಮ್ಮೆಯಿಂದಲೂ ನಗುಮುಖದಿಂದಲೂ ನಮ್ಮ ಮನೆಗೆ ಬಂದು "ನಾನು ಧರಿಸಿರುವ ಷರ್ಟನ್ನು ನೋಡಿದಿರಾ? ನನ್ನ ಸೊಸೆ ಸಮಿತಿಯಲ್ಲಿ ಹೊಲಿಗೆಯ ಕಲೆಯನ್ನು ಕಲಿತು ತಾನೇ ಇದನ್ನು ಹೊಲಿದಿದ್ದಾಳೆ!" ಎಂದು ತೋರಿಸಿದರು. ಮತ್ತು "ನಮ್ಮ ಸೊಸೆ ಇನ್ನು ಮುಂದೆ ನಮ್ಮ ಎಲ್ಲರ ಷರ್ಟು ಮುಂತಾದ ಉಡುಪುಗಳನ್ನೂ ತಾನೇ ಹೊಲಿಯುತ್ತೇನೆಂದು ಒಪ್ಪಿದ್ದಾಳೆ. ನಾವು ಇವುಗಳನ್ನು ಇನ್ನುಮೇಲೆ ಅಂಗಡಿಯಲ್ಲಿ ಕೊಳ್ಳಬೇಕಾದುದಿಲ್ಲ. ನಮ್ಮ ಸಂಸಾರದಲ್ಲಿ ಸಂಪಾದಿಸುವವರ ಸಂಖ್ಯೆ ಈಗ ಒಬ್ಬರಷ್ಟು ಹೆಚ್ಚಿದಂತಾಯಿತು" ಎಂದರು. ಸ್ವಲ್ಪ ಕಾಲಾನಂತರ ಆ ಯಜಮಾನಿಯೂ ಮತ್ತೊಬ್ಬ ಸೊಸೆಯೂ ಸಮಿತಿಯನ್ನು ಸೇರಿದರೆಂದೂ, ಅವರುಗಳೂ ಯಜಮಾನನಿಗೆ ಒಬ್ಬೊಬ್ಬರೂ ಒಂದೊಂದು ಷರ್ಟನ್ನು ಹೊಲಿದುಕೊಟ್ಟರೆಂದೂ ಆತನೇ ನನಗೆ ತಿಳಿಸಿದನು.

ಪಾಬ್ನಾ ಮತ್ತು ಖುಲ್ನಾ— ಈ ಎರಡು ಊರುಗಳಲ್ಲೂ ಸರೋಜ ನಳಿನಿಯು, ಅನೇಕ ಪರದಾ ಹೆಂಗಸರುಗಳು ತಮ್ಮ ಮುಖ ಪರದೆಯನ್ನು

ತೆಗೆದುಹಾಕಿ ತಮ್ಮ ಪತಿಗಳೊಂದಿಗೆ ನಮ್ಮಗಳ ಜೊತೆಯಲ್ಲಿ ನಿಸ್ಸಂಕೋಚವಾಗಿ ಕಲೆಯುವಂತೆ ಒಡಂಬಡಿಸಿದಳು. ಆದರೆ ಹೀಗೆ ಆದವರಿಗೆಲ್ಲಾ ಮನೆಯಲ್ಲಿ ಅತ್ತೆಯರಿರಲಿಲ್ಲ! ಒಬ್ಬ ಪರದಾ ಹೆಂಗಸು ಪರದೆ ತೆಗೆದುಹಾಕಬೇಕೆಂದು ಇಷ್ಟಪಟ್ಟಿದ್ದದ್ದು ನನಗೆ ಗೊತ್ತಿದೆ. ಆದರೆ ಆಕೆಯ ಗಂಡನಿಗೆ ಅದು ಇಷ್ಟವಿರಲಿಲ್ಲ. ಸರೋಜ ನಳಿನಿ ಆತನೊಂದಿಗೆ ಬಹಳವಾಗಿ ಚರ್ಚಿಸಿದಮೇಲೆ ಆತನು "ನನಗೇನೋ ಪರದೆ ಬೇಕಾಗಿಲ್ಲ, ನನ್ನ ಹೆಂಡತಿ ಅದನ್ನು ತ್ಯಜಿಸಿದರೆ ನನ್ನ ಆಕ್ಷೇಪವೇನೂ ಇಲ್ಲ. ನಮ್ಮ ತಂದೆ ಕೂಡ ಹೆಚ್ಚಾಗಿ ಅಡ್ಡಿ ಹಾಕಲಾರರು. ಆದರೆ ನಮ್ಮ ತಾಯಿಯ ಜೀವಮಾನ ಕಾಲದಲ್ಲಿ ಇದು ಖಂಡಿತವಾಗಿಯೂ ಸಾಧ್ಯವಿಲ್ಲ. ಅದರಿಂದ ಅವರ ಎದೆ ಒಡೆದುಹೋಗುವುದು. ಆಕೆಯ ಮನಸ್ಸನ್ನು ನೋಯಿಸುವಂಥ ಕಾರ್ಯವನ್ನು ನಾವು ಯಾರೂ ಖಂಡಿತವಾಗಿಯೂ ಮಾಡಲಾರೆವು. ಅದೂ ಅಲ್ಲದೆ ನಮ್ಮಲ್ಲಿ ಒಂದು ಹುಡುಗಿ ಮದುವೆಗೆ ಕಾದಿದೆ. ಈಗ ನನ್ನ ಹೆಂಡತಿ ಪರದೆಯನ್ನು ಬಿಟ್ಟಳೆಂದು ತಿಳಿದರೆ ಆ ಹುಡುಗಿಗೆ ಮದುವೆಯಾಗುವುದು ಬಹು ಕಷ್ಟವಾದೀತು. ಅವಳಿಗೆ ಮದುವೆಯಾದಮೇಲೆ ಈ ಅಡಚಣೆಯಿರುವುದಿಲ್ಲ. ವರನ ತಾಯಿಯ ಕಡೆಯವರು ಪರದೆ ತ್ಯಜಿಸಿದ ಹುಡುಗಿಯರನ್ನು ತೆಗೆದುಕೊಳ್ಳಲು ಸಮ್ಮತಿಸುವುದಿಲ್ಲವೆಂಬುದು ನಿಮಗೇ ಗೊತ್ತಿದೆ" ಎಂದು ಹೇಳಿದನು.

ಮತ್ತೊಂದು ಸಂದರ್ಭದಲ್ಲಿ ನಮ್ಮ ಮನೆಯಲ್ಲಿ ಸ್ನೇಹಿತರುಗಳಿಗೆ ಒಂದು ಸಂತೋಷಕೂಟವು ಏರ್ಪಾಟಾಗಿತ್ತು. ದೊಡ್ಡ ಮನೆತನಕ್ಕೆ ಸೇರಿ ವಿದ್ಯಾವತಿಯೂ ಸುಧಾರಣೆಗಳಲ್ಲಿ ಇಷ್ಟವುಳ್ಳವಳೂ ಆಗಿದ್ದ ತನ್ನ ಸ್ನೇಹಿತೆಯೊಬ್ಬಳನ್ನು ಸರೋಜ ನಳಿನಿ ಕರೆದಿದ್ದಳು. ಆದರೆ ಆ ಸ್ನೇಹಿತೆ ಪರದಾ ಹೆಂಗಸು. ತನ್ನ ಗಂಡನನ್ನು ಸರೋಜ ನಳಿನಿ ಮೊದಲು ಒಪ್ಪಿಸಿ, ಆತ ಸಮ್ಮತಿಸುವುದಾದರೆ ತಾನು ಬರಲು ಅಡ್ಡಿಯಿಲ್ಲವೆಂದು ಆಕೆಯು ಹೇಳಿದಳು. ಆಕೆಯ ಗಂಡನೂ ವಿದ್ಯಾವಂತನಾಗಿ ವಿಮರ್ಶಾಪೂರ್ವಕವಾದ ಅಭಿಪ್ರಾಯಗಳುಳ್ಳ ಯುವಕನಾಗಿ ಇದ್ದನು. ಆತನು ತನ್ನ ಹೆಂಡತಿ ಸಂತೋಷಕೂಟಕ್ಕೆ ಹೋಗಬಹುದೆಂದು ಅರ್ಧಪಾಲು ಒಪ್ಪಿಕೊಂಡನು. ಆದರೆ ಕೊನೆಯಲ್ಲಿ ತನ್ನ ತಾಯಿಯ ಅಪ್ಪಣೆಯನ್ನು ಕೇಳಲೇಬೇಕೆಂದು ಹೇಳಿಬಿಟ್ಟನು. ಆತನ ತಾಯಿ ಈ ಸಂಗತಿಯನ್ನೆಲ್ಲ ಕೇಳಿ ಗಾಬರಿ

ಗೊಂಡಳು. ಆಕೆಯ ಮಗನೂ, ಸರೋಜ ನಳಿನಿಯೂ ಆಕೆಗೆ ಎಷ್ಟು ಒಡಂಬಡಿಕೆ ಹೇಳಿದರೂ ಆಕೆ ಸಮ್ಮತಿಸದೆ ಹೋದಳು.

ಇದು ನಡೆದಾಗ ಸರೋಜ ನಳಿನಿ "ಎಲ್ಲಕ್ಕಿಂತ ಮೊದಲು ನಮಗೆ ಅಗತ್ಯವಾಗಿರುವುದು ಅತ್ತೆಯರುಗಳಿಗೊಂದು ಪಾಠಶಾಲೆ" ಎಂದು ಹೇಳಿದಳು. ಮತ್ತು ಈ ಸಮಸ್ಯೆಯನ್ನು ಸರಿಯಾಗಿ ಬಗೆಹರಿಸುವುದು ಮಹಿಳಾಸಮಿತಿಯಿಂದಲೇ ಸಾಧ್ಯವೆಂಬುದನ್ನು ತಾನು ಈ ಅನುಭವಗಳಿಂದ ಕಂಡುಕೊಂಡಂತೆ ಸರೋಜ ನಳಿನಿ ನನಗೆ ಹೇಳಿದಳು.

ಬಂಕೂರಾದಲ್ಲಿ ಒಬ್ಬರು ಲಾಯರು ಇದ್ದರು. ಇವರು ಬ್ರಾಹ್ಮಣರು. ಇವರಿಗೆ ಹತ್ತುವರ್ಷದ ಹುಡುಗಿಯೊಂದಿತ್ತು. ಈ ಹುಡುಗಿಗೆ ಮದುವೆ ಮಾಡಲು ಪ್ರಯತ್ನಗಳು ನಡೆಯುತ್ತಿರುವುದನ್ನು ಸರೋಜ ನಳಿನಿ ಕೇಳಿ ಹುಡುಗಿಯ ತಾಯಿತಂದೆಗಳ ಬಳಿಗೆ ಹೋಗಿ "ಇಷ್ಟು ಚಿಕ್ಕವಯಸ್ಸಿಗೆ ಮದುವೆ ಮಾಡಿದರೆ ಹುಡುಗಿಯ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗುವುದಲ್ಲದೆ ಅವಳ ಬೆಳವಣಿಗೆಯೂ ಹಾಳಾಗಿ ಅವಳ ಮುಂದಿನ ಆರೋಗ್ಯವೇ ಹಾನಿಯಾಗುವುದು. ಆದಕಾರಣ ಲಗ್ನಪ್ರಯತ್ನವನ್ನು ಸದ್ಯಕ್ಕೆ ನಿಲ್ಲಿಸಬೇಕು" —ಎಂದು ಕೇಳಿಕೊಂಡಳು. ಹುಡುಗಿಯ ತಾಯಿಯಲ್ಲಿ ಸ್ವಲ್ಪ ಸೂಕ್ಷ್ಮವಾಗಿ ವಿಚಾರ ಮಾಡಿದ್ದರಲ್ಲಿ ಹುಡುಗಿಯ ತಂದೆತಾಯಿಗಳಿಗೆ ಆ ಚಿಕ್ಕವಯಸ್ಸಿನ ವಿವಾಹದಲ್ಲಿ ಇಷ್ಟವಿರಲಿಲ್ಲವೆಂದೂ, ಆದರೆ ಹುಡುಗಿಯ ಅಜ್ಜಿಯ ಬಲಾತ್ಕಾರ ಹೆಚ್ಚೆಂದೂ, ಆ ಅಜ್ಜಿ ತನ್ನ ಮೊಮ್ಮಗಳ ಮಕ್ಕಳನ್ನು ನೋಡಿ ಸಾಯಬೇಕೆಂಬ ಆತುರದಿಂದ ಹಾಗೆ ಅವಸರಪಡಿಸುತ್ತಿದ್ದಳೆಂದೂ ತಿಳಿಯಿತು. ಸರೋಜ ನಳಿನಿ ಆಕೆಯಲ್ಲಿ ಮಾತನಾಡಿದಾಗ, ವಂಗ ನಾಣ್ನುಡಿಯಂತೆ* "ಮೊಮ್ಮಗುವಿನ ಮೊಮ್ಮಗುವಿನ ಮುಖವನ್ನು ನೋಡಿದವರಿಗೆ ಸ್ವರ್ಗದಲ್ಲಿ ದೀಪೋತ್ಸವ" ಎಂದು ಆಕೆ ನಂಬಿಕೊಂಡಿದ್ದದ್ದು ತಿಳಿಯಿತು. ಸರೋಜ ನಳಿನಿ ಆ ಮುದುಕಿಯನ್ನು ಕುರಿತು "ಆದರೆ ಸ್ವಲ್ಪ ಆಲೋಚಿಸಿರಿ; ತಮ್ಮ ಮೊಮ್ಮಗಳು ಬೆಳೆಯುವುದಕ್ಕೆ ಮುಂಚೆಯೇ ವಿಧವೆಯಾಗಿ ನಿಂತರೆ ಅದರಿಂದೆಷ್ಟು ಹಾನಿಯಾಗುತ್ತದೆ! ಅದೂ ಅಲ್ಲದೆ ಈಗ ಮದುವೆ ಮಾಡಿದರೆ ಪಾಠಶಾಲೆಯಿಂದ ಬಿಡಿಸುತ್ತೀರಿ. ವಿದ್ಯಾಭ್ಯಾಸವೂ

* "ನಾತಿರ್ ನಾತಿ ಸ್ವರ್ಗೆ ಬಾತಿ" ಎಂಬುದೇ ಈ ನಾಣ್ನುಡಿ.

ನಿಂತುಹೋಗುತ್ತದೆ" ಎಂದಳು. ಮುದುಕಿಯ ಮನಸ್ಸು ಸ್ವಲ್ಪವೂ ವ್ಯತ್ಯಾಸವಾಗಲಿಲ್ಲ. ಆಕೆ—"ಮುತ್ತೈದೆಯಾಗಿರುವುದೂ ವೈಧವ್ಯವೂ ಅವರವರ ಕರ್ಮಫಲ. ಇದನ್ನು ಯಾರೂ ಬದಲಾಯಿಸಲಾಗುವುದಿಲ್ಲ. ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಾಳೆಂದಿರಿ. ಅದರಿಂದ ಏನು ಪ್ರಯೋಜನ? ಆ ವಿದ್ಯೆ ನಮ್ಮ ಹುಡುಗಿಯರು ಫರಂಗಿಯವರಂತೆ (ಮೆಮ್) ಆಗಲು ಅನುಕೂಲಿಸುತ್ತದೆ, ಅಷ್ಟೇ. ನನ್ನ ಮೂವರು ಸೊಸೆಯರಲ್ಲಿ ಒಬ್ಬಳು ಮದುವೆಗೆ ಮುಂಚೆ ಶಾಲೆಗೆ ಹೋಗುತ್ತಿದ್ದಳು. ಈ ಮೂವರ ಪೈಕಿ ಅವಳೇ ತೀರ ಉಪಯೋಗವಿಲ್ಲದವಳು. ಅವಳಿಗೆ ಒಂದು ಅಡಿಗೆಯೂ ಬಾರದು. ಯಾವಾಗ ನೋಡಿದರೂ ಪುಸ್ತಕವನ್ನು ಕೈಲಿ ಹಿಡಿದು ಕುಳಿತಿರುತ್ತಾಳೆ." ಎಂದಳು.

ಅದಕ್ಕೆ ಸರೋಜ ನಳಿನಿಯು ಹೀಗೆಂದು ಉತ್ತರ ಹೇಳಿದಳು:— "ಇದುವರೆಗೂ ನಮ್ಮ ಪಾಠಶಾಲೆಗಳು ಹಾಗಿದ್ದುವು. ಅದರಿಂದ ಹಾಗಾಯಿತು. ಇನ್ನು ಮೇಲೆ ನಮ್ಮ ಶಾಲೆಗಳಲ್ಲಿ ಪುರುಷ ಪಂಡಿತರು ಉಪಾಧ್ಯಾಯರಾಗಿರುವುದಿಲ್ಲ. (ಸ್ತ್ರೀ)ಉಪಾಧ್ಯಾಯಿನಿಯರನ್ನಿಟ್ಟು, ಹುಡುಗಿಯರಿಗೆ ಮನೆಗೆಲಸಗಳು, ಆಹಾರ ವಸ್ತುಗಳ ಗುಣಾವಗುಣಗಳು, ಪಾಕ ಶಾಸ್ತ್ರ—ಇವುಗಳನ್ನೆಲ್ಲಾ ಕಲಿಸುವೆವು. ಆದರೆ ರುಚಿ ರುಚಿಯಾದ ಭಕ್ಷ್ಯ ಭೋಜ್ಯಗಳನ್ನು ಮಾಡುವುದನ್ನು ಕಲಿತುಕೊಳ್ಳಬೇಕಾದರೆ ಚೆನ್ನಾಗಿ ಬಲ್ಲವರಾದ ನಿಮ್ಮಂಥ ಹಿರಿಯ ಗೃಹಿಣಿಯರು ನಿಮ್ಮ ಸೊಸೆಗಳಿಗೆ ಮಾತ್ರ ವಲ್ಲದೆ ಇತರ ಹೆಣ್ಣುಮಕ್ಕಳಿಗೂ ಅದನ್ನು ಕಲಿಸಬೇಕು. ನಮ್ಮ ಮಹಿಳಾ ಸಮಿತಿಯಲ್ಲಿ ಈಗ ಪ್ರತಿವಾರವೂ ಪಾಕಶಾಸ್ತ್ರ ವಿಷಯವಾಗಿ ಪಾಠವನ್ನು ಕಲಿಸುತ್ತಿದ್ದೇವೆ. ಬರುವ ವಾರ ತಾವು ಬಂದು ಒಂದು ಸಲ ಪಾಠವನ್ನು ದಯವಿಟ್ಟು ಹೇಳಿಕೊಡಬೇಕು" ಎಂದಳು. ಇದನ್ನು ಕೇಳಿ ಆಕೆಗೆ ಬಹಳ ಸಂತೋಷವೂ ಸ್ವಲ್ಪ ಹೆಮ್ಮೆಯೂ ಉಂಟಾದುವು. ಕಡೆಗೆ ಆಕೆ ಸಮಿತಿಯನ್ನು ಸೇರುವುದಕ್ಕೂ ಶಾಲೆಯ ಹುಡುಗಿಯರಿಗೆ ಅಡಿಗೆ ಕೆಲಸವನ್ನು ಹೇಳಿಕೊಡುವುದಕ್ಕೂ ಒಪ್ಪಿಕೊಂಡಳು. ತನ್ನ ಮಗ, ಸೊಸೆ, ಸರೋಜ ನಳಿನಿ ಮತ್ತು ಸಮಿತಿಯ ಇತರ ಸದಸ್ಯರು—ಇವರುಗಳ ಪ್ರೇರಣೆಯಿಂದ ಆಕೆ ತನ್ನ ಮೊಮ್ಮಗಳ ಮದುವೆಯನ್ನೂ ಆಗ್ಗೆ ನೆರವೇರಿಸದೆ ನಿಲ್ಲಿಸಿದಳು.

ಸರೋಜನಳಿನಿಯು ಸಾಮಾಜಿಕ ಕ್ಷೇತ್ರದಲ್ಲಿ ಮಹಿಳೆಯರ ಏಳಿಗೆಗಾಗಿ ಬಹು ವಿಚಕ್ಷಣೆಯಿಂದ ಶ್ರಮಿಸುತ್ತಿದ್ದುದಕ್ಕಾಗಿ ೧೯೧೮ರ ನೆಯ ಜೂನ್ ತಿಂಗಳಿನಲ್ಲಿ ಚಕ್ರವರ್ತಿ ಸಾರ್ವಭೌಮರು ಆಕೆಗೆ ಎಂ. ಬಿ. ಇ. * ಎಂಬ ಬಿರುದನ್ನು ದಯಪಾಲಿಸಿದರು. ಇದಕ್ಕಿಂತ ಮುಂಚಿತವಾಗಿ ಕೂಚ್ ಬಿಹಾರ್ ಮಹಾರಾಣಿಯವರಿಗೆ ಹೊರತು ಇನ್ನಾವ ವಂಗ ಸ್ತ್ರೀಗೂ ಚಕ್ರವರ್ತಿಗಳವರಿಂದ ಪ್ರತ್ಯಕ್ಷವಾಗಿ ಯಾವ ಬಿರುದೂ ಬಂದಿರಲಿಲ್ಲ. ಯುದ್ಧಕಾಲದಲ್ಲಿ ಮಾಡಿದ ಕೆಲಸಕ್ಕಾಗಿ "ಬ್ರಿಟಿಷ್ ರೆಡ್‌ಕ್ರಾಸ್ ಸೊಸೈಟಿ"ಯವರು ಸರೋಜನಳಿನಿಗೆ ಒಂದು ಮಾನಪತ್ರಿಕೆಯನ್ನೂ ಪದಕವನ್ನೂ ಕೊಟ್ಟರು. ಆದರೆ ಈ ಪದಕವನ್ನು ಧರಿಸುವುದಕ್ಕಾಗಲಿ ಅಥವಾ ತನಗೆ ಬಂದ ಬಿರುದನ್ನು ತನ್ನ ಹೆಸರಿನ ಹಿಂದೆ ಹಾಕಿಕೊಳ್ಳುವುದಕ್ಕಾಗಲಿ ಆಕೆ ಸಮ್ಮತಿಸುತ್ತಿರಲಿಲ್ಲ. "ಈ ಬಿರುದುಗಳನ್ನೆಲ್ಲಾ ನಾನೇನು ಮಾಡಲಿ? ನನಗೆ ಬೇಕಾದದ್ದು ನನ್ನ ದೇಶವನ್ನು ಸೇವಿಸುವುದಕ್ಕೂ ನನ್ನ ಸೋದರಿಯರ ಸ್ಥಿತಿಯನ್ನು ಉತ್ತಮಗೊಳಿಸಲು ಕೆಲಸಮಾಡುವುದಕ್ಕೂ ಅವಕಾಶ, ಅಷ್ಟುಮಾತ್ರವೇ" ಎನ್ನುತ್ತಿದ್ದಳು.

ಚಕ್ರವರ್ತಿಯವರು ಬಿರುದನ್ನು ದಯಪಾಲಿಸಿದ ಸಂದರ್ಭದಲ್ಲಿ "ಬೀರ್‌ಭೂಮ್ ಮಹಿಳಾಸಮಿತಿ"ಯವರು ಸುಲ್ತಾನ್‌ಪುರದಲ್ಲಿ ಸಭೆ ಸೇರಿ ಸರೋಜನಳಿನಿಗೆ ಒಂದು ಅಭಿನಂದನ ಪತ್ರವನ್ನು ಒಪ್ಪಿಸಿದರು. ಅದರಲ್ಲಿ ಹೇಳಿರುವುದೇನೆಂದರೆ:—

"ತಮಗೆ ಬಂದಿರುವ ದೊಡ್ಡ ಗೌರವವು ನಮ್ಮಗಳಿಗೆ, ನಾವು ಸ್ತ್ರೀಜಾತಿಗೆ ಸೇರಿದ್ದೇವೆಂಬ ಹೆಮ್ಮೆಯನ್ನುಂಟುಮಾಡಿ, ನಮ್ಮಲ್ಲಿ ಅಪಾರವಾದ ಸಂತೋಷವನ್ನು ತುಂಬಿದೆ. ನಮ್ಮ ಹೃದಯದ ಪ್ರತಿಯೊಂದು ತಂತುವೂ ಈ ಆನಂದದಿಂದ ಮಿಡಿದು ಮೊಳಗುತ್ತಿದೆ. ಬೀರ್‌ಭೂಮಿನಲ್ಲಿರುವ ಪ್ರತಿಯೊಬ್ಬ ಮಹಿಳೆಯ ಹೃದಯದಿಂದಲೂ ಈದಿನ ಸಂಗೀತ ಹೊರಹೊಮ್ಮುತ್ತಿದೆ. ಯಾವ ಉದಾರಚಿತ್ತಳೂ ಘನತೆವೆತ್ತವಳೂ ಆದ ಸಾಧ್ವಿಯ ಪ್ರಭಾವದಿಂದ ನಮ್ಮ ಮನಸ್ಸುಗಳು ಸ್ವಕರ್ತವ್ಯವನ್ನೂ ನಮ್ಮ ಬುದ್ಧಿಗಳು ಜ್ಞಾನ ಸತ್ಯಗಳ ಪ್ರಕಾಶವನ್ನೂ ಕಾಣುವಂತಾಗಿರುವುದೋ

* ಮೆಂಬರ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್ = ಬ್ರಿಟಿಷ್ ಚಕ್ರಾಧಿಪತ್ಯದ ಮಾನ್ಯಸರಣಿಯ ಸದಸ್ಯೆ.

ಆಕೆ ನೀವು. ಇಂದು ಕೃತಜ್ಞತೆಯೂ ಪ್ರೇಮವೂ ನಮ್ಮ ಹೃದಯದಿಂದ ಉಕ್ಕಿ ಹರಿಯುತ್ತಿವೆ. ನಾವು ಅರ್ಪಿಸುವ ಈ ಅಭಿನಂದನೆಗಳನ್ನು ದಯವಿಟ್ಟು ಸ್ವೀಕರಿಸಿ ಈ ಸುದಿನದಲ್ಲಿ ನಮ್ಮ ಸಂತೋಷವನ್ನು ಪೂರ್ತಿಗೊಳಿಸಬೇಕು. ಈ ದಿನದ ಸಂತೋಷದಿಂದ ನಮ್ಮ ಹೃದಯಗಳಲ್ಲಿ ಉದಿಸಿರುವ ಸಾವಿರಾರು ಅಭಿಲಾಷೆಗಳು ತಮ್ಮಕಡೆಗೆ ಹರಿಯುತ್ತಿವೆ. ನಮ್ಮ ಹೃದಯಗಳು ಪ್ರಕಾಶಮಾನವೂ ವಾಕ್ಕುಳ್ಳವೂ ಆಗಿ ನಿಮ್ಮ ಶ್ರೇಯಸ್ಸನ್ನು ಬೇಡಿ ಭಗವಂತನನ್ನು ಪೂಜಿಸಲು ಸೇರಿವೆ. ಹೃದಯದಿಂದ ಹೊರಟ ಪ್ರಾರ್ಥನೆಗಳೂ, ಶ್ರದ್ಧೆಯಿಂದ ಕೂಡಿದ ಪೂಜೆಯೂ ಎಂದಿಗೂ ವ್ಯರ್ಥವಲ್ಲ. ಚಕ್ರವರ್ತಿಯವರಿಂದ ಸನ್ಮಾನಿತೆಯಾದ ಮಹಿಳಾಮಣಿಯೇ, ಅಮಿತ ದಯಾಮಯನಾದ ಭಗವಂತನು ತಮ್ಮನ್ನು ಚಿರಕಾಲವೂ ಸಂರಕ್ಷಿಸಿ, ಈ ಪೃಥಿವಿಯ ಸ್ತ್ರೀ ಮಂಡಲವನ್ನು ತಾವು ಉತ್ತಮಸ್ಥಿತಿಗೆ ತಂದು ಕಾಪಾಡುವುದಕ್ಕಾಗಿ ತಮ್ಮನ್ನು ಸರ್ವಕಾಲದಲ್ಲೂ ಜ್ಞಾನಕ್ಕೂ ಸದ್ಗುಣಕ್ಕೂ ಧರ್ಮಕ್ಕೂ ನಿಸ್ತರಸ್ನಾಗಿರಿಸಿರಲಿ — ಎಂದು ನಾವು ಪ್ರಾರ್ಥಿಸುತ್ತಿರುವೆವು. ಇಂತು ತಮ್ಮ ಪ್ರೀತಿ ಪಾತ್ರರು,

ಬೀರ್‌ಭೂಮಿನ ಮಹಿಳಾ ಸಮಿತಿಯ ಸದಸ್ಯರು.

ಮತ್ತೊಂದು ಅಭಿನಂದನ ಪತ್ರಿಕೆಯಲ್ಲಿ ಹೀಗೆ ಹೇಳಿದೆ:—“ಸಮಾಜದ ಉನ್ನತಿಗೋಸ್ಕರ ಸ್ವಾರ್ಥರಹಿತವಾಗಿ ಕೆಲಸಮಾಡುವುದರ ಸಂತೋಷವನ್ನು ಇದುವರೆಗೂ ಅರಿಯದೆ, ಮನೆಯೊಳಗೇ ಮೌಢ್ಯದಿಂದ ಕುಳಿತಿದ್ದವರಾದ ನಾವು ತಮಗೆ ಯಾವರೀತಿಯಲ್ಲಿ ಈಗ ಸ್ವಾಗತವನ್ನು ಬಯಸಬೇಕೆಂಬುದನ್ನು ತಿಳಿಯದವರಾಗಿದ್ದೇವೆ. ಜೀವವಿಲ್ಲದಿದ್ದ ನಮ್ಮ ದೇಹದಲ್ಲಿ ತಾವು ಈಗ ಜೀವವನ್ನು ತುಂಬಿ ನಾಡಿ ನಡೆಯುವಂತೆ ಮಾಡಿದ್ದೀರಿ. ತಮ್ಮ ಪ್ರೇಮದಿಂದ ನಮ್ಮೆಲ್ಲರನ್ನೂ ತಮ್ಮವರನ್ನಾಗಿ ಮಾಡಿಕೊಂಡಿರುತ್ತೀರಿ. ಪ್ರೇಮ ಪುರಸ್ಸರವಾದ ಸಲಿಗೆಯಿಂದ ತಮ್ಮನ್ನು ನಾವು ಸಂದರ್ಶಿಸಲು ತಾವು ಬಹು ಅನನುಕೂಲವನ್ನು ಸಹಿಸಿಕೊಂಡು ನಮಗೆ ಈ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತೀರಿ. ಚಿತ್ತಾಕರ್ಷಕವಾದ ತಮ್ಮ ನಡೆನುಡಿಗಳೂ, ನಮ್ಮ ಸ್ಥಿತಿಯನ್ನು ಉತ್ತಮಗೊಳಿಸಲು ತಾವು ಮನಃಪೂರ್ವಕವಾಗಿ ಮಾಡಿದ ಪ್ರಯತ್ನಗಳೂ ನಮ್ಮೆಲ್ಲರ ಹೃದಯಗಳನ್ನೂ ಜಯಿಸಿವೆ.

ತಮ್ಮ ಸ್ವಾರ್ಥರಹಿತ ಜೀವನದ ಪರಮಾದರ್ಶ ಚಿತ್ರವು ಯಾವಾಗಲೂ ನಮ್ಮ ಹೃದಯಗಳಲ್ಲಿ ನೆಲೆಗೊಂಡಿರಲೆಂಬುದೇ ಭಗವಂತನಲ್ಲಿ ನಮ್ಮ ಪ್ರಾರ್ಥನೆ."

"ನಾವು ದುರ್ಬಲರೂ, ಮೂಢರೂ, ಅಸಹಾಯರೂ ಆದ ಸ್ತ್ರೀ ಸಾಮಾನ್ಯರು; ನಮ್ಮ ಜೀವಮಾನವನ್ನೆಲ್ಲ ಮನೆಯೊಳಗೇ ಕಳೆದಿರುವವರು. ತಮ್ಮನ್ನು ಯಾವರೀತಿಯಲ್ಲಿ ವಂದಿಸಬೇಕೋ ನಾವರಿಯೆವು. ನಮ್ಮೆಲ್ಲರ ಹೃದಯಾಂತರಗಳಿಂದ ಉಕ್ಕುತ್ತಿರುವ ಮೌನಮಯ ಪೂಜೆಯನ್ನು ಮಾತ್ರ ತಮ್ಮಲ್ಲಿ ಅರ್ಪಿಸಬಲ್ಲೆವು."

ಬೀರ್‌ಭೂಮಿನ ಮಹಿಳೆಯರು.

ಬಂಕೂರಾದ ಮಹಿಳಾ ಸಮಿತಿಯವರು ಆಕೆಯ ವಿಷಯದಲ್ಲಿ ಹೀಗೆ ಅರ್ಥವಾಗುವಂತೆ ಹೇಳಿರುವರು:—

ಪ್ರತಿಯೊಂದು ಹೃದಯದಲಿ ಬೆರೆತು ನೀನಿರುವೆ |
ನಮ್ಮ ಬಾಳೊಳು ನೀನು ಭಾಗವಾಗಿರುವೆ ||
ನಮ್ಮ ಹಿತ ಸಂತೋಷಗಳಿಗಾಗಿ ನೀನು |
ನಿನ್ನ ಜೀವವನೆಲ್ಲ ಧಾರೆಯೆರೆದಿರುವೆ ||

ಬಂಕೂರಾ ಸಮಿತಿಯವರು ಸರೋಜ ನಳಿನಿ ಅಲ್ಲಿಂದ ಹೊರಟು ಬಂದಾಗ ಹೀಗೆ ಹೇಳಿದರು:—

"ಯಾರು ಉತ್ತಮ ನೀತಿಗಾಗಿ ಧೈರ್ಯದಿಂದ ಹೊಡೆದಾಡಿ, ನಾವಿದ್ದ ಸೆರೆಮನೆಗಳ ಬಾಗಿಲುಗಳನ್ನು ಒಡೆದು, ದೈವನಿರ್ಮಿತವಾದ ರಮಣೀಯ ನೋಟಗಳನ್ನು ನೋಡಲು ಅನುಕೂಲಪಡಿಸಿ, ಪರದೆಯ ಹಿಂದೆ ಕೊರಗುತ್ತಿದ್ದ ಅಂಜುಬುರುಕ ಕಣ್ಣುಗಳಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟಳೋ ಆಕೆಯನ್ನು ಬೀಳ್ಕೊಡುವ ದಿವಸ ಇದು."

"ಯಾರು ನಮ್ಮ ಹೃದಯಗಳಿಗೆ ಅಂಟಿದ್ದ ಕಲ್ಮಷಗಳನ್ನು ತೊಡೆದು ಹಾಕಿದಳೋ, ಯಾರು ನಮ್ಮ ಹೃದಯಗಳಲ್ಲಿ ಅಡಗಿದ್ದ ಸಂಪತ್ತನ್ನು ಹೊರಕ್ಕೆ ತರಲು ಅಪರಿಮಿತವಾಗಿ ಶ್ರಮಿಸಿದಳೋ, ಯಾರು ಸ್ವಲ್ಪವೂ ಲೋಭವಿಲ್ಲದೆ ತನ್ನ ಸರ್ವಸ್ವವನ್ನೂ ನಮಗೆ ದಾನಮಾಡಿದಳೋ—ಆಕೆಯನ್ನು ಬೀಳ್ಕೊಡುವ ದಿವಸ ಇದು."

"ಯಾರ ಸೌಮ್ಯಸ್ವಭಾವವು ಹರಿಯುವ ನದಿಯಂತೆ ಸ್ವಚ್ಛ ವಾಗಿಯೂ, ಗಂಭೀರವಾಗಿಯೂ, ಧಾರಾಳವಾಗಿಯೂ, ಸುಡದೆ ತಣಿಸುವು ದಾಗಿಯೂ ಇರುತ್ತದೆಯೋ, ಆಕೆಯನ್ನು ಬೀಳ್ಕೊಡುವ ದಿವಸ ಇದು."

---

## ಹನ್ನೊಂದನೆಯ ಅಧ್ಯಾಯ
## ಕಲ್ಕತ್ತೆಯಲ್ಲಿ ವಾಸ

ಸರೋಜ ನಳಿನಿ ಕಾಲವಾಗುವುದಕ್ಕೆ ಒಂದು ವರ್ಷ ಮುಂಚೆ ನಾವು ಕಲ್ಕತ್ತೆಗೆ ಬಂದೆವು. ಆ ಒಂದು ವರ್ಷದಲ್ಲಿ ಆಕೆ ಆ ಪಟ್ಟಣದಲ್ಲಿಯ ಅನೇಕ ಸ್ತ್ರೀ ಸಮಾರಂಭಗಳಿಗೆ ಸೇರಿದಳು. ಕಲ್ಕತ್ತೆಯಲ್ಲಿ ನಡೆದ ದೊಡ್ಡ ವಸ್ತು ಪ್ರದರ್ಶನದಲ್ಲಿ ಮಹಿಳಾಸಮಿತಿಯ ಸಾಮಾನುಗಳಿದ್ದ ಕಡೆ ಆಕೆ ಹಗಲೂ ರಾತ್ರಿಯೂ ಕೆಲಸಮಾಡಿ ಅದು ಜಯವಾಗುವಂತೆ ಮಾಡಿದಳು. ಈ ಸಂದರ್ಭದಲ್ಲಿ ಶ್ರೀ ಪಿ. ಕೆ. ರಾಯ್‌ರವರ ಹೆಂಡತಿ ಈ ರೀತಿ ಬರೆದಿದ್ದಾರೆ:—

"ಆಕೆಯ ಚಟುವಟಿಕೆ, ಅಚ್ಚುಕಟ್ಟು, ವಿಚಕ್ಷಣೆ—ಇವುಗಳಿಂದ, ಕೆಲವು ದಿನಗಳಲ್ಲಿ ಈ ಅಂಗಡಿಯಿಂದ ೭೦೦ ರೂಪಾಯಿಗಳಷ್ಟು ಸಂಪಾದಿಸು ವಂತಾಯಿತು. ಈ ಕೆಲಸಕ್ಕಾಗಿ ಒಪ್ಪಿಕೊಂಡಿದ್ದ ಇತರ ಮಹಿಳೆಯರು ಅನೇಕಸಲ ಕಾಲಮೀರಿ ಬರುತ್ತಿದ್ದರು, ಅಥವಾ ತಮಗೆ ಬದಲಾಗಿ ಮತ್ತಾರನ್ನಾದರೂ ಕಳುಹಿಸುತ್ತಿದ್ದರು. ಅವರುಗಳು ಒಂದುವೇಳೆ ಬಂದರೂ ಹೊರಟುಹೋಗುವ ಆತುರದಿಂದ ಕೆಲಸವನ್ನು ಹದಗೆಡಿಸಿಬಿಡು ತ್ತಿದ್ದರು. ಸರೋಜ ನಳಿನಿಯವರಾದರೋ ಯಾವಾಗಲೂ ಕಾಲಮೀರಿ ಬಂದವರಲ್ಲ; ಮತ್ತು ಯಾವ ದಿನವೂ ಬಾರದೆ ನಿಂತವರೂ ಅಲ್ಲ. ಆಕೆ ಒಂದು ಕ್ರಮವನ್ನು ಹಿಡಿದು, ಗಲಾಟೆಯಿಲ್ಲದ ಕಟ್ಟುನೆಟ್ಟಿನಿಂದ ಕೆಲಸ ಮಾಡುತ್ತಿದ್ದರು; ಆದರಿಂದ ಅಲ್ಲಿದ್ದ ಸಿಬ್ಬಂದಿಯವರೆಲ್ಲರೂ ಆಕೆಯ ಸಂಗಡ ಕೆಲಸಮಾಡುವುದು ಒಂದು ಸಂತೋಷವೆಂದು ಹೇಳುತ್ತಿದ್ದರು."

ಶಿಶುಸಪ್ತಾಹದ ಪ್ರಧಾನ ಸಮಿತಿಯಲ್ಲಿಯೂ, ಅದರ ನಾನಾ ಉಪ ಸಮಿತಿಗಳಲ್ಲಿಯೂ ಸದಸ್ಯಳಾಗಿ ಸರೋಜ ನಳಿನಿ ಕೆಲಸಮಾಡುತ್ತಿದ್ದಳು; ಗರ್ಲ್ ಗಯ್ಡ್ ಕಮಿಟಿಗೆ ಕೋಶಾಧಿಕಾರಿಣಿಯಾಗಿ ಚುನಾಯಿಸಲ್ಪಟ್ಟಳು;

ಮತ್ತು ಕಲ್ಕತ್ತೆಯ ಸ್ತ್ರೀಕಾರ್ಯಕಾರಿಣೀ ಸಮೂಹದ (ಲೀಗ್) ಭಾರತೀಯ ಶಾಖೆಗೆ ಕಾರ್ಯದರ್ಶಿನಿಯಾಗಿ ಚುನಾಯಿಸಲ್ಪಟ್ಟಳು. ಆ ಸಂಸ್ಥೆ ಈಗ ಬಂಗಾಳಾ ಪ್ರಾಂತದ ಸ್ತ್ರೀ ಸಮಾಲೋಚನಾಸಭೆ (ಬೆಂಗಾಲ್ ಪ್ರೆಸಿಡೆನ್ಸಿ ಕೌನ್ಸಿಲ್ ಆಫ್ ವಿಮೆನ್) ಆಗಿದೆ. ಆ ಸಂಸ್ಥೆ ಪ್ರಾಮುಖ್ಯವುಳ್ಳದ್ದಾಗಿ, ಬಂಗಾಳದ ಗವರ್ನರವರ ಪತ್ನಿಯ ಅಧ್ಯಕ್ಷತೆಯಲ್ಲಿ ನಡೆಯತಕ್ಕದ್ದಾಗಿತ್ತು. ಸರೋಜ ನಳಿನಿ ಕೊನೆಯಸಲ ಕಾಯಿಲೆ ಬೀಳುವುದಕ್ಕೆ ಒಂದು ತಿಂಗಳ ಮುಂಚೆ ಆ ಸಂಸ್ಥೆಯ ಸದಸ್ಯರುಗಳ ಸಂಖ್ಯೆಯನ್ನು ಬಹಳವಾಗಿ ಹೆಚ್ಚಿಸಿದ್ದಳು. ವಿಜ್ಞಾನಶಾಸ್ತ್ರ ಪಂಡಿತರಾದ ಸರ್ ಜಗದೀಶ ಚಂದ್ರ ಬೋಸ್‌ರವರ ಪತ್ನಿಯಾದ ಲೇಡಿ ಬೋಸ್‌ರವರು ಆಕೆಯ ಕಾರ್ಯದಕ್ಷತೆಯನ್ನು ನೋಡಿ ಆಕೆಯನ್ನು ನಾರೀ ಶಿಕ್ಷಾಸಮಿತಿಯ ಕಾರ್ಯಾಲೋಚನ ಮಂಡಲಿಗೆ ಚುನಾವಣೆಯಾಗುವಂತೆ ಮಾಡಿದರು. ಆ ಮಂಡಲಿಯ ಕೆಲಸಗಳಲ್ಲಿ ಸರೋಜ ನಳಿನಿಯು ಲೇಡಿ ಬೋಸ್ ರವರಿಗೆ ಬಲಭುಜದಂತಿದ್ದಳು. ಆ ಸಮಿತಿಗೆ ಸೇರಿದ "ವಿದ್ಯಾಸಾಗರ ವಿಧವಾ ಆಶ್ರಮ"ದ ಪೂರ್ಣ ಆಡಳಿತವನ್ನು ಲೇಡಿ ಬೋಸ್ ರವರು ಇವಳಿಗೇ ವಹಿಸಿದರು. ಈ ಆಶ್ರಮದಲ್ಲಿದ್ದವರಿಗೆ ಕಸಬುಗಳನ್ನು ಕಲಿಸಿಕೊಡುವುದಕ್ಕಾಗಿ ಸರೋಜ ನಳಿನಿಯು ಅನೇಕ ಏರ್ಪಾಡುಗಳನ್ನು ಮಾಡತೊಡಗಿದಳು.

ಕಾಲದೊರೆಯದೆ ಎಷ್ಟೇ ಕಷ್ಟವಾಗಿದ್ದರೂ, ಸರೋಜ ನಳಿನಿ ತನ್ನ ಕರ್ತವ್ಯವನ್ನು ತೊರೆಯುತ್ತಿರಲಿಲ್ಲ. ೧೯೨೪ ನೆಯ ಇಸವಿಯಲ್ಲಿ ಕಲ್ಕತ್ತಾ ಪೌರ (ಮ್ಯುನಿಸಿಪಲ್) ಸಭೆಗೆ ಸದಸ್ಯರನ್ನು ಚುನಾಯಿಸುವುದರಲ್ಲಿ ಅಭಿಮತ (ವೋಟ್) ಕೊಡುವ ಹಕ್ಕನ್ನು ಸ್ತ್ರೀಯರಿಗೆ ಮೊಟ್ಟಮೊದಲು ದೊರಕಿಸಿದಾಗ, ಆ ಚುನಾವಣೆ ಸರಿಯಾಗಿ ನಡೆಯುವಂತೆ ಸಹಕರಿಸಲು ಒಂದು ಸಮಿತಿ (ಕಮಿಟಿ) ನಿರ್ಮಿತವಾಯಿತು. ಪೌರಸಭಾಧ್ಯಕ್ಷರ ಕೋರಿಕೆಯಂತೆ ಸರೋಜ ನಳಿನಿ ಆ ಸಮಿತಿಯ ಸದಸ್ಯಳಾಗಿ, 'ಗಲ್ಸ್‌ಟನ್ ಮ್ಯಾನ್‌ಷನ್ಸ್' ಎಂಬ ಕೇಂದ್ರದಲ್ಲಿ, ಆ ಸುತ್ತಮುತ್ತಲಿನ ಅನೇಕಭಾಗಗಳ ಸ್ತ್ರೀಯರ ಅಭಿಮತ ಲೇಖನದ ಏರ್ಪಾಟುಗಳನ್ನು ತಾನೇ ಪೂರ್ತಿಯಾಗಿ ನೋಡಿಕೊಳ್ಳಲೊಪ್ಪಿದಳು. ಚುನಾವಣೆಯ ದಿವಸ ಬೆಳಗ್ಗಿನಿಂದ ಸಂಜೆಯವರೆಗೂ ತಾನು ಅಲ್ಲಿದ್ದು, ಅಭಿಮತ ಸಂಗ್ರಹದ ಕೆಲಸವನ್ನು ಸ್ವಲಕ್ಷಣವಾದ ವಿಚಕ್ಷಣೆಯಿಂದ ನೆರವೇರಿಸಿದಳು.

ನನ್ನ ಜನ್ಮಸ್ಥಳವಾದ ಸಿಲ್ಹೆಟ್ ನಲ್ಲಿ ಸ್ತ್ರೀ ವಿದ್ಯಾಭಿವೃದ್ಧಿಗಾಗಿ ಏರ್ಪಾಟಾಗಿದ್ದ "ಸಿಲ್ಹೆಟ್ ಯೂನಿಯನ್" ಸಂಘಕ್ಕೆ ಸರೋಜ ನಳಿನಿಯು ಉಪಾಧ್ಯಕ್ಷಳಾಗಿ ಚುನಾಯಿಸಲ್ಪಟ್ಟಳು. ಆಕೆ ಬಂಗಾಳದ ಸಮಾಜ ಸೇವಾ ಸಂಘಕ್ಕೆ ಸೇರಿದ ಶ್ರೀ ನಿಶಿಕಾಂತ ಬೋಸ್ ರವರ ಸಹಾಯವನ್ನು ಪಡೆದು, ಕಲ್ಕತ್ತೆಯ ಪ್ರತಿಯೊಂದು ಭಾಗದಲ್ಲಿಯೂ ಮಹಿಳೆಯರು ಸಭೆಗಳಲ್ಲಿ ಸೇರಿ, ಆರೋಗ್ಯ, ವಿದ್ಯೆ, ಕುಶಲಕಲೆ ಇವುಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಒಂದು ಕೇಂದ್ರವನ್ನು ಏರ್ಪಡಿಸುವುದಕ್ಕೂ, ಮತ್ತು ಗ್ರಾಮಾಂತರಗಳಲ್ಲಿ ಪ್ರಯಾಣಮಾಡಿ ಅಲ್ಲಲ್ಲಿ ಸ್ತ್ರೀಯರಿಗೆ ವೃತ್ತಿ, ಕಸಬುಗಳನ್ನು ಕಲಿಸಲು ಉಪಾಧ್ಯಾಯರನ್ನು ಕಳುಹಿಸಿಕೊಡುವುದಕ್ಕೂ ಒಂದು ಕಾರ್ಯ ವಿಧಾನವನ್ನು ತಯಾರಿಸಿದ್ದಳು; ಮತ್ತು ಕವಿ ರವೀಂದ್ರನಾಥ ಠಾಕೂರರವರ ಶಾಂತಿನಿಕೇತನದ ಆಶ್ರಮಕ್ಕೆ ಸೇರಿದ ಶ್ರೀ ಕಾಳಿ ಮೋಹನ್ ಘೋಸ್ ರವರ ಸಲಹೆಗಳನ್ನು ಪಡೆದು, ರವೀಂದ್ರನಾಥರವರ ವಿಶ್ವಭಾರತೀ ವಿಶ್ವವಿದ್ಯಾನಿಲಯಕ್ಕೆ ಸೇರಿದ "ಶ್ರೀನಿಕೇತನ ಗ್ರಾಮ ಕೈಗಾರಿಕೆಗಳ ಶಾಖೆ"ಯ ಸಹಾಯದಿಂದ, ಬಂಗಾಳದ ಹಳ್ಳಿಗಳ ಹೆಂಗಸರಿಗೆ ಆರೋಗ್ಯ, ಪಾರಿಶುದ್ಧ್ಯ ಮುಂತಾದ ವಿಚಾರಗಳನ್ನು ಬೋಧಿಸಲು ಒಂದು ಕಾರ್ಯ ವಿಧಾನವನ್ನು ರಚಿಸುವುದಕ್ಕೂ ಆರಂಭಿಸಿದ್ದಳು.

---

## ಹನ್ನೆರಡನೆಯ ಅಧ್ಯಾಯ
## ಕೇಂದ್ರ ಸಂಸ್ಥೆಯ ಸ್ಥಾಪನೆ

ಸರೋಜ ನಳಿನಿ ಕಲ್ಕತ್ತೆಯಲ್ಲಿಟ್ಟುಕೊಂಡಿದ್ದ ಸಾವಿರಾರು ಕೆಲಸಗಳ ನಡುವೆ, ಆಕೆಯ ಹೃದಯವು ವಿಶಾಲವಾದ ವಂಗಭೂಮಿಯ ಗ್ರಾಮಾಂತರ ಪ್ರದೇಶಗಳಲ್ಲಿದ್ದ ಅಜ್ಞಾತರಾದ ಸಹೋದರಿಯರ ಕಡೆಗೂ ಹೋಗುತ್ತಿತ್ತು. ಅವರ ಬಡಬಾಳಿನ ಕನಿಕರದ ಮೊರೆ ಆಕೆಯ ಕಿವಿಗಳಲ್ಲಿ ಹಗಲೂ ರಾತ್ರಿಯೂ ಧ್ವನಿಮಾಡುತ್ತಿತ್ತು. ಆಕೆ ಹೀಗೆ ಹೇಳುತ್ತಿದ್ದಳು:—

"ಕಲ್ಕತ್ತೆಯಲ್ಲಿರುವ ಹೆಂಗಸರೂ ಗಂಡಸರೂ ತಮ್ಮ ಪಟ್ಟಣ ಜೀವನದಲ್ಲಿಯೇ ಮಗ್ನರಾಗಿ, ನಿಜವಾದ ದೇಶವು ಪಟ್ಟಣದ ಹೊರಗಡೆ ಇರುತ್ತದೆಯೆಂಬುದನ್ನು ಮರೆತುಬಿಡುತ್ತಾರೆ. ಹೊರಗಣ ವಿಸ್ತಾರವಾದ

ನಾಡೂ, ಸಾವಿರಾರು ಮಂದಿ ಹಳ್ಳಿಗರ ಕಷ್ಟ ಕಾರ್ಪಣ್ಯಗಳೂ, ಲಕ್ಷೋಪಲಕ್ಷ ಸ್ತ್ರೀಯರು ಸಾಮಾಜಿಕ, ಆರ್ಥಿಕ ಮತ್ತು ಶಾರೀರಕ ಅಕ್ರಮಗಳ ಕಾರಣಗಳಿಂದ ಪಡುತ್ತಿರುವ ಯಾತನೆಗಳೂ ಅವರ ಯೋಚನೆಯನ್ನು ತಾಕುವುದೇ ಇಲ್ಲ. ಹಲಮಂದಿ ಒಟ್ಟುಗೂಡಿ ಪ್ರಯತ್ನಿಸಿದಲ್ಲದೆ ಗ್ರಾಮಾಂತರ ಪ್ರದೇಶಗಳನ್ನು ಉತ್ತಮಸ್ಥಿತಿಗೆ ತರಲಾಗುವುದಿಲ್ಲ. ಆದರೆ ಯಾರೂ ಅಂಥ ಪ್ರಯತ್ನವನ್ನು ಮಾಡುತ್ತಿಲ್ಲ. ಈ ಅಪಮಾನದ ಸಂದರ್ಭವನ್ನು ನಾವು ಎಷ್ಟಾದರೂ ಕಷ್ಟಪಟ್ಟು ಹೋಗಲಾಡಿಸಬೇಕು. ಎಷ್ಟೇ ಹಣವು ವೆಚ್ಚವಾದರೂ ಚಿಂತೆಯಿಲ್ಲ, ಬಂಗಾಳದ ಸಮಸ್ತ ಸ್ತ್ರೀಸಮುದಾಯವನ್ನೂ ಒಟ್ಟುಗೂಡಿಸಿ ಕೆಲಸಮಾಡಲು ಕೇಂದ್ರಸಂಸ್ಥೆಯಂತಿರುವ ಒಂದು ಪ್ರಧಾನ ಮಹಿಳಾ ಸಮಿತಿಯನ್ನು ಕಲ್ಕತ್ತೆಯಲ್ಲಿ ಸ್ಥಾಪಿಸೋಣ."

ನಾವು ೧೯೨೧ನೆಯ ಇಸವಿಯಲ್ಲಿ ಇಂಗ್ಲೆಂಡಿಗೆ ಹೋಗಿದ್ದಾಗಲೇ ಸರೋಜನಳಿನಿಯ ಮನಸ್ಸಿನಲ್ಲಿ ಒಂದು ಕೇಂದ್ರ ಮಹಿಳಾ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಯೋಚನೆ ಹುಟ್ಟಿತ್ತು. ೧೯೧೩ನೆಯ ಇಸವಿಯಿಂದ ಆಕೆ ಬಂಗಾಳ ಪ್ರಾಂತದ ಅನೇಕ ಭಾಗಗಳಲ್ಲಿ ಅನೇಕ ಮಹಿಳಾ ಸಮಿತಿಗಳನ್ನು ಸ್ಥಾಪಿಸಿದ್ದಳು. ಆದರೆ ಆಕೆಯು ಆ ಸ್ಥಳಗಳನ್ನು ಬಿಟ್ಟು ಬಂದ ಮೇಲೆ ಆ ಸಮಿತಿಗಳಲ್ಲಿ ಅನೇಕ ಸಮಿತಿಗಳು,—ಅವುಗಳ ಸದಸ್ಯರಿಗೆ ಸರಿಯಾಗಿ ದಾರಿತೋರಿಸಿ, ಹೊಂದಿಕೆಯಿಂದ ಕೆಲಸಮಾಡಿಸುವವರಿಲ್ಲದಿದ್ದ ಕಾರಣದಿಂದ,—ಕ್ಷೀಣವಾಗಿದ್ದುವು. ೧೯೨೧ನೆಯ ಇಸವಿಯಲ್ಲಿ ನಾವು ಲಂಡನ್ ಪಟ್ಟಣದಲ್ಲಿದ್ದಾಗ ವೆಸ್ಟ್ ಮಿನ್‌ಸ್ಟರ್ ಎಂಬ ಭಾಗದಲ್ಲಿ, ಇಡ್ಡೆಸ್ಲಿ ಹೌಸ್ ಎಂಬ ಕಟ್ಟಡದಲ್ಲಿದ್ದ ಗ್ರಾಮಗೋಷ್ಠಿಗಳ ಸಂಘದ (Village Clubs Association) ಕಾರ್ಯಾಲಯಕ್ಕೆ ಹೋಗಿ, ಆ ಸಂಘದ ಮುಖ್ಯ ವ್ಯವಸ್ಥಾಪಕರಾದ ನ್ಯೂಜೆಂಟ್ ಹ್ಯಾರಿಸ್ ಎಂಬವರನ್ನು ಕಂಡಿದ್ದೆವು. ಮತ್ತು ಅವರ ಸಲಹೆಯಂತೆ, ಅದೇ ಕಟ್ಟಡದ ಮೇಲಿನ ಮಹಡಿಯಲ್ಲಿ, ಇಂಗ್ಲೆಂಡು ಮತ್ತು ವೇಲ್ಸಿನ ಸ್ತ್ರೀ ಸಂಸ್ಥೆಗಳ ರಾಷ್ಟ್ರೀಯ ಸಂಘಟನೆಯ (National Federation of Women's Institutes of England and Wales) ಕಛೇರಿಗೆ ಸರೋಜನಳಿನಿ ಹೋಗಿದ್ದಳು. ಅಲ್ಲಿ ಆಕೆ ಆ ಸಂಘಟನೆಯ ಸಾರ್ವತ್ರಿಕ ಕಾರ್ಯದರ್ಶಿನಿಯಾದ ಮಿಸ್. ಫರ್ಗ್ಯುಸನ್‌ರವರನ್ನೂ, ವ್ಯವಸ್ಥಾಪಕ ಕಾರ್ಯದರ್ಶಿನಿಯಾದ ಮಿಸ್. ಡಿ. ಎ. ಪಾರ್ ಅವರನ್ನೂ,

ಮತ್ತು ವ್ಯವಸ್ಥಾಪಕಿಯೂ "ಹೋಮ್ ಅಂಡ್ ಕಂಟ್ರಿ" (Home and Country) ಎಂಬ ಪತ್ರಿಕೆಯ ಸಂಪಾದಕಿಯೂ ಆದ ಮಿಸೆಸ್. ನ್ಯೂಜೆಂಟ್ ಹ್ಯಾರಿಸ್ ಅವರನ್ನೂ ಕಂಡು, ಅವರುಗಳೊಡನೆ ಮಾತನಾಡಿದ್ದಳು.

ಇದಕ್ಕೆ ಹಿಂದೆ ಸರೋಜನಳಿನಿಯು ಆಂಗ್ಲೇಯ ಸ್ತ್ರೀ ಸಂಘಗಳ ವಿಷಯವನ್ನು ಕೇಳಿಯೇ ಇರಲಿಲ್ಲ. ಬಂಗಾಳದಲ್ಲಿ ತಾನು ಸ್ಥಾಪಿಸಿದ ಸಮಿತಿಗಳಿಗೂ ಆಂಗ್ಲೇಯರ ಸ್ತ್ರೀ ಸಮಿತಿಗಳಿಗೂ ಇದ್ದ ಹೋಲಿಕೆಯನ್ನು ಕಂಡು ಬಹಳ ಆಶ್ಚರ್ಯಪಟ್ಟಳು. ಮುಖ್ಯವಾಗಿ "ನ್ಯಾಷನಲ್ ಫೆಡರೇಷನ್" ಸಂಸ್ಥೆಯ ರಚನಾಕ್ರಮವೂ ಮತ್ತು ಅದರ ಉದ್ಯಮಗಳೂ ಆಕೆಯ ಮನಸ್ಸಿನಮೇಲೆ ಹೆಚ್ಚು ಪರಿಣಾಮಮಾಡಿದುವು. ಬಂಗಾಳದ ಗ್ರಾಮಾಂತರ ಮಹಿಳಾ ಸಮಿತಿಗಳ ಕೆಲಸಗಳಲ್ಲಿ ಹೊಂದಿಕೆಯನ್ನುಂಟು ಮಾಡಿ, ಅವೆಲ್ಲಕ್ಕೂ ದಾರಿ ತೋರಿಸಿಕೊಡಲು, ಕಲ್ಕತ್ತೆಯಲ್ಲಿ ಅದೇ ಬಗೆಯ ಒಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ತೀವ್ರವಾದ ಅಭಿಲಾಷೆಯು ಆಕೆಯ ಮನಸ್ಸಿನಲ್ಲಿ ತುಂಬಿತು.

ಸರೋಜನಳಿನಿ ಸ್ವದೇಶಕ್ಕೆ ಹಿಂತಿರುಗಿದ ಅನಂತರ ಈ ವಿಷಯವಾಗಿ ಬರೆದ ಮಾತು ಇದು:—"ನಾನು ಕಲ್ಕತ್ತೆಗೆ ಬಂದಾರಭ್ಯ ಸ್ತ್ರೀಯರ ಕೆಲವು ಸಮಾರಂಭಗಳಲ್ಲಿ ಸೇರಿದ್ದೇನೆ. ಹಲವರು ಯೂರೋಪಿಯನ್ ಹೆಂಗಸರೂ ಕೆಲವರು ದೇಶೀಯ ಹೆಂಗಸರೂ ಬಹಳ ಶ್ಲಾಘ್ಯವಾಗಿ ಕೆಲಸ ಮಾಡುತ್ತಿರುವುದನ್ನು ನೋಡಿದ್ದೇನೆ. ಆದರೆ ನಾನು ಕಂಡು ಕೇಳಿರುವ ಕೆಲಸಗಳೆಲ್ಲ ಬಹುಶಃ ಕಲ್ಕತ್ತೆಯ ನಿವಾಸಿಗಳ ಸೌಕರ್ಯಕ್ಕಾಗಿ ಮಾತ್ರವೇ ನಡೆಯುತ್ತಿವೆ. ಈ ಕೆಲಸ ಮುಖ್ಯವಾದುದೆಂಬುದರಲ್ಲಿ ನನಗೆ ಸಂಶಯವಿಲ್ಲ. ಇಂಥ ಕೆಲಸಕ್ಕೆ ನಾನೂ ನನ್ನ ಕೈಯಿಂದಾದಷ್ಟು ಸಹಾಯ ಮಾಡುವುದರಲ್ಲಿ ನನಗೆ ಬಹಳ ಸಂತೋಷವೇ ಸರಿ. ಆದರೆ ಅದರ ಜೊತೆಗೆ ಗ್ರಾಮಾಂತರಗಳ ನಿವಾಸಿಗಳಿಗೂ ಈ ರೀತಿ ಸಹಾಯ ಮಾಡುವ ಪ್ರಯತ್ನವನ್ನು ನಮ್ಮಲ್ಲಿ ಕೆಲವರು ಉಪಕ್ರಮಿಸಬೇಕೆಂದು ನಾನು ಅಭಿಪ್ರಾಯಪಡುತ್ತೇನೆ."

"ಆ ಕೆಲಸ ಬಹಳ ಕಷ್ಟವಾದದ್ದೆಂಬುದಕ್ಕೆ ಸಂಶಯವಿಲ್ಲ. ಅದಲ್ಲದೆ ಕಲ್ಕತ್ತೆಯಲ್ಲಿ ವಾಸಿಸುತ್ತಿರುವ ಅನೇಕ ಸ್ತ್ರೀಯರ ಮನಸ್ಸಿಗೆ ಅದು ಬೇಕಾಗದೆ ಹೋಗಬಹುದು. ಆದರೆ ಇದು ಅತ್ಯಂತ ಮುಖ್ಯವಾದ

ಕೆಲಸವಾಗಿದೆ; ಈ ಕೆಲಸವನ್ನು ನಮ್ಮಲ್ಲಿ ಕೈಕೊಂಡ ಹೊರತು ನಮ್ಮ ದೇಶದಲ್ಲಿ ನಿಜವಾದ ಯಾವ ಅಭಿವೃದ್ಧಿಯೂ ಆಗುವಂತಿಲ್ಲ."

"ನಾನು ನನ್ನ ಜೀವಮಾನದಲ್ಲಿ ಹೆಚ್ಚು ಕಾಲವನ್ನು ಜಿಲ್ಲಾ ಪ್ರದೇಶಗಳಲ್ಲಿ ಕಳೆದು ಬಂಗಾಳದ ಪಟ್ಟಣಗಳ ಮತ್ತು ಗ್ರಾಮಗಳ ಜೀವನ ರೀತಿಗಳನ್ನು ಚೆನ್ನಾಗಿ ನೋಡಿದ್ದೇನೆ. ಬಹುಶಃ ಈ ಕಾರಣ ದಿಂದಲೇ ನನಗೆ, ಕಲ್ಕತ್ತೆಯಲ್ಲಿ ವಾಸಿಸುವ ಜನರಿಗಿಂತಲೂ ಎಲ್ಲ ರೀತಿ ಗಳಲ್ಲಿಯೂ ಹಿಂದುಳಿದಿರುವಂಥಾ, ಜಿಲ್ಲಾ ಪ್ರದೇಶಸ್ಥರಾದ ಮತ್ತು ಗ್ರಾಮವಾಸಿಗಳಾದ ನಮ್ಮ ಸಹೋದರಿಯರ ವಿಷಯದಲ್ಲಿ ಚಿಂತೆ ಹೆಚ್ಚಾಗಿರುತ್ತದೆ. ಆದುದರಿಂದ ಅವರಿಗೆ ಸಹಾಯಮಾಡುವುದು ನಮ್ಮ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ನಾನು ಸ್ವಲ್ಪ ಕಾಲಕ್ಕೆ ಹಿಂದಿನ ವರೆಗೂ ವಾಸಿಸುತ್ತಿದ್ದ ಗ್ರಾಮಗಳ ಮತ್ತು ಚಿಕ್ಕ ಊರುಗಳ ನಿವಾಸಿಗಳಾದ ನಮ್ಮ ಸಹೋದರಿಯರ ಪುರೋವೃದ್ಧಿಗಾಗಿ ನನ್ನ ಶಕ್ತಿಗನುಸಾರವಾಗಿ ಸ್ವಲ್ಪಮಟ್ಟಿಗೆ ಸಹಾಯಮಾಡಲು ಪ್ರಯತ್ನಿಸಿದ್ದೇನೆ. ಅವರಿಗೆ ವಿಶಾಲವಾದ ಭಾವನೆಗಳ ಸಂಪರ್ಕವನ್ನುಂಟುಮಾಡಿ ಅವರ ಮನೋಭಾವವನ್ನು ವಿಸ್ತಾರಗೊಳಿಸುವುದರಿಂದ ಅವರಿಗೆ ಹೆಚ್ಚಾಗಿ ಉಪಕಾರವಾಗುವುದು. ಆದುದರಿಂದ ಜಿಲ್ಲೆಗಳಲ್ಲಿ ಈಗಾಗಲೇ ಕೆಲಸಮಾಡುತ್ತಿರುವ ಚಿಕ್ಕ ಸಂಸ್ಥೆಗಳ ಸಹಾಯಕ್ಕಾಗಿ ಕಲ್ಕತ್ತೆಯಲ್ಲಿ ಒಂದು ಕೇಂದ್ರ ಸಂಸ್ಥೆಯನ್ನು ಏರ್ಪಡಿಸಿದರೆ ಅದರಿಂದ ಬಹಳ ಉಪಯೋಗವಾಗುವುದೆಂದು ನನಗೆ ತೋರುತ್ತದೆ."

"ಹಿಂದೂದೇಶದ ಹಳ್ಳಿಗಳಲ್ಲಿಯೂ ಊರುಗಳಲ್ಲಿಯೂ ಎಷ್ಟು ಮಹತ್ತರವಾದ ಕೆಲಸ ನಡೆಯಬೇಕಾಗಿರುವುದೆಂಬುದನ್ನು ನಗರಗಳಲ್ಲಿಯೇ ತಮ್ಮ ಜೀವನದ ಬಹು ಭಾಗವನ್ನು ಕಳೆಯುತ್ತಿರುವ ನಮ್ಮ ಸೋದರಿ ಯರು ತಿಳಿಯಲಾರರು. ಅಲ್ಲಿ ನಡೆಯಬೇಕಾಗಿರುವುದು ಬಹಳ ಕಷ್ಟವಾದ ಕೆಲಸವೆಂಬುದು ನನಗೆ ಚೆನ್ನಾಗಿ ತಿಳಿದಿದೆ. ಆದರೂ ಆ ಕೆಲಸಕ್ಕೆ ನಾವು ಕೈ ಹಾಕಬೇಕು. ಸಣ್ಣ ಸಣ್ಣ ಊರು ಹಳ್ಳಿಗಳ ಸ್ತ್ರೀಯರಲ್ಲಿ ವಿದ್ಯಾಭಿ ವೃದ್ಧಿಮಾಡಿ, ಅವರುಗಳ ಮನಃಪ್ರಪಂಚವನ್ನು ವಿಸ್ತರಿಸಿದ ಹೊರತು ದೇಶದಲ್ಲಿ ಯಾವ ನಿಜವಾದ ಅಭಿವೃದ್ಧಿಯೂ ಆಗಲಾರದು."

"ಜಿಲ್ಲಾಧಿಕಾರಿಯ ಹೆಂಡತಿಗಿದ್ದ ಸ್ಥಾನಬಲದಿಂದ ನಾನು ಮೂರು ಬೇರೆ ಬೇರೆ ಜಿಲ್ಲೆಗಳಲ್ಲಿ ಮಹಿಳಾಸಮಿತಿಗಳನ್ನು ಸ್ಥಾಪಿಸಲು ಅನುಕೂ

ಲಿಸಿತು. ಈ ಸಮಿತಿಗಳಲ್ಲಿ ಕೆಲವು ಸಮಿತಿಗಳು ಉತ್ತಮ ಕೆಲಸಗಳನ್ನು ನಡಸುತ್ತಿವೆ. ಆದರೆ ಇತರ ಸಮಿತಿಗಳು ಹೆಸರಿನಲ್ಲಿ ಮಾತ್ರ ಉಳಿದಿವೆ; ಏಕೆಂದರೆ ಅವಕ್ಕೆ ತಕ್ಕಷ್ಟು ಸಹಾನುಭೂತಿ ನೀಡುವವರೂ ಕಾರ್ಯ ಮಾರ್ಗ ತೋರಿಸುವ ಸಾಮರ್ಥ್ಯವುಳ್ಳವರೂ ಯಾರೂ ದೊರೆತಿಲ್ಲ. ಈ ಸಂಬಂಧದಲ್ಲಿ ಒಂದು ಏರ್ಪಾಟನ್ನು ನಾನು ಯೋಚಿಸಿದ್ದೇನೆ. ಅದು ಸರಿಯಾಗಿ ನಡೆದರೆ, ಈಗಿರುವ ಮೇಲೆ ಹೇಳಿದ ಕಷ್ಟಗಳೂ ನ್ಯೂನತೆಗಳೂ ಪರಿಹಾರವಾಗುವುವು; ಮತ್ತು ಈಗ ಪ್ರತ್ಯೇಕ ಪ್ರತ್ಯೇಕವಾಗಿರುವ ಸಂಸ್ಥೆಗಳಿಗೆ ಪರಸ್ಪರವಾಗಿಯೂ ಮತ್ತು ಎಲ್ಲಕ್ಕೂ ಒಂದು ಕೇಂದ್ರಸಂಸ್ಥೆಯೊಡನೆಯೂ ಸಂಪರ್ಕವನ್ನು ಬೆಳೆಯಿಸಿ, ಅವುಗಳಿಗೆ ಅವಶ್ಯವಾಗಿರುವ ಉಪದೇಶ ಉದಾಹರಣೆಗಳನ್ನು ಒದಗಿಸುವುದಕ್ಕೂ ಆ ಏರ್ಪಾಟು ಅನುಕೂಲಿಸುವುದು."

"ಜಿಲ್ಲೆಗಳಲ್ಲಿಯೂ ಗ್ರಾಮಗಳಲ್ಲಿಯೂ ಮಹಿಳಾಸಮಿತಿಯು ಸರಿಯಾದ ವ್ಯವಸ್ಥೆಯಿಂದ ಕೆಲಸಮಾಡುವುದಾದರೆ ಎಷ್ಟು ಪ್ರಯೋಜನಕಾರಿಯಾಗಬಹುದೆಂಬುದನ್ನು ಅರಿಯದವರಿಗೆ ಮುಂದಟ್ಟು ಮಾಡಿಕೊಡುವುದಕ್ಕಾಗಿ, ನಾನು ಬಂಕೂರದ ಮಹಿಳಾಸಮಿತಿ ಮಾಡಿರುವ, ಮಾಡುತ್ತಿರುವ, ಮತ್ತು ಇನ್ನೂ ಸುವ್ಯವಸ್ಥಿತವಾದರೆ ಮುಂದೆ ಮಾಡಬಹುದಾದ ಕೆಲಸವನ್ನು ಕುರಿತು ಸಂಕ್ಷೇಪವಾಗಿ ತಿಳಿಸುತ್ತೇನೆ. ಆ ಸಮಿತಿಯಲ್ಲಿ, ಪ್ರಾರಂಭಮಾಡಿದಾಗ ವರ್ಷಕ್ಕೆ ತಲಾ ಒಂದು ರೂಪಾಯಂತೆ ಚಂದಾ ಕೊಡುವ ಸದಸ್ಯರು ಸುಮಾರು ಎಂಭತ್ತು ಮಂದಿಯಿದ್ದರು. ಅವರಲ್ಲಿ ಕೆಲವರು ಉದಾರ ಮನಸ್ಸಿನಿಂದ ತಾವಾಗಿಯೇ ಹೆಚ್ಚಾಗಿ ಕೊಟ್ಟರು. ಆ ಸಂಸ್ಥೆಯ ಕಾರ್ಯ ಮಂಡಲಿಯಲ್ಲಿ ಒಬ್ಬ ಅಧ್ಯಕ್ಷಿಣಿ, ಒಬ್ಬ ಉಪಾಧ್ಯಕ್ಷಿಣಿ, ಕಾರ್ಯದರ್ಶಿನಿಯರು ಮತ್ತು ಸುಮಾರು ಹನ್ನೆರಡು ಜನರು ಸದಸ್ಯರುಗಳು ಇದ್ದರು. ಈ ಮಂಡಲಿಯು ತಿಂಗಳಿಗೊಂದುಸಲ ಸೇರಿ, ಕಾರ್ಯಕ್ರಮಗಳನ್ನೂ ಲೆಕ್ಕಪಕ್ಕಗಳನ್ನೂ ಚರ್ಚಿಸುತ್ತದೆ. ಸಕಲ ಸದಸ್ಯರ ಸಭೆಯು ಎರಡು ತಿಂಗಳಿಗೊಂದು ಸಾರಿ ಸೇರುತ್ತದೆ. ಸದಸ್ಯರುಗಳ ಗಾಡಿಯ ಬಾಡಿಗೆಯನ್ನು ಸಮಿತಿಯೇ ಕೊಡುತ್ತದೆ; ಇಲ್ಲದಿದ್ದರೆ ಸದಸ್ಯರು ಬರುವುದಿಲ್ಲ. ಸಂಸ್ಥೆಯಲ್ಲಿ ಹೆಚ್ಚು ಹಣವಿಲ್ಲದುದರಿಂದ ಸಕಲ ಸದಸ್ಯರ ಸಭೆಯು ಎರಡು ತಿಂಗಳಿಗೊಂದು ಸಲಕ್ಕಿಂತ ಹೆಚ್ಚಾಗಿ ನಡೆಯಲು ಸಾಧ್ಯವಾಗುವುದಿಲ್ಲ. ಈ ಸಭೆಗಳು ಸಾಮಾನ್ಯ

ವಾಗಿ ಸಂತೋಷಕೂಟಗಳಂತೆಯೇ ಇದ್ದುವು. ಆದರೂ ಅದೇ ಸಂದರ್ಭದಲ್ಲಿಯೇ ವಿದ್ಯಾಪ್ರಚಾರ ಮಾಡುವುದೂ ಈ ಸಮಿತಿಯ ಉದ್ದೇಶವಾಗಿದ್ದುದರಿಂದ, ಇಂಥ ಪ್ರತಿಯೊಂದು ಸಂತೋಷಕೂಟದಲ್ಲಿಯೂ ದೀಪಚಿತ್ರ ಸಮೇತವಾಗಿ ಉಪನ್ಯಾಸಗಳು ನಡೆಯುತ್ತಿದ್ದುವು. ಸದಸ್ಯರು ಈ ಉಪನ್ಯಾಸಗಳನ್ನು ಮೆಚ್ಚುತ್ತಿದ್ದರು. ಶಿಶುಪೋಷಣೆಗೆ ಸಂಬಂಧಪಟ್ಟ ಅಂಶಗಳನ್ನು ತಿಳಿಸಲು ಮಿಸೆಸ್ ಬೆಂಟ್ಲಿಯವರು ರಚಿಸಿದ್ದ "ಮಕ್ಕಳ ಗೋಳು" ಎಂಬ ಚಲಚಿತ್ರ ಪ್ರದರ್ಶನವು ಕಳೆದ ಸಲದ ಸಕಲ ಸದಸ್ಯ ಸಭೆಯಲ್ಲಿ ನಡೆಯಿತು. ಎಲ್ಲರೂ ಅದನ್ನು ಬಹಳವಾಗಿ ಶ್ಲಾಘಿಸಿದರು. ಅಡಿಗೆಯ ಉಪಕರಣಗಳೂ ಊಟದ ಪಾತ್ರೆಗಳೂ ಆ ಊರಿನ ಆಸ್ಪತ್ರೆಗಳಲ್ಲಿ ಇಲ್ಲದೆ ಇದ್ದುದರಿಂದ, ಈ ಸಮಿತಿಯು ಅವುಗಳನ್ನು ಆಸ್ಪತ್ರೆಗೆ ಉಚಿತವಾಗಿ ಕೊಟ್ಟಿತು. ಅಲ್ಲಿ ಚಿಕಿತ್ಸೆ ಹೊಂದುತ್ತಿದ್ದ ರೋಗಿಗಳ ಉಪಯೋಗಕ್ಕಾಗಿ ಆರಾಮ್ ಕುರ್ಚಿ ಮೊದಲಾದ ಸಾಮಾನುಗಳನ್ನೂ ಬಟ್ಟೆ ಬರೆಗಳನ್ನೂ ತಿಂಡಿಯ ಪದಾರ್ಥ ಮುಂತಾದುವುಗಳನ್ನೂ ಸಮಿತಿಯು ಉಚಿತವಾಗಿ ಕೊಡುತ್ತಿತ್ತು; ಆ ಊರಿನ ವಿದ್ಯಾಶಾಲೆಗಳಲ್ಲಿ ಪಾಠಪ್ರೋತ್ಸಾಹಕ್ಕಾಗಿ ಪದಕಗಳನ್ನೂ ಪಾರಿತೋಷಕಗಳನ್ನೂ ಕೊಡುತ್ತಿತ್ತು. ಕಷ್ಟಕರವಾಗಿದ್ದರೂ ಬಹು ಮುಖ್ಯವಾಗಿದ್ದ ಸೂಲಗಿತ್ತಿಯರ ತರಬೇತಿನ ಕಾರ್ಯವನ್ನು ಸಮಿತಿಯು ಕೈಕೊಂಡಿತಲ್ಲದೆ, ಈಚೆಗೆ ಒಂದು ಶಿಶುಸಂರಕ್ಷಣ ಶಾಲೆಯನ್ನೂ ಸ್ಥಾಪಿಸಿತು. ಪ್ರತಿಯೊಂದು ಜಿಲ್ಲೆಯಲ್ಲೂ, ಕ್ರಮೇಣ ಪ್ರತಿಯೊಂದು ಗ್ರಾಮದಲ್ಲೂ, ಮಹಿಳಾಸಮಿತಿಯೊಂದು ಸ್ಥಾಪಿತವಾದರೆ ದೇಶದಲ್ಲಿ ತುಂಬ ಒಳ್ಳೆಯ ಕೆಲಸಗಳು ನಡೆಯುವುವೆಂಬುದು ನನ್ನ ನಂಬಿಕೆ."

"ಕಲ್ಕತ್ತೆಯಲ್ಲಿ "ವಂಗ ಮಹಿಳಾ ಸಮಿತಿ ಸಂಘಟನೆ" (ಫೆಡರೇಷನ್) ಎಂಬ ಹೆಸರಿನಿಂದ ಒಂದು ಕೇಂದ್ರ ಸಂಸ್ಥೆಯು ಸ್ಥಾಪಿತವಾಗಿ, ಅದರ ಚಾಲಕರೆಲ್ಲ ಸ್ತ್ರೀಯರೇ ಆಗಿರಬೇಕು."

"ಈ ಸಂಸ್ಥೆಯಲ್ಲಿ ಆರು ಮಂದಿ ಸದಸ್ಯರು, ಒಬ್ಬ ಅಧ್ಯಕ್ಷಿಣಿ, ಅವಶ್ಯವಿದ್ದಂತೆ ಒಬ್ಬರೋ ಇಬ್ಬರೋ ಕಾರ್ಯದರ್ಶಿನಿಯರು—ಇವರಿಂದ ಕೂಡಿದ ಒಂದು ಕಾರ್ಯಮಂಡಲಿ ಇರಬೇಕು. ಈ ಸಂಘಟನೆಯು ಮಹಿಳಾಸಮಿತಿಗಳನ್ನು ಸ್ಥಾಪಿಸುವುದು ಹೇಗೆ ಎಂಬ ಬಗ್ಗೆ ವಿವರವಾದ ಸೂಚನೆಗಳನ್ನು ಕೊಡಬೇಕು; ಉಪನ್ಯಾಸಕರನ್ನು ಸಿದ್ಧಪಡಿಸಬೇಕು;

ಸಾಧ್ಯವಾದರೆ ದೀಪ ಚಿತ್ರಗಳನ್ನು ಸಂಪಾದಿಸಿಕೊಡಬೇಕು; ಮಾದರಿಯಾಗಿ ನಿಬಂಧನೆಗಳನ್ನೂ ಇತರ ಸಾಹಿತ್ಯವನ್ನೂ ಒದಗಿಸಬೇಕು; ಪ್ರವೀಣರಾದ ಉಪಾಧ್ಯಾಯರುಗಳನ್ನು ಕರೆಯಿಸುವುದಕ್ಕೆ ಸಹಾಯ ಮಾಡಬೇಕು; ಸಾಮಾನ್ಯವಾಗಿ ಸಮಿತಿಗಳು ಕೈಕೊಳ್ಳುವ ಎಲ್ಲ ಕಾರ್ಯಗಳಲ್ಲಿಯೂ ಉತ್ತೇಜನಕೊಡಲು ಸಿದ್ಧವಾಗಿರಬೇಕು. ಆದರೆ, ಸಮಿತಿಗಳು ತಮ್ಮ ತಮ್ಮ ಸ್ವಂತ ಆಡಳಿತಗಳನ್ನು ತಾವು ತಾವೇ ನಡಸಿಕೊಳ್ಳಲು ಸ್ವತಂತ್ರ ರಾಗಿರಬೇಕು; ತಮ್ಮ ಆದಾಯವ್ಯಯಗಳನ್ನು ತಾವೇ ವಹಿಸಿಕೊಳ್ಳಬೇಕು; ತಮ್ಮ ಸ್ಥಳೀಯ ವಿದ್ಯಮಾನಗಳಿಗೆ ತಕ್ಕದ್ದೆಂದು ಸದಸ್ಯರಿಗೆ ತೋರುವ ಕಾರ್ಯಗಳನ್ನು ತಾವೇ ಕೈಕೊಳ್ಳಬೇಕು. ಯಾವ ಜಿಲ್ಲೆಯಲ್ಲಾಗಲಿ, ಗ್ರಾಮದಲ್ಲಾಗಲ್ಲಿ, ಒಂದು ಮಹಿಳಾಸಂಸ್ಥೆಯನ್ನು ಆರಂಭಿಸಬೇಕೆಂಬ ಅಭಿಲಾಷೆಯುಳ್ಳವರು ಯಾರಿದ್ದರೂ, ಅವರು ಮೊಟ್ಟಮೊದಲು "ವಂಗ ಮಹಿಳಾಸಮಿತಿ ಸಂಘಟನೆ"ಯ ಮುಖ್ಯ ಕಾರ್ಯದರ್ಶಿನಿಯವರಿಗೆ ಬರೆಯಬಹುದು. ಆಗ ಅವರು ಆ ಪ್ರಾಂತದ ಮಹಿಳಾಸಂಸ್ಥೆಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಲು ಏರ್ಪಟ್ಟಿರುವ ಪ್ರಚಾರಕಸಮಿತಿಗೆ ಅಂಥವರ ಪರಿಚಯವನ್ನು ಮಾಡಿಕೊಟ್ಟು ಮುಂದಿನ ಕೆಲಸಕ್ಕೆ ಅನುಕೂಲ ಪಡಿಸಿ ಕೊಡುವರು."

ಈ ಮೇಲಣ ಸೂಚನೆಗಳನ್ನು ಬರೆದ ಸಮಯದಲ್ಲಿ ಸರೋಜ ನಳಿನಿಯು ಕಲ್ಕತ್ತೆಯ ಮಹಿಳೆಯರ ರಾಷ್ಟ್ರ ಸಂಸ್ಥೆಯಲ್ಲಿ ಭಾರತೀಯ ಮಹಿಳೆಯರ ಪರವಾದ ಕಾರ್ಯದರ್ಶಿನಿಯಾಗಿದ್ದಳು. ಸರೋಜ ನಳಿನಿಯು ಮೊಟ್ಟಮೊದಲು ಈ ಹೊಸ ಏರ್ಪಾಟನ್ನು ತನ್ನ ಸ್ನೇಹಿತೆಯೂ ಆ ಸಂಸ್ಥೆಯ ಉಪಾಧ್ಯಕ್ಷಿಣಿಯೂ ಆಗಿದ್ದ ಮಿಸೆಸ್. ಎಫ್. ಸ್ಟ್ಯಾನ್ಲಿ ಯವರೊಡನೆ ಯೋಚನೆಮಾಡಿ, ಈ ಕಾರ್ಯಕ್ರಮವನ್ನು ಆ ಸಂಸ್ಥೆ ತನ್ನ ಕೆಲಸದ ಒಂದು ಭಾಗವಾಗಿ ವಹಿಸಿಕೊಳ್ಳಬೇಕೆಂದು ಕೋರಿದಳು. ವಂಗದೇಶದ ಗವರ್ನರರವರ ಪತ್ನಿಯೂ ಈ ಸಂಸ್ಥೆಯ ಅಧ್ಯಕ್ಷಿಣಿಯೂ ಆಗಿದ್ದ ಕೌಂಟೆಸ್ ಲಿಟ್ಟನ್‌ರವರು ಈ ಕಾರ್ಯಕ್ರಮದಲ್ಲಿ ಶ್ರದ್ಧೆ ವಹಿಸುವಂತೆ ಮಾಡಲು ಇವರಿಬ್ಬರೂ ಪ್ರಯತ್ನಿಸಿದರು. ಆದರೂ ಈ ಕೆಲಸವನ್ನು ಆ ಸಂಸ್ಥೆ ಕೈಕೊಳ್ಳಲು ಸಾಧ್ಯವಿಲ್ಲದೆ ಹೋಯಿತು. ಬಹು ಕಾಲದಿಂದ ಕೆಲಸ ನಡಸುತ್ತಿರುವ ಪ್ರಬಲವಾದ ಯಾವುದಾದರೊಂದು

ಸಂಸ್ಥೆಯ ಸಹಾಯವಿಲ್ಲದೆ ಆ ಕೆಲಸವನ್ನು ನಡಸುವುದು ಅಸಾಧ್ಯವಾದ ಕಾರಣ, ಆ ಯೋಚನೆಯನ್ನು ಅಲ್ಲಿಗೆ ಬಿಡಬೇಕೆಂದು ನಾನು ಸರೋಜ ನಳಿನಿಗೆ ಹೇಳಿದೆನು. ಆದರೆ ಆಕೆಗೆ ಎಷ್ಟೇ ಅಡಚಣೆಗಳು ಬಂದರೂ ಉತ್ಸಾಹ ಕುಂದಲಿಲ್ಲ. ಆಕೆಯು, "ನನ್ನ ಮನಸ್ಸೆಲ್ಲ ಅದರಲ್ಲಿದೆ. ನಾನು ಅದನ್ನು ಸಾಧಿಸಿಯೇ ತೀರುವೆನು" ಎಂದಳು. ಅನಂತರ ಆಕೆ ಸರ್ ಜಗದೀಶ ಚಂದ್ರ ಬೋಸ್‌ರವರ ಹೆಂಡತಿಯನ್ನು ಕಂಡು, ಅವರು ಸ್ಥಾಪಿಸಿದ್ದ "ನಾರೀಶಿಕ್ಷಾ ಸಮಿತಿ"ಯು ಈ ಕೆಲಸವನ್ನು ಕೈಕೊಂಡು, ಗ್ರಾಮಾಂತರ ಸ್ತ್ರೀಯರಲ್ಲಿ ಇದನ್ನು ಪ್ರಚುರಪಡಿಸಬೇಕೆಂದು ಕೇಳಿದಳು. ಬೋಸ್‌ರವರ ಪತ್ನಿಯವರು ಈ ಏರ್ಪಾಟಿನಲ್ಲಿ ಉತ್ಸಾಹವನ್ನೇನೋ ತೋರಿಸಿದರು. ಆದರೆ ನಾರೀಶಿಕ್ಷಾ ಸಮಿತಿಯು ಬಾಲಕಿಯರ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ತನ್ನ ಸಂಪೂರ್ಣ ಗಮನವನ್ನು ಕೊಟ್ಟಿದ್ದುದರಿಂದ, ಈ ದೊಡ್ಡ ಕೆಲಸವನ್ನು ಆ ಸಮಿತಿಯೇ ಕೈಕೊಳ್ಳಲು ಸಾಧ್ಯವಿಲ್ಲವೆಂದೂ, ಈ ಕಾರ್ಯಕ್ಕಾಗಿ ಬೇರೆ ಒಂದು ಶಾಖೆಯನ್ನು ಏರ್ಪಡಿಸಿ, ಅದರ ಆಡಳಿತವನ್ನೆಲ್ಲ ಸರೋಜ ನಳಿನಿಯೇ ಪೂರ್ತಿಯಾಗಿ ನಿರ್ವಹಿಸಲು ಒಪ್ಪಿಕೊಂಡ ಹೊರತು, ಆ ಸಮಿತಿಯು ಈ ಕೆಲಸವನ್ನು ಕೈಕೊಳ್ಳುವುದು ಸಾಧ್ಯವಿಲ್ಲವೆಂದೂ ಹೇಳಿದರು. ಸರೋಜ ನಳಿನಿಯು ಈ ಕೆಲಸವನ್ನು ನಿರ್ವಹಿಸಲು ಸಂತೋಷದಿಂದ ಒಪ್ಪಿಕೊಂಡಳು. ಇದಕ್ಕಾಗಿಯೇ ಸರೋಜ ನಳಿನಿಯು ನಾರೀಶಿಕ್ಷಾ ಸಮಿತಿಗೆ ಒಬ್ಬ ಕಾರ್ಯದರ್ಶಿನಿಯಾಗಿ ಚುನಾಯಿಸಲ್ಪಟ್ಟಿಳಲ್ಲದೆ, ಬಂಗಾಳ ಪ್ರಾಂತದಲ್ಲೆಲ್ಲ ಮಹಿಳಾ ಸಮಿತಿಗಳನ್ನು ಸ್ಥಾಪಿಸುವುದಕ್ಕಾಗಿ ಸರೋಜ ನಳಿನಿಯು ಆರಿಸಿದ ಕೆಲವು ಹಿಂದೂ ಸ್ತ್ರೀಯರನ್ನೂ ಇಬ್ಬರು ಆಂಗ್ಲೇಯ ಸ್ತ್ರೀಯರನ್ನೂ (ಮಿಸೆಸ್ ಸ್ಟ್ಯಾನ್ಲಿಯವರು ಮತ್ತು ಮಿಸೆಸ್ ಬೆಂಟ್ಲಿಯವರು) ಒಳಗೊಂಡ ಒಂದು ಪ್ರತ್ಯೇಕ ಮಂಡಲಿಯು ನಾರೀಶಿಕ್ಷಾ ಸಮಿತಿಯ ಅಂಗವಾಗಿ ನೇಮಕವಾಯಿತು. ಸರೋಜ ನಳಿನಿಯೇ ಇದಕ್ಕೂ ಕಾರ್ಯದರ್ಶಿನಿಯಾಗಿ ನೇಮಕವಾದಳು. ಸರೋಜ ನಳಿನಿ ಬಹುಕಾಲದಿಂದ ಮನಸ್ಸಿನಲ್ಲಿ ಪೋಷಿಸಿಕೊಂಡಿದ್ದ ಅಭೀಷ್ಟವು ಹೀಗೆ ಸ್ವಲ್ಪಕಾಲದಲ್ಲಿಯೇ ಕೈಗೂಡುವ ಹಾಗಾದುದನ್ನು ಕಂಡು ಬಹಳ ಸಂತೋಷಪಟ್ಟಳು. ಆದರೆ ಈ ಮಂಡಲಿಯು ಒಂದು ಸಲವಾದರೂ ಸೇರಿ ಕಾರ್ಯವನ್ನು ಪ್ರಾರಂಭಗೊಳಿಸುವುದಕ್ಕಾಗಲಿಲ್ಲ. ಏಕೆಂದರೆ, ಹಾಗಾಗುವು

ದಕ್ಕೆ ಮೊದಲೇ ಸರೋಜ ನಳಿನಿ ಕಾಯಿಲೆ ಮಲಗಿದಳಲ್ಲದೆ, ಆ ಕಾಯಿಲೆ ಯಿಂದಲೇ ಆಕೆಯ ಇಹಲೋಕಯಾತ್ರೆಯು ಕೊನೆಗಂಡಿತು.

೧೯೨೫ ನೆಯ ಇಸವಿ ಜನವರಿ ತಿಂಗಳು ೧೯ ನೇ ತಾರೀಖಿನ ದಿನ ಕಲ್ಕತ್ತೆಯಲ್ಲಿ ಚೌರಂಗಿ ರಸ್ತೆಯಲ್ಲಿರುವ ೫೮ ನೆಯ ನಂಬರುಳ್ಳ ನಮ್ಮ ಸ್ವಗೃಹದಲ್ಲಿ ಆಕೆಯು, ಯಾವಾಗ್ಲೂ ಬಹು ಆಶೆಪಡುತ್ತಿದ್ದಂತೆಯೇ, ಹಣೆ ಯಲ್ಲಿ ಕುಂಕುಮವನ್ನು ಧರಿಸಿಕೊಂಡು, ಕೈಗಳಲ್ಲಿ "ನೋಆ" ಮತ್ತು "ಶಂಖಾ" ಬಳೆಗಳನ್ನು ಧರಿಸಿ, ಸುಮಂಗಲಿಯಾಗಿ ದೈವಾಧೀನಳಾದಳು.

ವಂಗಭಾಷಾ ಕಾದಂಬರೀ ಲೇಖಕರೆಂದು ಪ್ರಖ್ಯಾತಿಪಡೆದ ಬಂಕಿಮ ಚಂದ್ರ ಚಾಟರ್ಜಿ ಎಂಬವರು ಈಗ್ಗೆ ಸುಮಾರು ಐವತ್ತು ವರ್ಷಗಳ ಹಿಂದೆ "ಸಮತ್ವ" ಎಂಬ ಪ್ರಬಂಧದಲ್ಲಿ ಹೀಗೆ ಬರೆದಿರುವರು :—

"ಈ ದೇಶದ ಸ್ತ್ರೀಯರ ಸ್ಥಿತಿಯು ಬಹಳ ಶೋಚನೀಯವಾಗಿದೆ. ಅವರಸ್ಥಿತಿಯನ್ನು ಸ್ವಲ್ಪವಾದರೂ ಉತ್ತಮಪಡಿಸಿದ್ದೇವೆಂದು ಯಾರುತಾನೆ ಧೈರ್ಯದಿಂದ ಹೇಳಬಲ್ಲರು? ದಿವಂಗತರಾದ ಈಶ್ವರ ಚಂದ್ರ ವಿದ್ಯಾಸಾಗರ ರವರೂ "ಬ್ರಹ್ಮ ಸಮಾಜ" ದವರೂ ಈ ವಿಷಯದಲ್ಲಿ ಬಹಳ ಶ್ರಮವಹಿ ಸಿದರು; ಅದಕ್ಕಾಗಿ ಅವರಿಗೆ ವಂದನೆ ಸಲ್ಲುತ್ತದೆ. ಆದರೆ ಅವರ ಹೊರತು ನಮ್ಮ ಸಮಾಜದಲ್ಲಿ ಯಾರೂ ಏನೊಂದೂ ಮಾಡಿಲ್ಲ. ನಮ್ಮ ದೇಶದಲ್ಲಿ ಸಂಘಗಳು, ಮಂಡಲಿಗಳು, ಸಮಾಜಗಳು, ಗೋಷ್ಠಿಗಳು—ಇಂಥವುಗಳಿಗೆ ಕಡಮೆಯಿಲ್ಲ. ಇವುಗಳಲ್ಲಿ ಕೆಲವುಗಳ ಉದ್ದೇಶ ರಾಜಕೀಯ; ಇನ್ನು ಕೆಲವುಗಳದು ಮತವಿಚಾರ; ಮತ್ತೆ ಕೆಲವುಗಳದು ಮತವಿರೋಧ. ಆದರೆ ಸ್ತ್ರೀಯರ ಪುರೋವೃದ್ಧಿಯನ್ನು ಸಾಧಿಸುವುದಕ್ಕಾಗಿ ಏರ್ಪಟ್ಟ ಸಂಘವು ಒಂದೂ ಇಲ್ಲ. ಪ್ರಾಣಿಹಿಂಸೆಯನ್ನು ತಡೆಯುವುದಕ್ಕಾಗಿ ಒಂದು ಸಂಘ ವಿದೆಯೆಂದು ನಾನು ತಿಳಿದಿದ್ದೇನೆ. ಆದರೆ ವಂಗದೇಶದ ಜನಸಂಖ್ಯೆಯಲ್ಲಿ ಅರ್ಧಭಾಗವಾದ ಸ್ತ್ರೀಯರ ಕಷ್ಟಕೊರತೆಗಳನ್ನು ಪರಿಹರಿಸಲು ಒಂದು ಸಂಘವೂ ಇಲ್ಲ. ಕೆಲವು ವರ್ಷಗಳಿಂದ, ಪಾಠಶಾಲೆಗಳಿಗಾಗಿಯೂ, ಆಸ್ಪತ್ರೆ ಗಳಿಗಾಗಿಯೂ, ಮೃಗಶಾಲೆಗಳಿಗಾಗಿಯೂ ಬಹು ಹಣವು ವೆಚ್ಚವಾಗು ತ್ತಿರುವುದನ್ನು ನಾವು ನೋಡುತ್ತಿದ್ದೇವೆ. ವಂಗದೇಶದ ಸ್ತ್ರೀ ಸಮುದಾಯ ವೆಂಬ ದೊಡ್ಡ ಮೃಗಶಾಲೆಗಾಗಿ ಯಾವ ಸಹಾಯವನ್ನೂ ಮಾಡಲಾಗುವು

ದಿಲ್ಲವೆ? ಇಲ್ಲ; ಏನನ್ನೂ ಮಾಡಲಾಗುವುದಿಲ್ಲ. ಏಕೆಂದರೆ ಇಂಥ ಕೆಲಸವನ್ನು ಮಾಡುವುದರಿಂದ ಸರ್ಕಾರದಲ್ಲಿ ಬಿರುದು ದೊರೆಯುವುದಿಲ್ಲ! ಇಂಥ ಕೆಲಸವನ್ನು ಮಾಡಿದರೆ ಬುದ್ಧಿಯಿಲ್ಲದ ಜನಸಮೂಹದಿಂದ ತುಚ್ಛವಾದ ಮಾತುಗಳನ್ನು ಕೇಳುವುದೊಂದೇ ಫಲ! ಹೀಗಿರುವಲ್ಲಿ ಸ್ತ್ರೀಯರ ಪುರೋವೃದ್ಧಿಗಾಗಿ ಯಾರುತಾನೆ ದುಡಿಯುವರು?"

ಈ ಘನದೀಕ್ಷೆಯ ಆಹ್ವಾನವು ಸರೋಜನಳಿನಿಯ ಹೃದಯವನ್ನು ಮುಟ್ಟಿತ್ತು. ಬಂಗಾಳದ ಸ್ತ್ರೀ ಜನತೆಯನ್ನು ವಿದ್ಯೆಯಲ್ಲಿಯೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಲ್ಲಿಯೂ ಉದ್ಧಾರಮಾಡುವುದಕ್ಕಾಗಿ ಆಕೆ ತನ್ನ ಆತ್ಮವನ್ನು ಸಮರ್ಪಣೆಮಾಡಿದಳು. ಇನ್ನೂ ಘನತರವಾದ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಇನ್ನೂ ಉತ್ತಮವಾದ ಲೋಕಕ್ಕೆ ಆಕೆಯನ್ನು ಕರೆದುಕೊಳ್ಳುವುದು ದೇವರ ಚಿತ್ತವಾಯಿತು. ಆದರೆ ಆಕೆ ತನಗೆ ಅತ್ಯಂತ ಪ್ರಿಯವಾಗಿದ್ದ ಈ ಕೆಲಸದ ಅಭಿವೃದ್ಧಿಯನ್ನು ಅಲ್ಲಿಂದಲೂ ನೋಡುತ್ತಿರುವಳು.

---

## ಹದಿಮೂರನೆಯ ಅಧ್ಯಾಯ

## ಅನಂತಧಾಮ

ನಾನು ಬಹು ಅದೃಷ್ಟಶಾಲಿ. ಸರೋಜನಳಿನಿ ತನ್ನ ಜೀವನದ ಸೌಂದರ್ಯದಿಂದಲೂ ಪ್ರೇಮದಿಂದಲೂ ಮಧುರಸ್ವಭಾವದಿಂದಲೂ ಘನತೆಯಿಂದಲೂ ನನ್ನ ಜೀವನವನ್ನು ಪಾವನಗೊಳಿಸಿ ಅದರಲ್ಲೊಂದು ಕಾಂತಿಯನ್ನು ತುಂಬಿದ್ದಾಳೆ. ಅವಳ ಗುಣಸಂಪತ್ತಿನ ಭಾಗ್ಯವನ್ನೂ ಆನಂದವನ್ನೂ ನಾನು ಸಂಪೂರ್ಣವಾಗಿ ಪಡೆದಿದ್ದೇನೆ. ಅದಕ್ಕೆ ತಕ್ಕ ಯೋಗ್ಯತೆಯನ್ನು ನಾನು ಸಂಪಾದಿಸಿಕೊಳ್ಳದೆ ಹೋದಪಕ್ಷದಲ್ಲಿ ಆ ದುರದೃಷ್ಟವೂ ಅಪಜಯವೂ ನನ್ನ ಸ್ವಂತದ್ದಾಗುವುವು.

ಆದರೆ ನಾನು ಆಕೆಯನ್ನು ಕಳೆದುಕೊಂಡಿಲ್ಲ. ನಮ್ಮಿಬ್ಬರ ಸಂಬಂಧವು ಎಲ್ಲಕಾಲಕ್ಕೂ ಇರತಕ್ಕದ್ದು. ದೇಹ ನಾಶವು ಅದನ್ನು ಬಿಡಿಸಲಾರದು. ಆಕೆ ಯಾವ ಅನಂತಧಾಮವನ್ನೈದಿರುವಳೋ ಅಲ್ಲಿಂದ ಆಕೆ ಕಳುಹಿಸುವ ಸ್ಫೂರ್ತಿಯನ್ನೂ ಸಹಾಯವನ್ನೂ ನಾನು ನನ್ನ ಜೀವನದ ಪ್ರತಿ ಕ್ಷಣದಲ್ಲಿಯೂ ಅನುಭವಿಸುತ್ತಿದ್ದೇನೆ.

ಆದರೆ ಆಕೆ ಸಜೀವವಾಗಿ ಪ್ರತ್ಯಕ್ಷವಾದ ಆದರ್ಶದಂತಿದ್ದುದರಿಂದ ದೇಶಕ್ಕೆ ದೊರೆಯುತ್ತಿದ್ದ ಉದಾಹರಣೆಯೂ ಸ್ಫೂರ್ತಿಯೂ ಈಗ ತಪ್ಪಿ ಹೋಗಿ, ದೇಶಕ್ಕೆ ನಷ್ಟ ಸಂಭವಿಸಿರುವುದಕ್ಕಾಗಿ ನಾನು ದುಃಖಿಸುತ್ತೇನೆ. ಆಕೆ ಆರಂಭಿಸಿದ ಕೆಲಸಗಳು ಹೇಗೆ ಮುಂದುವರಿದಾವು, ಆಕೆಗೆ ಬಹು ಇಷ್ಟವಾಗಿದ್ದ ಸಮಾರಂಭಗಳು ಹೇಗೆ ಪರಿಣಮಿಸಿಯಾವು, ಎಂಬಿವೇ ನನಗಿರುವ ಕಳವಳ.

ಆಕೆಯ ದೇಹಸ್ಥಿತಿ ಸಾಮಾನ್ಯವಾಗಿ ಚೆನ್ನಾಗಿತ್ತು. ತನ್ನ ಆರೋಗ್ಯಕ್ಕಾಗಿ ಹೆಚ್ಚು ಗಮನ ಕೊಡದೆ ಇದ್ದಾಗ್ಯೂ ಆಕೆ ಸ್ವಾಭಾವಿಕವಾಗಿಯೇ ಆರೋಗ್ಯವಾಗಿಯೂ ದೃಢಕಾಯಳಾಗಿಯೂ ಇದ್ದಳು. ಆಕೆಯ ಕೊನೆಯ ಕಾಯಿಲೆಯೂ ಮರಣವೂ ಆಕೆ ಮುಂದಿನ ಜನ್ಮದಲ್ಲಿ ಇನ್ನೂ ಮಹತ್ತರವಾದ ಕೆಲಸವನ್ನು ಸಾಧಿಸಬೇಕೆಂಬುದಾಗಿ ಬಂದ ಆಹ್ವಾನವೇ ಹೊರತು ಬೇರೆ ಅಲ್ಲವೆಂದು ನಾನು ಭಾವಿಸಿದ್ದೇನೆ. ಆಕೆಯನ್ನು ಯಾರು ಯಾರು ಪ್ರೀತಿಸಿದ್ದರೋ, ಗೌರವಿಸಿದ್ದರೋ, ಅಥವಾ ಯಾರು ಯಾರು ಆಕೆಯ ಜೀವಿತಸ್ಮರಣೆಯ ವಿಷಯದಲ್ಲಿ ಪ್ರೀತಿ ಗೌರವಗಳನ್ನು ತೋರಿಸಲಿಚ್ಛಿಸುವರೋ ಅಂಥವರ ಮೇಲೆಲ್ಲ ಆಕೆ ಒಂದು ಕರ್ತವ್ಯ ಭಾರವನ್ನು ಹೊರಿಸಿದ್ದಾಳೆ. ಆಕೆ ಈಗ ಅವರ ಮಧ್ಯೆ ದೇಹಧಾರಿಣಿಯಾಗಿರದಿದ್ದರೂ, ಆಕೆ ಸಂಕಲ್ಪಿಸಿ ಪ್ರಾರಂಭಿಸಿದ ಕೆಲಸಗಳನ್ನು ಅವರು ಮುಂದಕ್ಕೆ ನಡಸಬೇಕೆಂಬುದು ಆ ಭಾರ. ಅವರು ಈ ಕರ್ತವ್ಯವನ್ನು ನೆರವೇರಿಸಲು ತಮ್ಮ ಪೂರ್ಣ ಶಕ್ತಿಯಿಂದ ಸಹಾಯಮಾಡಿದಲ್ಲಿ, ಆಕೆಯ ಜೀವನ ಸ್ಮೃತಿಗೆ ನಿಜವಾಗಿ ಪೂಜ್ಯತೆಯನ್ನು ಸಲ್ಲಿಸಿದವರಾಗುವರು.

---

## ಹದಿನಾಲ್ಕನೆಯ ಅಧ್ಯಾಯ

## ವೃದ್ಧಿಯಾಗುವ ಚಳುವಳಿ

ಸರೋಜ ನಳಿನಿಯ ಬದುಕೂ ಕಷ್ಟವೂ ನಿಷ್ಫಲವಾಗಲಿಲ್ಲ. ಆಗ ಬಂಗಾಳದ ಗವರ್ನರಾಗಿದ್ದ ಲಾರ್ಡ್ ಲಿಟ್ಟನ್ ರವರೂ ಅವರ ಪತ್ನಿಯಾದ ಕೌಂಟೆಸ್ ಲಿಟ್ಟನ್ ರವರೂ ಮೊದಲುಗೊಂಡು ಎಲ್ಲ ವರ್ಗಗಳ ಜನರೂ ಆಕೆ ಸಾಧಿಸಿದ್ದ ಕಾರ್ಯಕ್ಕೆ ತಕ್ಕ ಕಾಣಿಕೆಯನ್ನು ಸಲ್ಲಿಸುವುದಕ್ಕಾಗಿ

ಸೇರಿದರು. ಆಕೆ ಮರಣಹೊಂದಿದ ಮೂರು ವಾರಗಳ ಅನಂತರ ಆಕೆಯ ಶ್ರಾದ್ಧ ೧೯೨೫ ನೆಯ ಫೆಬ್ರುವರಿ ೮ ನೆಯ ತಾರೀಖಿನ ದಿವಸ ನಡೆಯಿತು. ಅಂದು ಕಲ್ಕತ್ತೆಯಲ್ಲಿ ಸೇರಿದ್ದ ಒಂದು ದೊಡ್ಡ ಸಭೆಯಲ್ಲಿ,—ಸರೋಜ ನಳಿನಿಯು ಸಂಕಲ್ಪಿಸಿದ್ದಂತೆ,— ವಂಗದೇಶದ ನಾನಾ ಭಾಗಗಳಲ್ಲಿ ಮಹಿಳಾ ಸಮಿತಿಗಳನ್ನು ಸ್ಥಾಪಿಸಿ, ಅವುಗಳಲ್ಲಿ ಪರಸ್ಪರ ಬಾಂಧವ್ಯವನ್ನು ಕಲ್ಪಿಸಿ, ಅವುಗಳಿಗೆ ಮಾರ್ಗದರ್ಶಕವಾಗಿರುವುದಕ್ಕಾಗಿ ಒಂದು ಕೇಂದ್ರ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶಕ್ಕೋಸ್ಕರ ೫,೦೦೦ ರೂಪಾಯಿಗಳ ಧರ್ಮಾರ್ಥವಾದ ನಿಧಿ ಬಂದಿದ್ದುದನ್ನು ನಾನು (ಸರೋಜ ನಳಿನಿಯ ಪತಿಯಾದ ಪ್ರಕೃತ ಗ್ರಂಥಕರ್ತರು) ಜನರಿಗೆ ತಿಳಿಸಿದೆನು.


ಸರೋಜ ನಳಿನಿಯ ದೇಶಬಾಂಧವರಾದ ಸ್ತ್ರೀಯರೂ ಪುರುಷರೂ ಆಕೆ ಮಾಡುತ್ತಿದ್ದ ದೇಶಸೇವಾ ಕಾರ್ಯದ ಸಕಲ ಜನಪದ ವ್ಯಾಪಿಯಾದ ಮುಖ್ಯತೆಯನ್ನು ಕಂಡುಕೊಳ್ಳಲು ತಡಮಾಡಲಿಲ್ಲ. ಸುರೇಂದ್ರ ನಾಥ್ ಮಲ್ಲಿಕ್, ಸಿ.ಐ.ಇ., ಮತ್ತು ರಾಯ್ ಬಹದೂರ್ ಎ. ಸಿ. ಬ್ಯಾನರ್ಜಿ, ಇವರಿಬ್ಬರ ಸಲಹೆಯಂತೆ ೧೯೨೫ ನೆಯ ಫೆಬ್ರುವರಿ ೨೫ ನೆಯ ತಾರೀಖಿನ ದಿವಸ "ಸರೋಜ ನಳಿನೀ ದತ್ ಜ್ಞಾಪಕಾರ್ಥ ಸ್ತ್ರೀ ಸೇವಾ ಸಂಘ" ಎಂಬ ಸಂಸ್ಥೆಯು ಸ್ಥಾಪಿತವಾಯಿತು. ಬಂಗಾಳ ಪ್ರಾಂತದಲ್ಲಿ ಪ್ರಭಾವಶಾಲಿಗಳಾದ ಬರ್ದ್ವಾನ್ ಸಂಸ್ಥಾನದ ಮಹಾರಾಣಿ-ಅಧಿರಾಣಿಯವರು, ಲೇಡಿ ಬೋಸ್ ರವರು, ಲೇಡಿ ಸಿಂಹಾರವರು, ಬಾಸು ಅವರ ಪತ್ನಿ ಕುಮುದಿನಿಯವರು, ದಿವಂಗತರಾದ ಎಸ್. ಆರ್. ದಾಸ್ ಅವರು, (ಈಗ ಸರ್) ಎ. ಕೆ. ಘಸ್ನವಿ ಅವರು, ಜಸ್ಟಿಸ್ ಸರ್. ಎನ್. ಆರ್. ಛಾಟರ್ಜಿ ಅವರು, ಘನ ಹೊಂದಿದ ನವಾಬ್ ಬಹದ್ದೂರ್ ಸೈಯದ್ ನವಾಬ್ ಆಲಿ ಚೌಧುರಿಯವರು— ಇಂಥವರು ಈ ಹೊಸ ಸಂಸ್ಥೆಗೆ ಬೆಂಬಲವಾಗಿ ಬಂದರು. ಅವರು ಈ ಸಂಸ್ಥೆಗೆ ದ್ರವ್ಯಸಹಾಯವನ್ನು ಕೋರಲು ಬರೆದ ಪ್ರಕಟನ ಪತ್ರಿಕೆಯಲ್ಲಿ ಹೇಳಿರುವುದೇನೆಂದರೆ:—

"ಸ್ತ್ರೀಯರ ಅಭಿವೃದ್ಧಿಗಾಗಿ ಅನೇಕ ಮಾರ್ಗಗಳಲ್ಲಿ ಕಷ್ಟಪಟ್ಟು, ನಿರಂತರವೂ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದ,—ಅದರಲ್ಲಿಯೂ ಮುಖ್ಯವಾಗಿ ಹೆಂಗಸರು ತಮ್ಮ ಏಳಿಗೆಗೋಸ್ಕರ ತಾವೇ ಸೇರಿ ಪರಿಶ್ರಮಿಸುವುದಕ್ಕಾಗಿ ಮಹಿಳಾ ಸಮಿತಿಗಳನ್ನು ಸ್ಥಾಪಿಸುವ ವಿಷಯದಲ್ಲಿ ಬಹು ಕೆಲಸ

ಮಾಡುತ್ತಿದ್ದ—ಶ್ರೀಮತಿ ಸರೋಜ ನಳಿನಿಯವರ ಅಕಾಲ ಮರಣದಿಂದ ಆ ಸ್ತ್ರೀಸಮುನ್ನತಿ ಪ್ರಯತ್ನಕ್ಕೆ ಭಂಗವುಂಟಾದಲ್ಲಿ, ಅದು ಬಂಗಾಳಕ್ಕೇ ಒಂದು ಅಪಯಶಸ್ಸಾಗುವುದೆಂದು ನಮ್ಮ ಭಾವನೆ; ಮತ್ತು ಸರೋಜ ನಳಿನಿಯವರ ಹೃದಯಕ್ಕೆ ಬಹು ಇಷ್ಟವೂ ಸಂತೋಷಕರವೂ ಆದ ಬಂಗಾಳಾ ಸ್ತ್ರೀಜನಹಿತಕ್ಕೆ ಸಾಧಕವಾಗುವ ರೀತಿಯಲ್ಲಿ ಆಕೆಯ ಹೆಸರನ್ನು ಶಾಶ್ವತಗೊಳಿಸುವುದರ ಮೂಲಕ, ಈ ಆಧಿಪತ್ಯದ ಜನರು ದಿವಂಗತರಾದ ಆಕೆಯ ವಿಷಯದಲ್ಲಿ ತಮ್ಮ ಕೃತಜ್ಞತೆಯನ್ನೂ ಆಕೆಯ ಕೆಲಸದ ವಿಷಯದಲ್ಲಿ ತಮ್ಮ ಮೆಚ್ಚುಗೆಯನ್ನೂ ತೋರ್ಪಡಿಸುವುದು ಆವಶ್ಯಕವೆಂದು ನಾವು ನಂಬಿದ್ದೇವೆ."

ಸರೋಜ ನಳಿನಿಯು ಉದ್ದೇಶಿಸಿ, ಉಪಕ್ರಮಿಸಿ, ಪೂರ್ತಿಗೊಳಿಸದೆ ಬಿಟ್ಟುಹೋದ ಕೆಲಸವನ್ನು ಹೀಗೆ ಏರ್ಪಟ್ಟ ಸಂಘವು ಕೈಕೊಂಡಿತು. ಸ್ತ್ರೀಯರು ತಮ್ಮ ಸಾಮಾಜಿಕವಾದ, ಧನಸಂಬಂಧವಾದ ಮತ್ತು ವಿದ್ಯಾ ಸಂಬಂಧವಾದ ಪುರೋಭಿವೃದ್ಧಿಯನ್ನು ಸಾಧಿಸಿಕೊಳ್ಳಲು ತಾವು ತಾವೇ ಸಭೆ ಸಂಘಗಳಾಗಿ ಸೇರಿಕೊಳ್ಳಬೇಕು; ತಮ್ಮ ಅಭ್ಯುದಯಕ್ಕಾಗಿ ಪುರುಷರನ್ನು ಅವಲಂಬಿಸಿಕೊಂಡಿರದೆ ತಾವುಗಳೇ ಎಚ್ಚತ್ತು ತಮ್ಮ ಜವಾಬ್ದಾರಿಯನ್ನು ಕಂಡುಕೊಳ್ಳಬೇಕು; ಮತ್ತು ಈ ಕರ್ತವ್ಯವನ್ನು ನೆರವೇರಿಸಲು ಒಂದು ನಿಯತವಾದ ಕಾರ್ಯಕ್ರಮವನ್ನು ಕೈಕೊಳ್ಳುವಂತೆ ಅವರನ್ನು ಪ್ರೇರೇಪಿಸಬೇಕು—ಇದೇ ಸರೋಜ ನಳಿನೀ ಜ್ಞಾಪಕಾರ್ಥ ವಾದ ಸ್ತ್ರೀಸೇವಾ ಸಂಘದ ಕಾರ್ಯಕಲಾಪಗಳ ಮೂಲತತ್ತ್ವ.

K. P. H. Press, Fort, Bangalore City


К
Р
Н